ದೀಪ್ತಶೃಂಗಗಳು

ವ್ಯಕ್ತಿಚಿತ್ರಗಳು

ಎಸ್. ಆರ್. ರಾಮಸ್ವಾಮಿ

ದೀಪ್ತಶೃಂಗಗಳು

ವ್ಯಕ್ತಿಚಿತ್ರಗಳು

ದೀಪ್ತಶೃಂಗಗಳು

ವ್ಯಕ್ತಿಚಿತ್ರಗಳು

ಎಸ್.ಆರ್. ರಾಮಸ್ವಾಮಿ

ಸಾಹಿತ್ಯ ಸಿಂಧು ಪ್ರಕಾಶನ

ಬೆಂಗಳೂರು

ಸಾಹಿತ್ಯ ಸಿಂಧು ಪ್ರಕಾಶನ
14/3, ನೃಪತುಂಗ ರಸ್ತೆ
ಬೆಂಗಳೂರು - 560 001

© ಸಾಹಿತ್ಯ ಸಿಂಧು ಪ್ರಕಾಶನ
ಮೊದಲ ಮುದ್ರಣ : 2017

ಬೆಲೆ : ರೂ. 135/-

ರಾಷ್ಟ್ರೋತ್ಥಾನ ಮುದ್ರಣಾಲಯ
ಬೆಂಗಳೂರು-560 019

'DEEPTASHRINGAGALU' ('Luminous pinnacles') Kannada by S. R. Ramaswamy. Biographical memoirs and reminiscences about some outstanding personalities of Karnataka. Published by SAHITYA SINDHU PRAKASHANA, 14/3-A, Nrupatunga Road, Bengaluru – 560 001 (India). Pages : x + 162

Price : Rs. 135/-

First Edition : 2017

ISBN : 81-86595-82-1

Cover design : U.T. Suresh

Printed at : RASHTROTTHANA MUDRANALAYA
Bangalore - 560 019
Email : rmudrana@gmail.com
Ph : 080-26612730

ಉಚ್ಚೈರ್ಗತಿರ್ಜಗತಿ ಸಿಧ್ಯತಿ ಧರ್ಮತಶ್ಚೇತ್
ತಸ್ಯ ಪ್ರಮಾ ಚ ವಚನೈಃ ಕೃತಕೇತರೈಶ್ಚೇತ್ ।
ತೇಷಾಂ ಪ್ರಕಾಶನದಶಾ ಚ ಮಹೀಸುರೈಶ್ಚೇತ್
ತಾನನ್ತರೇಣ ನಿಪತೇತ್ ಕ್ವ ನು ಮತ್ಪ್ರಣಾಮಃ ॥

– ಭೋಜ : ಚಂಪೂರಾಮಾಯಣ

"ಜಗತ್ತಿನಲ್ಲಿ ಎಲ್ಲಕ್ಕಿಂತ ಮೇಲಿನ ಫಲವು ಧರ್ಮದಿಂದ
ದೊರೆಯುವುದಾದರೆ, ಆ ಧರ್ಮದ ಸ್ವರೂಪವೇನೆಂಬ
ಅರಿವು ವೇದಪರಂಪರೆಯಿಂದ ಉಂಟಾಗುವುದಾದರೆ,
ಆ ಪರಂಪರೆಯ ಪ್ರಕಾಶನವು ಭೂಮಿಯ
ಮೇಲಿನ ದೇವಸದೃಶರಾದ ವಿದ್ವಜ್ಜನರಿಂದಲೂ ಸಾಧಕರಿಂದಲೂ
ಆಗುವುದಾದರೆ, ಅಂತಹವರನ್ನು ಬಿಟ್ಟು ಬೇರಾರನ್ನು
ನಾನು ನಮಸ್ಕರಿಸಲಿ?"

ಪುಸ್ತಕವನ್ನು ಕುರಿತು

ಈಗ್ಗೆ ಹತ್ತೊಂಬತ್ತು ವರ್ಷ ಹಿಂದೆ (1998) ಪ್ರಕಟಗೊಂಡ ನನ್ನ 'ದೀವಟಿಗೆಗಳು' ಮತ್ತು ಆರು ವರ್ಷ ಹಿಂದೆ (2011) ಪ್ರಕಟಗೊಂಡ 'ದೀಪ್ತಿಮಂತರು' ವ್ಯಕ್ತಿಚಿತ್ರಮಾಲೆಯ ಮುಂದುವರಿಕೆಯಾಗಿ ಈ 'ದೀಪ್ತಶೃಂಗಗಳು' ಸರಣಿ ಪ್ರಕಟಗೊಳ್ಳುತ್ತಿದೆ. ಈ ಪ್ರಬಂಧಗಳು ಜೀವನಚರಿತ್ರೆಗಳಲ್ಲ, ವ್ಯಕ್ತಿತ್ವಚಿತ್ರಣಗಳಷ್ಟೆ. ನಾನು ಅನೇಕ ವರ್ಷ ಕಾಲ ಸಮೀಪದಿಂದ ನೋಡಿ ಅತಿಶಯವಾಗಿ ಮೆಚ್ಚಿ ಸಮಾಜಕ್ಕೆ ದೀವಿಗೆಗಳಂತಹವರೆಂದು ಪರಿಗಣಿಸಿದ ಹಲವರ ಚಿತ್ರಣಗಳು ಇಲ್ಲಿವೆ. ಆ ಅಸಾಮಾನ್ಯರು ನನ್ನ ಮನಸ್ಸಿನ ಮೇಲೆ ಮೂಡಿಸಿದ ಗಾಢ ಪ್ರಭಾವಮುದ್ರೆಗಳನ್ನು ಆಸಕ್ತರೊಡನೆ ಹಂಚಿಕೊಳ್ಳಬೇಕೆಂಬ ಆಶಯ ಈ ಬರಹಗಳನ್ನು ಪ್ರೇರಿಸಿದೆ. ಅತಿ ಸಾಮಾನ್ಯ ಹಿನ್ನೆಲೆಯಿಂದ ಬಂದು ಕಠಿಣ ಪರಿಶ್ರಮದಿಂದಲೂ ಲೋಕಹಿತೇಚ್ಛೆಯಿಂದಲೂ ಸಮಾಜಜೀವನವನ್ನು ಕಾಂತಿಮಯಗೊಳಿಸಿದವರು ಈ ಮಹನೀಯರು. ಅವರ ಗುಣೌನ್ನತ್ಯದ ಮತ್ತು ವಿಶಾಲಸಾಧನೆಯ ಸ್ಮರಣೆ ಈಗಿನವರಿಗೂ ಮುಂದಿನವರಿಗೂ ಪ್ರೇರಣಾದಾಯಕವಾಗುತ್ತದೆ ಎಂದು ನಾನು ನಂಬಿದ್ದೇನೆ.

ಕಳೆದೆರಡು ದಶಕಗಳ ನನ್ನ ಎಲ್ಲ ಬರಹಗಳಂತೆ ಇಲ್ಲಿಯ ಪ್ರಬಂಧಗಳೂ ಹೇಳಿ ಬರೆಯಿಸಿದವು. ನನ್ನ ಮಾತುಗಳನ್ನು ಲಿಪಿಬದ್ಧಗೊಳಿಸಿದ ಚಿ॥ ಅನಿಲ್‌ಕುಮಾರ್ ಮೊಳಹಳ್ಳಿ ಅವರಿಗೆ ಕೃತಜ್ಞತೆ ಸೂಚಿಸುತ್ತ ಶುಭ ಕೋರುತ್ತೇನೆ.

ಗ್ರಂಥದ ರಕ್ಷಾಪುಟವನ್ನು ವಿನ್ಯಾಸಗೊಳಿಸಿದ ಕಲಾವಿದ ಶ್ರೀ ಯು.ಟಿ. ಸುರೇಶ್ ಅವರಿಗೆ ಆಭಾರಿಯಾಗಿರುವೆ.

– ಎಸ್. ಆರ್. ರಾಮಸ್ವಾಮಿ

ಶ್ರೀ ಹೇವಿಳಂಬಿ ಸಂ॥
ಆಶ್ವಯುಜ ಶುದ್ಧ ದಶಮಿ
ವಿಜಯದಶಮಿ
30–9–2017

ಪರಿವಿಡಿ

1.	ಎನ್. ರಂಗನಾಥಶರ್ಮಾ	01
2.	ಎಸ್. ಕೆ. ರಾಮಚಂದ್ರರಾವ್	38
3.	ವೇದಾಂತ ಸುಬ್ಬಯ್ಯ	65
4.	ಬೆಳಗೆರೆ ಕೃಷ್ಣಶಾಸ್ತ್ರೀ	81
5.	ಎಸ್. ವಿ. ನಾರಾಯಣಸ್ವಾಮಿರಾವ್	96
6.	ಟಿ. ಆರ್. ಶಾಮಣ್ಣ	116
7.	ಎಸ್. ಆರ್. ರಂಗನಾಥನ್	140

1. ಎನ್. ರಂಗನಾಥಶರ್ಮಾ

ಪರಂಪರೆಗೆ, ಶಾಸ್ತ್ರದ ಸ್ಪಷ್ಟೀಕರಣಕ್ಕೆ, ಸಮಾಜದ ಪ್ರಬೋಧನೆಗೆ, ಮೌಲ್ಯಜಾಗೃತಿಗೆ – ಈ ಎಲ್ಲ ಆವಶ್ಯಕತೆಗಳಿಗೂ ಉನ್ನತಮಟ್ಟದ ಕೊಡುಗೆಯನ್ನು ನೀಡಿದವರು ನಮ್ಮ ನಡುವೆಯೇ ಇದ್ದ ಮಹಾಮಹೋಪಾಧ್ಯಾಯ ವಿದ್ವಾನ್ ಎನ್. ರಂಗನಾಥಶರ್ಮಾ (1916–2014). ಅವರಷ್ಟು ಅಧಿಕಪ್ರಮಾಣದಲ್ಲಿ ಮತ್ತು ಶ್ರೇಷ್ಠಮಟ್ಟದಲ್ಲಿ ಋಷಿಋಣ ಸಂದಾಯ ಮಾಡಿದವರು ಇಡೀ ದೇಶದಲ್ಲಿ ಬೆರಳೆಣಿಕೆಯಷ್ಟೆ ದೊರೆತಾರು. ಇನ್ನು ಅಧ್ಯಯನ–ಅಧ್ಯಾಪನಗಳಲ್ಲಿಯೂ ಲೇಖನ–ಪ್ರವಚನಗಳಲ್ಲಿಯೂ ಅವರು ತೋರಿದ ನಿತಾಂತ ಶ್ರದ್ಧೆಯಂತೂ ಅನುಪಮವಾದುದು, ವಿರಳವಾದುದು. ಪಂಡಿತಸಮುದಾಯದಲ್ಲಿ ಬರವಣಿಗೆಯ ಅಭ್ಯಾಸವನ್ನು ರೂಢಿಸಿಕೊಂಡ ವಿರಳರಲ್ಲೊಬ್ಬರು ಶರ್ಮರು. ಸಂಸ್ಕೃತವಲ್ಲದೆ ಹಳಗನ್ನಡ, ಹೊಸಗನ್ನಡಗಳಲ್ಲಿಯೂ ಪ್ರಭುತ್ವ ಪಡೆದು ಸ್ವತಂತ್ರ ವ್ಯಾಖ್ಯಾನಗಳಿಂದಲೂ ಪ್ರವಚನಗಳಿಂದಲೂ ಅನುವಾದಗಳಿಂದಲೂ ಅವರು ಕನ್ನಡವನ್ನು ಶ್ರೀಮಂತಗೊಳಿಸಿದುದು ಒಂದು ಅತುಲ್ಯ ವಾಙ್ಮಯಾಧ್ವರ.

ಸತತ ಸರಸ್ವತ್ಯಾರಾಧನೆ

ಶಾಸ್ತ್ರಪಾಂಡಿತ್ಯದ ಗಳಿಕೆ ಅತ್ಯಂತ ಕಷ್ಟಸಾಧ್ಯವಾದದ್ದು. ಯಾವುದೋ ಒಂದು ಶಾಸ್ತ್ರವನ್ನು ಸ್ವಾಧೀನಪಡಿಸಿಕೊಳ್ಳಲು ದಶಕಗಳೇ ಹಿಡಿಯುತ್ತದೆ. ರಂಗನಾಥಶರ್ಮರು ಅನೇಕ ಪ್ರತಿಕೂಲ ಸಂದರ್ಭಗಳ ನಡುವೆಯೂ ವ್ಯಾಕರಣಶಾಸ್ತ್ರದಲ್ಲಿಯೂ ಅಲಂಕಾರಶಾಸ್ತ್ರದಲ್ಲಿಯೂ ಪ್ರಭುತ್ವವನ್ನು ಸಾಧಿಸಿದ್ದರು. ಇವಲ್ಲದೆ ಸ್ವಂತ ಆಸಕ್ತಿಯಿಂದ ವೇದಾಂತದರ್ಶನದಲ್ಲಿಯೂ ಪರಿಶ್ರಮ ಮಾಡಿ ಆ ಜಟಿಲದರ್ಶನದ ಸೂಕ್ಷ್ಮಾಂಶಗಳ ಪರಿಜ್ಞಾನವನ್ನೂ ಪಡೆದಿದ್ದರು. ಹೀಗೆ ಶೇಖರಿಸಿಕೊಂಡ ಜ್ಞಾನರಾಶಿಯ ಪ್ರಯೋಜನ ಸಮಾಜಕ್ಕೆ ದೊರೆಯಬೇಕೆಂಬ ಆಸ್ಥೆಯಿಂದ ನಿರಂತರವಾಗಿ ಲೇಖನವ್ಯವಸಾಯದಲ್ಲಿಯೂ ತೊಡಗಿಕೊಂಡು ವಿಸ್ಮಯಕರವೆನಿಸುವಷ್ಟು ಸ್ವತಂತ್ರ ಹಾಗೂ ವ್ಯಾಖ್ಯಾನರೂಪದ ಗ್ರಂಥರತ್ನಗಳನ್ನು ಕನ್ನಡ ಓದುಗರಿಗೆ ನೀಡಿದರು.

ಇಷ್ಟು ಅಗಾಧಪ್ರಮಾಣದ ಮತ್ತು ಇಷ್ಟು ವೈವಿಧ್ಯಮಯವಾದ ಸಾರಸ್ವತಸೇವೆ ಮಾಡಿರುವವರು ವಿರಳ. ಅವರ ಬರಹದ ಗಾತ್ರದಂತೆ ಗುಣವತ್ತತೆಯೂ ಅಸಾಧಾರಣ ಮಟ್ಟದ್ದು. ಶಾಸ್ತ್ರಪ್ರಭುತ್ವದೊಡನೆ ಸತತವಾದ ತಪಃಸದೃಶ ಚಿಂತನ–ಮಂಥನ

ಮೇಳವಿಸಿ ಈ ಅನುಪಮ ಸರಸ್ವತ್ಯಾರಾಧನೆಯನ್ನು ಸಾಧ್ಯವಾಗಿಸಿತ್ತು. ವಯಸ್ಸು 90ರ ಆಸುಪಾಸಿನಲ್ಲಿದ್ದಾಗ ಪ್ರಕೃತಿಸಹಜ ದೈಹಿಕದೌರ್ಬಲ್ಯಗಳ ಆಕ್ರಮಣಕ್ಕೆ ಒಳಗಾದ ಸ್ಥಿತಿಯಲ್ಲಿ ಅವರು 'ತೈತ್ತಿರೀಯೋಪನಿಷತ್‌ಪ್ರವಚನ', 'ಮಾಂಡೂಕ್ಯಪ್ರವಚನ'ಗಳಂತಹ ಉನ್ನತವೂ ಸ್ವೋಪಜ್ಞವೂ ಆದ ಕೃತಿಗಳನ್ನು ರಚಿಸಿದುದನ್ನಂತೂ ದೊಡ್ಡ ವಿಸ್ಮಯ ವೆಂದೇ ಭಾವಿಸಬೇಕಾಗಿದೆ. ಅವರ ಕಣ್ಣು–ಕಿವಿಗಳ ಪಾಟವ ಕಡಮೆಯಾಗಿ ಹಲವು ವರ್ಷಗಳೇ ಆಗಿದ್ದವು. ವಯಸ್ಸು ಎಂಬತ್ತೈದು ದಾಟಿದ ಮೇಲೆ ಅವರು ಬಹುಮಟ್ಟಿಗೆ 'ಪ್ರಜ್ಞಾಚಕ್ಷು'ಗಳೇ ಆಗಿದ್ದರು. ಈ ಸ್ಥಿತಿಯಲ್ಲಿ ಓದಿ ಹೇಳುವವರ ಮತ್ತು ಹೇಳಿದುದನ್ನು ಬರೆದುಕೊಳ್ಳುವವರ ನೆರವನ್ನು ಪಡೆದು ಕ್ಲಿಷ್ಟತೆಗಳು ತುಂಬಿದ ದಾರ್ಶನಿಕ ಗ್ರಂಥಗಳನ್ನು ನೀಡಿರುವುದಕ್ಕೆ ಅದ್ಭುತವೆಂದಲ್ಲದೆ ಬೇರೆ ಯಾವ ಮಾತು ಸಲ್ಲುತ್ತದೆ?

ಶರ್ಮರು ಪಾರಂಪರಿಕಜ್ಞಾನವನ್ನು ಅರಗಿಸಿಕೊಂಡು ತಮ್ಮ ಪೀಳಿಗೆಯವರಿಗೆ ಸಮರ್ಥವಾಗಿ ದಾಟಿಸಿದರಷ್ಟೆ ಅಲ್ಲ; ಪರಂಪರೆಯಲ್ಲಿ ಅಸ್ಪಷ್ಟವಾಗಿದ್ದ ಅನೇಕ ಸಂಗತಿಗಳನ್ನು ಸ್ವತಂತ್ರವಾಗಿ ಮಥನ ಮಾಡಿ ಸ್ಫುಟೀಕರಿಸಿದರು. ಶಾಸ್ತ್ರನಿಷ್ಠೆಯೊಡನೆ ಸಂಶೋಧಕವೃತ್ತಿಯೂ ಅವರಲ್ಲಿ ಪ್ರಖರವಾಗಿ ಇದ್ದಿತು. ಎಷ್ಟೋ ವಿಷಯಗಳಲ್ಲಿ ಹಿಂದೆ ನಡೆದಿದ್ದುದಕ್ಕಿಂತ ಹೆಚ್ಚಿನ ವಿಶ್ಲೇಷಣೆಯ ಆವಶ್ಯಕತೆ ಇದ್ದಿತೆಂಬುದನ್ನು ಗಮನಿಸಿದ್ದವರೇ ವಿರಳ. ಮೇಲ್ತೋರಿಕೆಗೆ ಸರಳವೆನಿಸುವ ಎಷ್ಟೋ ಸಾಂಪ್ರದಾಯಿಕ ಧೋರಣೆಗಳ ಒಳಹೊಕ್ಕು ನೋಡುವಾಗ ಸಮಸ್ಯೆಗಳ ಹುತ್ತಗಳೇ ಕಾಣುತ್ತವೆ. ನಿದರ್ಶನಕ್ಕೆ : ಒಮ್ಮೆ ಅವರು ಆಳವಾದ ಪರಾಮರ್ಶನೆಗೆ ಎತ್ತಿಕೊಂಡಿದ್ದ ವಿಷಯ – ಜಡವಾದ ಅನ್ನದಿಂದ ಸಚೇತನವಾದ ಜೀವ ಹೇಗೆ ಆವಿರ್ಭವಿಸುತ್ತದೆ – ಎಂಬುದು.

ಅವರ ಅವಸಾನಕ್ಕೆ ಸ್ವಲ್ಪ ಪೂರ್ವದಲ್ಲಿಯೂ ಈ ಕಾರ್ಯಶ್ರದ್ಧೆ ಮಸುಕಾಗಿರಲಿಲ್ಲ. ಕಣ್ಣು, ಕಿವಿ, ಕೈಕಾಲು – ಎಲ್ಲ ಅಂಗಗಳ ಪಾಟವವೂ ಕ್ಷೀಣಿಸಿತ್ತು. ಆ ಸ್ಥಿತಿಯಲ್ಲಿಯೂ ಅವರ ಬೌದ್ಧಿಕವ್ಯಾಪಾರಕ್ಕೆ ಅವರು ಬಿಡುವು ಕೊಟ್ಟಿರಲಿಲ್ಲ. ಆ ದಿನಗಳಲ್ಲಿ ಅವರು ಶೋಧಿಸುತ್ತಿದ್ದ ವಿಷಯ : ಎಲ್ಲಕ್ಕೂ ಆದಿಯಲ್ಲಿ ವರ್ಣದ ಉತ್ಪತ್ತಿ ಹೇಗೆ ಆಯಿತು? – ಇತ್ಯಾದಿ ಶಬ್ದಶಾಸ್ತ್ರವಿಷಯ. ಶಬ್ದದ ಮತ್ತು ಅರ್ಥದ ಆವಿಷ್ಕಾರ ಆಗುವುದು ಹೇಗೆ? ಯಾವುದೋ ಒಂದು ಭಾಷೆಯು ರೂಪ ತಳೆದ ಮೇಲೆ ಅದು ಹೇಗೆ ವಿಕಾಸಗೊಳ್ಳುತ್ತಹೋಗುತ್ತದೆ, ಹೇಗೆ ಅದರ ಪ್ರಕಾರಾಂತರಗಳು ಹುಟ್ಟುತ್ತವೆ – ಈ ಸಂಗತಿಗಳಿಗೆ ಸಂಬಂಧಿಸಿದಂತೆ ಒಂದಷ್ಟು ಶಾಸ್ತ್ರೀಯ ವಿವರಗಳು ಸಿಗುತ್ತವೆ. ಆದರೆ ಎಲ್ಲಕ್ಕಿಂತ ಮೊದಲು ಒಂದು ಖಚಿತ ಅರ್ಥವ್ಯಂಜನೆಗಾಗಿ ಒಂದು ಖಚಿತ ಶಬ್ದ ಅಥವಾ ಅಕ್ಷರಸಂಯೋಜನೆ ಹೇಗೆ ಸಾಮರ್ಥ್ಯ ಪಡೆದುಕೊಳ್ಳುತ್ತದೆ? – ಎಂದು ಶರ್ಮರು ವಿವೇಚಿಸತೊಡಗಿದ್ದರು. ಪ್ರಕಟಿತ ಭಾಷಾಶಾಸ್ತ್ರವಾಙ್ಮಯದಲ್ಲಿ ಎಲ್ಲಿಯೂ ಇದಕ್ಕೆ ಪೂರ್ಣ ಸಮರ್ಪಕವೆನಿಸುವ ಸಮಾಧಾನ ದೊರೆತಿರಲಿಲ್ಲ. ಈ ವಿಷಯವಾದರೋ ವ್ಯಾಕರಣದ ಮತ್ತು ಭಾಷಾವಿಜ್ಞಾನದ ಉದ್ಗಮಕ್ಕೂ ಪೂರ್ವದ ಸ್ಥಿತಿಗೆ ಸಂಬಂಧಿಸಿದುದು. ಇದನ್ನು

ಕುರಿತು ತಮ್ಮ ಕೆಲವು ಚಿಂತನೆಗಳನ್ನು ಸಹಾಯಕರೊಬ್ಬರಿಗೆ ಹೇಳಿ ಬರೆಯಿಸಿಯೂ ಇದ್ದರು. ಆದರೆ ಅವರ ಈ ಶೋಧವು ಅರ್ಧಾಂತಕವಾಗಬೇಕಾಯಿತು. "ಬೇರೆ ಯಾವ ಸಮರ್ಥ ಸಮಾಧಾನವೂ ಲಭ್ಯವಿರದಿದ್ದಲ್ಲಿ 'ಮಹಾದೇವೋ ಮರ್ತ್ಯಾನ್ ಆವಿವೇಶ' ಎಂಬ ಶ್ರುತ್ಯುಕ್ತಿಯನ್ನೇ ಆಶ್ರಯಿಸಬೇಕಾಗುತ್ತದೇನೊ" ಎನ್ನುತ್ತಿದ್ದರು.

ಬಾಲ್ಯ, ಅಧ್ಯಯನ, ಅಧ್ಯಾಪನ

ರಂಗನಾಥಶರ್ಮರು (ಜನನ: 1916ರ ವೈಶಾಖ ಶುದ್ಧ ಪಂಚಮಿ, ಶಂಕರಜಯಂತಿಯಂದು) ವಿದ್ಯಾರ್ಥಿದಶೆಯಲ್ಲಿ ಅನುಭವಿಸಿದ ಕ್ಲೇಶಗಳು ಮರ್ಮಭೇದಕವಾದವು. ಅವರ ಬಗೆಗೆ ಒಬ್ಬಿಬ್ಬ ನಿಕಟಬಂಧುಗಳೇ ತೋರಿದ ಅಸಡ್ಡೆ; ಮೊದಲೇ ಸೂಕ್ಷ್ಮವಾಗಿದ್ದ ಶರೀರವು ಸಾಮಾನ್ಯಮಟ್ಟದ ಪೋಷಣೆಯೂ ಅಲಭ್ಯವಾಗಿದ್ದುದರಿಂದ ಕಾಯಿಲೆಗಳಿಗೆ ತೆರೆದ ಬಾಗಿಲಿನಂತಾಗಿದ್ದುದು; – ಈ ಸ್ಥಿತಿಯಲ್ಲಿ ಹದಿ-ತಾರುಣ್ಯದ ವರ್ಷಗಳನ್ನು ಅವರು ಕಳೆಯಬೇಕಾಯಿತು. ಅವರ ಜೀವನ-ಲಕ್ಷ್ಯವಾದ ಜ್ಞಾನಾರ್ಜನೆ ಆ ಸ್ಥಿತಿಯಲ್ಲಿಯೆ ನಡೆಯಬೇಕಾಯಿತು. ಅಂತಹ ಅನುತ್ಸಾಹಕರ ಸನ್ನಿವೇಶದಲ್ಲಿಯೂ ಶರ್ಮರು ಅಂತರಂಗದ ಸ್ತಿಮಿತತೆಯನ್ನು ಕಳೆದುಕೊಳ್ಳದೆ ಏಕಾಗ್ರತೆಯಿಂದ ಅಧ್ಯಯನದಲ್ಲಿ ಮಗ್ನರಾಗಿ ಗುರಿಯನ್ನು ಸಾಧಿಸಿದುದು ಅಸಾಮಾನ್ಯ ಸಾಹಸವೆಂದು ಹೇಳಬೇಕಾಗುತ್ತದೆ.

ಆ ದಿನಗಳಲ್ಲಿ – ಎಂದರೆ ಈಗ್ಗೆ ಎಂಬತ್ತು ವರ್ಷಗಳ ಹಿಂದೆ – ಪರಸ್ಥಳಗಳಿಂದ ಬಂದಿದ್ದ ಬಡ ವಿದ್ಯಾರ್ಥಿಗಳಿಗೆ ಮುಖ್ಯ ಅವಲಂಬವಾಗಿದ್ದ ವಾರಾನ್ನದ ವ್ಯವಸ್ಥೆಯೂ ಸದಾ ಸಮರ್ಪಕವೆನ್ನುವ ಮಟ್ಟದಲ್ಲಿ ಇರುತ್ತಿರಲಿಲ್ಲ. ಶರ್ಮರು ಕೈಗೆ ಸಿಕ್ಕಿದ ಏನನ್ನೋ ಹೇಗೋ ಬೇಯಿಸಿ ಉಂಡು ಕಾಲಹಾಕಿದ ದಿನಗಳಿಗೂ ಲೆಕ್ಕವಿಲ್ಲ. ಆ 'ಕದನ್ನ'ವನ್ನು ಉಣ್ಣಲೂ ಮುತ್ತುಗದೆಲೆಯೂ ಇಲ್ಲದೆ ಹಲವೊಮ್ಮೆ ನೆಲದ ಮೇಲೆಯೆ ಸುರಿದುಕೊಂಡು ನಿರ್ವಾಹ ಮಾಡಿದುದೂ ಇತ್ತಂತೆ. ಈ ವೈಭೋಗ ಸಾಲದೆಂಬಂತೆ ಭೀಕರ ಚರ್ಮರೋಗವೂ ಅತಿಸಾರವೂ ದಾಳಿಮಾಡಿದವು.

ಒಮ್ಮೆಯಂತೂ ತೀವ್ರ ಜ್ವರಗ್ರಸ್ತರಾಗಿ ಚಿಕಿತ್ಸೆಗೂ ಆರೈಕೆಗೂ ಅತ್ಯಲ್ಪ ಸೌಕರ್ಯವೂ ಇರದಿದ್ದಾಗ, ಕಾಯಿಲೆಯಿಂದ ಚೇತರಿಸಿಕೊಳ್ಳಲಾರೆನೇನೊ ಎನಿಸಿ, ವಿಷಯವಾದರೂ ಮನೆಯವರಿಗೆ ತಿಳಿಯಲೆಂದೆನಿಸಿ ಪತ್ರ ಬರೆದಾಗ, ಅವರ ಪಾಲಕರ ಸ್ಥಾನದಲ್ಲಿರಬೇಕಾಗಿದ್ದ ಮಹಾಶಯರು ಈ ಸಂಗತಿಯನ್ನು ಮನೆಮಂದಿಗೆ ತಿಳಿಸುವ ಗೋಜಿಗೂ ಹೋಗಿರಲಿಲ್ಲ!

ಇಂತಹ ಅನಾದರವನ್ನೂ ಶರ್ಮರು ಅನುಭವಿಸಿದ್ದರು.

ಅತಿಶಯವೆಂದರೆ ಅಂತಹ ದುರ್ಭರ ಸನ್ನಿವೇಶಗಳ ಬಗೆಗೆ ಶರ್ಮರು ಮನಸ್ಸನ್ನು ಕಹಿಗೊಳಿಸಿಕೊಳ್ಳದಿದ್ದುದು. ಎಂತಹವರನ್ನಾದರೂ ಕುಗ್ಗಿಸುವಂತಹ ಆ ಕಾಲಾವಧಿಯನ್ನು ಕುರಿತು ಇಳಿವಯಸ್ಸಿನಲ್ಲಿ ಆಪ್ತವಲಯದಲ್ಲಿ ಮಾತನಾಡುವಾಗ ಶರ್ಮರು ಅದನ್ನೆಲ್ಲ ನಗುಮುಖದಿಂದಲೇ ವಿವರಿಸುತ್ತಿದ್ದರು. ಕೆಲವೊಮ್ಮೆ 'ಅದೆಲ್ಲ ಏನ್ರೀ ವಿಶೇಷ! ನಮ್ಮಂತೆ ಪಾಡುಪಟ್ಟವರು ಲೆಕ್ಕವಿಲ್ಲದಷ್ಟು ಜನ ಇರುತ್ತಾರಲ್ಲವೆ' ಎನ್ನುತ್ತಿದ್ದರು.

ಆ ಕಾಲದಲ್ಲಿ ಮುದ್ರಿತ ಗ್ರಂಥಗಳ ಬೆಲೆ ಹೆಚ್ಚಿರದೆ ಸಾಮಾನ್ಯಮಟ್ಟದಲ್ಲಿಯೆ ಇರುತ್ತಿದ್ದರೂ ಆ ಅಲ್ಪ ಹಣವೂ ತಮ್ಮಲ್ಲಿ ಲಭ್ಯವಿರದ ಕಾರಣ ಶರ್ಮರು ಪಾಠ್ಯಗ್ರಂಥಗಳನ್ನು ತಮ್ಮ ಕೈಯಿಂದಲೇ ಬರೆದು ಇರಿಸಿಕೊಳ್ಳಬೇಕಾದ ಪರಿಸ್ಥಿತಿ ಇದ್ದಿತು.

ವಿದ್ಯಾರ್ಥಿದಶೆಯ ಪ್ರತಿ ಹಂತದಲ್ಲೂ ಅವರು ಅಪಾರ ಕ್ಲೇಶಗಳನ್ನು ಎದುರಿಸಿಯೇ ಸಾಗಬೇಕಾಯಿತು. ಆ ಕ್ಲೇಶಗಳನ್ನೂ ಹಲವು ಹಂತಗಳಲ್ಲಿ ಅವರು ತೀವ್ರ ಅನಾದರಕ್ಕೆ ತುತ್ತಾದುದನ್ನೂ ಮೆಲುಕುಹಾಕುವಾಗ ಅವರಿಂದ ಅತ್ಯಲ್ಪ ಕಹಿಭಾವನೆಯೂ ವ್ಯಕ್ತವಾಗುತ್ತಿರಲಿಲ್ಲ. ಪ್ರತಿಯಾಗಿ 'ಇವೆಲ್ಲ ಅಸಾಮಾನ್ಯವೆಂದು ಭಾವಿಸಬೇಕಾದದ್ದಿಲ್ಲ. ಬದುಕು ಇರುವುದೇ ಹೀಗೆ' ಎಂಬ ಸ್ಥೈರ್ಯಭಾವ ಅವರದಾಗಿತ್ತು.

ಇಂತಹ ಬವಣೆಗಳ ಹಿನ್ನೆಲೆ ಇದ್ದೂ ಮಧ್ಯವಯಸ್ಸು ದಾಟಿದ ಮೇಲೆ ಅವರು ವಿದ್ಯಾರ್ಥಿಗಳಲ್ಲಿಯೂ ನಂಟರಿಷ್ಟರಲ್ಲಿಯೂ ತಮ್ಮ ಕೈಚಾಚಿಗೆ ಮೀರಿ ಔದಾರ್ಯ ತೋರುತ್ತಿದ್ದುದನ್ನು ಉದಾತ್ತವೆನ್ನಬೇಕು.

ಲೋಕಪರಿಸ್ಥಿತಿಯ ಬಗೆಗೆ ದೂರುತ್ತ ಕೂಡದೆ ಕೈಗೊದಗಿದ ಕರ್ತವ್ಯವನ್ನು ಶ್ರದ್ಧೆಯಿಂದ ನಿರ್ವಹಿಸುವುದರ ಮೂಲಕ ಬದುಕನ್ನು ಸಹನೀಯವಾಗಿಸಿಕೊಳ್ಳಬೇಕು – ಎಂಬ ಜೀವನದರ್ಶನವನ್ನು ಶರ್ಮರು ಅದು ಹೇಗೋ ಬಾಲ್ಯದಿಂದಲೇ ಮೈಗೂಡಿಸಿಕೊಂಡಿದ್ದರು ಎನಿಸುತ್ತದೆ.

ಗಮ್ಯದಲ್ಲಿ ನೆಟ್ಟ ದೃಷ್ಟಿಯೂ ಅಂತರಂಗಸ್ಥೈರ್ಯವೂ ಇದ್ದುದರಿಂದ ಎಲ್ಲ ಬವಣೆಗಳ ನಡುವೆಯೇ ವ್ಯಾಕರಣಶಾಸ್ತ್ರ ಮತ್ತು ಅಲಂಕಾರಶಾಸ್ತ್ರಗಳಲ್ಲಿ ವಿದ್ವತ್ ಪದವಿಯನ್ನು ಪಡೆದರು. ಶರ್ಮರ ಬಾಹ್ಯಜೀವನಕ್ಕೆ ನಿಲುಗಡೆ ಲಭಿಸಿದುದು, ಸಾಮಾನ್ಯಮಟ್ಟದ ಆದರೆ ಹೆಚ್ಚಿನ ಕ್ಲೇಶವಿಲ್ಲದ ಬಾಳುವೆ ಎಟಕಿದುದು ಅವರ ಸುಮಾರು ಮೂವತ್ತೆರಡರ ವಯಸ್ಸಿನಲ್ಲಿ ಬೆಂಗಳೂರಿನ ಚಾಮರಾಜೇಂದ್ರ ಸಂಸ್ಕೃತ ಮಹಾಪಾಠಶಾಲೆಯಲ್ಲಿ ವ್ಯಾಕರಣಬೋಧಕರಾಗಿ ಸೇರುವ ಅವಕಾಶವಾದಾಗ (ಸು. 1948). ಅಲ್ಲಿಂದಾಚೆಗೆ ಆ ಪಾಠಶಾಲೆ ಇಪ್ಪತ್ತೆಂಟು ವರ್ಷಗಳ ಕಾಲ ಅವರ ಕಾರ್ಯಕ್ಷೇತ್ರವಾಯಿತು. ಈಚಿನ ದಶಕಗಳಲ್ಲಿ ಕೀರ್ತಿವಂತರಾಗಿರುವ ಹತ್ತಾರು ಸಂಸ್ಕೃತ ವಿದ್ವಾಂಸರು ಶರ್ಮರಲ್ಲಿ ಶಿಷ್ಯತ್ವ ಮಾಡಿದವರು.

ಕೆಳದಿಯಲ್ಲಿ ಕೇಶವಶಾಸ್ತ್ರಿಗಳು, ನಾರಾಯಣಶಾಸ್ತ್ರಿಗಳು, ಮತ್ತು ಬೆಂಗಳೂರು ಪಾಠಶಾಲೆಯಲ್ಲಿ ತಿರುನಾರಾಯಣ ಅಯ್ಯಂಗಾರ್ಯರು 'ವಾತ್ಸಲ್ಯಪೂರ್ಣವಾಗಿ ನೀಡಿದ ಶಿಕ್ಷಣ ನನ್ನನ್ನು ರೂಪಿಸಿತು' – ಎಂದು ಪಂಡಿತರು ಸದಾ ಆರ್ದ್ರತೆಯಿಂದ ನೆನೆಯುತ್ತಿದ್ದರು.

ಬೋಧನೆಯು ಶರ್ಮರಿಗೆ ಆದ್ಯತೆಯ ವಿಷಯವಾಗಿತ್ತು. ಅದನ್ನು ಅವರು ಭಗವದ್ವಿಹಿತ ಕರ್ತವ್ಯವಾಗಿ ಭಾವಿಸಿದ್ದರು. ಆದುದರಿಂದ ತಮ್ಮ ಉನ್ನತಿಯನ್ನು ಬದಿಗಿರಿಸಿ ಪ್ರಾಥಮಿಕ ಪಾಠನ ಮಾಡುವುದಕ್ಕೂ ಅವರು ಎಂದೂ ಬೇಸರಿಸಿದುದಿಲ್ಲ. ಅದು ಅವರಿಗೆ ಜಟಿಲ ಶಾಸ್ತ್ರಜಿಜ್ಞಾಸೆಯಷ್ಟೆ ಸಂತೃಪ್ತಿ ನೀಡುತ್ತಿತ್ತು.

ಅಧ್ಯಯನ–ಅಧ್ಯಾಪನಗಳಲ್ಲಿ ಶರ್ಮರು ತೋರುತ್ತಿದ್ದ ತನ್ಮಯತೆ ತಪಃಸದೃಶ ವಾದದ್ದು. ಒಬ್ಬನೇ ವಿದ್ಯಾರ್ಥಿ ಇರಲಿ ಹತ್ತು ಮಂದಿಯೇ ಇರಲಿ, ಶರ್ಮರ ಅಧ್ಯಾಪನಕ್ರಮದಲ್ಲಿ ಎಂದೂ ಶೈಥಿಲ್ಯ ನುಸುಳಿದುದಿಲ್ಲ. ಬೋಧಕತ್ವಗುಣ ಅವರಿಗೆ ರಕ್ತಗತ. ಕಲಿಯುವವರಿಂದ ಅವರು ಪೂರ್ಣ ಅವಧಾನವನ್ನು ನಿರೀಕ್ಷಿಸುತ್ತಿದ್ದರಾದರೂ, ಪ್ರಾಥಮಿಕ ಪ್ರಕ್ರಿಯೆಗಳನ್ನೂ ಮತ್ತೆ ಮತ್ತೆ ಸ್ಪಷ್ಟೀಕರಿಸಲು ಅವರು ಬೇಸರಪಡುತ್ತಿರಲಿಲ್ಲ.

ಇನ್ನು ಬೋಧನ–ಪ್ರವಚನ–ಲೇಖನಗಳು ಸೇರಿದಂತೆ ಎಲ್ಲ ಕಲಾಪಗಳಲ್ಲಿಯೂ ಅವರು ತೋರುತ್ತಿದ್ದ ಅಚ್ಚುಕಟ್ಟು ತುಂಬಾ ವಿರಳ ರೀತಿಯದು.

ನಿರ್ಲಿಪ್ತಿ, ಔದಾರ್ಯ

ತಮ್ಮ ಎಸಕಕ್ಕೆ ಅವರು ಎಂದೂ ಪ್ರಚಾರ ಬಯಸಿದವರಲ್ಲ. ತಾವು ವಹಿಸಿಕೊಂಡ ಕಾರ್ಯವನ್ನು ನಿರ್ವಹಿಸಿದ್ದಾದ ಮೇಲೆ ಪೂರ್ಣ ನಿರ್ಲಿಪ್ತರಾಗಿಬಿಡುತ್ತಿದ್ದರು. ಅವರು ಒಂದೆರಡು ಪತ್ರಿಕೆಗಳಿಗೆ ಬೇರೆ ಹೆಸರಿನಲ್ಲಿ ಅಂಕಣಗಳನ್ನು ಬರೆಯುತ್ತಿದ್ದರು. ಈ ಲೇಖನಗಳನ್ನು ಅವರು ಬರೆಯುತ್ತಿದ್ದರೆಂಬುದು ಅವರ ಮನೆಯವರಿಗೂ ಎಷ್ಟೋ ವರ್ಷ ತಿಳಿದಿರಲೇ ಇಲ್ಲ.

ರಾಜ್ಯೋತ್ಸವ ಪ್ರಶಸ್ತಿ, ಕೇಂದ್ರಸರ್ಕಾರದ ರಾಷ್ಟ್ರಪತಿ ಸಂಮಾನಗಳಿಂದ ದರ್ಭಾಂಗಾ ಸಂಸ್ಕೃತ ವಿಶ್ವವಿದ್ಯಾಲಯದ ಗೌರವ ಡಿ.ಲಿಟ್., ತಿರುಪತಿ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯದ 'ಮಹಾಮಹೋಪಾಧ್ಯಾಯ'ವರೆಗೆ ಅನೇಕ ಗೌರವಗಳನ್ನು ಶರ್ಮರು ಸ್ಥಿತಪ್ರಜ್ಞತೆಯಿಂದ ಸ್ವೀಕರಿಸಿದರು. ಎಷ್ಟೋ ಸಲ ಇವು ಅವರಿಗೆ ಲಘುಹಾಸ್ಯ ವಿಷಯಗಳೂ ಆಗುತ್ತಿದ್ದವು.

ಕೆಲವು ಅಂಶಗಳಲ್ಲಿ ಶರ್ಮರ ಬಗೆಗೆ ದೈವವು ಅದೇಕೋ ಕ್ರೂರವಾಗಿ ವರ್ತಿಸಿತು. ಶರ್ಮರ ಜೀವನವನ್ನು ಬೆಳಗಿದ್ದ ಸಹಧರ್ಮಿಣಿ ಕಮಲಾಕ್ಷಮ್ಮನವರು ಹಠಾತ್ತನೆ 1973ರಲ್ಲಿ ಅವರನ್ನು ಅಗಲಿದರು. ಈ ಅಗಲಿಕೆ ಶರ್ಮರನ್ನು ಚಿರಕಾಲ

ಬಾಧಿಸಿದುದು ಸಹಜ. ಅವರ ಇಬ್ಬರು ಪುತ್ರರೂ (ಶ್ರೀ ಸದಾನಂದ, ಡಾ॥ ನಾಗಭೂಷಣ), ಇಬ್ಬರು ಪುತ್ರಿಯರೂ (ಡಾ॥ ಜಯಶ್ರೀ, ಡಾ॥ ಶಾರದಾ ಚೈತ್ರ) ಅವರ ಸಂತಾನವೂ ವೃದ್ಧಿಂಗತರಾಗಿರುವುದು ಶರ್ಮರಿಗೆ ನೆಮ್ಮದಿಯನ್ನಿತ್ತಿತು.

* * *

ಉನ್ನತ ಶಾಸ್ತ್ರಾಧಿಕಾರ

ಪಂಡಿತರ ಹೆಸರು ಮೊದಲು ನನ್ನ ಕಣ್ಣಿಗೆ ಬಿದ್ದದ್ದು 1954ರ ಸುಮಾರಿನಲ್ಲಿ. ಆ ದಿನಗಳಲ್ಲಿ ಪ್ರಕಟವಾಗುತ್ತಿದ್ದ ಪ್ರತಿಷ್ಠಿತ ವಾರಪತ್ರಿಕೆ 'ಜನಪ್ರಗತಿ'. ಅದರಲ್ಲಿ ರಂಗನಾಥಶರ್ಮರು ಆಗಷ್ಟೆ ಪ್ರಕಟಗೊಂಡಿದ್ದ ತೀ.ನಂ. ಶ್ರೀಕಂಠಯ್ಯನವರ 'ಭಾರತೀಯ ಕಾವ್ಯಮೀಮಾಂಸೆ' ಗ್ರಂಥವನ್ನು ಪರಾಮರ್ಶನೆ ಮಾಡಿ ಲೇಖನಮಾಲೆ ಬರೆದಿದ್ದರು. ಅದು ಉತ್ಕೃಷ್ಟ ಗ್ರಂಥದ ಉತ್ಕೃಷ್ಟ ಅವಲೋಕನವಾಗಿತ್ತು. ವಿಚಾರಿಸಿದಾಗ ಅವರು ಚಾಮರಾಜೇಂದ್ರ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಬೋಧಕರಾಗಿದ್ದರೆಂದು ತಿಳಿಯಿತು. ಡಿ.ವಿ.ಜಿ.ಯವರೂ ಕುತೂಹಲಿಗಳಾಗಿದ್ದರು. ಅವರನ್ನು ಪರಿಚಯ ಮಾಡಿಕೊಳ್ಳಲು ಡಿ.ವಿ.ಜಿ. ಉತ್ಸುಕರಾಗಿದ್ದ ಸಂಗತಿ ತಿಳಿದೊಡನೆ ಶರ್ಮರು ಬಂದು ಭೇಟಿಯಾದರು. ಉಳಿದದ್ದು ಇತಿಹಾಸ. ಅವರದು 53–ಗ್ರೇಡ್ ಸಿಮೆಂಟ್ ಬಳಸಿದ ಬಂಧನ ಆಗಿಬಿಟ್ಟಿತು. ಕ್ರಮೇಣ ಅವರು ಗೋಖಲೆ ಸಂಸ್ಥೆಯ ಭಾಗವಾದರು. ಈ ವಿದ್ಯಾಲಯಕ್ಕೆ ಶರ್ಮರೇ ಕುಲಪತಿಗಳು ಎಂದು ಡಿ.ವಿ.ಜಿ. ಘೋಷಣೆ ಮಾಡಿಬಿಟ್ಟರು.

ಗೋಖಲೆ ಸಂಸ್ಥೆಯ ಆಚೆಗೂ ಶರ್ಮರ ಉನ್ನತ ಶಾಸ್ತ್ರಾಧಿಕಾರವನ್ನು ನೋಡಿ ಕೇಳಿ ಆನಂದಿಸುವ ಅವಕಾಶಗಳು ಇರುತ್ತಿದ್ದವು. ನನ್ನ ಗಾಢ ಸಂಬಂಧ ಇದ್ದ ಸನಾತನ ಕಲಾಕ್ಷೇತ್ರ 1961–62ರಲ್ಲಿ ನಾಟ್ಯ ಶಿಕ್ಷಕರಿಗಾಗಿ ಪ್ರಶಿಕ್ಷಣವರ್ಗವನ್ನು ಏರ್ಪಡಿಸಿತ್ತು. ಅದರಲ್ಲಿ ಪ್ರತಿ ಸಂಜೆ ರಂಗನಾಥಶರ್ಮರು ಭರತನ 'ನಾಟ್ಯಶಾಸ್ತ್ರ'ದ ಪ್ರಮುಖ ಪ್ರಮೇಯಗಳನ್ನು ಕುರಿತು ಉಪನ್ಯಾಸಗಳನ್ನು ನೀಡಿದರು. ಲಕ್ಷಣವಿವರಗಳಿಂದ ಆಚೆ ಸರಿದು ಶರ್ಮರು ಮಾಡುತ್ತಿದ್ದ ಪ್ರತಿಪಾದನೆಯು ನಾಟ್ಯ–ಯೋಗ–ಅಧ್ಯಾತ್ಮಗಳ ಪಾರಸ್ಪರಿಕತೆಯನ್ನು ಕುರಿತು ನನ್ನ ಮಿತ್ರ ವಿ.ಎಸ್. ಕೌಶಿಕ್ ತಳೆದಿದ್ದ ಕಲ್ಪನೆಗಳನ್ನು ಬಲಗೊಳಿಸಿತು. ಇನ್ನು ರಸ–ಭಾವ, ಚಿತ್ತವೃತ್ತಿಗಳು, ಅಲಂಕಾರಶಾಸ್ತ್ರದ ಪರಂಪರೆ ಕುರಿತು ಶರ್ಮರು ಮಾಡುತ್ತಿದ್ದ ವ್ಯಾಖ್ಯಾನಗಳಂತೂ ರಸದೌತಣವೇ ಆಗಿತ್ತು.

ಅಂತಹದೇ ಇನ್ನೊಂದು ಸಂದರ್ಭ, ಗೋಖಲೆ ಸಂಸ್ಥೆಯ ವೇದಿಕೆಯಲ್ಲಿ ಡಿ.ವಿ.ಜಿ.ಯವರ ಅಪೇಕ್ಷೆಯಂತೆ 1964–65ರಲ್ಲಿ ಶಬ್ದಶಾಸ್ತ್ರದ ಬೆಳವಣಿಗೆಯನ್ನೇ ಕುರಿತು ಶರ್ಮರು ಮಾಡಿದ ಉಪನ್ಯಾಸಮಾಲೆ. ಅದು ಅವಿಸ್ಮರಣೀಯವಾಗಿತ್ತು. ನಮಗೆಲ್ಲ ಸಾಂಪ್ರದಾಯಿಕ ಶಾಸ್ತ್ರವಿದ್ವತ್ತಿನ ಸ್ವರೂಪದ ನೇರ ಪರಿಚಯವಾಗಲಿ

ಎಂದೇ ಡಿ.ವಿ.ಜಿ. ಮಾಡಿದ ಯೋಜನೆ ಅದು. ಜೀವನದಲ್ಲಿ ಭಾಷೆಯ ಸ್ಥಾನ, ಭಾಷೆಯ ವ್ಯಾಪ್ತಿ-ಪರಿಮಿತಿಗಳು, ಶೀಕ್ಷಾದಿ ಶಾಸ್ತ್ರಗಳು, ಪಾಣಿನೀಯ ಹಾಗೂ ಪಾಣಿನೀಯೇತರ ವ್ಯಾಕರಣಗಳು, ವ್ಯಾಕರಣಶಾಸ್ತ್ರದ ಇತಿಹಾಸ, ವ್ಯಾಕರಣದ ಮತ್ತು ತರ್ಕಾದಿ ಶಾಸ್ತ್ರಾಂತರಗಳ ಪರಸ್ಪರಾವಲಂಬನೆ – ಈ ಹಲವಾರು ವಿಷಯಗಳ ಬಗೆಗೆ ಶರ್ಮರು ಎಷ್ಟು ಆಕರ್ಷಕವಾಗಿ ಉತ್‌ಸ್ಫೂರ್ತರಾಗಿ ಉಪನ್ಯಾಸಗಳನ್ನು ನೀಡಿದರೆಂದರೆ ಶಾಸ್ತ್ರವಿಷಯಗಳೂ ಇಷ್ಟು ರೋಚಕವಾಗಿರಬಹುದೆ ಎಂದು ನಮಗೆಲ್ಲ ಆಶ್ಚರ್ಯವಾಯಿತು. ಡಿ.ವಿ.ಜಿ.ಯವರಂತೂ ಎಷ್ಟು ಆನಂದಪಟ್ಟರೆಂದು ಹೇಳುವ ಆವಶ್ಯಕತೆ ಇಲ್ಲ. "ನೋಡಿ ಹುಡುಗರೇ, ಪಾಂಡಿತ್ಯವೆಂದರೆ ಇದು" – ಎಂದು ಉದ್ಗರಿಸಿದರು.

ಹೀಗೆ ಅಧಿಕಾರ, ಔಚಿತ್ಯಪ್ರಜ್ಞೆ, ಪ್ರಬೋಧನೋತ್ಸಾಹ – ಮೂರೂ ಸೇರಿ ಕೊಂಡಿದ್ದುದರಿಂದ ಶರ್ಮರು ತುಂಬಾ ಬೆಲೆಯುಳ್ಳ ಹತ್ತಾರು ಅನನ್ಯ ಕೃತಿರತ್ನಗಳನ್ನು ನೀಡುವುದು ಸಾಧ್ಯವಾಯಿತು. ಈ ಸತತ ಸರಸ್ವತ್ಯಾರಾಧನೆಯ ಶ್ರದ್ಧೆ ವಯಸ್ಸು 90 ದಾಟಿದ ಮೇಲೂ ಅವರಿಂದ ಅನುಪಮವಾದ ಶಾಸ್ತ್ರಸಾಹಿತ್ಯವನ್ನು ಹೊಮ್ಮಿಸಿದುದಂತೂ ವಿಸ್ಮಯಕರ. ಈ ಕಾರ್ಯದಲ್ಲಿ ಶರ್ಮರ ಕಣ್ಣೂ ಕೈಯೂ ಆಗಿ ಅವರ ಅನುಚರಣೆ ಮಾಡಿದ ಮಿತ್ರರಿಗೆ ವಿಶೇಷ ನಮನ ಸಲ್ಲುತ್ತದೆ.

ವಾರಸಿಕೆ

ಶರ್ಮರು ಬಿಟ್ಟು ಹೋಗಿರುವ ವಾರಸಿಕೆಯನ್ನು ಮೆಲುಕುಹಾಕುವಾಗ ಕೆಲವು ವಿಶೇಷತೆಗಳು ಎದ್ದು ತೋರುತ್ತವೆ.

ಮೊದಲನೆಯದಾಗಿ – ಪಾಂಡಿತ್ಯ ಅದೇ ಒಂದು ಗುರಿಯಲ್ಲ, ಅದು ಸಾರ್ಥಕ ಕಾರ್ಯಕ್ಕೆ ಒಂದು ಸಾಧನ ಮಾತ್ರ – ಎನ್ನುವುದನ್ನು ಶರ್ಮರು ತಮ್ಮ ಬದುಕಿನಲ್ಲಿ ಪ್ರಕಾಶಪಡಿಸಿದರು.

ಎರಡನೆಯದಾಗಿ – ಭಕ್ತಿಯ ಒಂದು ಪ್ರಕಾರವಾದ 'ಆತ್ಮನಿವೇದನೆ'ಯನ್ನು ಅವರು ಡಿ.ವಿ.ಜಿ.ಯವರಿಗೆ ತಮ್ಮನ್ನು ತ್ರಿಕರಣಪೂರ್ವಕ ಸಮರ್ಪಿಸಿಕೊಂಡ ರೀತಿಯು ದೃಷ್ಟಾಂತಪಡಿಸಿತು.

ಮೂರನೆಯದಾಗಿ – ವೈಯಕ್ತಿಕ ನೆಲೆಯಲ್ಲಿ ಅವರು ಬೆಳೆಸಿಕೊಂಡಿದ್ದ ಚಿಂತನೆಯ ಮತ್ತು ವರ್ತನೆಯ ಉದಾರತೆ ತುಂಬಾ ಹೃದ್ಯವಾಗಿತ್ತು. ಅವರನ್ನು ನೋಡಲು ಬಂದ ಯಾರೂ ಏನಾದರೂ ಸತ್ಕಾರ ಪಡೆಯದೆ ತೆರಳುವುದು ಅಸಾಧ್ಯವಾಗಿತ್ತು. ಬೇರೆಯವರ ಅಲ್ಪ ಪ್ರಯತ್ನ ಕುರಿತೂ ಒಂದು ಪ್ರೋತ್ಸಾಹದ ಮಾತನ್ನು ಆಡಲು ಅವರು ಹಿಂದೆಗೆಯುತ್ತಿರಲಿಲ್ಲ.

ನಾಲ್ಕನೆಯದಾಗಿ – ಕಾರ್ಯಶ್ರದ್ಧೆ. ಸಣ್ಣದಾಗಲಿ ದೊಡ್ಡದಾಗಲಿ, ಒಪ್ಪಿಕೊಂಡ ಕೆಲಸವನ್ನು ದಕ್ಷವಾಗಿ ನಿಗದಿಯಾದಂತೆ ಮುಗಿಸಿ ಅನಂತರ ನಿರ್ಲಿಪ್ತರಾಗಿಬಿಡುತ್ತಿದ್ದರು. ಅವರ ಈ ಶಿಸ್ತೂ ಶ್ರಮವಂತಿಕೆಯೂ ತುಂಬಾ ವಿರಳ ರೀತಿಯದೆನಿಸುತ್ತಿತ್ತು.

ಯಾವುದಾದರೂ ಗ್ರಂಥಮೂಲವನ್ನು ಪುನಃ ಪ್ರಕಟಣೆಗಾಗಿ ಸಿದ್ಧಪಡಿಸ ಬೇಕಾದಾಗ, ಪರಿಷ್ಕರಣವು ತುಂಬಾ ಕ್ಲೇಶಕರವೆನಿಸಿದಾಗ ಕೆಲವೊಮ್ಮೆ ಆ ರಗಳೆಯಿಂದ ದೂರ ಸರಿಯೋಣವೆನಿಸುವುದು ವಿರಳವಲ್ಲ. ಮೊದಲಿಗೇ ಆ ಭಾರವನ್ನು ನಿವಾರಿಸಿಕೊಳ್ಳಲು ಸಾಧ್ಯವಿದ್ದರೆ ತೊಂದರೆಯಿಲ್ಲ. ಆದರೆ ಏನೋ ಕಾರಣಗಳಿಂದ ಅದಕ್ಕೆ ಒಮ್ಮೆ ಕೈಯಿರಿಸಿದ ಮೇಲೆ ಹಿಂದಿರುಗುವ ಪ್ರಶ್ನೆಯಿಲ್ಲ. ಅದೆಷ್ಟೇ ಕ್ಲೇಶಮಯವಾಗಿದ್ದರೂ ಶರ್ಮರು ಹಗಲುರಾತ್ರಿ ಕುಳಿತು ಶ್ರಮಪಟ್ಟು ಅದನ್ನು ಮುಗಿಸುತ್ತಿದ್ದರು. ಇಂತಹ ಒಂದು ಯೋಜನೆಯನ್ನು ದಡ ಕಾಣಿಸಲು ಶರ್ಮರು ಒಂದು ವರ್ಷವಿಡೀ ಶ್ರಮಪಡಬೇಕಾಯಿತು. ಆ ಯೋಜನೆಯಲ್ಲಿ ಸಹಕಾರಿಗಳೆಂದು ಇನ್ನೂ ಮೂರು–ನಾಲ್ಕು ಮಂದಿಯ ಹೆಸರುಗಳೇನೋ ಆ ಸಂರಚನೆಯಲ್ಲಿ ಇದ್ದವು. ಆದರೆ ಅದರ ಭಾರವಷ್ಟೂ ಬಿದ್ದದ್ದು ಶರ್ಮರ ಹೆಗಲ ಮೇಲೆಯೇ. ಏಕಾಂಗಿಯಾಗಿ ಅವರು ಆ ಕಷ್ಟದ ಕೆಲಸವನ್ನು ಮುಗಿಸಿದರು.

ಬೋಧನೋತ್ಸಾಹ

ನಮಗೆಲ್ಲ ಅವರೊಡನೆ ಎಷ್ಟು ಸಲಿಗೆ ಬೆಳೆದುಬಿಟ್ಟಿತ್ತೆಂದರೆ – ಅವರ ಉನ್ನತಿಗೂ ನಮ್ಮ ಕೆಳಮಟ್ಟಕ್ಕೂ ನಡುವಣ ಅಂತರ ಮರೆತೇಹೋಗುತ್ತಿತ್ತು. 'ಲಘುಕೌಮುದೀ' ನಮಗೆ ಪಾಠ ಮಾಡುತ್ತಿದ್ದಾಗ ಅವರು ನಮ್ಮ ಮಟ್ಟಕ್ಕೆ ಇಳಿದು ಪ್ರಕ್ರಿಯೆಗಳನ್ನು ಮೇಲಿಂದ ಮೇಲೆ ವಿಶದಪಡಿಸುತ್ತಿದ್ದ ರೀತಿಯನ್ನು ನೆನೆದರೆ ಈಗಲೂ ಆಶ್ಚರ್ಯವಾಗುತ್ತದೆ.

ಪ್ರತಿ ವಾರ ನಾವು ಒಂದು ಶಬ್ದರೂಪ ಮತ್ತು ಎರಡು ಧಾತುರೂಪಗಳನ್ನು ಕಂಠಪಾಠ ಮಾಡಿ ಒಪ್ಪಿಸಬೇಕಾಗಿತ್ತು. ಒಂದು ತರಗತಿಯಲ್ಲಿ ನಮ್ಮ ಸಹಾಧ್ಯಾಯಿ ಟಿ. ಎಲ್. ರಂಗಸ್ವಾಮಿ "ಇವತ್ತು ಧಾತುರೂಪ ಮಾತ್ರ ಹೇಳಬಲ್ಲೆ" ಎಂದರು. ಪಂಡಿತರು "ಚಿಂತೆಯಿಲ್ಲ. ಅಷ್ಟನ್ನೇ ಹೇಳಿ. ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್" ಎಂದರು.

ಹೀಗೆ ನಮ್ಮ ಪಾಠದ ತರಗತಿಗಳು ಎಂದೂ ನೀರಸವಾಗಿರುತ್ತಿರಲಿಲ್ಲ.

ಒಮ್ಮೆ ನಮ್ಮ ತರಗತಿ ನಡೆದಿದ್ದಾಗ ಕಡೆಂಗೋಡ್ಲು ಶಂಕರಭಟ್ಟರು ಸಂಸ್ಥೆಗೆ ಬಂದರು. ಇಲ್ಲಿ ಪಾಠ ನಡೆಯುತ್ತಿದ್ದುದನ್ನು ನೋಡಿ ಅವರಿಗೆ ಅತ್ಯಂತ ಆನಂದವಾಯಿತು. "ಈ ನಗರದ ಗಡಿಬಿಡಿಗಳ ನಡುವೆ ಈ ಮೂಲೆಯಲ್ಲಿ ಇಂತಹ ಗುರುಕುಲವನ್ನು ನಾನು ನಿರೀಕ್ಷಿಸಿರಲಿಲ್ಲ" ಎಂದು ಹರ್ಷೋದ್ಗಾರ ಮಾಡಿದರು.

ಎಷ್ಟೋ ನಮೂನೆಯ ಪಂಡಿತರುಗಳನ್ನು ನಾವು ನೋಡಿದ್ದೆವು. ಉದಾಹರಣೆಗೆ – ಗೋಖಲೆ ಸಂಸ್ಥೆಗೆ ಸಮೀಪದಲ್ಲಿಯೆ ಒಬ್ಬ ದೊಡ್ಡ ಪಂಡಿತರಿದ್ದರು. ಪಾಠಪ್ರವಚನಗಳನ್ನು ನಡೆಸುತ್ತಿದ್ದರು. 'ಸಚ್ಛಾಸ್ತ್ರ ಪಾರಾವಾರೀಣ' ಎಂದೋ ಏನೋ ಛತ್ವಸಂಧಿಯುಕ್ತವಾದ ಬಿರುದೂ ಅವರಿಗೆ ಇತ್ತು. ಅವರು ನೀಡುತ್ತಿದ್ದ ಮೊದಲ ಆದೇಶ – 'ಪ್ರಶ್ನಾ ಮಾಡೋಣ ಕೂಡದು' ಎಂದು.

ಆದರೆ ಶರ್ಮರ ಪರಿಚಯವಾದಾಗ ದೊಡ್ಡ ಪಂಡಿತರೂ ಇಷ್ಟು ಸರಳರೂ ಸುಲಭರೂ ಆಗಿರಬಹುದೆನಿಸಿ ನಮಗೆ ಆಶ್ಚರ್ಯವಾಯಿತು. ಅಲ್ಪಕಾಲದಲ್ಲಿ ಅವರೊಡನೆ ಎಷ್ಟು ನಿಕಟತೆ ಬೆಳೆದುಬಿಟ್ಟಿತೆಂದರೆ – 'ಅಷ್ಟು ದೊಡ್ಡವರ ಹತ್ತಿರ ನಾವು ತುಂಬಾ ಸಲಿಗೆಯನ್ನು ವಹಿಸುತ್ತಿದ್ದೆವೇನೊ' ಎಂದು ಈಗ ಅನಿಸುತ್ತದೆ. ಆದರೆ ಅವರು ಎಂದೂ ತಮ್ಮ ಔನ್ನತ್ಯವನ್ನು ಮುಂದೆಮಾಡಿ ವರ್ತಿಸಿದವರಲ್ಲ.

ಅಪರಿಚಿತರಿಗೆ ಅವರು ಶ್ರೀಮದ್‌ಗಾಂಭೀರ್ಯದ ವ್ಯಕ್ತಿ ಎಂದು ತೋರುತ್ತಿದ್ದರೋ ಏನೊ. ಆದರೆ ಸ್ವಲ್ಪ ಪರಿಚಯ ಬೆಳೆದೊಡನೆ ಎಲ್ಲ ಅಂತರವೂ ಮಾಯವಾಗಿ ಬಿಡುತ್ತಿತ್ತು.

ಆಗಾಗ ಅವರ ರಸಿಕತೆಯೂ ಹೊಮ್ಮುತ್ತಿತ್ತು. ಹೀಗೆ ಅವರ ಒಡನಾಟ ಬೆಳದಿಂಗಳಿನಂತೆ ಸ್ಪೃಹಣೀಯವಾಗಿರುತ್ತಿತ್ತು.

ವಿನೋದಪ್ರಜ್ಞೆ

ಹೆಚ್ಚಿನ ಸಮಯ ಯಾವುದೋ ಶಾಸ್ತ್ರಜಟಿಲತೆಗಳನ್ನು ಬಿಡಿಸುವುದರಲ್ಲಿ ಪಂಡಿತರ ಮನಸ್ಸು ಕೆಲಸ ಮಾಡುತ್ತಿರುತ್ತಿತ್ತು. ಆದರೆ ವಿನೋದಪ್ರಜ್ಞೆಯೂ ಅವರಿಗೆ ಸ್ವಭಾವಗತವೇ. ಹಾಸ್ಯಾವಕಾಶವಿದ್ದಾಗ ತಾವು ಆನಂದಿಸಿ ಇತರರನ್ನೂ ರಂಜಿಸಬಲ್ಲವರಾಗಿದ್ದರು. ಒಂದೆರಡು ಪ್ರಸಂಗಗಳನ್ನು ಸ್ಮರಿಸಬಹುದು.

ಕೆಲವು ಸಮಯ ಅವರು ಗೋಖಲೆ ಸಂಸ್ಥೆಗೆ ನಾಲ್ಕು ರಸ್ತೆಯ ಆಚೆಯೇ ಔಟ್‌ಹೌಸಿನಲ್ಲಿ ವಾಸವಿದ್ದರು. ಆ ದಿನಗಳಲ್ಲಿ ಒಮ್ಮೆ ಅವರ ಮನೆಯಲ್ಲಿ ಏನೋ ಹೋಮಕಲಾಪ, 'ಅಗ್ನಯೇ ಸ್ವಾಹಾ' ಎಂದೆಲ್ಲ ಆಹುತಿ ನಡೆದಿತ್ತು. ಆಗ ಶರ್ಮರ ಪುತ್ರ (ಬಹುಶಃ ನಾಲ್ಕು ವರ್ಷದವನಾಗಿದ್ದ) ನಾಗಭೂಷಣ 'ಅಜ್ಜಯೇ ಸ್ವಾಹಾ' ಎಂದೆಲ್ಲ ಮಿಮಿಕ್ರಿ ಮಾಡತೊಡಗಿದ.

ಪಂಡಿತರು ನಕ್ಕು "ಅಲ್ಲ, ಏನೋ ಬಾಯಿಗೆ ಬಂದದ್ದನ್ನು ಹೇಳುವಾಗಲೂ ಇವನ ಬಾಯಲ್ಲಿ ಚತುರ್ಥಿಯೇ ಬರುತ್ತಿದೆಯಲ್ಲ!' ಎಂದರು.

ಇಂತಹ ಸನ್ನಿವೇಶಗಳು ಹತ್ತಾರು.

ಮಹಾಮಹೋಪಾಧ್ಯಾಯ ವಿದ್ವಾನ್ ಎನ್. ರಂಗನಾಥಶರ್ಮಾ
(1916 – 25.1.2014)

ಗೋಖಲೆ ಸಂಸ್ಥೆಯ ಎಲ್ಲ ಕಾರ್ಯಕ್ರಮಗಳಿಗೂ ಅವರು ತಪ್ಪದೆ ಬರುತ್ತಿದ್ದರು. ಹಾಗೆ ಬಂದಾಗ ಒಂದು ಸಂಜೆ ಅಲ್ಲಿ ಇದ್ದುದು ಒಂದು ಸಂಗೀತ ಕಾರ್ಯಕ್ರಮ.

ಗೇಟಿನ ಬಳಿ ಇದ್ದ ನನ್ನನ್ನು ಪಂಡಿತರು ಕೇಳಿದರು : "ಸಂಗೀತ-ಸಾಹಿತ್ಯಪರಿಜ್ಞಾನ ಇಲ್ಲದವರನ್ನು 'ಸಾಕ್ಷಾತ್ ಪಶುಃ ಪುಚ್ಛವಿಷಾಣಹೀನಃ' (ಕೊಂಬು-ಬಾಲ ಇಲ್ಲ ಎಂಬುದನ್ನು ಬಿಟ್ಟರೆ ದನಗಳಿಗೆ ಸಮಾನ) ಎನ್ನುತ್ತಾರಲ್ಲವೆ?"

"ಹೌದು, ನೀವೇ ನಮಗೆ ಪಾಠ ಮಾಡಿದ್ದೀರಲ್ಲ!"

"ಹಾಗಾದರೆ ಯಾರುಯಾರಿಗೆ ಸಂಗೀತ-ಸಾಹಿತ್ಯಗಳ ಪರಿಜ್ಞಾನ ಇರುತ್ತದೋ ಅವರು 'ಸಾಕ್ಷಾತ್ ಪಶುಃ ಪುಚ್ಛವಿಷಾಣಯುಕ್ತಃ' ಎಂದು ಹೇಳಬಹುದಲ್ಲವೆ?" - ಎಂದರು.

ಒಂದು ದಿನ ಅಪರಾಹ್ನ ಚಾಮರಾಜಪೇಟೆಯಲ್ಲಿ ಪಂಡಿತರು ನಾನಿದ್ದಲ್ಲಿಗೆ ಬಂದರು. ಅದು ಸುಡುಬೇಸಗೆಯ ಕಾಲ. ನಾನು ಸಹಜವಾಗಿ ಕೇಳಿದೆ : "ಏನು, ಇಷ್ಟು ಬಿಸಿಲಿನಲ್ಲಿ ಬಂದಿರಲ್ಲ?"

ಅವರು ಉತ್ತರಿಸಿದರು : "ನಾನೇನು ಬಿಸಿಲಿನಲ್ಲಿ ಬರಲಿಲ್ಲ. ನನ್ನ ಪಾಡಿಗೆ ನಾನು ಬಂದೆ. ನಾನು ಬರುವಾಗ ಬಿಸಿಲು ಇದೆ, ಅಷ್ಟೆ."

ಶರ್ಮರ ರಾಮಾಯಣದ ಒಂದು ಸಂಪುಟ ಹೊರಬಿದ್ದಾಗ ಅದರಲ್ಲಿ ಸಹಕರಿಸಿದ್ದ ನಾನು ಜ್ವರಗ್ರಸ್ತನಾಗಿ ಮಲಗಿದ್ದೆ. ಆದರೆ ಹೊಸ ಸಂಪುಟ ಹೇಗೆ ಬಂದಿದೆಯೋ ನೋಡಬೇಕೆಂಬ ತೀವ್ರ ಚಪಲ ನನ್ನದು. ಶರ್ಮರ ಹಸ್ತಾಕ್ಷರದೊಡನೆ ಪುಸ್ತಕವನ್ನು ತಂದುಕೊಡುವಂತೆ ಕೋರಿ ಮಿತ್ರರೊಬ್ಬರನ್ನು ಕಳಿಸಿದೆ. ಶರ್ಮರು ಪ್ರೀತಿಪೂರ್ವಕ ನನಗೆ ಕಳಿಸಿದ ಪುಸ್ತಕದಲ್ಲಿ ಹೀಗೆ ಅಂಕಿತ ಬರೆದಿದ್ದರು :

ಆಂಜನೇಯಸಮಾನೀತ-
ಮಣಿನಾ ಸಹ ಸೀತಯಾ
ದೂರಸ್ಥಯಾ ಸಮಾಶ್ಲಿಷ್ಟೋ
ರಾಮಃ ಸ್ವಾಮೀ ಮುದೇಽಸ್ತು ವಃ ॥

ಇನ್ನೊಂದು ಸಂದರ್ಭ ನೆನಪಾಗುತ್ತದೆ. ನಮ್ಮ ನಡುವೆ ಒಬ್ಬ ಅತ್ಯಂತ ಪ್ರಸಿದ್ಧ ಆಯುರ್ವೇದವೈದ್ಯರು ಇದ್ದರು. ಅವರ ಆಯುರ್ವೇದತಜ್ಞತೆ ವಿವಾದಾತೀತವಾಗಿತ್ತು. ಆದರೆ ಅವರಲ್ಲಿ ಒಂದು ಸ್ವಭಾವವೈಚಿತ್ರ್ಯ ಇದ್ದಿತು. ರೋಗಿಗಳಿಗೂ ಅನ್ಯರಿಗೂ ಬಾಯಿಬಡಿದು ವಾಗ್ದಂಡನೆ ಮಾಡುವುದರಲ್ಲಿ ಅವರಿಗೆ ವಿಲಕ್ಷಣ ಆನಂದ. ಯಾರಾದರೂ ಸ್ವಾಸ್ಥ್ಯಕ್ಕಾಗಿ ಯೋಗಾಸನ ಮಾಡುತ್ತಿರುವೆನೆಂದರೆ "ಇದನ್ನೆಲ್ಲ ಯೋಗವೆಂದು ಕರೆದವನು ಯಾವ ಮುಠ್ಠಾಳ?" ಎಂದು ವಾದಕ್ಕಿಳಿಯುವರು.

ರೋಗಿಗೆ ಮಜ್ಜಿಗೆ ಪಥ್ಯ ಹೇಳಿದರೆ ಹಿಂದುಗೂಡಿ "ಮಜ್ಜಿಗೆ ಎಂದರೆ ಏನೆಂದು ನಿಮಗೆ ಗೊತ್ತುಂಟೊ?" ಎಂದು ಉಪನ್ಯಾಸಕ್ಕೆ ತೊಡಗುವರು.

ಒಮ್ಮೆ ವೈದ್ಯರತ್ನರು ಇಂತಹ ಶಾಬ್ದಿಕಲೀಲೆಯಲ್ಲಿ ತೊಡಗಿದ್ದಾಗ ಅಲ್ಲಿ ಚಿಕಿತ್ಸೆಯ ನಿಮಿತ್ತ ಹೋದ ಶರ್ಮರು ಅವರಿಗೆ ಅವರದೇ ಮಾಧ್ಯಮದಲ್ಲಿ ಪ್ರಹಾರ ಮಾಡಿದರು:

"ಅಲ್ಲ ಪಂಡಿತರೇ, ಜಗತ್ತಿನಲ್ಲಿ ಎಲ್ಲರೂ ಮಾತುಗಳನ್ನು ಬಳಸುವುದು ಅವುಗಳು ರೂಢಿಯಲ್ಲಿ ಪಡೆದುಕೊಂಡಿರುವ ಅರ್ಥದಲ್ಲಿಯೇ. ಎಲ್ಲರೂ ಸದಾ ತರ್ಕಪರಿಷ್ಕಾರಸಮನ್ವಿತವಾಗಿ ಮಾತನಾಡುತ್ತೇವೆ ಎಂದು ವ್ರತ ತೊಟ್ಟರೆ ಜಗತ್ತಿನ ವ್ಯವಹಾರವೇ ಅಸಾಧ್ಯವಾಗುತ್ತದೆ. ನೀವು ನಿಮ್ಮ ದರ್ಜಿಯವನ ಹತ್ತಿರ ಹೋದಾಗ 'ಒಂದು ಷರಟು ಹೊಲಿದುಕೊಡು' ಎಂದು ತಾನೆ ಕೇಳುತ್ತೀರಿ? ಆದರೆ ಸಿದ್ಧವಾಗುವುದಕ್ಕೆ ಪೂರ್ವದ ಹಂತದಲ್ಲಿಯೆ ಅದನ್ನು 'ಷರಟು' ಎಂದು ನೀವು ಹೇಗೆ ನಿರ್ದೇಶಿಸುತ್ತೀರಿ? ಅಥವಾ ನೀವೇನಾದರೂ 'ಈ ದಾರಗಳ ಸಮೂಹವನ್ನು ಒಂದು ಆಚ್ಛಾದನಾರ್ಹ ವಸ್ತುವಿಶೇಷವನ್ನಾಗಿ ಪರಿವರ್ತಿಸಿಕೊಡು' ಎಂದು ಕೇಳುತ್ತೀರೋ? ಸುಮ್ಮನೆ ನಿಷ್ಕಾರಣವಾಗಿ ನೀವು ಏಕೆ ಜನರ ಬಾಯಿಬಡಿಯುತ್ತೀರಿ?"

ಆಯುರ್ವೇದ ಪಂಡಿತರು ನಕ್ಕು ಸುಮ್ಮನಾದರು. ಸೇರಿಗೆ ಸವ್ವಾಸೇರು ಎಂಬಂತೆ ಆಗಿತ್ತು.

ಒಬ್ಬ ಪ್ರವಚನಕಾರರಿಗೆ ಎಲ್ಲೆಲ್ಲಿಂದಲೋ ಏನೇನೋ ಬಿರುದುಗಳನ್ನು ಸಂಗ್ರಹಿಸಿಕೊಳ್ಳುವ ಚಟ; ಮತ್ತು ಅವನ್ನು ತಮ್ಮ ಪ್ರಕಟಣೆಗಳಲ್ಲಿ ತಪಶೀಲಾಗಿ ತಪ್ಪದೆ ಒಂದರ ಕೆಳಗೆ ಒಂದನ್ನು ಸಾಲಾಗಿ ಮುದ್ರಿಸುತ್ತಾರೆ. ಅಂತಹ ಒಂದು ಶಾಸನವನ್ನು ಕುರಿತು ಶರ್ಮರು ರಾ. ಗಣೇಶ್‌ರವರಿಗೆ ಫೋನ್ ಮಾಡಿದರು : "ಈ ಮನುಷ್ಯ ಇದುವರೆಗೆ ಎಷ್ಟು ಬಿರುದುಗಳನ್ನು ಒಟ್ಟುಹಾಕಿಕೊಂಡಿದ್ದಾನೆಂದು ಗಮನಿಸಿದ್ದೀರೇನ್ರೀ?" – ಎಂದು. ಗಣೇಶ್ "ನೋಡಿದ್ದೇನೆ, ಒಟ್ಟು ಇಪ್ಪತ್ತೆಂಟು ಇವೆ" ಎಂದರು. ಶರ್ಮರು "ನಿಮ್ಮ ಲೆಕ್ಕ ತಪ್ಪು. ಒಟ್ಟು ಇಪ್ಪತ್ತೊಂಬತ್ತು ಇವೆ, ಸರಿಯಾಗಿ ಎಣಿಸಿ ನೋಡಿರಿ" ಎಂದು ತಿದ್ದಿದರು.

2011ರಲ್ಲಿ ಪಂಡಿತರಿಗೆ ನಾನು ಬರೆದ 'ದೀಪ್ತಿಮಂತರು' ವ್ಯಕ್ತಿಚಿತ್ರಸಂಪುಟ ಪ್ರತಿಯನ್ನು ಕೊಡುವಾಗ ಅದರಲ್ಲಿ ಶರ್ಮರಿಗೂ ನನಗೂ ಇಬ್ಬರಿಗೂ ಆತ್ಮೀಯರಾಗಿದ್ದ ನಾಟ್ಯಾಚಾರ್ಯ ವಿ.ಎಸ್. ಕೌಶಿಕ್ ಅವರ ಬಗೆಗೆ ಬರೆದಿದ್ದೇನೆ ಎಂದು ಹೇಳಿದೆ. ಪಂಡಿತರು ನಕ್ಕು 'ಆತ ನನಗೆ ನಸ್ಯ ಕಲಿಸಿದ ಗುರು' ಎಂದರು.

ಇಳಿವಯಸ್ಸಿನಲ್ಲಿ ಇಂದ್ರಿಯಪಾಟವ ಕಡಮೆಯಾಗಿದ್ದುದೂ ಅವರಿಗೆ ವಿನೋದವಿಷಯವೇ ಆಗಿತ್ತು. 90ರ ವಯಸ್ಸಿನಲ್ಲಿ ಅವರು ಹೇಳುತ್ತಿದ್ದರು :

"ನನ್ನ ಕಣ್ಣು ಕಿವಿ ಮೊದಲಾದ ಇಂದ್ರಿಯಗಳು ನನಗೆ ಹೇಳುತ್ತಿವೆ – 'ನೀನೇನೊ ಮೂವತ್ತು ವರ್ಷ ಹಿಂದೆ ಕೆಲಸದಿಂದ ನಿವೃತ್ತನಾದೆ. ಆಮೇಲೆ ಮೂವತ್ತು ವರ್ಷವೂ ಸತತವಾಗಿ ನೀನು ನಮ್ಮನ್ನು ದುಡಿಸಿಕೊಂಡಿದ್ದೀ; ನಮಗೆ ವಿಶ್ರಾಂತಿ ಕೊಡುವ ಯೋಚನೆಯನ್ನೇ ಮಾಡಲಿಲ್ಲ. ಆದ್ದರಿಂದ ಈಗ ನಾವಾಗಿ ನಿನ್ನ ಸೇವೆಯಿಂದ ನಿವೃತ್ತರಾಗಲು ತೀರ್ಮಾನಿಸಿದ್ದೇವೆ' – ಎಂದು."

* * *

ಶಾಸ್ತ್ರಸಾಹಿತ್ಯನಿರ್ಮಿತಿ

ಶರ್ಮರ ಸಾರಸ್ವತ ಕೊಡುಗೆ ಸಮೃದ್ಧವೂ ವೈವಿಧ್ಯಮಯವೂ ಆದದ್ದು. 'ಶ್ರೀಶಂಕರಚರಿತಾಮೃತಮ್', 'ಗುರುಪರಂಪರಾಚರಿತಮ್', 'ಬಾಹುಬಲಿವಿಜಯಮ್', 'ಏಕಚಕ್ರಮ್' ಸೇರಿದಂತೆ 11 ಸಂಸ್ಕೃತ ಕೃತಿಗಳು; 'ಲೌಕಿಕ ನ್ಯಾಯಗಳು', 'ಶ್ರೀರಾಮಕಥಾ ಮಂಜರಿ', 'ವ್ಯಾಕರಣಶಾಸ್ತ್ರದ ಪರಿವಾರ' ಸೇರಿದಂತೆ 20ಕ್ಕೂ ಹೆಚ್ಚು ಕನ್ನಡ ಕೃತಿಗಳು; 'ಭಗವನ್ನಾಮಾವಳಿ' ಮೊದಲಾದ ಐದಾರು ಸಂಕಲನಗಳು; – ಇವು ಶರ್ಮರ ಕೃತಿಗಳಲ್ಲಿ ಸೇರಿವೆ. ಶರ್ಮರ ಸ್ಥಾಯಿಯಾದ ಕೀರ್ತಿಯ ನಿಲವುಗಂಬಗಳು ಅವರ ಅನುವಾದ ಮತ್ತು ವ್ಯಾಖ್ಯಾನಕೃತಿಗಳು; 'ಶ್ರೀಮದ್ವಾಲ್ಮೀಕಿರಾಮಾಯಣ', 'ಶ್ರೀಮದ್ಭಾಗವತ', 'ವಿಷ್ಣುಪುರಾಣ', 'ಶಂಕರದಿಗ್ವಿಜಯ', 'ಮಾಂಡೂಕ್ಯಪ್ರವಚನ', 'ತೈತ್ತಿರೀಯೋಪನಿಷತ್‌ಪ್ರವಚನ', 'ಪಂಚದಶೀಪ್ರವಚನ', 'ಅಮರಕೋಶ', 'ವಾಕ್ಯಪದೀಯ', 'ಶ್ರೀಶಾಂಕರಸೂಕ್ತಿಮುಕ್ತಾವಳಿ', 'ಶ್ರುತಿಸಾರಸಮುದ್ಧರಣ' ಮೊದಲಾದ ಉದ್ಧಕೃತಿಗಳು. ಈ ಒಂದೊಂದೂ ಸಮುನ್ನತ ಕೃತಿಯೆಂದು ಪರಿಗಣಿಸಲು ಅರ್ಹವಾದುದು.

ಹೆಸರಿಗೆ ಮತ್ತು ವರ್ಗೀಕರಣದ ದೃಷ್ಟಿಯಿಂದ ಇವನ್ನು 'ಅನುವಾದಕೃತಿ'ಗಳೆಂದು ಕರೆಯಬಹುದಾದರೂ, ಅವುಗಳಲ್ಲಿ ಉದ್ದಕ್ಕೂ ನಿವೇಶಗೊಂಡಿರುವ ಅರ್ಥಸೂಕ್ಷ್ಮತೆಗಳನ್ನು ಗಮನಿಸಿದಲ್ಲಿ ಅವನ್ನು ಪ್ರೌಢ ಮತ್ತು ಸ್ವೋಪಜ್ಞ ವ್ಯಾಖ್ಯಾನಗಳು ಎನ್ನುವುದೇ ಸಮಂಜಸವಾಗುತ್ತದೆ. ಅರ್ಥ, ತಾತ್ಪರ್ಯ, ಟಿಪ್ಪಣಿಗಳೊಂದೊಂದರ ಹಿಂದೆಯೂ ಗಾಢ ಮಂಥನದಿಂದ ನಿಷ್ಪಾದಿತವಾದ ಮತ್ತು ಅನ್ಯತ್ರ ದುರ್ಲಭವಾದ ಸ್ಫುಟೀಕರಣವನ್ನು ಗುರುತಿಸಬಹುದು. ತೈತ್ತಿರೀಯ–ಮಾಂಡೂಕ್ಯ–ಪಂಚದಶೀಪ್ರವಚನಗಳಂತೂ ಸ್ವರೂಪದಲ್ಲಿಯೆ ವ್ಯಾಖ್ಯಾನಗಳಾಗಿವೆ. ಪದಚ್ಛೇದ, ಪದಾರ್ಥೋಕ್ತಿ, ವಿಗ್ರಹ, ವಾಕ್ಯಯೋಜನೆ, ಆಕ್ಷೇಪಕ್ಕೆ ಸಮಾಧಾನ – ಈ ಐದು ಲಾಕ್ಷಣಿಕತೆಗಳ ಮೇಲ್ಮಟ್ಟದ ಅನುಸರಣೆಯ ಜೊತೆಗೆ ದಟ್ಟವಾದ ಅನುಭವದಿಂದ ಜನ್ಯವಾದ ಒಳನೋಟಗಳ ನಿಬಿಡತೆ ಇವುಗಳಲ್ಲಿ ದೃಶ್ಯಮಾನವಾಗಿದೆ. ಇಂತಹ ವೈಶದ್ಯದ್ಯೋತನಕ್ಕೆ ಮುಕುಟಪ್ರಾಯವಾಗಿ ಚಾರಿತ್ರಾಂಶಗಳ ಮತ್ತು ವಿಷಯನಿಷ್ಠವಾದ ಪರಾಮರ್ಶನೆಯನ್ನೊಳಗೊಂಡ

ಸಂಶೋಧನಾಧಾರಿತ ಪ್ರಸ್ತಾವನೆಗಳನ್ನೂ ಶರ್ಮರು ನೀಡಿದ್ದಾರೆ. ಈ ಮೂರೇ 'ಪ್ರವಚನ' ಗ್ರಂಥಗಳನ್ನು ಅವಧಾನಪೂರ್ವಕ ಓದಿದಲ್ಲಿ ವೇದಾಂತದರ್ಶನದ ಪ್ರಮುಖ ಪ್ರಮೇಯಗಳ ಪರಿಜ್ಞಾನ ದೊರೆಯಬಲ್ಲದೆಂಬುದು ನಿಸ್ಸಂಶಯ. ಶಾಸ್ತ್ರಾಭ್ಯಾಸಿಗಳಿಗೂ ಸುಕರವಲ್ಲದ ಭರ್ತೃಹರಿಕರ್ತೃಕ 'ವಾಕ್ಯಪದೀಯ'ದ ವಿವರಣಾತ್ಮಕ ಭಾಷಾಂತರವಂತೂ ಶಬ್ದಶಾಸ್ತ್ರದ ಅವಗಾಹನೆಗೆ ನಮ್ಮ ಕಾಲದ ಶ್ರೇಷ್ಠ ಸೇರ್ಪಡೆ. ಅದರದೇ ಅಂಗವಾದ ಆದರೆ ತಾತ್ತ್ವಿಕವಾಗಿ ಹೆಚ್ಚಿನ ವ್ಯಾಪ್ತಿಯದಾದ 'ಕಾಲ ಮತ್ತು ಕ್ರಿಯೆ' ಅನುವಾದ–ವ್ಯಾಖ್ಯಾನವಂತೂ ಅನನ್ಯ ದಾರ್ಶನಿಕ ವಿಶ್ಲೇಷಣೆಯಾಗಿದೆ.

ವಿದ್ವದ್ವಲಯಗಳಲ್ಲಿಯೂ ಹೆಚ್ಚು ಪರಿಚಿತವಿರದ ಹದಿನೆಂಟನೇ ಶತಮಾನದ ಅಯ್ಯಣ್ಣದೀಕ್ಷಿತರೆಂಬವರ 'ವ್ಯಾಸತಾತ್ಪರ್ಯನಿರ್ಣಯ' ಎಂಬ ಅದ್ವೈತಮತ ಸಮರ್ಥಕವಾದ ಶಾಸ್ತ್ರಗ್ರಂಥವನ್ನು ಪಂಡಿತರು ಕನ್ನಡಕ್ಕೆ ಅನುವಾದಿಸಿ ಒದಗಿಸಿದ್ದಾರೆ. ಪಂಡಿತರ ಈ ಮತ್ತು ಇತರ ಬರಹಗಳು ವೇದಾಂತದರ್ಶನದಲ್ಲಿ ಉನ್ನತಮಟ್ಟದ ಅಧಿಕಾರವನ್ನು ಪಡೆದಿರುವವರಿಂದ ಮಾತ್ರ ಶಕ್ಯವಾಗುವಂತಹವು.

ವೇದಾಂತಶಾಸ್ತ್ರದಲ್ಲಿ ಮಾತ್ರವಲ್ಲದೆ ಅನುಭಾವಿ ಪರಂಪರೆಯ ಉನ್ನತಸಾಧಕರ ಬಗೆಗೂ ಅಪಾರ ಪೂಜ್ಯಭಾವವನ್ನು ಇರಿಸಿಕೊಂಡಿದ್ದ ಶರ್ಮರು ಹುಬ್ಬಳ್ಳಿಯ ಸಿದ್ಧಾರೂಢರ ಮತ್ತು ವರದಹಳ್ಳಿ ಶ್ರೀಧರಸ್ವಾಮಿಗಳ ಜೀವನಚರಿತ್ರೆಗಳನ್ನು ಶ್ರದ್ಧೆಯಿಂದ ರಚಿಸಿರುವುದು ಒಂದು ಅತ್ಯಂತ ಹೃದ್ಯ ಕೈಂಕರ್ಯವಾಗಿದೆ.

ಬರವಣಿಗೆಯ ಸೊಬಗು

ವಿದ್ವತ್ತು, ವೇದಿಕೆಯಿಂದ ಪ್ರಭಾವೀ ಮಂಡನೆ, ಗ್ರಾಹ್ಯರೀತಿಯ ಬರವಣಿಗೆ – ಈ ಮೂರೂ ಸಿದ್ಧಿಗಳು ಸಾಂಪ್ರದಾಯಿಕ ಪಂಡಿತರಲ್ಲಿ ಏಕೀಭವಿಸಿರುವುದು ವಿರಳ. ಪ್ರವಚನ ಮಾಡುವವರೆಲ್ಲ ಒಳ್ಳೆಯ ಲೇಖಕರಾಗಿರಬೇಕೆಂದಿಲ್ಲ. ಅಂತೆಯೇ ಒಳ್ಳೆಯ ಬರಹ ಮಾಡುವ ಅನೇಕ ವಿದ್ವಾಂಸರಲ್ಲಿ ಶ್ರೋತೃಗಳಿಗೆ ಆಸ್ವಾದ್ಯವಾಗುವ ರೀತಿಯ ವಕ್ತೃತ್ವ ಇರುವುದಿಲ್ಲ. ಶರ್ಮರಾದರೋ ವ್ಯವಸ್ಥಿತವೂ ಪರಿಶುದ್ಧವೂ ಶಕ್ತಿಯುತವೂ ಆಕರ್ಷಕವೂ ಆದ ಲೇಖನಶೈಲಿಯನ್ನು ಶ್ರಮಪೂರ್ವಕ ಸಿದ್ಧಿಸಿಕೊಂಡಿದ್ದರು. ಅವರು ತಮ್ಮ ಅನುವಾದಗಳಲ್ಲಿಯೂ ಸ್ವತಂತ್ರ ಬರಹಗಳಲ್ಲಿಯೂ ಬಳಸಿರುವ ಭಾಷೆಯು ಶಿಷ್ಟ ಹೊಸಗನ್ನಡ ಹೇಗಿರಬೇಕೆಂಬುದಕ್ಕೆ ಮಾದರಿಯಂತಿದೆ.

1964–1974ರ ಅವಧಿಯಲ್ಲಿ ಡಿ.ವಿ.ಜಿ.ಯವರಿಂದ ಪ್ರೇರಿತರಾಗಿ ಶರ್ಮರು ಮಾಡಿದ ವಾಲ್ಮೀಕಿರಾಮಾಯಣದ ಸಮಗ್ರ ಅನುವಾದವು ಒಂದು ದೃಷ್ಟಿಯಿಂದ ಕನ್ನಡ ವಾಚಕಲೋಕಕ್ಕೆ ಶರ್ಮರ ನಿಶಿತ ಪಾಂಡಿತ್ಯವನ್ನು ವ್ಯಾಪಕವಾಗಿ ಪರಿಚಯಿಸಿದ ಸಾಧನೆ. ಈಗಲೂ (2017) ಎಂದರೆ ಪ್ರಕಟಗೊಂಡ ಅರ್ಧ ಶತಮಾನದ ತರುವಾಯವೂ

ವಿಶಾಲ ಜನಪ್ರಿಯತೆಯನ್ನು ಈ ಅನುವಾದಸಂಪುಟಗಳು ಉಳಿಸಿಕೊಂಡಿವೆಯೆಂಬುದು ಅವುಗಳ ಮೇಲ್ಮಟ್ಟವನ್ನು ತೋರಿಸುತ್ತದೆ. ಅದಕ್ಕೆ ಮುಂಚೆಯೂ ಅದು ಪ್ರಕಟಗೊಂಡ ತರುವಾಯವೂ ಒಂದೆರಡು ರಾಮಾಯಣಾನುವಾದಗಳು ಬಂದಿರುವವಾದರೂ ಈಗಲೂ ಪರಿಷ್ಕೃತಿಯ ಮತ್ತು ಸೌಲಭ್ಯದ ದೃಷ್ಟಿಯಿಂದ ಶರ್ಮರ ಅನುವಾದಸಂಪುಟಗಳು ತುಂಬಾ ಆದರಣೀಯವೆನಿಸಿವೆ.

ಈ ಬೃಹದ್ಯೋಜನೆಯ ಜನಕರು ಡಿ.ವಿ.ಜಿ. ಈ ಅನುವಾದವನ್ನು ಕೈಗೊಳ್ಳುವಂತೆ ಶರ್ಮರವರನ್ನು ತೊಡಗಿಸಿದವರು ಡಿ.ವಿ.ಜಿ.; ನರಸಿಂಹರಾಜ ಕಾಲೊನಿ ಶ್ರೀರಾಮಮಂದಿರಂ ಅಸೋಸಿಯೆಷನ್ ಸಂಸ್ಥೆಯ ಮೂಲಕ ಗ್ರಂಥಸರಣಿಯ ಪ್ರಕಾಶನಕ್ಕೆ ವ್ಯವಸ್ಥೆ ಮಾಡಿದವರೂ ಡಿ.ವಿ.ಜಿ.ಯವರೇ. ಪ್ರಕಟಣ ಯೋಜನೆಯ ಆರಂಭದಿಂದ ಅಂತ್ಯದವರೆಗೆ ಪ್ರಗತಿಯನ್ನು ಗಮನಿಸುತ್ತ ಆಗಿಂದಾಗ ಅವಶ್ಯ ಮಾರ್ಗದರ್ಶನ ಮಾಡುತ್ತಿದ್ದವರು ಡಿ.ವಿ.ಜಿ. ಆ ವೇಳೆಗೇ ವಯಸ್ಸು ಹತ್ತಿರಹತ್ತಿರ ಎಂಬತ್ತು ಆಗಿದ್ದರೂ ಡಿ.ವಿ.ಜಿ. ಶರ್ಮರ ಪ್ರತಿ ಸಂಪುಟಕ್ಕೂ ವಿಸ್ತಾರವಾದ ಪ್ರಸ್ತಾವನೆಯನ್ನು ಬರೆದುದು ಅವರ ಆಸಕ್ತಿಯ ತೀವ್ರತೆಗೂ ಶರ್ಮರಲ್ಲಿ ಅವರು ಇರಿಸಿದ್ದ ಪೂರ್ಣ ವಿಶ್ವಾಸಕ್ಕೂ ಶರ್ಮರು ಆ ಭರವಸೆಯನ್ನು ಅತ್ಯಂತ ಸಮರ್ಪಕವಾಗಿ ಈಡೇರಿಸಿದುದಕ್ಕೂ ಸಾಕ್ಷ್ಯವಾಗಿದೆ.

ಸಮರ್ಪಣ ಮನೋಭಾವ

ಶರ್ಮರ ಶ್ರೀಮದ್‌ರಾಮಾಯಣಾನುವಾದ ಅಷ್ಟು ಕಾಂತಿಯುತವೂ ಜನಪ್ರಿಯವೂ ಆಗಿರುವುದಕ್ಕೆ ಮುಖ್ಯ ಕಾರಣವೆಂದರೆ ಅವರ ಬರಹವು ಕೇವಲ ಶಬ್ದಾಧಾರಿತವಾಗಿರದೆ ಗಾಢ ಸ್ವತಂತ್ರ ಚಿಂತನೆಯ ಮತ್ತು ಹಲವು ವ್ಯಾಖ್ಯಾನಗಳ ಅವಲೋಕನದ ಪಾಕವಾಗಿ ಹೊಮ್ಮಿರುವುದು.

ರಾಮಾಯಣವು ಶರ್ಮರ ಪಾಲಿಗೆ ಕೇವಲ ಒಂದು ಕಾವ್ಯಗ್ರಂಥವಾಗಿರಲಿಲ್ಲ; ಅವರ ಅಂತರಂಗವಷ್ಟನ್ನೂ ವ್ಯಾಪಿಸಿಬಿಟ್ಟಿತ್ತು. ಆ ದಿನಗಳಲ್ಲಿ ಅವರ ಸತತ ಸಂಪರ್ಕದಲ್ಲಿದ್ದ ನಾವು ಯಾರಾದರೂ ಭೇಟಿಯಾದರೆ ಅವರ ಮನಸ್ಸಿಗೆ ಹೊಸದಾಗಿ ಹೊಳೆದಿದ್ದ ಯಾವುದೊ ಶ್ಲೋಕಾರ್ಥಸ್ವಾರಸ್ಯಗಳನ್ನು ಹೇಳುತ್ತಿದ್ದರು.

ರಾಮಾಯಣದೊಡನೆ ಅವರ ತಾದಾತ್ಮ್ಯ ಎಷ್ಟುಮಟ್ಟಿಗೆ ಇದ್ದಿತೆಂದರೆ, ಉತ್ತರಕಾಂಡದ ಅನುವಾದ ಮುಗಿಸುವಾಗ "ಅಯ್ಯೋ, ನಾನು ಸೀತಾವಿಯೋಗವನ್ನು ನನ್ನ ಕೈಯಿಂದ ಮಾಡಿಸಿಬಿಟ್ಟೆನಲ್ಲ!" ಎಂದು ಆ ಘಟನೆಗೆ ತಾವೇ ಹೊಣೆಗಾರರೆಂಬಂತೆ ಪ್ರಲಾಪ ಮಾಡಿದರು.

ಶರ್ಮರ ಕಾರ್ಯಕ್ಷಮತೆ ಅಸಾಧಾರಣವಾಗಿತ್ತು. ರಾಮಾಯಣದ ಅನುವಾದ ಮಾಡುತ್ತಿದ್ದ ದಿನಗಳಲ್ಲಿ ಅವರಿಗೆ ಸಂಸ್ಕೃತ ಕಾಲೇಜಿನಲ್ಲಿ ಇದ್ದ ಹೊಣೆಗಾರಿಕೆಯೂ

ಗುರುತರವೇ ಆಗಿದ್ದಿತು. ಪ್ರತಿದಿನ ಕನಿಷ್ಠ ನಾಲ್ಕು ಗಂಟೆಗಳಷ್ಟು ಕಾಲ ಜಟಿಲ ಶಾಸ್ತ್ರಪಾಠ ಇರುತ್ತಿತ್ತು. ಈ ಬೋಧನಕಾರ್ಯವನ್ನು ಮುಗಿಸಿ ಉಳಿದ ಸಮಯದಲ್ಲಿ ಅನುವಾದಕಾರ್ಯ ಮಾಡಬೇಕಾಗಿತ್ತು.

* * *

ಚಾಮರಾಜೇಂದ್ರ ಸಂಸ್ಕೃತ ಮಹಾಪಾಠಶಾಲೆಯಲ್ಲಿ 28 ವರ್ಷಕಾಲ ಬೋಧಕರಾಗಿ ಸೇವೆ ಸಲ್ಲಿಸಿದ ಶರ್ಮರು ಪ್ರಾಥಮಿಕ ಹಂತದಿಂದ ಪ್ರೌಢ ಹಂತದ ವರೆಗೆ ವಿದ್ಯಾರ್ಥಿಗಳಿಗೆ ಕಲಿಸುವುದನ್ನು ಒಂದು ಪವಿತ್ರ ಯಜ್ಞವೆಂದೇ ಭಾವಿಸಿದ್ದವರು. ಅವರ ಬೋಧನೆ ಎಂದೂ ನಿಗದಿಯಾದ ಪಾಠ್ಯಕ್ರಮಕ್ಕೆ ಸೀಮಿತವಾಗಿರುತ್ತಿರಲಿಲ್ಲ. ಶಿಕ್ಷಾರ್ಥಿಗಳ ಜ್ಞಾನವನ್ನೂ ಕ್ಷಮತೆಯನ್ನೂ ಹೆಚ್ಚಿಸುವುದರಲ್ಲಿ ಶರ್ಮರದು ಅತುಲ್ಯ ನಿಷ್ಠೆ. ಅವರ ಬೋಧನಕ್ರಮದ ಸಮಗ್ರತೆಯನ್ನೂ ವ್ಯವಸ್ಥಿತತೆಯನ್ನೂ ಅವರ ಶಿಷ್ಯರಾಗಿದ್ದವರೆಲ್ಲ ಇಂದಿಗೂ ನೆನೆಯುತ್ತಾರೆ. ಬೋಧನದಲ್ಲಾಗಲಿ ಪರೀಕ್ಷಣೆಯಲ್ಲಾಗಲಿ ಮೌಲ್ಯಮಾಪನದಲ್ಲಾಗಲಿ ಅವರು ನಿಯತಿಯನ್ನು ಎಂದೂ ಶಿಥಿಲಗೊಳಿಸಿದವರಲ್ಲ. ಉದಾರತೆಯೂ ನಿಯಮಬದ್ಧತೆಯೂ ಅವರಲ್ಲಿ ಅಪೂರ್ವ ರೀತಿಯಲ್ಲಿ ಸಮನ್ವಿತವಾಗಿದ್ದವು.

ಐಕಾತ್ಮ್ಯ

ವಿದ್ವತ್ ಪದವಿಯಲ್ಲಿ ಉತ್ತೀರ್ಣರಾಗಿ ತೆರಳಿದ ತರುಣರ ಜೀವನಪ್ರಗತಿಯ ಬಗೆಗೂ ಶರ್ಮರು ನಿರಂತರ ಆಸಕ್ತಿ ವಹಿಸಿ ಪರಿಚಿತರ ಮೂಲಕವೂ ಪತ್ರವ್ಯವಹಾರದ ಮೂಲಕವೂ ಅವರ ಬಗೆಗೆ ತಿಳಿದುಕೊಳ್ಳುವುದರಲ್ಲಿ ಸದಾ ಆಸ್ಥೆ ತಳೆಯುತ್ತಿದ್ದರು.

ಇದೇ ಸಂದರ್ಭದಲ್ಲಿ ನೆನೆಯಬೇಕಾದ ಶರ್ಮರ ಒಂದು ಅಪೂರ್ವ ಗುಣ ವೆಂದರೆ ಪತ್ರಗಳನ್ನು ಬರೆಯುವುದರಲ್ಲಿ ಅವರು ತೋರುತ್ತಿದ್ದ ಶ್ರದ್ಧೆ. ಈಗೀಗ ಇಡೀ ಸಮಾಜದಲ್ಲಿ ಪತ್ರಲೇಖನದ ಅಭ್ಯಾಸವೇ ಬಹುಮಟ್ಟಿಗೆ ತಪ್ಪಿಹೋಗಿದೆ. ಗಣಕಯಂತ್ರಗಳು ಪ್ರಚುರಗೊಂಡ ಮೇಲಂತೂ ಹೆಚ್ಚಿನ ಸಂದರ್ಭಗಳಿಗೆ ಟೆಲಿಗ್ರಾಫಿಕ್ ರೀತಿಯ ಸಂವಹನವೇ ಪರ್ಯಾಪ್ತವೆನಿಸಿದೆ. ಶರ್ಮರಾದರೋ ಯಾವುದೋ ಪ್ರಸಕ್ತ ವಿಷಯದ ಬಗೆಗೆ ಅಭಿಪ್ರಾಯ ತಿಳಿಸುವ ಅಥವಾ ಯಾವುದೋ ಮಾಹಿತಿಯನ್ನು ಪಡೆಯುವ ಸಂದರ್ಭವಿದ್ದಾಗ ತಪ್ಪದೆ ಪತ್ರ ಬರೆಯುತ್ತಿದ್ದರು. ದೂರವಾಣಿಯ ಮೂಲಕ ನಿರ್ವಾಹ ಮಾಡುವ ಸಾಧ್ಯತೆ ಇದ್ದಾಗಲೂ ಅವರು ಪತ್ರಗಳನ್ನೇ ಬರೆಯುತ್ತಿದ್ದರು. ದೂರವಾಣಿ ಅವರಿಗೆ ಕಟ್ಟಕಡೆಯ ಪರ್ಯಾಯವಾಗಿತ್ತು.

ಶರ್ಮರ ಪತ್ರಗಳ ಅಚ್ಚುಕಟ್ಟನ್ನೂ ಮಾಧುರ್ಯವನ್ನೂ ಎಷ್ಟು ಹೊಗಳಿದರೂ ಕಡಮೆಯೇ. ಅವು ಸದಾ ಸಂಗ್ರಹಯೋಗ್ಯವಾಗಿರುತ್ತಿದ್ದವು.

ಯಾವುದಾದರೂ ಸ್ಪಷ್ಟೀಕರಣವನ್ನೋ ಶಾಸ್ತ್ರವಿವರವನ್ನೋ (ಇದು ವ್ಯಾಕರಣಶಾಸ್ತ್ರಕ್ಕೇ ಸಂಬಂಧಿಸಿರಬೇಕಾಗಿರಲಿಲ್ಲ, ಯಾವುದೇ ವಿಷಯ ಆಗಬಹುದಿತ್ತು) ಕೋರಿ ಶರ್ಮರಿಗೆ ಊರೂರುಗಳಿಂದ ಪತ್ರಗಳು ಆಗಾಗ ಬರುತ್ತಿದ್ದವು. ಅಂತಹ ಪತ್ರಗಳಿಗೆ ತಪ್ಪದೆ ಅತಿ ಶೀಘ್ರವಾಗಿ ಶರ್ಮರು ಉತ್ತರಿಸುತ್ತಿದ್ದರು. (ಶರ್ಮರು ಅತ್ಯಂತವಾಗಿ ಗೌರವಿಸಿದ್ದ ಡಿ.ವಿ.ಜಿ.ಯವರೂ ವರ್ಷಗಳುದ್ದಕ್ಕೂ ಈ ವ್ರತವನ್ನು ಪಾಲಿಸಿದರು.)

ಇತರರಿಗೆ ಪ್ರಶಂಸೆ ಸಲ್ಲಿಸುವುದರಲ್ಲಿ ಶರ್ಮರು ಸದಾ ಉತ್ಸಾಹಿಗಳಾಗುತ್ತಿದ್ದರು. ಸಾಮಾನ್ಯವಾಗಿ ನಮ್ಮಲ್ಲಿ ಹೆಚ್ಚಿನವರು ಯಾವುದೋ ಬರಹ ನಮಗೆ ಮೆಚ್ಚಿಕೆಯಾದರೂ ಅದನ್ನು ಸಂಬಂಧಪಟ್ಟವರಿಗೆ ತಿಳಿಸುವ ಗೋಜಿಗೆ ಹೋಗುವುದಿಲ್ಲ; ಓದಿ ಸುಮ್ಮನಾಗುತ್ತೇವೆ. ಆದರೆ ಶರ್ಮರು ಇಂತಹ ಸಂದರ್ಭಗಳಲ್ಲಿ ತಮ್ಮ ಮೆಚ್ಚಿಕೆಯನ್ನು ಪತ್ರದ ಮೂಲಕವೋ ದೂರವಾಣಿಯ ಮೂಲಕವೋ ತಪ್ಪದೆ ತಿಳಿಸುತ್ತಿದ್ದರು. ಲೇಖಕರು ಬೇರೆ ಊರಿನವರಾದರೆ ವಿಳಾಸವನ್ನು ಇತರರಿಂದ ಕೇಳಿ ಪಡೆದು ಆ ಲೇಖಕರಿಗೆ ಪತ್ರ ಬರೆಯುತ್ತಿದ್ದರು. ವಯಸ್ಸು 80 ದಾಟಿದ ಮೇಲೂ ಅವರ ಈ ಶಿಸ್ತು ಮುಂದುವರಿದಿತ್ತು.

ಇದನ್ನೆಲ್ಲ ನೆನೆಯುವಾಗ ಎಂತಹ ಅಪೂರ್ವ ವ್ಯಕ್ತಿಯ ಒಡನಾಟವನ್ನು ದೈವವು ನಮಗೆ ಕಲ್ಪಿಸಿಕೊಟ್ಟಿತ್ತೆಂಬುದು ಮೇಲಿಂದ ಮೇಲೆ ನೆನಪಿಗೆ ಬರುತ್ತಿರುತ್ತದೆ.

ಸಮಾಜದೊಡನೆ ಐಕಾತ್ಮ್ಯ ತಳೆದಿದ್ದುದರಿಂದ ಶರ್ಮರಿಗೆ ಇಂತಹ ನಡವಳಿಗಳು ಸ್ವಭಾವಸಹಜವಾಗಿದ್ದವು.

ಅನುಕಂಪಾರ್ದ್ರತೆ

ಅವರು ನನ್ನನ್ನು 'ವೈವಾ ವೋಸೆ'ಗೆ ಒಳಪಡಿಸಿದ ಒಂದು ಸಂದರ್ಭವನ್ನು ಹೇಳಬೇಕು. ಅವರಲ್ಲಿ ಇತರರ ಬಗೆಗೆ ಎಷ್ಟು ಅನುಕಂಪವೂ ಹಿತಚಿಂತನೆಯೂ ತುಂಬಿದ್ದಿತು ಎಂಬುದನ್ನು ದ್ಯೋತಮಾಡುವ ಕಾರಣದಿಂದ ಇದನ್ನು ಪ್ರಸ್ತಾವಿಸುತ್ತಿದ್ದೇನೆ.

ಒಮ್ಮೆ ನನ್ನಲ್ಲಿ ಮಾತನಾಡುವುದಿದೆಯೆಂದು ಫೋನ್ ಮಾಡಿದರು. ನಾನು ಹೋದಾಗ ಅವರು ಹೇಳಿದ್ದು ಹೀಗೆ :

"ಈಗ ಸಂಸ್ಥೆಯ ಜವಾಬ್ದಾರಿ ನಿನ್ನ ಮೇಲಿದೆ. ಆದ್ದರಿಂದ ವಿಚಾರಿಸಬೇಕೆನಿಸಿ ನಿನ್ನನ್ನು ಕರೆದೆ. ಸಂಸ್ಥೆಯಲ್ಲಿ ಆ ಹೆಣ್ಣುಮಕ್ಕಳೆಲ್ಲ ಪಾಪ ಹಗಲುರಾತ್ರಿ ಕೆಲಸ ಮಾಡುತ್ತಿದ್ದಾರಲ್ಲ – ಅವರಿಗೆಲ್ಲ ಯೋಗ್ಯವಾದ ಸಂಬಳ ಸಂದಾಯ ಆಗುತ್ತಿದೆ ತಾನೆ? ಗೊತ್ತಾದ ದಿನದಂದು ತಪ್ಪದೆ ಕೊಡುತ್ತಿದ್ದೀರಿ ತಾನೆ? ಅದು ವ್ಯತ್ಯಾಸವಾಗದ ಹಾಗೆ ಏರ್ಪಾಡುಗಳನ್ನು ಮಾಡಿಕೊಂಡಿದ್ದೀಯಾ?" ಎಂದು ಕೇಳಿದರು.

(ಕೆಳಗಿನ ಚಿತ್ರ) ವಿದ್ವಾನ್ ಎನ್. ರಂಗನಾಥಶರ್ಮಾ ಅವರಿಗೆ ಅಂಕಿತ ಮಾಡಿದ 'ಧ್ರುವಜಲ' ಕೃತಿಯ (ಲೇಖಕರು: ಎಸ್. ಆರ್. ರಾಮಸ್ವಾಮಿ) ಲೋಕಾರ್ಪಣ ಸಂದರ್ಭದಲ್ಲಿ ಮಾತನಾಡುತ್ತಿರುವ ರಂಗನಾಥಶರ್ಮಾ (31.12.2011).

(ಮೇಲಿನ ಚಿತ್ರ) ಅದೇ ಸಂದರ್ಭದಲ್ಲಿ ಕೃತಿಯ ಲೋಕಾರ್ಪಣ ಮಾಡಿದ ಡಾ॥ ಎಸ್. ಎಲ್. ಭೈರಪ್ಪ ಅವರೊಡನೆ ಸಂವಾದದಲ್ಲಿ ತೊಡಗಿರುವ ರಂಗನಾಥ ಶರ್ಮಾ.

ಹೆಚ್ಚಿನ ವ್ಯಾಖ್ಯಾನದ ಆವಶ್ಯಕತೆ ಇಲ್ಲ.

ಇಂತಹ ಪ್ರಶ್ನೆಯನ್ನು ಇಷ್ಟು ವರ್ಷಗಳಲ್ಲಿ ನನ್ನನ್ನು ಸಂಸ್ಥೆಯ ಯಾವ ಸದಸ್ಯರಾಗಲಿ ದಾನಿಗಳಾಗಲಿ ಇತರರಾಗಲಿ ಎಂದೂ ಕೇಳಿದ್ದಿಲ್ಲ.

ಇಂತಹ ಅನುಕಂಪ ಎಲ್ಲಿ ನೋಡಲು ಸಿಕ್ಕೀತು?

ಗೋಖಲೆ ಸಂಸ್ಥೆಯೊಡನೆ ಪಂಡಿತರಿಗೆ ಎಂತಹ ಪರಿಪೂರ್ಣ ತಾದಾತ್ಮ್ಯ ಬೆಳೆದಿತ್ತು ಎಂಬುದು ಅವಿಸ್ಮರಣೀಯ. ದಶಕಗಳುದ್ದಕ್ಕೂ ಅವರ ಆಶೀರ್ವಾದ ನಮ್ಮನ್ನು ಆವರಿಸಿದೆ.

ಒಂದು ಸಂಗತಿಯನ್ನು ಸ್ಮರಿಸಿದರೆ ಪರ್ಯಾಪ್ತವಾದೀತು. ಇಳಿವಯಸ್ಸಿನಲ್ಲಿ ಅವರು ವಸತಿಯನ್ನು ಮೈಸೂರಿಗೆ ಬದಲಾಯಿಸಬೇಕಾಯಿತು. ವ್ಯವಸ್ಥೆಗಳೆಲ್ಲ ಆದ ಮೇಲೆ ಅವರು ವಾಹನದಲ್ಲಿ ಹೊರಡುವಾಗ ದಾರಿಯಲ್ಲಿ ಸಂಸ್ಥೆಗೆ ಬಂದು ಅಲ್ಲಿ ಕೆಲವು ನಿಮಿಷ ಕಳೆದು ಹೇಳಿದರು :

"ಬಹುಶಃ ಈ ಪುಣ್ಯಕ್ಷೇತ್ರದ ದರ್ಶನ ನನಗೆ ಮತ್ತೆ ಆಗಲಾರದೇನೋ. ಹೀಗಾಗಿ ಇದೇ ನನಗೆ ಈ ಕ್ಷೇತ್ರದ ಕಡೆಯ ದರ್ಶನ ಆಗಬಹುದು. ನಿಮಗೆಲ್ಲ ಭಗವಂತನು ಒಳ್ಳೆಯದನ್ನು ಮಾಡಲಿ"

– ಎನ್ನುತ್ತ ಗದ್ಗದಿತರಾಗಿ ಕಾರನ್ನು ಹತ್ತಿದರು.

* * *

ಕೆಲಸದ ಶಿಸ್ತು ಎಂದರೆ ಏನೆಂಬುದನ್ನು ಶರ್ಮರ ವ್ಯವಹಾರದಲ್ಲಿ ಯಾರೂ ಕಾಣಬಹುದಿತ್ತು.

'ಉತ್ಥಾನ' ಪತ್ರಿಕೆಗೆ ಅವರು 25 ವರ್ಷಕಾಲ ಸತತವಾಗಿ 'ಸೂಕ್ತಿ–ವ್ಯಾಪ್ತಿ' ಅಂಕಣವನ್ನು ಬರೆದರು. ಅಷ್ಟು ವರ್ಷಗಳಲ್ಲಿ ಅವರ ಬರಹ ಒಂದೇ ಒಂದು ಸಲವೂ ತಡವಾಗಿ ತಲಪಿದುದಿಲ್ಲ. ಅವರು ಪ್ರವಾಸಗಳಲ್ಲಿ ಇದ್ದಾಗಲೂ ನಿರೀಕ್ಷಿತ ದಿನದಂದು ಅವರ ಬರಹವನ್ನೊಳಗೊಂಡ ಅಂಚೆಯ ಲಕೋಟೆ ನನ್ನ ಮೇಜಿನ ಮೇಲೆ ಹಾಜರಾಗುತ್ತಿತ್ತು.

ಶೋಧಪ್ರಬಂಧಗಳು

ತಮ್ಮ ಸ್ವೀಯ ಕ್ಷೇತ್ರವಾದ ವ್ಯಾಕರಣಶಾಸ್ತ್ರ ಪ್ರಕ್ರಿಯೆಗಳನ್ನು ಕುರಿತು ಹಲವಾರು ಶೋಧಪ್ರಬಂಧಗಳನ್ನು ಶರ್ಮರು ರಚಿಸಿದರು.

ಕನ್ನಡ ವ್ಯಾಕರಣ ವಿಶ್ಲೇಷಣೆಯನ್ನೊಳಗೊಂಡ ಅವರ ಶಾಸ್ತ್ರೀಯ ಪ್ರಬಂಧಗಳು ಈ ಕ್ಷೇತ್ರಕ್ಕೆ ಪ್ರೌಢವಾದ ಕೊಡುಗೆಗಳಾಗಿವೆ. 'ಕಾರಕ' ಮತ್ತು 'ವಿಭಕ್ತಿ'ಗಳನ್ನು ಕುರಿತ

ಅವರ ವಿವೇಚನೆಯೇ ನೂರು ಪುಟಗಳಷ್ಟು ವಿಸ್ತಾರವಾಗಿದೆ. ಇದರಲ್ಲಿ ಹಾಗೂ 'ಪಂಚಮೀವಿಭಕ್ತಿ' ಮತ್ತು 'ಗಮಕಸಮಾಸ' ಪರಾಮರ್ಶನೆಗಳಲ್ಲಿ ಅವರ ಸಮುನ್ನತ ಶಾಸ್ತ್ರಾಧಿಕಾರ ವ್ಯಕ್ತಗೊಂಡಿದೆ.

ಕನ್ನಡ ವ್ಯಾಕರಣದ ಆಧಾರಭೂತ ಅಂಗಗಳನ್ನು ಕುರಿತ ಇಷ್ಟು ತಲಸ್ಪರ್ಶಿ ವಿವೇಚನೆ ಬಹುಶಃ ಇದುವರೆಗೆ ಬಂದಿರಲಿಲ್ಲ. ಈ ಪರಾಮರ್ಶನೆಗಳಲ್ಲಿ ಕನ್ನಡ ವ್ಯಾಕರಣಶಾಸ್ತ್ರದ ಪ್ರಕ್ರಿಯೆಗಳ ಸ್ವರೂಪವಲ್ಲದೆ ಕನ್ನಡಕ್ಕೇ ವಿಶಿಷ್ಟವಾದ ಆಡುಮಾತಿನ ವೈಶಿಷ್ಟ್ಯಗಳೂ ವ್ಯಾಖ್ಯಾನಗೊಂಡಿವೆ. ವಿಭಕ್ತಿಭೇದಗಳನ್ನು ಕನ್ನಡಭಾಷೆಯು ಹೇಗೆ ಅಳವಡಿಸಿಕೊಂಡಿದೆ ಎಂಬುದರ ಇಷ್ಟು ಆಮೂಲಾಗ್ರ ವಿಶ್ಲೇಷಣೆ ಹಿಂದೆ ನಡೆದಂತಿಲ್ಲ. ಬಹಳವೆಂದರೆ 'ಕನ್ನಡದಲ್ಲಿ ಇದು ರೂಢ ಪ್ರಯೋಗ' ಎಂದು ಲಾಕ್ಷಣಿಕಸಾಹಿತ್ಯ ಪರ್ಯವಸಿತವಾಗಿತ್ತು.

ಬೌದ್ಧಿಕ ತೀಕ್ಷ್ಣತೆ

ಸೌಮ್ಯಸ್ವಭಾವದವರಾದರೂ ಶಾಸ್ತ್ರವನ್ನೋ ಶಿಷ್ಟತೆಯನ್ನೋ ಬೆಂಬಲಿಸಬೇಕಾದ ಸನ್ನಿವೇಶ ಎದುರಾದಾಗ ಶರ್ಮರವರು ಕ್ಷಾತ್ರವೃತ್ತಿಯನ್ನು ತೋರಲು ಹಿಂದೆಗೆದವರಲ್ಲ. ಇದು ಅವರ ಸಹಜಸ್ವಭಾವಕ್ಕೆ ಹೊರತಾದುದೆಂಬುದು ವಾಸ್ತವ. ಆದರೆ ವಿಕಟ ಸಂದರ್ಭಗಳು ಒದಗಿದಾಗ ಅವರ ಸತ್ಯನಿಷ್ಠೆಯು ಪ್ರಖರವಾಗಿ ಹೊಮ್ಮಿದುದೂ ಉಂಟು.

ಅಲಂಕಾರಶಾಸ್ತ್ರದ ಕೆಲವು ಮೂಲಪ್ರಕ್ರಿಯೆಗಳಿಗೆ ಸಂಬಂಧಿಸಿದ ಜಿಜ್ಞಾಸೆಯೊಂದರಲ್ಲಿ ಪಂಡಿತರು ತಮ್ಮ ಸಹಜ ಮನಃಪ್ರವೃತ್ತಿಗೆ ವಿರುದ್ಧವಾಗಿ ತಮ್ಮ ತಾರ್ಕಿಕ ಪ್ರತಿಭೆಯನ್ನು ಮುಂದೆತರಬೇಕಾಯಿತು. ಅದು ನಡೆಯುವಾಗಲೂ ಅದು ಅವರಿಗೆ ಸಂತೋಷವನ್ನೇನೂ ಕೊಟ್ಟಿರಲಿಲ್ಲ. ಆ ದಿನಗಳಲ್ಲಿ ನನ್ನ ಹತ್ತಿರ ಆಗಾಗ ಹೇಳುತ್ತಿದ್ದರು – 'ಇದೇನು ಕರ್ಮ! ಯಾರದೋ ಬರವಣಿಗೆಯಲ್ಲಿ ದೋಷಗಳನ್ನು ಹುಡುಕುವುದಕ್ಕೆ ನಾನು ಸಮಯ ವ್ಯಯಮಾಡಬೇಕಾಯಿತಲ್ಲ!' ಎಂದು.

ಇದು ಅಪವಾದಾತ್ಮಕವಷ್ಟೆ; ಮತ್ತು ಅದು ಸುಖಾಂತವೂ ಆಯಿತು, ಸಂಬಂಧಿತರ ನಡುವೆ ಹೆಚ್ಚಿನ ಗೌರವಾದರಗಳಿಗೆ ದಾರಿಮಾಡಿತು. ಆದರೆ ಆ ಸಂದರ್ಭದಲ್ಲಿ ಶರ್ಮರ ಬೌದ್ಧಿಕ ತೀಕ್ಷ್ಣತೆಯ ಪರಿಚಯವಂತೂ ಆಗುವಂತಾಯಿತು.

ಶರ್ಮರವರ ನಿಜಸ್ವಭಾವವೆಂದರೆ ಗಾಂಭೀರ್ಯ ಮತ್ತು ವಾಕ್ಸಂಯಮ. ವಾಕ್ಯಾರ್ಥ ವಿದ್ವದ್‌ಗೋಷ್ಠಿಗಳಲ್ಲಿ ಅವರು ತೋರುತ್ತಿದ್ದ ಔಚಿತ್ಯಪ್ರಜ್ಞೆ ಉದಾತ್ತರೀತಿಯದು. ಒಂದು ಗೋಷ್ಠಿಯಲ್ಲಿ ಪಂಡಿತರೊಬ್ಬರು ಒಂದು ಆಕ್ಷೇಪಕ್ಕೆ ಉತ್ತರಿಸಲು ಕ್ಲೇಶಪಟ್ಟಿದ್ದರು. ಗೋಷ್ಠಿಯು ಮುಗಿದ ಮೇಲೆ ಶರ್ಮರವರು ಮಿತ್ರರೊಡನೆ ಖಾಸಗಿಯಾಗಿ "ಅಲ್ಲಿ

ಎದುರಾದ ಆಕ್ಷೇಪಕ್ಕೆ ಹೀಗೆ ಸಮಾಧಾನ ಸಾಧ್ಯವಿತ್ತು" ಎಂದು ವಿವರಿಸಿದರು. "ಇದನ್ನು ತಾವು ಅಲ್ಲಿಯೇ ಹೇಳಿದ್ದಿದ್ದರೆ ಇತ್ಯರ್ಥ ಆಗುತ್ತಿತ್ತಲ್ಲ?" ಎಂದು ಮಿತ್ರರು ಹೇಳಿದರು. ಪಂಡಿತರು ಉತ್ತರಿಸಿದರು : "ಅದು ಬೇರೊಂದು ಶಾಸ್ತ್ರಕ್ಕೆ ಸಂಬಂಧಿಸಿದ ವಿಷಯ. ನನ್ನದಲ್ಲದ ಶಾಸ್ತ್ರದ ವಿಷಯದಲ್ಲಿ ನಾನು ಮಾತನಾಡುವುದು ತಪ್ಪಾಗುತ್ತದೆ."

ಪ್ರಬುದ್ಧತೆ

ಘನೀಕೃತ ಪಾಂಡಿತ್ಯದಲ್ಲಿ ನೆಲೆಗೊಂಡವರ ಒಂದು ಸ್ವಭಾವವೆಂದರೆ ಯಾವುದೇ ವಿಷಯದ ಬಗೆಗೆ ನೇರವಾಗಿ ಚಿಂತಿಸುವುದು ಮತ್ತು ನೇರವಾಗಿ ಎಂದರೆ ಅನ್ಯೂನಾಧಿಕವಾಗಿ ಮಾತನಾಡುವುದು. ಇಂತಹ ಆರ್ಜವಕ್ಕೆ ಅವರು ತುಂಬಾ ಬೆಲೆ ಕೊಡುತ್ತಾರೆ. ಈ ಗುಣವು ಶಿಷ್ಟತೆಯ ದೃಷ್ಟಿಯಿಂದ ಮೆಚ್ಚಬೇಕಾದುದೇ. ಆದರೆ ಈ ಮಾರ್ಗವು ಇತರರಿಗೆ ಪರ್ಯಾಪ್ತವೆನಿಸದಿರುವ ಸಂಭವವುಂಟು; ಕೆಲವು ಸಲ ಅವರ ನಿಲವು ಯುಗಾನುಕೂಲವಲ್ಲವೆಂಬ ಅನಿಸಿಕೆಯೂ ಕೆಲವರಲ್ಲಿ ಮೂಡಬಹುದು. ಈ ಸೂಕ್ಷ್ಮತೆಗಳನ್ನು ಮನಸ್ಸಿನಲ್ಲಿ ಧರಿಸಿ ಜನರಿಗೆ ಹಿತವೆನಿಸುವ ರೀತಿಯಲ್ಲಿ ಆದರೆ ತಮ್ಮ ತಾತ್ತ್ವಿಕ ನಿಲವಿಗೆ ಭಂಗಬಾರದಂತೆ ಅಭಿಪ್ರಾಯನಿವೇದನೆ ಮಾಡಬೇಕಾಗುತ್ತದೆ. ಇದು ಸ್ವಲ್ಪ ನಾಜೂಕಿನ ವ್ಯವಹಾರವೇ. ಶರ್ಮರು ಈ ಸೂಕ್ಷ್ಮ ಅಂಶಗಳನ್ನು ಅಂತರ್ಗತ ಮಾಡಿಕೊಂಡಿದ್ದರು. ಆದುದರಿಂದ ಅವರ ಯಾವುದೇ ಅಭಿಪ್ರಾಯಮಂಡನೆ ಎಷ್ಟು ಖಚಿತವಾಗಿರುತ್ತಿತ್ತೋ ಅಷ್ಟೇ ಸೌಮ್ಯವೂ ಗ್ರಾಹ್ಯವೂ ಆಗಿರುತ್ತಿತ್ತು.

ಇದನ್ನೆಲ್ಲ ಅರಿತೂ ಕೆಲವು ವಿರಳ ಸಂದರ್ಭಗಳಲ್ಲಿ ಯಾರೊಡನೆಯೋ ಅಭಿಪ್ರಾಯಭೇದ ಉಂಟಾಗುತ್ತಿತ್ತು. ಅಂತಹ ಸನ್ನಿವೇಶದಲ್ಲಿ ಶರ್ಮರು ತಮ್ಮ ನಿಲವನ್ನು ಸ್ಫುಟವಾಗಿ ಪ್ರಕಟಪಡಿಸಲು ಹಿಂದೆಗೆಯುತ್ತಿರಲಿಲ್ಲ. ಆದರೆ ಹಾಗೆ ಮಾಡುವಲ್ಲಿ ಯುಕ್ತ ಮರ್ಯಾದಾನುಸರಣೆ ಆಗಲೇಬೇಕೆಂಬುದು ಶರ್ಮರು ತಮಗೇ ವಿಧಿಸಿಕೊಂಡ ಶಾಸನವಾಗಿತ್ತು. ಅವರ ಈ ವರ್ತನೆಯನ್ನು ನೋಡುವಾಗ ಅವರು ಜಡ ಪಾಂಡಿತ್ಯದ ಮಟ್ಟದಿಂದ ಅತೀತರಾಗಿ ಎಷ್ಟುಮಟ್ಟಿನ ಪ್ರಬುದ್ಧತೆ ತಲಪಿದ್ದರೆಂಬುದು ಎದ್ದುಕಾಣುತ್ತಿತ್ತು. ಮಿತಿಮೀರಿದ ತರ್ಕಪ್ರಯೋಗವನ್ನು ಅವರು ಇಷ್ಟಪಡುತ್ತಿರಲಿಲ್ಲ. ಪಶುಬಲಿ ಮೊದಲಾದ ಗತಯುಗದ ವಿಷಯಗಳು ಪ್ರಸ್ತಾವಗೊಂಡಾಗ ಅವರು 'ಶಾಸ್ತ್ರನಿರ್ದಿಷ್ಟವಾಗಿದ್ದರೂ ಜನರ ಈಗಿನ ಶಿಷ್ಟ ರೀತಿ-ನೀತಿಗಳಿಗೆ ಸಮ್ಮತವಲ್ಲದ ಆಚರಣೆಗಳು ನಡೆಯಲೆಂದು ಆಗ್ರಹಿಸುವುದು ತಪ್ಪು" ಎಂದು ದೃಢವಾಗಿ ಹೇಳುತ್ತಿದ್ದರು.

ಸಾವಿರಾರು ಪುಟಗಳಷ್ಟು ಇರುವ ಶರ್ಮರ ಬರಹಗಳಲ್ಲಿ ರಾಜಿಯಿಲ್ಲದ ಉನ್ನತ ಶಾಸ್ತ್ರನಿಷ್ಠೆ, ತಾವು ಬರೆಯುವುದು ಸಾಮಾನ್ಯರಿಗೆ ತಲಪಬೇಕೆಂಬ ದೃಷ್ಟಿಯ ಸರಳತೆ – ಎರಡಕ್ಕೂ ನಿದರ್ಶನಗಳನ್ನು ಧಾರಾಳವಾಗಿ ನೋಡಬಹುದು. ಅಲಂಕಾರಶಾಸ್ತ್ರದ ಮತ್ತು ಕನ್ನಡ ವ್ಯಾಕರಣದ ಕೆಲವು ವಿವಾದಾಸ್ಪದ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ

ಶರ್ಮರು ಬರೆದಿರುವ ಶೋಧಲೇಖನಗಳ ಹರಹನ್ನು ಗ್ರಹಿಸಲು ಈ ಕ್ಷೇತ್ರಗಳಲ್ಲಿ ವ್ಯುತ್ಪನ್ನರಾದವರೂ ತಾಳ್ಮೆಯಿಂದ ನಿಧಾನವಾಗಿ ಹಲವು ಸಾರಿ ಓದಿ ಮಂಥನ ಮಾಡಿಕೊಳ್ಳಬೇಕಾಗುತ್ತದೆ. ಆದರೆ ಅವರ ನೀತಿಬೋಧಕ ಲೇಖನಗಳಂತಹವು ಸಾಮಾನ್ಯ ಸಾಹಿತ್ಯಾಸಕ್ತರೂ ಕ್ಲೇಶವಿಲ್ಲದೆ ಓದಬಹುದಾಗಿದೆ.

ಶಾಸ್ತ್ರಸೌಂದರ್ಯ ಪ್ರಕಟೀಕರಣ

ಶರ್ಮರು ವ್ಯಾಕರಣಶಾಸ್ತ್ರದ, ಸಾಹಿತ್ಯಶಾಸ್ತ್ರದ ಮತ್ತು ವೇದಾಂತಶಾಸ್ತ್ರದ ಕಗ್ಗಂಟುಗಳನ್ನು ಬಿಡಿಸಿ ಸ್ಪಷ್ಟೀಕರಿಸಿ ಉಪಕರಿಸಿದುದು ಮಾತ್ರವಲ್ಲ; ಶಾಸ್ತ್ರದ ವೈಶ್ವಿಕ ದೃಷ್ಟಿ, ಸಮಗ್ರತೆ, ಸೌಂದರ್ಯ – ಇವನ್ನೂ ಪ್ರಕಾಶಪಡಿಸಿದರು. ಈ ಸಾಮಗ್ರ್ಯದ ನೆಲೆಯಿಂದಾಗಿ ಶರ್ಮರ ವ್ಯಕ್ತಿತ್ವಕ್ಕೆ ಉಜ್ಜ್ವಲತೆ ಬಂದಿತ್ತು. ವಿದ್ವತ್ತೆಯ ಗಹನತೆ ಮತ್ತು ವ್ಯಕ್ತಿತ್ವದ ಪರಿಪಕ್ವತೆ – ಈ ಎರಡರ ಸಮಾಗಮವು ವಿರಳವಾಗಷ್ಟೆ ಕಾಣಸಿಗುತ್ತದೆ. ಅಂತಹ ವಿರಳರಲ್ಲಿಯೂ ವಿರಳರು ಶರ್ಮರು.

ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ ಸಾಮಾನ್ಯರಿಗೂ ಶಾಸ್ತ್ರಕುತೂಹಲಿಗಳಿಗೂ ಅನಿವಾರ್ಯ ಪರಿಕರಗಳನ್ನು ಶರ್ಮರು ಒದಗಿಸಿದ್ದಾರೆ – ಸಂಸ್ಕೃತದಲ್ಲಿ ಪರೀಕ್ಷಾ ಪುಸ್ತಕಗಳು ಮತ್ತು ಪ್ರವೇಶಿಕೆಗಳು, ಕನ್ನಡದಲ್ಲಿ ಅಮರಕೋಶ, ವಾಕ್ಯಪದೀಯ ಮೊದಲಾದವು. ವೇದಾಂತಕ್ಷೇತ್ರದಲ್ಲಿ ಅವರು 2003–2008ರ ಅವಧಿಯಲ್ಲಿ ಹೊರತಂದ ಮಾಂಡೂಕ್ಯಪ್ರವಚನ, ತೈತ್ತಿರೀಯೋಪನಿಷತ್‌ಪ್ರವಚನ, ಸಾಂಖ್ಯಕಾರಿಕಾವೃತ್ತಿ, ಪಂಚದಶೀಪ್ರವಚನ–ಇವಂತೂ ಅನುಪಮ ಶೋಧಕೃತಿಗಳೇ ಆಗಿದ್ದು ಶರ್ಮರ ವೇದಾಂತಚಿಂತನೆಯ ಗಾಢತೆಯನ್ನು ಬಿಂಬಿಸಿವೆ. ಅವರು ಮಾಡಿರುವ ರಾಮಾಯಣ, ಭಾಗವತ, ವಿಷ್ಣುಪುರಾಣ ಅನುವಾದಗಳು ಆಸ್ತಿಕ ವಾಚಕರಿಗೆ ಮುಖ್ಯ ಅವಲಂಬಗಳಾಗಿ ಉಳಿದಿವೆ. ಅವರ ಆಧಿಕಾರಿಕ ಕ್ಷೇತ್ರಕ್ಕೆ ಸಂಬಂಧಿಸಿದ (ಸಂಸ್ಕೃತದಲ್ಲಿ) 'ಸಂಸ್ಕೃತಂ ನಾಮ ದೈವೀ ವಾಕ್', (ಕನ್ನಡದಲ್ಲಿ) 'ವ್ಯಾಕರಣಶಾಸ್ತ್ರದ ಪರಿವಾರ' ಮತ್ತು 'ಪ್ರಜ್ಞಾರಂಗ' ಶೀರ್ಷಿಕೆಗಳಲ್ಲಿ ಸಂಕಲನಗೊಂಡಿರುವ ಪ್ರಬಂಧಗಳು ಉನ್ನತಮಟ್ಟದ ಶೋಧಲೇಖಗಳಾಗಿವೆ. ಅವರ ಸಂಸ್ಕೃತರಚನೆಗಳಲ್ಲಿ ಗಣನೀಯವಾದ 'ಶ್ರೀಬಾಹುಬಲಿವಿಜಯಮ್' ಮತ್ತು 'ಏಕಚಕ್ರಮ್' ರೂಪಕಗಳೂ 'ಕುಸುಮಾಂಜಲಿಃ' ಶೀರ್ಷಿಕೆಯಲ್ಲಿ ಸಂಕಲನಗೊಂಡಿರುವ ಸ್ವತಂತ್ರ ಪದ್ಯರಚನೆಗಳೂ ಶ್ರೀಶಂಕರಭಗವತ್ಪಾದರ ಜೀವನ–ಸಾಧನೆಗಳನ್ನು ಕುರಿತ 'ಶ್ರೀಶಂಕರಚರಿತಾಮೃತಮ್' ಕಾವ್ಯವೂ ಶರ್ಮರ ಉನ್ನತಮಟ್ಟದ ಕಾವ್ಯರಚನಾಕೌಶಲಕ್ಕೆ ಸಾಕ್ಷ್ಯಗಳಾಗಿವೆ. ಆಯ್ದ ಸುಭಾಷಿತಗಳಿಗೆ ಸಮಸಾಮಯಿಕ ವ್ಯಾಖ್ಯಾನ ನೀಡಿರುವ 'ಸೂಕ್ತಿ–ವ್ಯಾಪ್ತಿ' ಮೂರು ಸಂಪುಟಗಳೂ 'ಮಾನವಧರ್ಮಶಾಸ್ತ್ರ ಮತ್ತು ಮಹಿಳೆಯರು' ಪರಾಮರ್ಶನೆಯೂ ಅಭಿಜಾತ ವಾಙ್ಮಯ ಪರಂಪರೆಯ ಚಿರಕಾಲಿಕತೆಯನ್ನು ದೃಷ್ಟಾಂತಪಡಿಸಿವೆ. ಹೀಗೆ

ಸನಾತನಪರಂಪರೆಗೂ ಇಪ್ಪತ್ತೊಂದನೇ ಶತಮಾನದ ಮಾನಸಿಕತೆಗೂ ನಡುವಣ ಸೇತುವೆಯಾಗಿ ಶರ್ಮರು ಗಮನ ಸೆಳೆಯುತ್ತಾರೆ.

* * *

ಕಾವ್ಯರಚನಾಪ್ರೌಢಿಮೆ

ಅನೇಕ ಅವಧಾನ ಸಂದರ್ಭಗಳಲ್ಲಿ ಚಮತ್ಕಾರಪೂರ್ಣ ಸಮಸ್ಯಾಪಂಕ್ತಿಗಳನ್ನು ನೀಡಿ ಶರ್ಮರು ಶ್ರೋತೃಗಳನ್ನು ರಂಜಿಸಿದ್ದಾರೆ. 'ಪತಿಯನ್ನು ನೋಡಿ ಸೀತೆಯು ಮುಖವನ್ನು ಸಿಂಡರಿಸಿಕೊಂಡಳು' ಎಂಬ ಅಭಿಪ್ರಾಯದ ಸಮಸ್ಯೆ ಮತ್ತು ಅವರದೇ ಪೂರಣ ಹೀಗಿತ್ತು :

ಸಮಾಯಾಂತಂ ಕಾಮಾದಲಸಗಮನಂ ಕ್ರೂರನಯನಂ
ಪರೀತಂ ದಾಸೀಭಿಃ ಕರವಿಧೃತದೀಪಾದಿಭಿರಲಮ್ ।
ಮದಾಂಧಂ ಪೌಲಸ್ತ್ಯಂ ವಿಕೃತಮನಸಂ ರಾಕ್ಷಸಚಮೂ-
ಪತಿಂ ದೃಷ್ಟ್ವಾ ಸೀತಾ ವ್ಯಪನಯತಿ ಕೋಪೇನ ವದನಮ್ ॥

ಶರ್ಮರ ಕಾವ್ಯರಚನಾಪ್ರತಿಭೆ ಮೇಲ್ಮಟ್ಟದ್ದು.

ಮನೋಜ್ಞವಾದ ಮೂರು ಸುಪ್ರಭಾತಪದ್ಯಮಾಲಿಕೆಗಳನ್ನು ಅವರು ರಚಿಸಿದ್ದಾರೆ: ಶ್ರೀರಾಮಚಂದ್ರಸುಪ್ರಭಾತ, ಶ್ರೀಸುಬ್ರಹ್ಮಣ್ಯಸುಪ್ರಭಾತ, ಶ್ರೀಗೋಮ್ಮಟೇಶ್ವರಸುಪ್ರಭಾತ.

ತಮಗೆ ಪರಮಾರಾಧ್ಯರಾದ ಶ್ರೀಶಂಕರಭಗವತ್ಪಾದರ ಭಾವಪೂರ್ಣ ಸ್ತವನವನ್ನೂ ಅವರು ಮಾಡಿಯೇ 'ಇದ್ದಾರೆ. ಆ ಮಾಲಿಕೆಯ ಒಂದು ಪುಷ್ಪ ಇದು :

ಪ್ರಸ್ಥಾನತ್ರಯಭಾಷ್ಯಮದ್ಭುತಮಭೂತ್ವತ್ರಃ ಸಮುದ್ರೋಪಮಂ
ಯದ್ರತ್ನಾನ್ಯುಪಜೀವ್ಯ ಪಂಡಿತವರ್ಯೈರಕ್ಷೋಭ್ಯವೈದುಷ್ಯಕೈಃ ।
ವ್ಯಾಖ್ಯಾ-ವಾರ್ತಿಕ-ವೃತ್ತಿ ಸಿದ್ಧಿಸಹಿತಾನ್ ನಿರ್ಮಾಯ ಭೂಷಾಗಣಾನ್
ಶ್ರೀಮಚ್ಛಂಕರದೇಶಿಕೇಂದ್ರ ರುಚಿರಾನ್ ಶ್ರೀಶಾರದಾ ಭೂಷಿತಾ ॥

ಸಾಮಾನ್ಯವಾಗಿ ಶಬ್ದಶಾಸ್ತ್ರದ ಹಿನ್ನೆಲೆಯಿಂದ ಬಂದವರ ರಚನೆಗಳಲ್ಲಿ ಪರಿಷ್ಕಾರ ಇದ್ದರೂ ಮನೋಹರತೆ ಇದ್ದೇ ಇರುತ್ತದೆಂಬ ನಿಶ್ಚಯವಿಲ್ಲ. ಸೌಷ್ಠವವೂ ಸೌಂದರ್ಯವೂ ಒಗ್ಗೂಡುವುದು ಒಂದು ವಿರಳ ಸಂಯೋಗ. ಇಂತಹ ಆಸ್ವಾದ್ಯತೆ ಯನ್ನು ಶರ್ಮರ ವಿಪುಲ ನಿರ್ಮಿತಿಗಳಲ್ಲಿ ಕಾಣಬಹುದು. ನಿದರ್ಶನಕ್ಕೆ : ಶರ್ಮರವರ 'ಶ್ರೀಗೋಮ್ಮಟೇಶ್ವರಪಂಚರತ್ನ' ಮಾಲಿಕೆಯ ಒಂದು ಪದ್ಯ ಇದು :

ಅರಾಲಲೋಲಿತಾಲಕಾವಲೀವಿಲಾಸಿತಾಲಿಕಂ
ಕರಾಲಕರ್ಮಮರ್ಮಭೇದನಿರ್ಮಲಂ ನಿರಾಮಯಮ್ ।

ಸರೋರುಹಾಸ್ಯಶೋಭಿಫುಲ್ಲಮಲ್ಲಿಕಾದರಸ್ಮಿತಂ
ಭಜೇ ಭವಾಂಬುಧೇಸ್ತರಿಂ ಚಿರಾಯ ಗೋಮ್ಮಟೇಶ್ವರಮ್ ॥

ಪಂಚಚಾಮರ ವೃತ್ತದ ಈ ಸಾಲುಗಳಲ್ಲಿನ 'ಲ'ಕಾರ – 'ರ'ಕಾರಗಳ ಗುಂಫನವೂ ಪ್ರಾಸಾದಿಕತೆಯೂ ಅತ್ಯಂತ ರಮ್ಯ.

ರಾಷ್ಟ್ರಾಭಿಮುಖ ಸ್ಪಂದನ

ಶರ್ಮರವರ ಮೂರು ಲಘುರೂಪಕಗಳಲ್ಲಿ ಬಂದಿರುವ ಪದ್ಯಗಳೂ ಪೂರ್ಣ ಪ್ರಮಾಣದ ಪದ್ಯಕೃತಿಗಳೂ ಅಲ್ಲದೆ ಅವರು ಬರೆದ ಇಪ್ಪತ್ತಕ್ಕೂ ಹೆಚ್ಚು ಸ್ವತಂತ್ರ ಪದ್ಯಮಾಲಿಕೆಗಳು ಲಭ್ಯವಿವೆ. ಅವುಗಳಲ್ಲಿ ವಾಗ್ದೇವತಾಸ್ತುತಿ, ಶ್ರೀಶಾರದಾಪಂಚಕ, ಶ್ರೀಶಂಕರಭಗವತ್ಪಾದಸ್ತುತಿ, ಶ್ರೀಶ್ರೀಧರಸ್ವಾಮಿಸ್ತುತಿ, ಶ್ರೀಗುರುಸ್ತುತಿ ಮೊದಲಾದವೂ ಸೇರಿವೆ. ಗಮನ ಸೆಳೆಯುವ ಸಂಗತಿಯೆಂದರೆ ಸಂಸ್ಕೃತವಾಙ್ಮಯದಲ್ಲಿ ವಿರಳವೆನ್ನ ಬಹುದಾದ ಸಾಮಾಜಿಕ–ರಾಷ್ಟ್ರೀಯ–ಧ್ಯೇಯ ನಿರೂಪಕಗಳಾದ ಹಲವಾರು ಪದ್ಯಗಳ ರಚನೆಗೂ ಶರ್ಮರು ಉತ್ಸಹಿಸಿರುವುದು.

ಶರ್ಮರನ್ನು ಸಮೀಪದಿಂದ ಕಂಡಿರುವ ಎಲ್ಲರಿಗೂ ಅವರ ಈ ಮನಃಸ್ಪಂದನ ಪರಿಚಿತವೇ ಆಗಿದೆ. ಅವರ 'ಭಾವೈಕತಾ' ಪದ್ಯಮಾಲಿಕೆಯ ಒಂದು ಪದ್ಯ ಇದು :

ಅಯಂ ಹಿಂದುಃ ಕ್ರೈಸ್ತೋ ಯವನ ಇತಿ ಭೇದೋಽಪಸರತು
ಧ್ರುವಂ ರಾಷ್ಟ್ರಂ ನೇತುಂ ಪ್ರಗತಿಪರಮೈಕ್ಯಂ ವಿಜಯತೇ ।
ಅಪಾಂ ವ್ಯೂಹಶ್ಚೈಕಶ್ಚಲಯತಿ ಮಹದ್ಯಂತ್ರಮಪಿ ತತ್
ಸಮೇಷಾಂ ಚೈತನ್ಯಂ ವಹತಿ ಖಲು ರಾಷ್ಟ್ರಪ್ರವಹಣಮ್ ॥

'ರಾಷ್ಟ್ರದೇವೋ ಭವ' ಎಂಬ ಪದ್ಯಗುಚ್ಛದಲ್ಲಿ ತಂದೆ–ತಾಯಿ–ಗುರುಗಳಂತೆ ರಾಷ್ಟ್ರವೂ ಪ್ರತಿಯೊಬ್ಬರಿಗೆ ಅವಶ್ಯ ಶ್ರದ್ಧಾಸ್ಥಾನವಾಗಿರಬೇಕೆಂಬ ಆವಾಹನೆ ಇದೆ :

ಮನಸಿ ವಚಸಿ ಕಾಯೇ ಮಾತೃದೇವೋ ಭವ ತ್ವಂ
ನಿರವಧಿಪಿತೃದೇವೋ ನಿರ್ಮಲಃ ಕರ್ಮಯೋಗೀ ।
ಅಥ ಮತಿಪರಿಶುದ್ಧ್ಯಾಚಾರ್ಯ ದೇವಶ್ಚ ಭೂಯಾಃ
ತದನು ವಿಗತಶಂಕಃ ಶ್ರದ್ಧಯಾ ರಾಷ್ಟ್ರದೇವಃ ॥

ಸೈನಿಕರ ತ್ಯಾಗ–ಶೌರ್ಯ–ಸಮರ್ಪಣ ಭಾವಗಳು ರಾಷ್ಟ್ರಸ್ವಾಸ್ಥ್ಯದ ಅಸ್ತಿಭಾರ ಎಂಬ ಮನವರಿಕೆಯಿಂದ ಸ್ಫುರಿತವಾಗಿರುವುದು 'ವೀರೋತ್ತೇಜನಮ್' ಪದ್ಯಮಾಲಿಕೆ. ರಾಷ್ಟ್ರರಕ್ಷಣೆಯ ವಿಷಯದಲ್ಲಿ ಯಾವ ಭ್ರಾಮಕತೆಗಳಿಗೂ ಅವಕಾಶವಿರಬಾರದೆಂಬ ಅವಧಾರಣೆ ಇಲ್ಲಿಯದು :

ಯತ್ ಸ್ವಾತಂತ್ರ್ಯಂ ಬಹುಯತ್ನೇನ
ಭಾರತಮಾತಾ ಪ್ರಾಪತ್ ಸ್ವೇನ ।
ನಿರ್ದಯಮರ್ದಿತ ನರರುಧಿರೇಣ
ಹ್ರಿಯತೇ ತತ್ತವ ಮಿಷತೋಽನ್ಯೇನ ॥
ಮಸ್ತಕಮುಚ್ಚೈರಸ್ತು ಸಖಾಯಃ
ಕಿಂ ವಃ ಶಾಶ್ವತಿಕೋಽಯಂ ಕಾಯಃ ।
ದ್ರಾವಿತದುರ್ಜನಶತ್ರುನಿಕಾಯಾ
ಕೀರ್ತಿಸ್ತ್ವೇಕಾ ಭುವಿ ನಿರಪಾಯಾ ॥

ಸ್ವಭಾವೌನ್ನತ್ಯ

"ವಿದ್ವಾನ್ ಎನ್. ರಂಗನಾಥಶರ್ಮಾ ಅವರ ಸಂಸ್ಕೃತವಿದ್ವತ್ತಿಗೆ ಸರಿಸಮನಾದುದು ಅವರ ಕಲ್ಪನಾಶಕ್ತಿ. ಅದ್ಯತನೀಯ ಸಂಸ್ಕೃತಲೇಖಕರಲ್ಲಿ ಈ ಎರಡೂ ಶಕ್ತಿಗಳನ್ನು ಇಷ್ಟು ಉನ್ನತ ಪ್ರಮಾಣದಲ್ಲಿ ತಮ್ಮಲ್ಲಿ ಮೇಳವಿಸಿಕೊಂಡಿರುವವರು ತುಂಬಾ ವಿರಳ. ಶಾಸ್ತ್ರಮೇಧೆಯ ನಿಶಿತತೆಯು ಹಿಂದಿನಂತೆ ಈಗಲೂ ಉತ್ಕೃಷ್ಟಮಟ್ಟದ ಫಲಸಮೃದ್ಧಿಯನ್ನು ನೀಡಬಲ್ಲದೆಂಬುದಕ್ಕೆ ಶ್ರೇಷ್ಠ ನಿದರ್ಶನ ವಿದ್ವಾನ್ ಎನ್. ರಂಗನಾಥಶರ್ಮಾ ಅವರು."

ಮೇಲಿನದು ಶರ್ಮರವರ ಬಗೆಗೆ ಸ್ವಯಂ ಮೇರುಸದೃಶ ವಿದ್ವಾಂಸರಾಗಿದ್ದ ಡಾ॥ ಕೆ. ಕೃಷ್ಣಮೂರ್ತಿ ಅವರ ಪ್ರಶಂಸೋದ್ಗಾರ.

* * *

ಶರ್ಮರವರಮಟ್ಟದ ಪಾಂಡಿತ್ಯ ಸಾಧಿಸಿರುವವರು ದೇಶದಲ್ಲಿ ಬೆರಳೆಣಿಕೆಯಷ್ಟು ದೊರೆತಾರೇನೊ. ಆದರೆ ಶಾಸ್ತ್ರಾನುಸಂಧಾನವು ವ್ಯಕ್ತಿತ್ವದ ಉದಾತ್ತತೆಯಲ್ಲಿ ಪರ್ಯವಸಾನಗೊಂಡಿರುವ ಇಂತಹ ನಿದರ್ಶನಗಳು ದುಷ್ಪ್ರಾಪ್ಯ. ಶರ್ಮರವರಲ್ಲಿ ಮೂರ್ತೀಕೃತವಾಗಿದ್ದ ದೃಷ್ಟಿವೈಶಾಲ್ಯ, ಉದಾರತೆ, ಸಮಾಜಾಭಿಮುಖತೆ – ಇವು ಅನ್ಯಾದೃಶವಾದವು. 'ಬುದ್ಧೇಃ ಫಲಂ ಅನಾಗ್ರಹಃ' ಎಂಬ ರೀತಿಯ ಔನ್ನತ್ಯವನ್ನು ಅವರು ಮೆರೆದಿರುವುದನ್ನು ಕಾಣುವಾಗ ಅವರಿಗೆ ಅವರೇ ಉಪಮೆ ಎಂದು ಅನನ್ವಯರೀತಿಯಲ್ಲಿ ವರ್ಣಿಸಬೇಕಾಗುತ್ತದೆ. ಅವರ ಈ ಪ್ರಬುದ್ಧತೆಯ ಒಂದು ಹೃದಯಂಗಮ ನಿದರ್ಶನವೆಂದರೆ ಅವರು ತಮ್ಮನ್ನು ಡಿ.ವಿ.ಜಿ.ಯವರಿಗೆ ಸಂಪೂರ್ಣವಾಗಿ ಸಮರ್ಪಿಸಿಕೊಂಡ ಬಗೆ. ಈ ಮಟ್ಟದ ಆತ್ಮಸಮರ್ಪಣೆಯ ಅನ್ಯ ನಿದರ್ಶನ ದುರ್ಲಭ. ಇದನ್ನು ವಿಸ್ಮಯಕರವೆನ್ನಬೇಕಾಗಿದೆ.

ಡಿ.ವಿ.ಜಿ. ಆರಾಧಕ

ಡಿ.ವಿ.ಜಿ.ಯವರಲ್ಲಿ ಶರ್ಮರು ಬೆಳೆಸಿಕೊಂಡ ಗೌರವವೂ ಅವರ ಬಗೆಗೆ ಡಿ.ವಿ.ಜಿ. ತೋರಿದ ಗೌರವಪೂರ್ವಕ ಪ್ರೀತಿಯೂ ಅಲೌಕಿಕರೀತಿಯದು. ಅದನ್ನು ಒಂದು ಅಪೂರ್ವ ಋಣಾನುಬಂಧವೆಂದೇ ಕರೆಯಬಹುದು. 1950ರ ದಶಕದ ಮಧ್ಯಭಾಗದಲ್ಲಿ ಪಂಡಿತರ ಪರಿಚಯವಾದಾಗಿನಿಂದ ಡಿ.ವಿ.ಜಿ. ತಮ್ಮ ಬರಹಗಳನ್ನು ಪೂರ್ವಪರಿಶೀಲನೆಗಾಗಿ ಶರ್ಮರಿಗೆ ಕಳಿಸುವ ಪರಿಪಾಟಿಯೇ ಬೆಳೆಯಿತು. ನಿರಂತರ ಒಡನಾಟವಂತೂ ಕಟ್ಟಳೆಯೇ ಆಯಿತು. ಹಾಗೆ ಇಪ್ಪತ್ತು ವರ್ಷಕಾಲ ಡಿ.ವಿ.ಜಿ.ಯವರಿಗೆ ಅತ್ಯಂತ ಆನಂದವನ್ನು ಒದಗಿಸಿದುದು ಶರ್ಮರ ಸಂಗಡಿಕೆ. ಡಿ.ವಿ.ಜಿ.ಯವರ ಸಮಾಜಾಭಿಮುಖ ಮನೋರಚನೆಯ ಬಗೆಗೆ ಶರ್ಮರು ತಳೆದ ಆರಾಧನಾಭಾವನೆಯನ್ನು ವರ್ಣಿಸಲು ಮಾತುಗಳಿಲ್ಲ. ಶರ್ಮರಲ್ಲಿ ಸ್ವಭಾವಗತವಾಗಿಯೆ ಇದ್ದ ಲೋಕಹಿತದೃಷ್ಟಿಯನ್ನು ಡಿ.ವಿ.ಜಿ. ಸಾಹಚರ್ಯ ಇನ್ನಷ್ಟು ದೃಢಪಡಿಸಿತು ಎನ್ನಬಹುದು. ಡಿ.ವಿ.ಜಿ.ಯವರ ಆದೇಶಕ್ಕೂ ಕಾಯದೆ ಅವರ ಅಪೇಕ್ಷೆಯನ್ನು ಕಾರ್ಯಗತಗೊಳಿಸಲು ಶರ್ಮರು ತವಕಿಸುತ್ತಿದ್ದರು. ಹೀಗೆ ಸಹಜವಾಗಿಯೆ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯೊಡನೆ ಶರ್ಮರ ತಾದಾತ್ಮ್ಯ ಏರ್ಪಟ್ಟಿತು. ಸಂಸ್ಥೆಯ ಎಲ್ಲ ಕಲಾಪಗಳಲ್ಲಿ ಒಡಗೂಡುವಿಕೆ, ವ್ಯಾಸಂಗಗೋಷ್ಠಿಯ ತಂಡಕ್ಕೆ ವ್ಯಾಕರಣಬೋಧನೆ, ಸಂಸ್ಥೆಯ ಗ್ರಂಥಭಂಡಾರದ ಸಂಸ್ಕೃತ ವಿಭಾಗವನ್ನು ವ್ಯವಸ್ಥೆಗೊಳಿಸಿದುದು – ಎಲ್ಲವೂ ಸಹಜವಾಗಿ ನಡೆದವು.

ಪಂಡಿತರು ಶ್ರಮವಹಿಸಿ ವ್ಯವಸ್ಥೆ ಮಾಡಿದ ಈ ಸಂಸ್ಕೃತ ಗ್ರಂಥಸಂಗ್ರಹವನ್ನು ಈಗ ಒಂದು ಪ್ರತ್ಯೇಕ ವಿಭಾಗ ಮಾಡಿ ಸಜ್ಜುಗೊಳಿಸಿ ಇಡಲಾಗಿದೆ.

ಪುಡಿಪುಡಿಯಾದ ಅಸ್ಪಷ್ಟ ಬರಹದಲ್ಲಿದ್ದ 'ಮರುಳ ಮುನಿಯನ ಕಗ್ಗ' ಪದ್ಯರಾಶಿಗೆ ವ್ಯವಸ್ಥಿತರೂಪ ಕೊಡುವುದರಲ್ಲಿ ಡಿ.ವಿ.ಜಿ. ನಿಧನಾನಂತರ ಶರ್ಮರು ತೊಡಗಿಸಿದ ಪ್ರೀತಿಯ ಕಾಯಕ ಸಾಟಿಯಿಲ್ಲದುದು. ಶರ್ಮರು ಆ ಅಗಾಧ ಶ್ರಮವನ್ನು ಸ್ವೀಕರಿಸದಿದ್ದಿದ್ದರೆ 'ಮರುಳ ಮುನಿಯನ ಕಗ್ಗ' ಹೊರಬರುತ್ತಿರಲಿಲ್ಲವೆಂಬುದು ಖಂಡಿತ. ಈ ಕಾರ್ಯ ಬೇರಾರಿಂದಲೂ ಸಾಧ್ಯವಾಗುವ ಸಂಭವ ಇರಲಿಲ್ಲ.

ಡಿ.ವಿ.ಜಿ.ಯವರ ಹೆಸರಿನ ಪ್ರಸ್ತಾವ ಕಿವಿಗೆ ಬಿದ್ದರೆ ಶರ್ಮರು ಭಾವಾವಿಷ್ಟರಾಗಿ ಬಿಡುತ್ತಿದ್ದರು. ಒಂದು ಸಂದರ್ಭದಲ್ಲಿ ಶರ್ಮರು ನಿವೇದಿಸಿದ ನುಡಿನಮನ ಇದು :

ರಾಜ್ಯಶಾಸ್ತ್ರ ಪ್ರಣಯನಖ್ಯಾತ ನೀತಿವಿದಗ್ರಣೀಃ
ಮಂಕುತಿಮ್ಮನಕಗ್ಗಾದಿ ಗ್ರಥನಸ್ತುತದರ್ಶನಃ ॥
ಅಧೀತಶ್ರುತದೃಷ್ಟಾನಾಂ ಸಕೃದ್ ಬುದ್ಧ್ಯನುಪಾತಿನಾಂ ।

ಯಾಥಾತಥ್ಯೇನ ಸಂಸ್ಮರ್ತಾ ಬೃಹತ್ ಕೋಶನಿಭಃ ಸದಾ ॥
ಅಪಿ ತೇ ಪುರುಷೋ ಲೋಕೇ ಶ್ರವಣೇ ಪತಿತಃ ಕ್ವಚಿತ್ ।
ಶೃಣು ತರ್ಹಿ ಸಖೇ ಸೋಽಯಂ ಡೀವೀಜೀಸಂಜ್ಞಿತಃ ಪುಮಾನ್ ॥

ಅಂತರಂಗದಾರ್ಢ್ಯ

"ಯದೇವ ವಿದ್ಯಯಾ ಕರೋತಿ, ತದೇವ ವೀರ್ಯವತ್ತರಂ ಭವತಿ" (ಕೇವಲ ಯಾಂತ್ರಿಕ ರೀತಿಯಲ್ಲಿ ಗತಾನುಗತಿಕವಾಗಿ ಮಾಡುವ ಕೆಲಸಕ್ಕಿಂತ ಆಂತರಂಗಿಕ ಪ್ರಜ್ಞಾವಂತಿಕೆಯ ಆಧಾರದ ಮೇಲೆ ಮಾಡುವ ಕೆಲಸವು ಹೆಚ್ಚು ಸತ್ತ್ವವಂತವಾಗುತ್ತದೆ) – ಎಂಬ ಪ್ರಸಿದ್ಧ ಶ್ರುತ್ಯುಕ್ತಿ ಇದೆಯಷ್ಟೆ. ಯಾಂತ್ರಿಕವಾಗಿ ಮಾಡುವ ಕೆಲಸವು ಬಹಳವೆಂದರೆ ಯಾವುದೋ ಆವಶ್ಯಕತೆಯನ್ನು ತತ್ಕಾಲದಲ್ಲಿ ಪೂರೈಸುವ ಮಟ್ಟದಲ್ಲಿ ಇರುತ್ತದೆ. ಆದರೆ ಧೀಮಂತಿಕೆಯ ಅಸ್ತಿಭಾರದ ಮೇಲೆ ಮಾಡುವ ಕೆಲಸವು ಹೆಚ್ಚು ದೃಢವೂ ಪರಿಣಾಮಕಾರಿಯೂ ವ್ಯಾಪಕವೂ ಆಗುತ್ತದೆ. ಒಂದು ಕೆಲಸವನ್ನು ಹೊರಗಿನ ಪ್ರೇರಣೆಯಿಂದಲೋ ಅನಿವಾರ್ಯತೆಯಿಂದಲೋ ಮಾಡಿದಲ್ಲಿ ತಾತ್ಪೂರ್ತಿಕ ಉದ್ದೇಶವಷ್ಟೆ ನೆರವೇರೀತು. ಆದರೆ ದೀರ್ಘಕಾಲಿಕತೆಯೂ ಊರ್ಜಿತತೆಯೂ ಸಿದ್ಧಿಸುವುದು ಅಂತರಂಗದ ನಿಶ್ಚಯದ ಆಧಾರವಿದ್ದಲ್ಲಿ. ಅಂತರಂಗದ ದಾರ್ಢ್ಯವಿದ್ದರೆ ಹೆಚ್ಚಿನ ಪರಿಣಾಮಕಾರಿತೆ ದೊರೆಯುವುದು ಮಾತ್ರವಲ್ಲದೆ ಪ್ರಶಾಂತಿಯೂ ನಿಶ್ಚಲತೆಯೂ ಉಂಟಾಗಿ ಬಾಹ್ಯ ವ್ಯವಹಾರಗಳೂ ಸುಗಮವೂ ಸಂಘರ್ಷರಹಿತವೂ ಆಗುತ್ತವೆ. ಇಂತಹ ನಿಶ್ಚಲತೆಯ ಭೂಮಿಕೆ ಇದ್ದುದರಿಂದ ಶರ್ಮರು ನಿರಂತರ ಕಾರ್ಯಶೀಲರಾಗಿರುವುದು ಸಾಧ್ಯವಾಯಿತೆನ್ನಿಸುತ್ತದೆ. ಅವರು ಸದಾ ಗಂಭೀರವೂ ಜಟಿಲವೂ ಆದ ಚಿಂತನೆ-ಬರಹದಲ್ಲಿ ನಿರತರಾಗಿರುತ್ತಿದ್ದರೂ ಅವರ ಚಹರೆಯಲ್ಲಿ ಆಯಾಸವು ತೋರದಿರುವುದು ಅಚ್ಚರಿ ಮೂಡಿಸುತ್ತಿತ್ತು.

ಅವರ ತಾರುಣ್ಯದ ವೇಳೆಗೇ ಇಂತಹ ಮನಃಪಕ್ವತೆ ಏರ್ಪಟ್ಟಿತ್ತೆಂದು ಅನ್ನಿಸುತ್ತದೆ. ಹೀಗಿದ್ದುದರಿಂದ ಅವರ ಸಾಹಚರ್ಯವು ಅವರ ಒಡನಾಡಿಗಳಿಗೆಲ್ಲ ಮಾರ್ಗದರ್ಶಕವಾಗಿರುತ್ತಿತ್ತು.

ಗಾಢ ಪಾಂಡಿತ್ಯವಿದ್ದರೂ ಶರ್ಮರಿಗೆ ಅದನ್ನು ಮೆರೆಸುವುದರಲ್ಲಿ ಆಸಕ್ತಿ ಇರಲಿಲ್ಲ. ಸಂದರ್ಭದ ಆವಶ್ಯಕತೆ ಉಂಟಾದಾಗಷ್ಟೆ ಅವರ ವಿದ್ವತ್ತಿನ, ಶಾಸ್ತ್ರಪರಿಜ್ಞಾನದ ಮತ್ತು ಪರಾಮರ್ಶನೆಯ ಸರ್ವಂಕಷತೆಯ ಪರಿಚಯ ಉಳಿದವರಿಗೆ ಆಗುತ್ತಿತ್ತು. ಬೇರೆ ಸಮಯಗಳಲ್ಲಿ ಅವರು ಎಳೆಮಕ್ಕಳಂತೆ ಸರಳರೂ ಸುಲಭರೂ ಆಗಿರುತ್ತಿದ್ದರು. ಯಾವುದೇ ಸ್ತರದ ಎಷ್ಟೇ ವಯಸ್ಸಿನವರೊಡನೆಯೂ ಯಾವುದೇ ಬಿಂಕವಿಲ್ಲದೆ ಸಂತೋಷಮಯವಾಗಿ ಅವರು ವರ್ತಿಸುತ್ತಿದ್ದರು – 'ಸಂತೋಷಂ ಜನಯೇತ್ ಪ್ರಾಜ್ಞಃ, ತದೇವೇಶ್ವರಪೂಜನಮ್' ಎಂಬ ಆದರ್ಶಕ್ಕೆ ನಿದರ್ಶನವಾಗಿ.

(ಮೇಲಿನ ಚಿತ್ರ) ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಒಂದು ಕಾರ್ಯಕ್ರಮದಲ್ಲಿ (12.9.2010) ವಿದ್ವಾನ್ ಎನ್. ರಂಗನಾಥಶರ್ಮಾ, ಶತಾವಧಾನಿ ಡಾ॥ ರಾ. ಗಣೇಶ್.

(ಕೆಳಗಿನ ಚಿತ್ರ) ಸಂಸ್ಥೆಯ ಗ್ರಂಥಾಗಾರವನ್ನು ಅವಲೋಕಿಸುತ್ತಿರುವ ರಂಗನಾಥಶರ್ಮಾ; ಪಕ್ಕದಲ್ಲಿ ಎಸ್. ಆರ್. ರಾಮಸ್ವಾಮಿ.

ಔಚಿತ್ಯಪ್ರಜ್ಞೆ

ಶರ್ಮರ ಪಾಂಡಿತ್ಯಕ್ಕಿಂತ ಅತಿಶಯದ್ದು ಎಂದು ನಮಗನಿಸುತ್ತಿದ್ದ ಅಂಶವೆಂದರೆ ಅವರ ಔಚಿತ್ಯದೃಷ್ಟಿ. "ಈ ಕವಿವಾಕ್ಯಕ್ಕೆ ಇಷ್ಟೇ ಅರ್ಥ", "ಈ ವಾಕ್ಯಕ್ಕೆ ಸ್ವಲ್ಪ ವ್ಯಾಪಕವಾಗಿ ಅರ್ಥ ಮಾಡುವುದು ಯುಕ್ತ" – ಇಂಥ ನಿರ್ಣಯಗಳನ್ನು ಅವರು ಮಂಥನ ಮಾಡಿ ಎಲೆಯಲ್ಲಿ ಬಡಿಸಿಬಿಡುತ್ತಿದ್ದರು.

ಎ. ಆರ್. ಕೃಷ್ಣಶಾಸ್ತ್ರಿಗಳ ಬಗೆಗೆ ಒಂದು ಸಲ ಯಾರೋ ಹೇಳಿದ್ದರು – 'ಇವರಿಗೆ ಯಾವ ವಿಷಯದಲ್ಲಿಯೂ ಸಂದೇಹವೇ ಇಲ್ಲವಲ್ಲ!' ಎಂದು. ಶರ್ಮರದೂ ಅದೇ ಜಾಯಮಾನ. ಮಿತ್ರರಾದ ಟಿ.ವಿ. ವೆಂಕಟಾಚಲಶಾಸ್ತ್ರಿಗಳು ಆಗಾಗ ಹೇಳುತ್ತಿರುತ್ತಾರೆ – 'ನಮಗೆ ಇದಮಿತ್ಥಂ ಎಂದು ನಿರ್ಣಯ ಹೇಳುವ ಪಂಡಿತರು ಬೇಕಾಗಿದ್ದಾರೆ' ಎಂದು. ಶರ್ಮರು ಅಂಥವರು. ಈ ಅನ್ಯೂನಾಧಿಕತ್ವನಿಶ್ಚಯ ತುಂಬಾ ವಿಶೇಷವೆನ್ನಿಸುತ್ತದೆ. ಅವರಿಂದ ಪಾಠ ಹೇಳಿಸಿಕೊಳ್ಳುವುದು ಎಂದೂ ಶುಷ್ಕವೆನಿಸದೆ ನಮಗೆ ತುಂಬಾ ಆಸ್ವಾದ್ಯ ಅನುಭವವಾಗುತ್ತಿತ್ತು.

ಬರವಣಿಗೆಯನ್ನು ವೃತ್ತಿ ಮಾಡಿಕೊಂಡಿರುವ ನಾನು ಏನೇನೋ ಕಾರಣಗಳಿಂದ ಕೆಲವು ಶುದ್ಧವಲ್ಲದ ರೂಢಿಯ ಪ್ರಯೋಗಗಳನ್ನು ಅಪವಾದಾತ್ಮಕವಾಗಿ ಬಳಸುವುದುಂಟು. ಜನರಿಗೆ ಪರಿಚಿತವಾಗಿರುವುದು, ಪೆಡಸುತನವನ್ನು ತಪ್ಪಿಸಬೇಕಾಗಿರುವುದು, ರಚನೆಯ ನಡುನಡುವೆ ಹೊಂದಿಕೆಯಾಗಬೇಕಾದುದು, ಕನ್ನಡದ ಜಾಯಮಾನಕ್ಕೆ ಹೊಂದುವುದು – ಹೀಗೆ ನನ್ನದು ಏನೇನೋ ಲೆಕ್ಕಾಚಾರಗಳು. ನನ್ನ ತಪ್ಪು ಪ್ರಯೋಗಗಳು ಕಂಡಾಗ ಪಂಡಿತರು ಎಷ್ಟೋ ಸಲ "ನೀನೂ ಹೀಗೆ ಬರೆಯುತ್ತೀಯಾ?" ಎಂದು ಎಚ್ಚರಿಸುತ್ತಿದ್ದರು. ಆದರೆ ಅದನ್ನೆಲ್ಲ ಉದಾಸೀನ ಮಾಡುವ ಔದಾರ್ಯವನ್ನೂ ತೋರುತ್ತಿದ್ದರು. ಅವರ ಸ್ವರ್ಗವಾಸಕ್ಕೆ ಎರಡುವರ್ಷ ಹಿಂದಿನಷ್ಟು ಈಚೆಗೂ ಹೀಗೆ ಅವರ 'ಪ್ರಸಾದ' ನನಗೆ ಸಿಕ್ಕುತ್ತಿತ್ತು.

* * *

ಪಾಂಡಿತ್ಯದ ಒಂದು ಲಕ್ಷಣವೆಂದರೆ ರಾಜಿಯಿಲ್ಲದ ಶಾಸ್ತ್ರನಿಷ್ಠೆ ಎಂದು ಭಾವಿಸುವುದುಂಟು. ಆದರೆ ರಂಗನಾಥಶರ್ಮರನ್ನು ನೋಡುವಾಗ ನಮಗನ್ನಿಸುತ್ತಿದ್ದುದು ಅವರು ಗ್ರಂಥಾಕ್ಷರನಿಷ್ಠೆಯಿಂದ ಅತೀತರಾಗಿ ಸಮನ್ವಯಪಕ್ಷಪಾತಿಗಳಾಗಿದ್ದರು ಎಂದು. ಪಾಂಡಿತ್ಯದ ಪಕ್ವತೆಯ ಲಕ್ಷಣವೆಂದರೆ ಉದಾರತೆ ಮತ್ತು ಸಮಾಧಾನ ಎಂಬುದು ಅವರ ವರ್ತನೆಯಲ್ಲಿ ಎದ್ದುತೋರುತ್ತಿತ್ತು. ಪಂಡಿತವರ್ಗದಲ್ಲಿ ಹೆಚ್ಚಿನವರು ಗ್ರಂಥಾಕ್ಷರದ ಮಟ್ಟಕ್ಕಿಂತ ಮೇಲೆ ಹೋಗಲಾರರೆಂಬ ಅನುಭವದ ಹಿನ್ನೆಲೆಯಲ್ಲಿ ಶರ್ಮರ ಸಮನ್ವಯಪ್ರವಣತೆಯೂ ಪ್ರಶಾಂತಿಯ ಒಲವೂ ಪ್ರಾಧಾನ್ಯ ಪಡೆಯುತ್ತಿದ್ದುದನ್ನು ಗಮನಿಸುವುದು ಒಂದು ಹೃದ್ಯ ಅನುಭವವಾಗಿತ್ತು. ಅವರು ಪದೇಪದೇ ಉಚ್ಚರಿಸುತ್ತಿದ್ದ

ಒಂದು ಸೂತ್ರ 'ಸ್ಥಿತಸ್ಯ ಗತಿಶ್ಚಿಂತನೀಯಾ' ಎಂಬುದು. ಶಾಸ್ತ್ರವಾಙ್ಮಯದಲ್ಲಿ ಒಂದೊಂದೆಡೆ ಮೂಲಸಿದ್ಧಾಂತಕ್ಕೆ ಥಟ್ಟನೆ ಹೊಂದಿಕೆಯಾಗದೆನಿಸುವ ವಾಕ್ಯಗಳು ಇರುವುದು ವಿರಳವಲ್ಲ. ಅಂತಹ ಸಂದರ್ಭಗಳಲ್ಲಿ ಶರ್ಮರು ವ್ಯಾಖ್ಯಾನದ ಕಕ್ಷೆಯನ್ನು ಸ್ವಲ್ಪ ವಿಸ್ತರಿಸಿ ಸಿದ್ಧಾಂತ ಮತ್ತು ಪ್ರಸಕ್ತ ಗ್ರಂಥವಾಕ್ಯ – ಎರಡನ್ನೂ ರಕ್ಷಿಸಲು ತವಕಗೊಳ್ಳುತ್ತಿದ್ದರು. ಅವರ ಈ ಪ್ರವೃತ್ತಿಯನ್ನು ಹತ್ತಿರದಿಂದ ಕಂಡಾಗಲೆಲ್ಲ ಅವರ ಅಂತರಂಗವು ಸಹಜ ಮಿತಿಗಳಿಂದ ಆಚೆಗೆ ಸಾಗಿ ನಿರ್ದ್ವಂದ್ವದಲ್ಲಿ ಪರ್ಯವಸಾನ ಗೊಂಡಿತ್ತೆನಿಸುತ್ತಿತ್ತು. ಗ್ರಂಥಕ್ಕಿಂತ ಆಶಯ ದೊಡ್ಡದು, ವಿವಾದಾಂಶಕ್ಕಿಂತ ಪ್ರಶಾಂತಿ ದೊಡ್ಡದು – ಎಂಬ ಮೌಲ್ಯದ ಅನುಸಂಧಾನವನ್ನು ಶರ್ಮರಲ್ಲಿ ಸದಾ ಕಾಣುತ್ತಿದ್ದೆವು.

ಹೀಗೆಂದರೆ ಶಾಸ್ತ್ರಕ್ಲೇಶಗಳಿಂದ ಅವರು ಬದಿಗೆ ಸರಿಯುತ್ತಿದ್ದರೆಂದು ಭಾವಿಸ ಬೇಕಾದುದಿಲ್ಲ. ವಾಕ್ಯಾರ್ಥಸಂದರ್ಭಗಳಲ್ಲಿ ಸಂದಿಗ್ಧತೆ ಎದುರಾದಾಗ ಅವರ ತರ್ಕಕೌಶಲವು ಉಜ್ಜ್ವಲವಾಗಿ ಪ್ರಕಾಶಿಸುವುದನ್ನೂ ಕಾಣಬಹುದಿತ್ತು. ವ್ಯಾಕರಣ–ಅಲಂಕಾರಶಾಸ್ತ್ರಗಳ ಕೆಲವು ಸೂಕ್ಷ್ಮಾಂಶಗಳ ವಿಷಯದಲ್ಲಿ ಹುಟ್ಟಿಕೊಂಡಿದ್ದ ಅಭಿಮತಭೇದಗಳ ಸಂದರ್ಭದಲ್ಲಿ ಶರ್ಮರ ತರ್ಕಕೌಶಲದ ಪ್ರಜ್ವಲತೆಯನ್ನು ಕಂಡೆವು.

ಧರ್ಮಸ್ಥಳದ ಸರ್ವಧರ್ಮಸಮ್ಮೇಳನದಲ್ಲಿ ಒಮ್ಮೆ ವಿಷಯಮಂಡನೆ ಮಾಡುವಾಗ ಶರ್ಮರು –

> ಹರಿಹರಯೋರಿಹ ಭೇದಂ ಕಲಯತಿ ಮೂಢೋ ನ ವೈ ವಿದ್ವಾನ್ ।
> ಪ್ರಕೃತಿಸ್ತಯೋರಭಿನ್ನಾ ಪ್ರತ್ಯಯಭೇದಾದ್ದ್ವಿಧಾ ಭವತಿ ॥

ಎಂದು ಹೃದಯಂಗಮವಾಗಿ ಹೇಳಿದ್ದರು. 'ಹರ', 'ಹರಿ' ಎಂಬೆರಡು ಶಬ್ದಗಳೂ ಐಕ್ಯೈಕಧಾತುಮೂಲದವೆಂಬ ಮತ್ತು ಕೇವಲ ಪ್ರತ್ಯಯಭೇದದಿಂದ ಒಂದೆಡೆ ಅಕಾರಾಂತವೂ ಇನ್ನೊಂದೆಡೆ ಇಕಾರಾಂತವೂ ಆಗಿದೆಯಷ್ಟೆ – ಎಂಬ ಶರ್ಮರ ನಿರ್ಣಯದಲ್ಲಿ ಕಾಣುವ ಮನಃಪಕ್ವತೆಯನ್ನು ಸಾಮಾನ್ಯ ಬಂಡಿಜಾಡಿನ ಅಕ್ಷರನಿಷ್ಠ ವಿದ್ವಾಂಸರಿಂದ ನಿರೀಕ್ಷಿಸಲಾಗದು. ಶರ್ಮರ ಈ ಉದಾತ್ತ ಭಂಗಿಯು ಪದೇಪದೇ ಕಾಣುತ್ತಿತ್ತು.

ಸಮಾಜಾಭಿಮುಖ ಮನೋಭಂಗಿ

ಶರ್ಮರು ನೂರಕ್ಕೆ ನೂರರಷ್ಟು ಪರಂಪರಾನಿಷ್ಠರೆಂಬುದು ನಿಸ್ಸಂದೇಹ. ವಿದ್ವತ್ತಿನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕೆಲವು ಗತಾನುಗತಿಕ ನಿಯಮಗಳಿವೆ. ವಿದ್ವಾಂಸರು ಯಾವ ಶಾಸ್ತ್ರದ ವೈದುಷ್ಯಕ್ಕಾಗಿ ಗುರುತಿಸಲ್ಪಟ್ಟಿರುತ್ತಾರೋ ಆ ಶಾಸ್ತ್ರದ ಪ್ರಾಕಾರದ ಹೊರಗಿನದಾವುದನ್ನೂ ಸ್ಪರ್ಶಿಸಬಾರದು ಎಂಬುದೂ ಅಂತಹ ನಿಯಮಗಳ ಲ್ಲೊಂದು.

ಆದರೆ ಒಂದು ದೃಷ್ಟಿಯಿಂದ ನಿರಾಕ್ಷೇಪಣೀಯವೆನ್ನಬಹುದಾದ ಈ ನಿಯಮಾನುಸರಣೆಯಲ್ಲಿ ಒಂದು ತೊಡಕು ಇದೆ. ಈಚಿನ ದಶಕಗಳಲ್ಲಿ ಸನಾತನ ಧರ್ಮಸಂಬಂಧಿಯಾದ ಎಲ್ಲ ಅಂಶಗಳ ಮೇಲೂ 'ಆಧುನಿಕ'ವೆಂದು ಸೋಗುಹಾಕಿದ ನಿಧರ್ಮೀಯರಿಂದ ನಿರಂತರ ಪ್ರಹಾರಗಳು ಎರಗುತ್ತಿವೆ. ಉನ್ನತ ಶಾಸ್ತ್ರಾಧಿಕಾರ ಪಡೆದವರ ಸಂಖ್ಯೆಯೇ ಕ್ಷೀಣಿಸಿರುವಾಗ, ನಮ್ಮಲ್ಲಿರುವ ಹಲವರೇ ಪಂಡಿತರು 'ನನ್ನ ಕ್ಷೇತ್ರ ವ್ಯಾಕರಣ ಮಾತ್ರ', 'ನಾನು ವೇದಾಂತನಿಷ್ಠ, ಬೇರೆ ವಿಷಯಗಳಲ್ಲಿ ಆಸಕ್ತಿ ತಳೆಯಲಾರೆ' – ಎಂಬ ರೀತಿಯ ಕೋಶಗತತ್ವಕ್ಕೆ ಬದ್ಧರಾಗಿ ಕುಳಿತರೆ ಆಕ್ರಮಣಕ್ಕೊಳಗಾಗಿರುವ ಧರ್ಮದ ಸಮರ್ಥನೆಗೆ ನಿಲ್ಲುವವರಾರು? ಶಿಷ್ಟ ಸಮಾಜಕ್ಕೆ ಕಾಲಸಂದರ್ಭಾನುಗುಣವಾಗಿ ಪ್ರಾಜ್ಞವಾಗಿ ಮಾರ್ಗದರ್ಶನ ಮಾಡಬಲ್ಲವರು ಯಾರು? ಸಮಾಜಹಿತದೃಷ್ಟಿಯು ಪಂಡಿತರುಗಳೂ ಸೇರಿದಂತೆ ಎಲ್ಲರಿಗೂ ಕರ್ತವ್ಯವಲ್ಲವೆ?

ಹೀಗೆ ಯೋಚಿಸಿ ತಮ್ಮ ತಾರುಣ್ಯಕಾಲದಿಂದಲೇ ಸಮಾಜಹಿತದೃಷ್ಟಿಯನ್ನೂ ಪ್ರಖರ ರಾಷ್ಟ್ರನಿಷ್ಠೆಯನ್ನೂ ಬೆಳೆಸಿಕೊಂಡಿದ್ದವರು ಶರ್ಮರು. ಅವರು ದಿನದಿನದ ರಾಜಕೀಯ–ಸಾಮಾಜಿಕ ವಿದ್ಯಮಾನಗಳ ಬಗೆಗೆ ಗಾಢ ಆಸಕ್ತಿಯನ್ನು ಆಜೀವವೂ ಉಳಿಸಿಕೊಂಡಿದ್ದರು. ಈ ಮಾನಸಿಕತೆ ಇದ್ದ ಕಾರಣದಿಂದ ಸಮಾಜದ ಬಗೆಗೆ ಅವರ ಮನಃಸ್ಪಂದನ ಆರೋಗ್ಯಕರ ರೀತಿಯದಾಗಿರುತ್ತಿತ್ತು. ದಿನಪತ್ರಿಕೆಯ ಓದು ಮತ್ತು ಆಕಾಶವಾಣಿ ವಾರ್ತೆಗಳ ಶ್ರವಣ ಅವರ ದಿನಚರಿಯ ಅಭಿನ್ನ ಭಾಗವಾಗಿದ್ದವು. ಈ ವಿಷಯದಲ್ಲಿ ಶರ್ಮರು ಮಾಮೂಲು ಸಾಂಪ್ರದಾಯಿಕ ಪಂಡಿತರಿಂದ ಭಿನ್ನ ಮನೋಭಂಗಿಯವರಾಗಿದ್ದರು.

ಕೆಲವು ವರ್ಷ ಶರ್ಮರು ಗೋಖಲೆ ಸಂಸ್ಥೆಯಿಂದ ಅನತಿದೂರದಲ್ಲಿದ್ದ ಮನೆಯೊಂದರ ಔಟ್‌ಹೌಸಿನಲ್ಲಿ ವಾಸ್ತವ್ಯವಿದ್ದರು. ಆಗ ಗೋಖಲೆ ಸಂಸ್ಥೆಯಲ್ಲಿ ನಡೆಯುತ್ತಿದ್ದ ಹೆಚ್ಚಿನ ಕಾರ್ಯಕ್ರಮಗಳು ಆಡಳಿತ, ರಾಜ್ಯಾಂಗ, ಆರ್ಥಿಕ ಆಗುಹೋಗುಗಳು, ಕಾನೂನು, ವಿದೇಶಾಂಗನೀತಿ – ಇಂತಹ ವಿಷಯಗಳಿಗೆ ಸಂಬಂಧಿಸಿರುತ್ತಿದ್ದವು. ಈ ವಿಷಯಗಳೆಲ್ಲ ಶರ್ಮರ ಸ್ವಕ್ಷೇತ್ರವಲಯದವೇನಲ್ಲ. ಆದರೂ ಇಂತಹ ಉಪನ್ಯಾಸಗಳನ್ನು ಕೇಳುವುದಕ್ಕೂ ಶರ್ಮರು ತಪ್ಪದೆ ಬಂದು ಕುಳಿತಿರುತ್ತಿದ್ದರು. ದೇಶದ ಸನ್ನಿವೇಶದ ಬಗೆಗೆ ಯಾವುದೋ ಒಂದಷ್ಟು ನನಗೆ ತಿಳಿಯದ ಅಂಶಗಳು ಕಿವಿಗೆ ಬಿದ್ದರೆ ಬೀಳಲಿ – ಎಂದು ಅವರು ಯೋಚಿಸಿರಬಹುದು. ಇದಕ್ಕಿಂತ ಮಿಗಿಲಾಗಿ, ತಾವು ಗೋಖಲೆ ಸಂಸ್ಥೆಯ ಭಾಗವಾಗಿದ್ದುದರಿಂದ ಅದರ ಆದಷ್ಟೂ ಕಲಾಪಗಳಲ್ಲಿ ಆಸಕ್ತನಾಗಿರಬೇಕು ಎಂಬ ಶ್ರದ್ಧೆ ಅವರಲ್ಲಿ ರಕ್ತಗತವಾಗಿತ್ತು.

"ಸಾಹಿತ್ಯಲೋಕದ ಸಂಚಾರದಲ್ಲಿ ಶರ್ಮರದು ಧೀರೋದಾರ ನಡೆ" ಎಂಬ ರಾ. ಗಣೇಶ್ ಅವರ ವರ್ಣನೆ ಯಥಾರ್ಥವಾಗಿದೆ.

ಲೋಕಪ್ರೇಮ

ಇದನ್ನು ಹೆಚ್ಚು ವಿಸ್ತರಿಸುವ ಆವಶ್ಯಕತೆ ಇಲ್ಲ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ಶರ್ಮರು ಸುತ್ತಲಿನ ಸಮಾಜವನ್ನು ಹಾರ್ದವಾಗಿ ಪ್ರೀತಿಸಿದರು. ವಿದ್ವತ್ತಿನ ಕಾರ್ಯ, ಪಠನ ಪಾಠನಾದಿಗಳು, ಪ್ರವಚನಗಳ ಮೂಲಕ ಉದ್ಬೋಧನ, ವಿಪುಲ ಸಾಹಿತ್ಯಸೃಷ್ಟಿ, ಆಗಿಂದಾಗ ಉದಿಸುವ ಸಂಪ್ರದಾಯಸಂಬಂಧಿತ ಸಮಸ್ಯೆಗಳ ವಿಷಯದಲ್ಲಿ ಶಾಸ್ತ್ರನಿಷ್ಠವಾದ ಆದರೆ ಯುಗಾನುಕೂಲವಾದ ಅಭಿಪ್ರಾಯಮಂಡನೆ; – ಶರ್ಮರು ನಿರಂತರ ನಡೆಸಿದ ಈ ಸಮಸ್ತ ಕಲಾಪಗಳಿಗೂ ಮೂಲಪ್ರೇರಣೆಯಾಗಿ ಕೆಲಸ ಮಾಡಿದುದು ಅವರ ಆಳವಾದ ಸಮಾಜಪ್ರೇಮವೇ ಎನಿಸುತ್ತದೆ. ಇದು ಡಿ.ವಿ.ಜಿ. ಒಡನಾಟದಿಂದ ಇನ್ನಷ್ಟು ದೃಢಗೊಂಡಿದ್ದಿರಬೇಕು.

ಶರ್ಮರು ಸದಾ ಎಷ್ಟುಮಟ್ಟಿಗೆ ಯಾವುದೊ ಚಿಂತನೆ ಅಧ್ಯಯನ-ಬರಹದಲ್ಲಿ ಮಗ್ನರಾಗಿರುತ್ತಿದ್ದರೆಂದರೆ, ಅವರನ್ನು ನಿರ್ನಿಮಿತ್ತವಾಗಿ ಕುಶಲಕ್ಕಾಗಿ ಭೇಟಿ ಮಾಡಲು ಹೋದರೆ ನಮಗೇ ಸಂಕೋಚವಾಗುತ್ತಿತ್ತು – ಅವರಿಗೆ ತಪೋಭಂಗ ಮಾಡುತ್ತಿದ್ದೇವೇನೊ ಎಂದು. ಆದರೆ ಅವರು ಎಂದೂ ನಮ್ಮಂತಹವರ ಭೇಟಿಯನ್ನು ವಿಕ್ಷೇಪವೆಂದು ಭಾವಿಸುತ್ತಿರಲಿಲ್ಲ. ಪ್ರತಿಯಾಗಿ ಸಂತಸವನ್ನೇ ವ್ಯಕ್ತಪಡಿಸುತ್ತಿದ್ದರು; ಎಲ್ಲ ಸಂಬಂಧಿತ ಕಾರ್ಯಗಳ ಬಗೆಗೂ ವ್ಯಕ್ತಿಗಳ ಬಗೆಗೂ ವಿಚಾರಿಸಿ ತಿಳಿದುಕೊಳ್ಳುತ್ತಿದ್ದರು. ಅಂದೇ ಬೆಳಗಿನ ಪತ್ರಿಕೆಯಲ್ಲಿ ಪ್ರಕಟಗೊಂಡಿದ್ದ ಮುಖ್ಯ ವಿಷಯಗಳನ್ನು ಪ್ರಸ್ತಾವಿಸುತ್ತಿದ್ದರು, ಪರಾಮರ್ಶನೆಯನ್ನೂ ಮಾಡುತ್ತಿದ್ದರು. ದೇಶದ ಮತ್ತು ಸಮಾಜದ ಆಗುಹೋಗುಗಳನ್ನು ಗಮನಿಸುವುದು ನಾಗರಿಕ ಪ್ರಜೆಯ ಕರ್ತವ್ಯವೆಂದು ನಂಬಿ ಹಾಗೆ ನಡೆದುಕೊಳ್ಳುತ್ತಿದ್ದವರು ಅವರು.

ತಮ್ಮ ಪಾಂಡಿತ್ಯದ ಪ್ರಯೋಜನ ಸಮಾಜಕ್ಕೆ ಆಗಬೇಕು ಎಂಬುದು ಶರ್ಮರ ಆಧಾರ ಜೀವನಪ್ರಣಾಳಿಯೇ ಆಗಿತ್ತು. ಯಾರ ಬೇಡಿಕೆಯನ್ನೂ ತಿರಸ್ಕರಿಸುತ್ತಿರಲಿಲ್ಲ. ಯಾವುದೋ ಕಾರ್ಯಕ್ರಮಕ್ಕೆ ಬರುವಂತೆ ಆಮಂತ್ರಣ, ಎಲ್ಲಿಯೋ ಉಪನ್ಯಾಸ ನೀಡಬೇಕೆಂಬ ಬೇಡಿಕೆ, ಯಾವುದೋ ಸಾಂದರ್ಭಿಕ ಪ್ರಕಟಣೆಗೆ ಲೇಖನ ಬೇಕೆಂಬ ಕೋರಿಕೆ, ಯಾರದೋ ಬರಹವನ್ನು ನೋಡಿ ಪರಿಷ್ಕರಿಸಿ ಕೊಡಬೇಕೆಂಬ ಪ್ರಾರ್ಥನೆ; – ಇಂತಹ ಕೆಲಸಗಳನ್ನು ಅವರ ಯೋಜಿತ ಕಾರ್ಯಗಳ ಒತ್ತಡದ ನಡುವೆಯೂ ಪೂರೈಸುತ್ತಿದ್ದುದು ಮಾತ್ರವಲ್ಲದೆ ಅದನ್ನು ಸುಮುಖರಾಗಿಯೂ ಅಚ್ಚುಕಟ್ಟಾಗಿಯೂ ಮಾಡುತ್ತಿದ್ದರು. ಎಷ್ಟೇ ಸಣ್ಣ ಅಥವಾ ಆಗಂತುಕ ಕೆಲಸವಾಗಲಿ ಅದನ್ನು ಆತ್ಯಂತಿಕ ಶ್ರದ್ಧೆಯಿಂದ ಮಾಡುವುದು ಅವರಿಗೆ ಸ್ವಭಾವಗತವಾಗಿದ್ದಿತು. ಸಣ್ಣ ಕೆಲಸವೆಂದೋ ತಮ್ಮದಲ್ಲದ ಕೆಲಸವೆಂದೋ ಎಂದೂ ಉಪೇಕ್ಷೆ ತೋರಿದವರಲ್ಲ. ಪರಿಷ್ಕಾರಶ್ರದ್ಧೆಗೆ ಇನ್ನೊಂದು ಹೆಸರೆಂದರೆ ರಂಗನಾಥಶರ್ಮರು. ಅವರ ಈ ಕಾರ್ಯಶ್ರದ್ಧೆಯನ್ನು

ವರ್ಷಗಳುದ್ದಕ್ಕೂ ಸಮೀಪದಿಂದ ನೋಡಿದ್ದ ನಮ್ಮಂತಹವರಿಗೆ ಅದು ಆದರ್ಶವೆಂದೂ ಅನುಕರಣೀಯವೆಂದೂ ಅನ್ನಿಸುತ್ತಿದ್ದುದು ಸಹಜ. ಹೀಗೆ ಶರ್ಮರು ಅನುದ್ದಿಷ್ಟವಾಗಿಯೆ ನಮಗೆಲ್ಲ 'ಕಾನ್‌ಷನ್ಸ್ ಕೀಪರ್' ಆಗಿಬಿಟ್ಟಿದ್ದರು.

ಸಣ್ಣದಾದರೂ ಶರ್ಮರ ಸ್ವಭಾವದ ದ್ಯೋತಕವಾಗಿರುವುದರಿಂದ ಒಂದು ಘಟನೆಯನ್ನು ಸ್ಮರಿಸಬಹುದು. ರಾಷ್ಟ್ರೋತ್ಥಾನ ಪರಿಷತ್ತು ಕನ್ನಡದ ಒಂದಷ್ಟು ದೇಶಭಕ್ತಿಗೀತೆಗಳ ಧ್ವನಿಮುದ್ರಣವೊಂದನ್ನು ಹೊರತರಬಯಸಿತ್ತು. ಹಾಡುಗಳ ಸಂಗ್ರಹ, ಗಾಯನ ಧ್ವನಿಮುದ್ರಣದ ಸಂಯೋಜನೆ ಆಗಿತ್ತು. ಆ ಹಂತದಲ್ಲಿ ನನಗನಿಸಿತು – ಆ ಹಾಡುಗಳಿಗೆ ಪೂರಕವಾಗಿ ರಾಷ್ಟ್ರಪುರುಷವಂದನೆಯ ರೀತಿಯ ಕೆಲವು ಸಂಸ್ಕೃತ ಶ್ಲೋಕಗಳನ್ನು ಸೇರಿಸಿದರೆ ಚೆನ್ನಾಗಿರುತ್ತದೆ – ಎಂದು. ಆದರೆ ಅಂತಹ ಶ್ಲೋಕಗಳನ್ನು ರಚಿಸಿಕೊಡುವವರು ಬೇಕಲ್ಲ! ಕೂಡಲೆ ನನಗೆ ಹೊಳೆದ ಮೊದಲ ಮತ್ತು ಒಂದೇ ಹೆಸರು ರಂಗನಾಥಶರ್ಮರದು. ಹೇಗೂ ಅವರು ರಾಷ್ಟ್ರೋತ್ಥಾನ ಪರಿಷತ್ತಿಗೆ ಆರಂಭದ ದಿನಗಳಿಂದ ನಿಕಟವರ್ತಿಗಳಾಗಿದ್ದವರು. ಅವರಲ್ಲಿಗೆ ಧಾವಿಸಿದೆ.

ಅವರು ಯಾವುದೊ ಗಂಭೀರ ಬರಹದಲ್ಲಿ ತೊಡಗಿದ್ದು ಮೂಲಗ್ರಂಥಗಳನ್ನು ಹರಡಿಕೊಂಡು ಯಾವುದೋ ಅಂಶಗಳ ಪರಿಷ್ಕರಣದ ದೃಷ್ಟಿಯಿಂದ ಇಬ್ಬರು ಪರಿಚಿತರೊಡನೆ ಸಮಾಲೋಚನೆ ನಡೆಸುತ್ತಿದ್ದರು. ಆ ಸನ್ನಿವೇಶದಲ್ಲಿ ಅವರಿಗೆ ತೊಂದರೆ ಕೊಡಲು ನನಗೆ ಸಂಕೋಚವಾಯಿತು. "ಒಂದು ಸಣ್ಣ ಉಪಕಾರ ಆಗಬೇಕಾಗಿತ್ತು. ಮತ್ತೆ ಬರುತ್ತೇನೆ" ಎಂದು ಹೇಳಿ ಎದ್ದುನಿಂತೆ. ಆದರೆ ಶರ್ಮರು ಬಿಡಬೇಕಲ್ಲ! "ನೀವು ಬಂದಿದ್ದೀರೆಂದರೆ ಒಳ್ಳೆಯ ಕಾರ್ಯಕ್ಕಾಗಿಯೆ ಬಂದಿರುತ್ತೀರಿ. ನಮ್ಮ ಈ ಪ್ರಪಂಚ ಸದಾ ನಡೆದಿರುವುದೇ. ವಿಷಯ ಹೇಳಿರಿ" ಎಂದರು. ಅವರ ಉತ್ತೇಜನದಿಂದ ನನ್ನ ಸಂಕೋಚ ಮರೆಯಾಗಿ, "ರಾಷ್ಟ್ರಭಕ್ತಿಪ್ರಕಾಶಕವಾದ ಕೆಲವು ಸಂಸ್ಕೃತ ಶ್ಲೋಕಗಳು ತುರ್ತಾಗಿ ಬೇಕಾಗಿದೆ. ಹಿಂದೆಯೂ ಇಂತಹ ಎಷ್ಟೋ ಸಂದರ್ಭಗಳಲ್ಲಿ ತಾವು ನಮಗೆ ನೆರವಾಗಿದ್ದೀರಿ" ಎಂದೆ.

ಶರ್ಮರು ಮುಗುಳ್ನಕ್ಕು, "ಇದನ್ನು ಕೇಳಲು ಇಷ್ಟು ದೀರ್ಘಕಾಲದ ಪರಿಚಿತರಾದ ನೀವು ಸಂಕೋಚಪಡಬೇಕೆ! ಇದಕ್ಕಿಂತ ಹೆಚ್ಚಿನ ಕರ್ತವ್ಯ ನನಗೆ ಏನಿದ್ದೀತು? ಅವಶ್ಯ ಮಾಡೋಣವಂತೆ. ನಾಳೆಯೇ ಬೆಳಗ್ಗೆ ಬನ್ನಿರಿ" ಎಂದರು.

ಮರುದಿನ ಬೆಳಗ್ಗೆ ಹೋಗುವ ವೇಳೆಗೆ ನಮಗೆ ಅವಶ್ಯವಿದ್ದ ಸಂಸ್ಕೃತ ಪದ್ಯಗಳನ್ನು ರಚಿಸಿ ಸ್ಫುಟವಾಗಿ ಪ್ರತಿಮಾಡಿ ಇರಿಸಿದ್ದರು.

ನಮಗೆ ಯಾವುದೇ ಶಾಸ್ತ್ರವಿಷಯದ ಬಗೆಗಾಗಲಿ ಭಾಷಾಪ್ರಯೋಗದ ವಿಷಯದಲ್ಲಾಗಲಿ ಶಂಕೆ ತೋರಿದರೆ ಶರ್ಮರಲ್ಲಿಗೆ ಧಾವಿಸುವುದು ಅಭ್ಯಾಸ ಆಗಿಬಿಟ್ಟಿತ್ತು.

ಮೌಲ್ಯನಿಷ್ಠೆ

ಶರ್ಮರಿಂದ ದೋಹದ ಪಡೆದ ಸಂಸ್ಥೆಗಳು ಹಲವಾರು : ರಾಷ್ಟ್ರೋತ್ಥಾನ ಪರಿಷತ್, ಕನ್ನಡ ಸಾಹಿತ್ಯ ಪರಿಷತ್, ಸಂಸ್ಕೃತಭಾರತೀ, ಸುರಸರಸ್ವತೀಸಭಾ – ಇತ್ಯಾದಿ. ವಿವಿಧ ಸಂಪ್ರದಾಯಗಳ ಹಲವಾರು ಪ್ರಮುಖ ಮಠಗಳೂ ಶರ್ಮರಿಂದ ಯೋಗದಾನ ಪಡೆದಿವೆ.

ರಾಷ್ಟ್ರೋತ್ಥಾನ ಪರಿಷತ್ತಿನ ಬಗೆಗೆ ದಶಕಗಳುದ್ದಕ್ಕೂ ಏಕರೀತಿಯ ಅಭಿಮಾನ ತೋರಿದವರು ಶರ್ಮರು. ಪರಿಷತ್ತಿನ ಯಾವುದೇ ಬೇಡಿಕೆಯನ್ನು ಶರ್ಮರು ನಿರಾಕರಿಸಿದುದಿಲ್ಲ. 'ಭಾರತ-ಭಾರತಿ' ಮಾಲಿಕೆಗೆ ಪುಸ್ತಕಗಳನ್ನು ಬರೆದುಕೊಟ್ಟರು. ಇಪ್ಪತ್ತೈದು ವರ್ಷಕಾಲ 'ಉತ್ಥಾನ' ಪತ್ರಿಕೆಗೆ 'ಸೂಕ್ತಿ-ವ್ಯಾಪ್ತಿ' ಅಂಕಣವನ್ನು ಬರೆದುಕೊಟ್ಟರು. ಅಪೇಕ್ಷಿಸಿದಾಗಲೆಲ್ಲ ಲೇಖನಗಳನ್ನು ಬರೆದುಕೊಟ್ಟರು. ಇತರರ ಬರಹಗಳ ಪರಿಷ್ಕರಣದಲ್ಲಿಯೂ ಅವರ ನೆರವು ಸದಾ ಸಿದ್ಧವಿರುತ್ತಿತ್ತು.

1975ರಲ್ಲಿ ತುರ್ತುಪರಿಸ್ಥಿತಿಯಲ್ಲಿ ಸರ್ಕಾರವು ರಾಷ್ಟ್ರೋತ್ಥಾನ ಪರಿಷತ್ತಿಗೆ ಬೀಗಮುದ್ರೆ ಹಾಕಿದಾಗ ಅದು ಖಂಡನೀಯ ಕ್ರಮವೆಂದು ಬಹಿರಂಗ ಹೇಳಿಕೆ ಕೊಟ್ಟ ಮೊದಲಿಗರು ಶರ್ಮರು – ಅವರು ಸರ್ಕಾರೀ ಸೇವೆಯಲ್ಲಿದ್ದರೂ ಸಹ. ಶರ್ಮರ ಮೌಲ್ಯನಿಷ್ಠೆಗೆ ಇಂತಹ ಹಲವು ನಿದರ್ಶನಗಳನ್ನು ಕೊಡಬಹುದು.

ಶರ್ಮರ ವ್ಯಕ್ತಿತ್ವದ ಯಾವ ಮುಖವನ್ನು ಪರಿಶೀಲಿಸಿದರೂ ಬೇರೆಬೇರೆ ಆವಶ್ಯಕತೆಗಳನ್ನು ಅವರು ತಮ್ಮಲ್ಲಿ ಬುದ್ಧಿಪೂರ್ವಕ ಸಮನ್ವಯ ಮಾಡಿಕೊಂಡಿದ್ದುದು ಎದ್ದುಕಾಣುತ್ತಿತ್ತು. ಈ ಸ್ಥಿರತೆಯ ಕಾರಣದಿಂದ ಅವರು ಅಂತರಂಗದಲ್ಲಿ ಪ್ರಶಾಂತ ರಾಗಿರುತ್ತಿದ್ದರು. ಪ್ರಶಾಂತಿ ಇದ್ದಲ್ಲಿ ರಾಸಿಕ್ಯ, ವಿನೋದಪ್ರಿಯತೆಗಳೂ ಸಹಜವಾಗಿ ಹೊಮ್ಮುತ್ತವೆ. ಹೀಗೆ ಶರ್ಮರಲ್ಲಿ ಗಾಢ ಪಾಂಡಿತ್ಯದ ಉಪಸ್ಥಿತಿ, ಬರಡಲ್ಲದ ಸರಸತೆ – ಎರಡೂ ಎದ್ದುತೋರುತ್ತಿದ್ದವು.

ವಯಸ್ಸು 90 ದಾಟಿದ ಮೇಲೆ ಅವರು ಮೈಸೂರು ವಾಸ್ತವ್ಯದಲ್ಲಿ ಇದ್ದ ದಿನಗಳಲ್ಲಿ ಅವರಿಗೆ ನಮನ ಸಲ್ಲಿಸಲು ಹೋದಾಗ ಮಾತುಕತೆಯ ನಡುವೆ ಅವರು ಹೇಳಿದ ಒಂದು ಮಾತು ಮರೆಯಲಾಗದುದು :

"ನನ್ನ ಇಷ್ಟು ವರ್ಷದ ಜೀವನದಲ್ಲಿ ನಾನು ಒಂದು ನಿಮಿಷವನ್ನೂ ವ್ಯರ್ಥ ಮಾಡಲಿಲ್ಲ – ಎಂಬ ಸಮಾಧಾನ ಇದೆ."

ಹೀಗೆ ವಿಶ್ವಾಸದಿಂದ ಹೇಳಬಲ್ಲ ಸ್ಥಿತಿಯಲ್ಲಿರುವವರು ತುಂಬಾ ವಿರಳವೆನ್ನಬೇಕಾಗಿದೆ. ಶರ್ಮರು ಅಷ್ಟೊಂದು ಅಗಾಧಪ್ರಮಾಣದ, ವೈವಿಧ್ಯಮಯವಾದ, ಶಾಸ್ತ್ರಶುದ್ಧವಾದ ಮತ್ತು ಸಾರಸ್ವತಲೋಕಕ್ಕೆ ಅತ್ಯವಶ್ಯವಾಗಿ ಬೇಕಾಗಿದ್ದ ಗ್ರಂಥರಾಶಿಯನ್ನು ನಿರ್ಮಿಸಿದುದು

ಹೇಗೆ ಶಕ್ಯವಾಯಿತು ಎಂಬುದಕ್ಕೆ ವಿವರಣೆ ಅವರ ಶ್ರದ್ಧಾನೈರಂತರ್ಯದಲ್ಲಿ ಕಾಣುತ್ತದೆ.

ಧರ್ಮಪೀಠದ ಆದರಣೆ

ರಂಗನಾಥಶರ್ಮರು ತಮ್ಮ ಸಾಧನೌನ್ನತ್ಯದ ಕಾರಣದಿಂದಾಗಿ ದಕ್ಷಿಣಾಮ್ನಾಯ ಶೃಂಗೇರಿ ಶಾರದಾಪೀಠದ ವಿದ್ಯಮಾನ ಪೀಠಾಧಿಪತಿಗಳಾದ ಪೂಜ್ಯ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳೂ ಸೇರಿದಂತೆ ಹಲವಾರು ಮಹೋನ್ನತರ ಆದರಣೆಗೆ ಪಾತ್ರರಾದದ್ದು ಸ್ವಾಭಾವಿಕ.

ಪೂಜ್ಯ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳಿಗೆ ರಂಗನಾಥಶರ್ಮರ ಬಗೆಗೆ ಇದ್ದ ಗೌರವವೂ ಸ್ವಾಮಿಗಳ ಬಗೆಗೆ ರಂಗನಾಥಶರ್ಮರಿಗೆ ಇದ್ದ ಪೂಜ್ಯಭಾವನೆಯೂ ಅತಿಶಯ ರೀತಿಯವು. ಶರ್ಮರ ವಯಸ್ಸು 80 ದಾಟಿದ್ದಾಗ ಮಹಾಸ್ವಾಮಿಗಳಿಂದ ಆದೇಶ ಬಂದಿತು – ಶರ್ಮರು ಮಾಧವೀಯ ಶ್ರೀಮತ್ ಶಂಕರದಿಗ್ವಿಜಯವನ್ನು ಕನ್ನಡಕ್ಕೆ ಅನುವಾದಿಸಬೇಕೆಂದು. ಮೊದಲನೆಯದಾಗಿ ಶಂಕರದಿಗ್ವಿಜಯ ಸುಲಭ ಗ್ರಂಥವಲ್ಲ; ಹದಿನಾರು ಸರ್ಗಗಳಷ್ಟು ವಿಸ್ತಾರವೂ ಆದದ್ದು. ಅಲ್ಲಲ್ಲಿ ಶಾಸ್ತ್ರೀಯ ವಿವೇಚನೆಯನ್ನು ಗರ್ಭೀಕರಿಸಿಕೊಂಡ ಜಟಿಲ ಭಾಗಗಳೂ ಇವೆ. ಶರ್ಮರ ವಯಃಸ್ಥಿತಿ ಅಷ್ಟು ದೊಡ್ಡ ಕೆಲಸಕ್ಕೆ ಅನುಕೂಲಕರವಿರಲಿಲ್ಲ. ಆರೋಗ್ಯ ಸಮಸ್ಯೆಗಳೂ ಇದ್ದವು.

ಈ ಸನ್ನಿವೇಶವನ್ನು ಶರ್ಮರು ವಿನಮ್ರರಾಗಿ ಮಹಾಸ್ವಾಮಿಗಳಿಗೆ ಅರಿಕೆ ಮಾಡಿ ಪತ್ರ ಬರೆದರು. ಮಹಾಸ್ವಾಮಿಗಳಾದರೋ ಮರು–ಉತ್ತರ ಬರೆದರು : "ಅನುವಾದದ ಕೆಲಸ ಕಷ್ಟದ್ದಾದ ಕಾರಣದಿಂದಲೇ ತಮ್ಮನ್ನು ಪ್ರಾರ್ಥಿಸಬೇಕಾಯಿತು ಪಂಡಿತರೇ! ಬರವಣಿಗೆಗೆ ಬೇಕಾದ ಸಹಾಯಕರನ್ನು ತಮಗೆ ಏರ್ಪಡಿಸಿಕೊಡುತ್ತೇವೆ. ಈ ಅನುವಾದಕಾರ್ಯ ತಮ್ಮಿಂದಲೇ ಆಗಬೇಕು." ಅದರಂತೆ ನಡೆಯಿತು.

ಇನ್ನೊಂದು ಪ್ರಸಂಗವೂ ಸ್ಮರಣೀಯ. ಶ್ರೀಶಂಕರಭಗವತ್ಪಾದರ ಜೀವನವನ್ನು ಕುರಿತು ಶರ್ಮರು 'ಶ್ರೀಶಂಕರಚರಿತಾಮೃತಮ್' ಎಂಬ ಮನನೀಯ ಕಾವ್ಯವನ್ನು ರಚಿಸಿದ್ದಾರಷ್ಟೆ. ಪೂಜ್ಯ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳು ಆ ಕಾವ್ಯವನ್ನು ಶರ್ಮರ ಮುಖದಿಂದಲೇ ಕೇಳಲು ಅಪೇಕ್ಷೆಪಟ್ಟರು. ಅದಕ್ಕಿಂತ ಭಾಗ್ಯ ಏನಿದ್ದೀತು? ಪಂಡಿತರು ಶೃಂಗೇರಿಗೆ ತೆರಳಿದರು. ವಾಚನ–ಶ್ರವಣಕ್ಕೆ ಹಲವು ದಿನಗಳೇ ಹಿಡಿದವು. ಈ ಕಲಾಪ ನಡೆಯುತ್ತಿದ್ದುದು ವಸತಿಯ ಮಹಡಿಯ ಮೇಲಿನ ಶ್ರೀಗಳ ಸಾನ್ನಿಧ್ಯದಲ್ಲಿ. ಆರಂಭದ ಎರಡು ದಿನಗಳು ಆದ ಮೇಲೆ ಮೂರನೇ ದಿನ ಪಂಡಿತರು ಅಲ್ಲಿಗೆ ಹೋದಾಗ ಸಹಾಯಕರೊಬ್ಬರು ಅವರನ್ನು ಕೆಳಭಾಗದಲ್ಲಿಯೆ ಇದ್ದ ವಿಶಾಲ ಕೋಣೆಯೊಂದಕ್ಕೆ ಕರೆದೊಯ್ದರು. ಶ್ರೀಗಳು ಅಲ್ಲಿ ಆಗಲೇ ಆಸೀನರಾಗಿದ್ದರು. ಅವರು ಪಂಡಿತರನ್ನು

ಕಂಡು ಮುಗುಳ್ನಕ್ಕು "ಈ ವಯಸ್ಸಿನಲ್ಲಿ ತಾವು ಮಹಡಿ ಮೆಟ್ಟಿಲು ಹತ್ತುವ ಶ್ರಮ ಬೇಡವೆಂದು ಈ ಏರ್ಪಾಡನ್ನು ಮಾಡಿಸಲಾಗಿದೆ. ಇಂದಿನಿಂದ ತಮ್ಮ ವಾಚನ ಇಲ್ಲಿಯೆ ಮುಂದುವರಿಯುತ್ತದೆ." ಮಹಾಸ್ವಾಮಿಗಳ ಕಾರುಣ್ಯ ಕಂಡು ಗದ್ಗದಿತರಾಗಿ ಶರ್ಮರು ಅವರಿಗೆ ದೀರ್ಘದಂಡಪ್ರಣಾಮ ಮಾಡಿ ಕುಳಿತು ವಾಚನವನ್ನು ಆರಂಭಿಸಿದರು.

ಅನುಭವೋಕ್ತಿಗಳು

ಶರ್ಮರ ಸಾಮಾನ್ಯ ಮಾತುಕತೆಗಳಲ್ಲಿಯೂ ಆಗಾಗ ಹೊಮ್ಮುತ್ತಿದ್ದ ಒಳನೋಟಗಳು ಮಾರ್ಮಿಕವಾಗಿರುತ್ತಿದ್ದವು. ಒಮ್ಮೆ ರಾ. ಗಣೇಶ್ ಕುತೂಹಲದಿಂದ "ತಾವು ಯಾವಾವ ಅಲಂಕಾರಶಾಸ್ತ್ರಗ್ರಂಥಗಳನ್ನು ವಿವರವಾಗಿ ಅಭ್ಯಾಸ ಮಾಡಿದ್ದೀರಿ?" ಎಂದು ಕೇಳಿದಾಗ ಶರ್ಮರು ಪ್ರಶ್ನೆಯ ಧಾರ್ಷ್ಟ್ಯದ ಬಗೆಗೆ ಸ್ವಲ್ಪವೂ ಅಸಮಾಧಾನಗೊಳ್ಳದೆ ಹೇಳಿದರು – "ಹಲವು ಪ್ರಮುಖ ಶಾಸ್ತ್ರಗ್ರಂಥಗಳನ್ನು ಓದಿಕೊಂಡಿದ್ದೇನೆ. ಶಾಸ್ತ್ರಕ್ಕೆ ಸಂಬಂಧಿಸಿದ ಎಷ್ಟೋ ಗ್ರಂಥಗಳು ವಿಸ್ತೃತಾಧ್ಯಯನಕ್ಕೆ ಅರ್ಹಗಳಾಗೇನೂ ಇರುವುದಿಲ್ಲ, ಅಲ್ಲವೆ?" ಎಂದಿದ್ದರು.

ಅವರು ಸ್ವಭಾವಗತವಾಗಿ ಆಡುತ್ತಿದ್ದ ಇಂತಹ ಮಾತುಗಳಲ್ಲಿ ಅನುಭವಸಾಂದ್ರತೆ ಇರುತ್ತಿತ್ತು. ಅವರು ಪದೇಪದೇ ಆಡುತ್ತಿದ್ದ ಒಂದು ಮಾತು ಲೋಕದ ಒಂದು ಕಹಿ ವಾಸ್ತವವನ್ನು ಪ್ರಕಟಪಡಿಸುತ್ತದೆ : "ವಿವೇಕಕ್ಕೆ ಒಂದು ಮಿತಿಯೂ ಅವಧಿಯೂ ಇರುತ್ತದೆ. ಆದರೆ ಅವಿವೇಕಕ್ಕೆ ಎಲ್ಲೆಯೇ ಇರುವುದಿಲ್ಲ; ಅದು ಅಪರಿಮಿತ!"

ಅವರ ಇಂತಹ ಉಕ್ತಿಗಳು ಅವಿಸ್ಮರಣೀಯ:

"ರಾತ್ರಿ ಮಲಗಿ ಬೆಳಗ್ಗೆ ಏಳುವಷ್ಟರಲ್ಲಿ ಗಪ್ ಅಂತ ಹೋಗಿಬಿಡಬೇಕ್ರಿ!"

"ಅಯ್ಯೊ ಎಂದಷ್ಟು ಸುಲಭವಾಗಿ 'ರಾಮ' ಎಂದು ಹೇಳಲು ಆಗುವುದಿಲ್ಲವಲ್ಲ!"

"ನಾನು ದೀರ್ಘಾಯುಷ್ಯ ಬೇಡವೆಂದು ಹೇಳುವುದಿಲ್ಲ. ಆದರೆ ಆರೋಗ್ಯವೂ ಇದ್ದರೆ ಮಾತ್ರ ದೀರ್ಘಾಯುಷ್ಯ ಇರಲಿ ಎಂಬುದು ನನ್ನ ಇಚ್ಛೆ."

ವಯಸ್ಸು 80 ದಾಟಿದ ಮೇಲೆ ಅವರು ಆಗಿಂದಾಗ ಹೇಳುತ್ತಿದ್ದ ಮಾತು – "ಶಿರೋಭಾಗದಲ್ಲಿ ಶಾಂಕರಭಾಷ್ಯ, ಕೈಯಲ್ಲಿ ಅಷ್ಟಾಧ್ಯಾಯೀ, ಎದೆಯ ಮೇಲೆ ವಾಲ್ಮೀಕಿರಾಮಾಯಣ – ಈ ಸ್ಥಿತಿಯಲ್ಲಿ ಹೋಗಿಬಿಡಬೇಕ್ರಿ!"

"ಯಾವತ್ತು ನಾನು ವ್ಯಾಕರಣವನ್ನು ಮರೆಯುತ್ತೇನೆಯೋ ಆವತ್ತು ನಾನು ಬದುಕಿರಬಾರದು."

ವಾಸ್ತವವಾಗಿ ಹೀಗೆಯೇ ನಡೆದದ್ದು ಒಂದು ವಿಷಾದಮಯ ಸಂಗತಿ. ಅವರ ಇಹಜೀವನದ ಕೊನೆಕೊನೆಯ ಕೆಲವು ದಿವಸಗಳಲ್ಲಿ ಅವರ ಮನಸ್ಸನ್ನು ವಿಸ್ಮರಣೆ ಆವರಿಸಿತ್ತು. (ಸ್ವರ್ಗವಾಸ : 25 ಜನವರಿ 2014).

ಶರ್ಮರು ಕೊಟ್ಟು ಹೋಗಿರುವ ಸಾರಸ್ವತ ದೇಣಿಗೆ ಘನಿಷ್ಠವಾದುದು. ಆದರೆ ಅದನ್ನೂ ಮೀರಿಸುವಂತಹುದು ಮತ್ತು ಅನನ್ಯವೆನ್ನಬಹುದಾದುದು ಅವರ ಮೌಲ್ಯನಿಷ್ಠೆ, ಸಮಾಜಹಿತದೃಷ್ಟಿ, ಉದಾರತೆ, ಪ್ರಸನ್ನತೆ, ಪ್ರಶಾಂತಿ. ಶಾಸ್ತ್ರಪಾಂಡಿತ್ಯವು ಅಂತರಂಗಪಕ್ವತೆಯಾಗಿ ಉತ್ಫುಲ್ಲವಾಗಿರುವ ಇಂತಹ ನಿದರ್ಶನವು ಈಗಿನ ದಿನಗಳಲ್ಲಿ ತುಂಬಾ ವಿರಳವಾಗಷ್ಟೆ ಕಂಡೀತು. ರಂಗನಾಥಶರ್ಮರನ್ನು ನೆನೆವಾಗ ಆರ್ಷಪ್ರಜ್ಞೆ ಹೇಗಿರುತ್ತದೆಂಬುದನ್ನು 'ತದಿದಮಿತಿ ಬುದ್ಧಿಂ ದೃಢಯತಿ'.

2. ಎಸ್. ಕೆ. ರಾಮಚಂದ್ರರಾವ್

‘ಧ್ವನ್ಯಾಲೋಕ’ದ ಮೇಲಣ ವ್ಯಾಖ್ಯಾನವಾದ ‘ಲೋಚನ’ದಲ್ಲಿ ಅಭಿನವಗುಪ್ತರ ಒಂದು ಪ್ರಸಿದ್ಧವಾದ ಮಾತಿದೆ:

ಉಪೇಯುಷಾಮಪಿ ದಿವಂ ಸನ್ನಿಬಂಧವಿಧಾಯಿನಾಂ ।
ಅಸ್ತ ಏವ ನಿರಾತಂಕಂ ಕಾಂತಂ ಕಾವ್ಯಮಯಂ ವಪುಃ ॥

“ಶ್ರೇಷ್ಠಕಾವ್ಯಗಳನ್ನು ರಚಿಸಿದವರನೇಕರು ಸ್ವರ್ಗ ಸೇರಿದ್ದಾರೆ. ಆದರೆ ಅವರ ಸುಂದರವಾದ ಕಾವ್ಯಮಯ ಶರೀರವು ಸದಾಕಾಲ ನಿರಾತಂಕವಾಗಿ ಇಲ್ಲಿ ಇದ್ದೇ ಇರುತ್ತದೆ.”

ಹಾಗೆ ನೂರಾರು ಕೃತಿರತ್ನಗಳ ಮೂಲಕ ಪ್ರೊ॥ ಎಸ್.ಕೆ. ರಾಮಚಂದ್ರರಾಯರು ಯಶಃಕಾಯರಾಗಿ ನಮ್ಮೊಡನೆ ಉಳಿದಿದ್ದಾರೆ.

ನಾಲ್ಕಾರು ಶಾಸ್ತ್ರಗಳಲ್ಲಿ ಮೇಲ್ಮಟ್ಟದ ಸಮಾನಪ್ರಭುತ್ವ ಪಡೆದು ಆ ಹಲವಾರು ಕ್ಷೇತ್ರಗಳಿಗೆ ಅತಿಶಯವಾದ ಕೊಡುಗೆ ನೀಡಿದವರನ್ನು ‘ರಿನೈಸಾನ್ಸ್ ಮ್ಯಾನ್’ ಎಂದು ಕರೆಯುವುದು ವಾಡಿಕೆ. ನಮ್ಮ ನಡುವೆಯೇ ಇದ್ದು ಈಗ್ಗೆ ಹನ್ನೊಂದು ವರ್ಷ ಹಿಂದೆ (2–2–2006) ನಿಧನರಾದ ವಿದ್ಯಾಲಂಕಾರ, ಶಾಸ್ತ್ರಚೂಡಾಮಣಿ, ವಾಚಸ್ಪತಿ, ವೇದರತ್ನ ಪ್ರೊ॥ ಎಸ್.ಕೆ. ರಾಮಚಂದ್ರರಾಯರು ಆ ವಿರಳವರ್ಗಕ್ಕೆ ಸೇರಿದವರು; ಹತ್ತಿರಹತ್ತಿರ ಆರು ದಶಕಗಳ ಕಾಲ ಸಾರಸ್ವತಕ್ಷೇತ್ರದಲ್ಲಿ ಸಾರ್ವಭೌಮಿಕೆ ಮೆರೆದವರು. ಅವರ ಮೇಧೆಯ ವೈಶಾಲ್ಯವನ್ನೂ ಬಹುಮುಖತೆಯನ್ನೂ ಕುರಿತು ಯೋಚಿಸುವಾಗ ನಮ್ಮ ಶಾಸ್ತ್ರೇತಿಹಾಸದಲ್ಲಿ ಮೂರ್ಧನ್ಯರಾದ ಅಪ್ಪಯ್ಯದೀಕ್ಷಿತ ಮೊದಲಾದ ಮಹಾಮಹಿಮರ ಪರಂಪರೆಯ ನಮ್ಮ ಕಾಲದ ಪ್ರತಿನಿಧಿ ರಾಮಚಂದ್ರರಾಯರು – ಎನಿಸುತ್ತದೆ. ರಾಮಚಂದ್ರರಾಯರಿಗೆ ಯಾವಯಾವ ವಿಷಯದಲ್ಲಿ ಅಧಿಕಾರ ಇತ್ತೆಂದು ಪಟ್ಟಿಮಾಡಲು ಹೊರಟರೆ ನಮ್ಮ ಪರಂಪರೆಯ ಎಲ್ಲ ವೇದ–ವೇದಾಂಗಗಳನ್ನೂ ಎಲ್ಲ ದರ್ಶನಶಾಸ್ತ್ರಗಳನ್ನೂ ಕಾವ್ಯವಾಙ್ಮಯವನ್ನೂ ಸಂಗೀತ–ನೃತ್ಯಾದಿ ಕಲೆಗಳನ್ನೂ ಪಟ್ಟಿಮಾಡಬೇಕಾಗುತ್ತದೆ. ಅವರು ಕಲೆಗಳಲ್ಲಿ ಅಭಿಜ್ಞರಾಗಿದ್ದುದು ಮಾತ್ರವಲ್ಲದೆ ಸ್ವಯಂ ಚಿತ್ರಕಾರರೂ ಶಿಲ್ಪಿಯೂ ವೀಣಾವಾದಕರೂ ಕೂಡಾ ಆಗಿದ್ದುದು ಗಮನ ಸೆಳೆಯುವ ಸಂಗತಿ. ಅವರ ತೀರ್ಥರೂಪ ಕೃಷ್ಣರಾಯರೂ ಚಿತ್ರಕಲೆಯಲ್ಲಿಯೂ ಶಿಲ್ಪಕಲೆಯಲ್ಲಿಯೂ ನೈಪುಣ್ಯ ಇದ್ದವರು.

ವೈದಿಕವಾಙ್ಮಯ ಮಾತ್ರವಲ್ಲ, ಜೈನ–ಬೌದ್ಧ ದರ್ಶನಗಳಲ್ಲಿ ರಾಮಚಂದ್ರರಾಯರಷ್ಟು ವ್ಯುತ್ಪತ್ತಿ ಇದ್ದವರು ಬಹುಶಃ ಆ ಪರಂಪರೆಗಳಲ್ಲಿಯೇ ವಿರಳರಾಗಿದ್ದರು. ಶಾಸ್ತ್ರಾಧಿಕಾರದ ವಿಷಯಕ್ಕೆ ಬಂದರೆ - ರಾಯರು ಬೇರೆಬೇರೆ ಅವಧಿಗಳಲ್ಲಿ ಶಾಂಕರ, ರಾಮಾನುಜೀಯ, ಮಾಧ್ವ ಸಂಪ್ರದಾಯಗಳ ಹಲವರು ಯತಿಗಳಿಗೇ ಶಾಸ್ತ್ರಾನುವರ್ತನ ಮಾಡಿದ್ದರು. ಅವರ ಪ್ರಮುಖ ಆಸಕ್ತಿಕ್ಷೇತ್ರಗಳಾದ ಮನಃಶಾಸ್ತ್ರ, ಆಯುರ್ವೇದಗಳ ಬಗೆಗಂತೂ ಹೇಳುವುದೇ ಬೇಕಿಲ್ಲ.

ಇಷ್ಟು ಧೀಮಂತಿಕೆ ಇದ್ದರೂ ರಾಮಚಂದ್ರರಾಯರು ಎಂದೂ ತಮ್ಮ ವಿದ್ವದಧಿಕಾರವನ್ನು ಮೆರೆಸಿದವರಲ್ಲ. ಆಕೃತಿಯಲ್ಲಿಯೂ ಬದುಕಿನಲ್ಲಿಯೂ ಅವರು ಅತ್ಯಂತ ಸರಳರು. ಅವರ ಸಜ್ಜನಿಕೆಯನ್ನು ವರ್ಣಿಸಲು ಮಾತುಗಳಿಲ್ಲ. ಹೆಚ್ಚಿನ ಪ್ರತಿಪತ್ತಿಯಿದ್ದ ವಿದ್ವಾಂಸರೊಡನೆ ವ್ಯವಹರಿಸುವಷ್ಟೆ ಸೌಲಭ್ಯದಿಂದ ಅತಿಸಾಮಾನ್ಯರೊಡನೆಯೂ ವ್ಯವಹರಿಸುತ್ತಿದ್ದರು. ಯಾವ ಮಟ್ಟದವರಾದರೂ ಯಾವುದೇ ಸಂದೇಹಕ್ಕೆ ಸಮಾಧಾನವನ್ನು ಅವರಿಂದ ಕೇಳಿ ಪಡೆಯಬಹುದೆಂಬ ವಿಶ್ವಾಸವನ್ನು ಮೂಡಿಸುವ ಸ್ನೇಹಮಯ ಸ್ವಭಾವ ರಾಯರದಾಗಿತ್ತು.

ಈಗಿರುವುದಕ್ಕಿಂತ ಹಿಂದಿನ ಎರಡು ಪೀಳಿಗೆಗಳಲ್ಲಿ ಶಾಸ್ತ್ರಪಂಡಿತರ ಸಂಖ್ಯೆ ಗಣನೀಯವಾಗಿ ಅಧಿಕವಾಗಿತ್ತು. ಆದರೆ ವಿದ್ವತ್ತೆ ತುಂಬಿದ್ದ ಆ ಕಾಲದಲ್ಲಿಯೂ ರಾಮಚಂದ್ರರಾಯರಷ್ಟು ಬಹುಮುಖತೆ ಇದ್ದವರು ದುರ್ಲಭ. ಅನ್ಯ ದಿಗ್ದಂತಿ ವಿದ್ವಾಂಸರುಗಳು ಅನೇಕ ಮಂದಿ ಇದ್ದರೂ ಅವರ ವ್ಯವಹಾರಕ್ಷೇತ್ರ ಹೆಚ್ಚೆಂದರೆ ಮೂರೋ ನಾಲ್ಕೋ ಜ್ಞಾನಾಂಗಗಳಿಗೆ ಸೀಮಿತವಿರುತ್ತಿತ್ತು.

ಸವ್ಯಸಾಚಿತ್ವ

ನಮ್ಮ ಸಾವಿರಾರು ವರ್ಷಗಳ ವಿದ್ವತ್ಪರಂಪರೆಯನ್ನು ಪರಿಶೀಲಿಸಿದಾಗ ಎದ್ದುಕಾಣುವ ಸಂಗತಿ ಇದು : ಸಾರಸ್ವತ ವಾರಸಿಕೆ ಎರಡು ಧಾರೆಗಳ ಮೂಲಕ ಉಳಿದುಬಂದಿದೆ: ಮೊದಲನೆಯದು ಮೌಖಿಕಪರಂಪರೆ; ಎರಡನೆಯದು ಗ್ರಂಥವಾಙ್ಮಯ. ಆರಂಭಕಾಲದಿಂದ ಅಧ್ಯಯನಕ್ಷೇತ್ರದಲ್ಲಿ ಮೌಖಿಕ–ಸಂವಹನದ್ದೇ ಪ್ರಾಧಾನ್ಯ. ಶಾಸ್ತ್ರಾಧ್ಯಯನದಲ್ಲಂತೂ ವಿದ್ವತ್ತು ಅಧಿಕವಾಗಿ ರಕ್ಷಿತವಾಗಿರುವುದು ಗುರು–ಶಿಷ್ಯ ಪರಂಪರೆಯಲ್ಲಿ. ಅನೇಕ ಶತಮಾನಗಳ ಕಾಲ ಲಿಖಿತ–ಶಾಸ್ತ್ರವಾಙ್ಮಯಕ್ಕೆ ಇದ್ದುದು ಗೌಣಸ್ಥಾನವೇ. ಮೌಖಿಕಮಾಧ್ಯಮದ ಅನುಸರಣೆಯಿಂದ ಅಧ್ಯಯನಕ್ಕೆ ಹೆಚ್ಚಿನ ದಾರ್ಢ್ಯವೂ ಒದಗಿಬಂದಿತ್ತು; ಎಷ್ಟುಮಟ್ಟಿಗೆ ಎಂದರೆ ಅಧಿಕೃತತೆ ಇರುವುದು ಮೌಖಿಕಪಾಠ್ಯಕ್ಕೇ ಎಂಬ ದೃಷ್ಟಿಯೇ ನೆಲೆನಿಂತಿತ್ತು. ಯಾವುದೇ ಶಾಸ್ತ್ರಪ್ರಕ್ರಿಯೆಯು ಪೂರ್ಣ ಸ್ವಾಧೀನಗೊಂಡಿದೆ ಎನ್ನಬೇಕಾದರೆ ಪ್ರಸಕ್ತಗ್ರಂಥವಷ್ಟೂ ಕಂಠಸ್ಥವಾಗಿರುವುದು ಕಡ್ಡಾಯವೆನಿಸಿತ್ತು. ಈಗ್ಗೆ ಎರಡು ಶತಮಾನಗಳ ಹಿಂದೆ ಮುದ್ರಣಸೌಕರ್ಯಗಳೂ

ಅಷ್ಟಾಗಿ ಇರಲಿಲ್ಲ. ಅನಿವಾರ್ಯತೆ ಇದ್ದಲ್ಲಿ ಹಸ್ತಲಿಪಿಯಲ್ಲಿ ಬರೆದು ಇಟ್ಟುಕೊಳ್ಳ ಬೇಕಾಗುತ್ತಿತ್ತು.

ಇದಲ್ಲದೆ ಇನ್ನೊಂದು ಅಂಶವೂ ಉಂಟು. ಶಾಸ್ತ್ರಪ್ರಪಂಚವು ತುಂಬಾ ವಿಸ್ತಾರವಾದದ್ದು. ಅದಷ್ಟನ್ನೂ ಲಿಪಿಬದ್ಧಗೊಳಿಸುವುದು ಅಸಾಧ್ಯದ ಮಾತೇ. ಸೌಕರ್ಯಕ್ಕಾಗಿ ಎಷ್ಟು ಮುಖ್ಯಾಂಶಗಳನ್ನು ಲಿಪಿಬದ್ಧಗೊಳಿಸಿದರೂ, ಹೆಚ್ಚಿನ ಪರಿಷ್ಕರಣಕ್ಕಾಗಿ ಮೌಖಿಕಪರಂಪರೆಯೇ ಆಶ್ರಯಣೀಯವಾಗುತ್ತದೆ. ಈ ಹಿನ್ನೆಲೆ ಯಿಂದಾಗಿಯೂ ನಮ್ಮ ಶಾಸ್ತ್ರಪರಂಪರೆಯಲ್ಲಿ ಲಿಪಿಬದ್ಧಸಾಹಿತ್ಯಕ್ಕೆ ಆನುಷಂಗಿಕ ಸ್ಥಾನವೇ ಇದ್ದಿತು. ಈ ಕಾರಣದಿಂದಲೂ ಶತಮಾನಗಳುದ್ದಕ್ಕೂ ಶಾಸ್ತ್ರಪರಂಪರೆಯನ್ನು ಜೀವಂತವಾಗಿ ಉಳಿಸಿದವರಲ್ಲಿ ಲಕ್ಷ್ಯವು ಕೇಂದ್ರೀಕೃತವಾಗಿದ್ದುದು ಮೌಖಿಕ ಅಧ್ಯಯನ-ಅಧ್ಯಾಪನಗಳಲ್ಲಿ. ಗ್ರಂಥಲೇಖನಕ್ಕೆ ಗಮನ ಕೊಟ್ಟವರು ನೂರರಲ್ಲಿ ಒಬ್ಬರೋ ಇಬ್ಬರೋ ಅಷ್ಟೆ. ಆದರೆ ಶಾಸ್ತ್ರೇತಿಹಾಸದಲ್ಲಿ ಹೆಸರು ದಾಖಲೆಗೊಳ್ಳುವುದು ಪ್ರಮುಖವಾಗಿ ಗ್ರಂಥನಿರ್ಮಿತಿಯ ಕಾರಣದಿಂದ ತಾನೆ. ಯಾವುದೇ ಗ್ರಂಥವನ್ನೂ ಬರೆಯದೆ ಜೀವಮಾನವನ್ನೆಲ್ಲ ಅಧ್ಯಯನ-ಅಧ್ಯಾಪನದಲ್ಲಿ ಕಳೆದ ಪೂರ್ವಜರೇ ಅಧಿಕಸಂಖ್ಯೆಯವರು. ಅವರಲ್ಲಿ ಹೆಚ್ಚಿನವರ ಸಾಧನೆಯೆಲ್ಲ ಇತಿಹಾಸಗರ್ಭದಲ್ಲಿ ಮರೆಯಾಗಿಹೋಗಿದೆ.

ಇದು ನಮ್ಮ ವಿದ್ವತ್ಪರಂಪರೆಯ ಪ್ರಾತಿನಿಧಿಕ ಚಿತ್ರ.

ಇನ್ನೊಂದು ಹೇಳಲೇಬೇಕಾದ ಅಂಶವೂ ಉಂಟು. ಪ್ರಕಾಂಡ ಶಾಸ್ತ್ರಪಾಂಡಿತ್ಯ ಇರುವವರಲ್ಲೆಲ್ಲ ಗ್ರಂಥಲೇಖನಕೌಶಲವೂ ಇರುತ್ತದೆಂದು ಹೇಳಲಾಗುವುದಿಲ್ಲ. ಶಾಸ್ತ್ರಕ್ಷೇತ್ರದಲ್ಲಾಗಲಿ ಲೌಕಿಕಸಾಹಿತ್ಯಕ್ಷೇತ್ರದಲ್ಲಾಗಲಿ ಒಳ್ಳೆಯ ಬರವಣಿಗೆ ಮಾಡಬಲ್ಲವರು ಲಕ್ಷದಲ್ಲಿ ಒಬ್ಬಿಬ್ಬರಷ್ಟೆ - ಎಂಬುದು ಲೋಕಾನುಭವ. ಪಾಂಡಿತ್ಯವೂ ಲೇಖನಕಲೆಯೂ ಮೇಳನಗೊಳ್ಳುವುದು ಅತ್ಯಂತ ವಿರಳ. 'ಓದು ಬರಹದ ಶತ್ರು' ಎಂಬ ತೀ.ನಂ.ಶ್ರೀ. ಅವರ ಮಾತೂ ಪ್ರಸಿದ್ಧವೇ ಇದೆ. ಪಾಂಡಿತ್ಯವು ಉನ್ನತಿಗೆ ಏರಿದಷ್ಟೂ ಬರವಣಿಗೆಯಲ್ಲೂ ಲೌಕಿಕವ್ಯವಹಾರಗಳಲ್ಲಿಯೂ ಆಸಕ್ತಿಯು ಕ್ಷೀಣಿಸುತ್ತಹೋಗುವುದೂ ಸ್ವಾಭಾವಿಕ.

ಇದೆಲ್ಲ ಹೇಗೇ ಇದ್ದರೂ, ಅದ್ಯತನ ಕಾಲದ ಸಂದರ್ಭದಲ್ಲಿ ನಮ್ಮ ಪರಂಪರೆಯ ಊರ್ಜಿತತೆಗೆ ಮುದ್ರಿತರೂಪದ ಸಾಹಿತ್ಯವೇ ಪ್ರಮುಖ ಅವಲಂಬ ಎಂಬುದನ್ನು ಅಲ್ಲಗಳೆಯಲಾಗುವುದಿಲ್ಲ. ಮೌಖಿಕ ಅಧ್ಯಯನ-ಅಧ್ಯಾಪನ ಮಾರ್ಗವೂ ಈಗ ಹಿಂದಿನ ಪ್ರಾಚುರ್ಯವನ್ನು ಉಳಿಸಿಕೊಳ್ಳಲಾಗದೆ ಕ್ಷೀಣಗೊಂಡಿದೆ.

ಶಾಸ್ತ್ರವಾಙ್ಮಯದ ಈ ಸ್ಥಿತಿಗತಿಗಳನ್ನು ಮನಸ್ಸಿನಲ್ಲಿ ಧರಿಸಿದಲ್ಲಿ ಪ್ರೊ॥ ಎಸ್.ಕೆ. ರಾಮಚಂದ್ರರಾಯರು ಬಿಟ್ಟು ಹೋಗಿರುವ ಅಗಾಧಪ್ರಮಾಣದ ಸಾಹಿತ್ಯದ ಮಹತ್ತ್ವ ಸ್ವಲ್ಪಮಟ್ಟಿಗೆ ಅರಿವಿಗೆ ಬಂದೀತು.

ರಾಮಚಂದ್ರರಾಯರಿಗಿದ್ದ ಒಂದು ಅಸಾಮಾನ್ಯ ಆನುಕೂಲ್ಯವೆಂದರೆ ಅವರ ವಿದ್ವತ್ತೆಯ ಬಹುಮುಖತೆ. ಅವರ ಪಾಂಡಿತ್ಯದ ಆಳ, ಎತ್ತರ, ಅಗಲ–ಎಲ್ಲವೂ ಅಸಾಧಾರಣವೇ. ಯಾವುದೋ ಒಂದೋ ಎರಡೋ ಶಾಸ್ತ್ರಗಳಲ್ಲಿ ಪ್ರಭುತ್ವವನ್ನು ಸಾಧಿಸಿರುವವರು ವಿರಳವಾಗಿಯಾದರೂ ದೊರೆತಾರು. ಆದರೆ ರಾಮಚಂದ್ರರಾಯರಂತೆ ಹಲವಾರು ಶಾಸ್ತ್ರಗಳನ್ನು ಅವಗತ ಮಾಡಿಕೊಂಡವರು ತೀರಾ ವಿರಳ. ಅವರ ಪ್ರತಿಭೆಯ ಈ ಬೀಸಿನಿಂದಾಗಿ ಅವರ ಬರಹದ ಗುಣವಂತಿಕೆ ಪ್ರಜ್ವಲವಾಯಿತು. ಕೇವಲ ಒಂದು ಶಾಸ್ತ್ರದ ಪ್ರಾಕಾರದೊಳಗಷ್ಟೆ ಸಂಚಾರ ಮಾಡುವುದರಿಂದ ಲಭಿಸಲಾರದ ವೈಶಾಲ್ಯವೂ ಪರಿಜ್ಞಾನಸೂಕ್ಷ್ಮತೆಯೂ ಸೇರ್ಪಡೆಗೊಂಡು ಅವರ ಬರಹವನ್ನು ವಿಶಿಷ್ಟವಾಗಿಸಿತ್ತು. ಎರಡನೆಯದಾಗಿ ಪ್ರತಿಭೆಯ ಔನ್ನತ್ಯದ ಹಿನ್ನೆಲೆಯಿಂದಾಗಿ ಅವರು ಹತ್ತಾರು ವಿಷಯಗಳ ಬಗೆಗೆ ಅಧಿಕಾರಯುತವಾಗಿ ಬರೆಯಲು ಸಮರ್ಥರಾದರು.

ಅವರ ಮನೋಬುದ್ಧಿಗಳಷ್ಟೂ ಶಾಸ್ತ್ರಸಂಸ್ಕಾರದಿಂದ ರೂಪಗೊಂಡಿದ್ದವು. ಹೀಗೆ ಅತ್ಯಂತ ಪರಿಷ್ಕಾರಕ್ಕೆ ಒಳಪಡದ ಮಾತಾಗಲಿ ಬರವಣಿಗೆಯಾಗಲಿ ಅವರಿಗೆ ಸಾಧ್ಯವೇ ಇರಲಿಲ್ಲ. ಅವರಷ್ಟು ವಿಪುಲವಾಗಿ ಬರೆದವರು ಬೇರೆ ಇಲ್ಲ. ಅವರಷ್ಟು ಪರಿಷ್ಕಾರವಾಗಿ ಮತ್ತು ಸಾಮಗ್ರ್ಯದೃಷ್ಟಿಯಿಂದ ಬರೆದವರೂ ವಿರಳ. ಹೀಗೆ ಅವರ ಬರಹದ ಗಾತ್ರಬಾಹುಳ್ಯ, ಗುಣವತ್ತತೆ - ಎರಡೂ ಅಸಾಧಾರಣವೇ. ಎಲ್ಲ ದೃಷ್ಟಿಗಳಿಂದಲೂ ವಿಸ್ಮಯಾವಹವಾದ ಸಾರಸ್ವತಸಂಪತ್ತನ್ನು ಅವರು ಲೋಕಕ್ಕೆ ನೀಡಿದ್ದಾರೆ. ಅವರು ಪ್ರೀತಿಯಿಂದ ನಡೆಸಿದ ಈ ಆರಾಧನೆಗೆ ನಾವು ಹೇಗೆ ತಾನೆ ಕೃತಜ್ಞತೆ ಸಲ್ಲಿಸಲು ಆದೀತು? ಇತಿಹಾಸದಲ್ಲಿ ತುಂಬಾ ವಿರಳವಾಗಿಯಷ್ಟೆ ಇಂತಹ ದೈತ್ಯಪ್ರತಿಭೆ ಒಮ್ಮೊಮ್ಮೆ ಹಾದುಹೋಗುತ್ತದೆ. ಅಂತಹ ಅದ್ಭುತ ನಮ್ಮ ಕಾಲದಲ್ಲಿ, ನಮ್ಮ ನಡುವೆಯೇ, ನಮ್ಮ ಕಣ್ಣೆದುರಿಗೇ ನಡೆದದ್ದು ನಮ್ಮೆಲ್ಲರ ಸುಕೃತ.

ಉದ್ಬೋಧನಶ್ರದ್ಧೆ

ಇನ್ನೊಂದು ಅಂಶವನ್ನೂ ಹೇಳಬೇಕು. ಸಾಂಪ್ರದಾಯಿಕ ಹಾಗೂ ಅದ್ಯತನೀಯ ಅಧ್ಯಯನದ ಗಟ್ಟಿಯಾದ ಹಿನ್ನೆಲೆ ಅವರಿಗೆ ಇದ್ದದ್ದು ಹೌದಾದರೂ, ಪ್ರವಚನಪಟುತೆಯೂ ಲೇಖನಕೌಶಲವೂ ಅವರು ಕಷ್ಟಪಟ್ಟು ಕರಗತ ಮಾಡಿಕೊಂಡಂಥವು. ತಾವು ಶ್ರಮಪೂರ್ವಕ ಗಳಿಸಿಕೊಂಡಿದ್ದ ಜ್ಞಾನದ ಪ್ರಯೋಜನ ತಮ್ಮ ಸಮಾಜಕ್ಕೆ ವಿನಿಯೋಗ ವಾಗಬೇಕು - ಎಂಬ ಶ್ರದ್ಧೆ ಅವರ ಅಂತರಂಗವನ್ನು ತುಂಬಿಕೊಂಡು ಅವರನ್ನು ಇಂತಹ ಕಾಯಕಕ್ಕೆ ಸಜ್ಜುಗೊಳಿಸಿತ್ತು. ಹನಿಹನಿಯಾಗಿ ಆರಂಭವಾದ ಬರವಣಿಗೆ ಕೆಲವೇ ವರ್ಷಗಳಲ್ಲಿ ಪ್ರವಾಹವೇ ಆಯಿತು.

ತಮ್ಮ ಯಾವುದೇ ಕೆಲಸ ಉತ್ಕೃಷ್ಟಮಟ್ಟದಲ್ಲಿಯೆ ಇರಬೇಕು ಎಂಬ ದೃಷ್ಟಿ ಅವರಲ್ಲಿ ಬೇರೂರಿದ್ದುದರಿಂದ, ಅವರು ಶ್ರಮಪಟ್ಟು ಕ್ರಮಕ್ರಮೇಣ ಮೇಲ್ಮಟ್ಟದ

ಬರವಣಿಗೆಯನ್ನು ಅಭ್ಯಾಸ ಮಾಡಿಕೊಂಡರು. ಇದು ಅವರ ಮೊದಮೊದಲಿನ ಬರಹಗಳನ್ನೂ ಆಮೇಲಿನವನ್ನೂ ಹೋಲಿಸಿ ನೋಡಿದರೆ ಸ್ಪಷ್ಟವಾಗುತ್ತದೆ. ಕನ್ನಡದ ಬರವಣಿಗೆಯಂತೂ ಆರಂಭದ ದಿನಗಳಲ್ಲಿ ಅವರಿಗೆ ಸ್ವಲ್ಪ ಕ್ಲೇಶಕರವೆಂದೇ ಅನಿಸಿದ್ದಿರಬೇಕೆಂಬುದನ್ನು ನಾವು ಗಮನಿಸಬಹುದು. ಉದಾಹರಣೆಗೆ: ಅವರ ಆರಂಭದ ಕನ್ನಡ ಬರಹಗಳಲ್ಲಿ ಒಂದಾದ 'ಟಿಬೆಟ್ಟಿನ ಯೋಗಿ ಮಿಲರೇಪ' ಕೃತಿಯನ್ನು ಸ್ಮರಿಸಬಹುದು. ಅದು 1954ರಲ್ಲಿ 'ಜನಪ್ರಗತಿ' ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಮೊದಲು ಪ್ರಕಟವಾಯಿತು. ಭಾಷೆ-ಶೈಲಿಗಳೊಡನೆ ಅವರು ಇನ್ನೂ ಸೆಣಸಾಡುತ್ತಿದ್ದುದನ್ನು ಅದರಲ್ಲಿ ಗುರುತಿಸಬಹುದು.

ಆದರೆ ಆ 'ಅಪ್ರೆಂಟಿಸ್‌ಶಿಪ್' ಪರಿಸ್ಥಿತಿ ಇದ್ದುದು ಬಹಳ ಸ್ವಲ್ಪಕಾಲ. ಕ್ಷಿಪ್ರವಾಗಿ ಸಮರ್ಥವೂ ಲಲಿತವೂ ಆದ ಕನ್ನಡ ಬರವಣಿಗೆ ಅವರಿಗೆ ರೂಢಿಯಾಯಿತು. ಯಾವುದೇ ವಿಷಯದಲ್ಲಿ ರಾಮಚಂದ್ರರಾಯರ ಲೇಖನಿಯಿಂದ ಒಂದು ಲೇಖನವೋ ಪುಸ್ತಿಕೆಯೋ ಪೂರ್ಣಪ್ರಮಾಣದ ಗ್ರಂಥವೋ ಹೊರಬಂದಿತೆಂದರೆ ಅದು ಅತ್ಯಂತ ಮೌಲಿಕವೂ ತಲಸ್ಪರ್ಶಿಯೂ ಸಂಗ್ರಾಹ್ಯವೂ ಆಗಿಯೇ ಇರುತ್ತದೆ ಎಂಬ ನಿಶ್ಚಯ ಎಲ್ಲ ಓದುಗರ ಮನಸ್ಸಿನಲ್ಲಿ ಮೂಡುತ್ತಿತ್ತು. ಪಂಡಿತವರ್ಗ, ಸಾಮಾನ್ಯ ಆಸಕ್ತರು — ಎರಡೂ ಧಾರೆಗಳ ವಾಚಕರ ಅತಿಶಯ ಆದರಣೆಯನ್ನು ಅವರ ಬರಹಗಳು ಪಡೆದುಕೊಂಡವು.

ಸಂಸ್ಕೃತಮೂಲದ ಶಾಸ್ತ್ರಸಾಹಿತ್ಯದ ಓದೂ ಗ್ರಹಿಕೆಯೂ ಒಂದು ಅಲ್ಪವರ್ಗಕ್ಕಷ್ಟೆ ಎಟಕುವಂಥದು. ಆದರೆ ಅದು ಒಳಗೊಂಡ ವಿಷಯಸಾಮಗ್ರಿಯು ಎಲ್ಲರಿಗೂ ಪ್ರಯೋಜನಕರವಾದುದು. ಈ ಕಾರಣದಿಂದ ಸಾವಿರಾರು ವರ್ಷಗಳ ಅವಧಿಯಲ್ಲಿ ಬೆಳೆದುಬಂದಿರುವ ಜ್ಞಾನರಾಶಿಯನ್ನು ಅದ್ಯತನೀಯ ನುಡಿಗಟ್ಟಿನಲ್ಲಿ ಈಗಿನ ಪೀಳಿಗೆಗೆ ಪರಿಚಯಿಸಬೇಕಾದುದು ಅತ್ಯಂತ ಅವಶ್ಯವಿದೆ. ಈ ಪರಿಚರ್ಯೆಯನ್ನು ರಾಮಚಂದ್ರರಾಯರಷ್ಟು ಅಗಾಧಪ್ರಮಾಣದಲ್ಲಿ ಮಾಡಿರುವವರು ಈ ತಲೆಮಾರಿನಲ್ಲಿ ಇನ್ನೊಬ್ಬರಿಲ್ಲ ಎಂದರೆ ಉತ್ಪ್ರೇಕ್ಷೆಯಲ್ಲ. "ಇದನ್ನೆಲ್ಲ ನಾನೇ ಮಾಡಿದೆನೆ? - ಎಂದು ನನಗೇ ಕೆಲವು ಸಲ ಅನ್ನಿಸಿಬಿಡುತ್ತದೆ!" ಎಂದು ಸ್ವಯಂ ರಾಮಚಂದ್ರರಾಯರೇ ಕೆಲವು ಸಲ ಉದ್ಗರಿಸುತ್ತಿದ್ದುದುಂಟು.

* * *

ರಾಮಚಂದ್ರರಾಯರು (ಜನನ: 4-9-1925) ಶತಾಧಿಕ ಗ್ರಂಥಕರ್ತರು. ಬಹುಶಃ ದ್ವಿಶತಾಧಿಕ ಗ್ರಂಥಕರ್ತರೆಂದೇ ಹೇಳಬೇಕಾದೀತು. ಕನ್ನಡ ಇಂಗ್ಲಿಷುಗಳಲ್ಲಿ ಸುಮಾರು 1948-2005ರ ಅವಧಿಯಲ್ಲಿ ಪ್ರಕಟಗೊಂಡ ಅವರ ಪ್ರತ್ಯೇಕ ಕೃತಿಗಳೇ 150ಕ್ಕೂ ಹೆಚ್ಚು. ಇವಲ್ಲದೆ 3 ಸಂಪುಟಗಳ ವೈದ್ಯಕೀಯ ವಿಶ್ವಕೋಶ, 12 ಸಂಪುಟಗಳ

ಆಗಮಕೋಶ, 6 ಸಂಪುಟಗಳ ಪ್ರತಿಮಾಕೋಶ, 16 ಸಂಪುಟಗಳ ಋಗ್ವೇದದರ್ಶನ — ಇವು ಒಂದೊಂದೂ ದೈತ್ಯಯೋಜನೆಯೇ. ಹತ್ತಾರು ವಿದ್ವಾಂಸರ ತಂಡಗಳಿಗೆ ದಶಕಗಳಷ್ಟು ಸಮಯ ಹಿಡಿಯುವ ಈ ಹಲವು ಬೃಹದ್ ಯೋಜನೆಗಳನ್ನು ರಾಮಚಂದ್ರರಾಯರು ಸುಮಾರು ಇಪ್ಪತ್ತು ವರ್ಷದ ಅವಧಿಯಲ್ಲಿ ಏಕಾಂಗಿಯಾಗಿ ನಿರ್ವಹಿಸಿದರು. ಈ ಅಗಾಧಕಾರ್ಯದ ಹೆಚ್ಚಿನಂಶದಲ್ಲಿ ಅವರು ಹೇಳಿದ್ದನ್ನು ಬರೆದುಕೊಳ್ಳುವ ಉಕ್ತಲೇಖಕ ಸಹಾಯಕರನ್ನು ಕೂಡಾ ಬಳಸಿಕೊಳ್ಳಲಿಲ್ಲ. ಬಹುಮಟ್ಟಿಗೆ ಎಲ್ಲ ಬರಹವನ್ನೂ ತಮ್ಮ ಕೈಯಿಂದಲೇ ಲಾಂಗ್‌ಹ್ಯಾಂಡ್‌ನಲ್ಲಿ ಮಾಡಿದರು. ಅವರ ಬರಹ ಗಾತ್ರದಲ್ಲಿ ಸಣ್ಣದಾಗಿ, ಒತ್ತೊತ್ತಾಗಿ ಇದ್ದರೂ ಚಿತ್ತಾಗಲಿ ತಿದ್ದುಪಡಿಯಾಗಲಿ ಇರುತ್ತಿರಲಿಲ್ಲ. ಅವರ ಭಾಷಣದಂತೆ, ಶಾಸ್ತ್ರಪ್ರವಚನದಂತೆ, ಅವರ ಬರವಣಿಗೆಯೂ ವ್ಯವಸ್ಥಿತ, ಪರಿಸ್ಫುಟ. ಒಮ್ಮೆ ಅವರು ಬರೆದ ಮೇಲೆ ತಿದ್ದುಪಡಿಯ ಆವಶ್ಯಕತೆ ಕಾಣುತ್ತಿದ್ದುದು ತೀರಾ ಕಡಮೆ. ಬರವಣಿಗೆಗೆ ಬೇಕಾದ ಅಧ್ಯಯನದ ಮತ್ತು ಚಿಂತನೆಯ ಹಿನ್ನೆಲೆಯೇನೋ ಸುಭದ್ರವಾಗಿ ಇದ್ದದ್ದು ಹೌದು. ಆದರೂ ಬರವಣಿಗೆಯು ಕಾಗದದ ಮೇಲೆ ಮೂಡಬೇಕಲ್ಲ! ರಾಮಚಂದ್ರರಾಯರು ಬರೆದ ಗ್ರಂಥಗಳ ಮತ್ತು ಅಸಂಖ್ಯ ಬಿಡಿಲೇಖನಗಳ 'ಕಾರ್ಪಸ್' ನೋಡುವಾಗ — ಒಬ್ಬ ವ್ಯಕ್ತಿಯು ಒಂದು ಜೀವಮಾನದಲ್ಲಿ ಇಷ್ಟು ಕೆಲಸ ಮಾಡಬಲ್ಲನೆ — ಎಂದು ವಿಸ್ಮಯ ಆಗದಿರುವುದಿಲ್ಲ.

ಅಧ್ಯಯನ; ಅಧ್ಯಾಪನ

ತಂದೆಯವರಿಂದಲೇ ಸಂಸ್ಕೃತವನ್ನೂ ವ್ಯಾಕರಣವನ್ನೂ ರಘುವಂಶಾದಿ ಕಾವ್ಯಪಾಠವನ್ನೂ ಮಾಡಿದ್ದ ರಾಯರಿಗೆ ಕೇಶವಶಿವಘನಪಾಠಿಗಳಲ್ಲಿ ವೇದಪಾಠವಾಯಿತು. ಆಮೇಲಿನ ವರ್ಷಗಳಲ್ಲಿ ತರ್ಕಶಾಸ್ತ್ರವನ್ನು ಯಜ್ಞವಿಠಲಾಚಾರ್ಯರಲ್ಲಿಯೂ ವೇದಾಂತಶಾಸ್ತ್ರವನ್ನು ಪಾಲಘಾಟ್ ನಾರಾಯಣಶಾಸ್ತ್ರಿಗಳಲ್ಲಿಯೂ ಸಾಂಪ್ರದಾಯಿಕ ಕ್ರಮದಲ್ಲಿ ಅಧ್ಯಯನ ಮಾಡಿದರು. ಅದಕ್ಕೂ ಹಿಂದೆಯೇ ಆಗಮಿಕ ಕೃಷ್ಣ ದೀಕ್ಷಿತರಲ್ಲಿ ವಿವಿಧ ಆಗಮಗಳ ಪಾಠ ಆಗಿತ್ತು. 1940ರ ದಶಕದಲ್ಲಿ ಮೈಸೂರು ಮಹಾರಾಜ ಕಾಲೇಜಿನಲ್ಲಿ ಮನಃಶಾಸ್ತ್ರ ವ್ಯಾಸಂಗ ಮಾಡುತ್ತಿದ್ದ ಕಾಲದಲ್ಲಿ ಬಿಡುವಿನ ವೇಳೆಯಲ್ಲಿ ರಾಳ್ಳಪಲ್ಲಿ ಅನಂತಕೃಷ್ಣಶರ್ಮರಿಂದ ಅರ್ಧಮಾಗಧಿ ಹಾಗೂ ಪ್ರಾಕೃತ ಭಾಷೆಗಳನ್ನೂ ಸಂಗೀತದ ಸೂಕ್ಷ್ಮಾಂಶಗಳನ್ನೂ ಅವಗತ ಮಾಡಿಕೊಂಡರು.

ರಾಯರ ಜ್ಞಾನತೃಷೆ ಎಷ್ಟು ಇತ್ತೆಂಬುದನ್ನು ಸೂಚಿಸಲು ಇಷ್ಟು ಸಾಕಾದೀತು. ಇದಲ್ಲದೆ ಎಂ. ಹಿರಿಯಣ್ಣ ಮತ್ತು ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರಂಥವರ ಸಾಮೀಪ್ಯವೂ ಲಭ್ಯವಿದ್ದುದರಿಂದ ತಮ್ಮ ವೇದಾಂತಜ್ಞಾನವನ್ನು 'ಫೈನ್-ಟ್ಯೂನ್' ಮಾಡಿಕೊಳ್ಳಲು ರಾಯರು ಆ ಸಾನ್ನಿಧ್ಯವನ್ನು ಬಳಸಿಕೊಂಡರು.

ಶಾಸ್ತ್ರಚೂಡಾಮಣಿ ವಿದ್ಯಾಲಂಕಾರ ಪ್ರೊ॥ ಎಸ್. ಕೆ. ರಾಮಚಂದ್ರರಾವ್
(4.9.1925 – 2.2.2006)

ಇಂತಹ ಶ್ರೀಮಂತವಾದ ಗುರುಪರಂಪರೆಯ ಆಸರೆಯಲ್ಲಿ ವಿಕಾಸಗೊಂಡದ್ದು ಎಸ್. ಕೆ. ರಾಮಚಂದ್ರರಾಯರೆಂಬ ಸುಂದರ ಪುಷ್ಪ. ಇದಾದರೋ ಕನಕಾಂಬರ ಅಥವಾ ಸೂಜಿಮಲ್ಲಿಗೆಯಂತಲ್ಲದೆ ಜಾವಾದ 'ರ್‍ಯಾಫೆಲ್‌ಸಿಯಾ' ಗಾತ್ರದ ದೈತ್ಯಪುಷ್ಪವೇ ಆಯಿತು. ಉತ್ತರೋತ್ತರ ಬೌದ್ಧದರ್ಶನ ಅಧ್ಯಯನವನ್ನು ಪರಿಷ್ಕರಣಗೊಳಿಸಿಕೊಳ್ಳಲು ಟಿಬೇಟನ್ ಭಾಷೆಯನ್ನೂ ಕರಗತ ಮಾಡಿಕೊಂಡರು.

ಹೀಗೆ ಅತ್ಯಂತ ಶ್ರಮಪೂರ್ವಕವಾಗಿ ತಮ್ಮ ತಾರುಣ್ಯದ ಅವಧಿಯ ಉದ್ದಕ್ಕೂ ನಿರಂತರ ಪರಿಶ್ರಮದಿಂದ ಪಡೆದುಕೊಂಡ ಜ್ಞಾನನಿಧಿಯನ್ನು ರಾಯರು ಆಮೇಲಿನ ಐವತ್ತು ವರ್ಷಕಾಲ ಪಾಠಪ್ರವಚನಗಳ ಮೂಲಕವೂ ಉಪನ್ಯಾಸಗಳ ಮೂಲಕವೂ ಬರಹದ ಮೂಲಕವೂ ಮುಕ್ತಹಸ್ತವಾಗಿ ವಿತರಣ ಮಾಡಿದರು.

ಕೆಲವರನ್ನು 'ಬಾರ್‍ನ್ ಟೀಚರ್' ಎಂದು ವರ್ಣಿಸುವ ವಾಡಿಕೆ ಇದೆ. ರಾಯರು ಅಂತಹ ಒಬ್ಬ ಅಭಿಜಾತ ಪ್ರವಚನಕರ್ತರು. ಒಮ್ಮೆ ಉಪಕ್ರಮಗೊಂಡಿತೆಂದರೆ ಅವರ ಶಾಸ್ತ್ರಪಾಠವಾಗಲಿ ಸಾರ್ವಜನಿಕ ಉಪನ್ಯಾಸವಾಗಲಿ ನಿರರ್ಗಳವಾಗಿ ಸಾಗುತ್ತಿತ್ತು. ತಮ್ಮ ಪ್ರತಿಪಾದನೆಗೆ ಅವಶ್ಯ ಬಿದ್ದ ಮೂಲಗ್ರಂಥವಾಕ್ಯಗಳಿಗಾಗಿ ಎಂದೂ ಅವರು ತಡಕಾಡಿದವರಲ್ಲ. ಸರಣಿಸರಣಿಯಾಗಿ ಮೂಲಗ್ರಂಥ ಉದ್ಧೃತಗಳು ಪುಂಖಾನುಪುಂಖವಾಗಿ ಅನಾಯಾಸವಾಗಿ ಹೊರಬೀಳುತ್ತಿದ್ದವು. ಅಷ್ಟು ಗಟ್ಟಿಯಾದ ವಿಷಯಪ್ರಭುತ್ವ ಅವರದಾಗಿತ್ತು.

ಗಮನಿಸಬೇಕಾದ ಸಂಗತಿಯೆಂದರೆ 'ನಾನು ಕಲಿತುದನ್ನು, ಅರ್ಥಮಾಡಿಕೊಂಡದ್ದನ್ನು ಸಾಧ್ಯವಾದಷ್ಟನ್ನು ಸಮಾಜಕ್ಕೆ ವಿತರಣೆ ಮಾಡಬೇಕು' ಎಂಬ ಪ್ರಜ್ಞೆ ಅವರಲ್ಲಿ ಸದಾ ಜಾಗೃತವಾಗಿತ್ತು; ಮತ್ತು ಅವರ ಗುರುಪಂಕ್ತಿಯವರೂ ಅವರಿಂದ ಇದನ್ನೇ ನಿರೀಕ್ಷಿಸಿದ್ದರು. ಹೀಗೆ ಋಷಿಋಣ ಸಲ್ಲಿಕೆ, ಸಮಾಜದ ಉದ್ಬೋಧನ — ಈ ಎರಡೂ ಸ್ವವಿಹಿತ ಕರ್ತವ್ಯಗಳನ್ನು ರಾಮಚಂದ್ರರಾಯರು ಹೋಲಿಕೆಗೆ ಸಿಗದ ಪ್ರಮಾಣದಲ್ಲಿ ನಿರ್ವಹಿಸಿ ಧನ್ಯರಾದರು. ಈ ಅರ್ಥದಲ್ಲಿ ಅವರನ್ನು ನಮ್ಮ ಕಾಲದ ಒಬ್ಬ ಋಷಿ ಎಂದು ಹೇಳಿದರೆ ಅದು ಯಥಾರ್ಥ ವರ್ಣನೆಯೇ ಆಗುತ್ತದೆ.

ಸ್ನೇಹವೃತ್ತಿ

ಸಾಂದರ್ಭಿಕವಾಗಿ ಇನ್ನೊಂದು ಮಾತನ್ನು ಹೇಳಬೇಕು. ಸಾಮಾನ್ಯವಾಗಿ ಶಾಸ್ತ್ರಾಧ್ಯಯನ-ಅಧ್ಯಾಪನಗಳಲ್ಲಿ ನಿರತರಾದವರು ಬೇರೆ ಯಾವುದೇ ವಿಕ್ಷೇಪಗಳನ್ನು – ಡಿಸ್‌ಟ್ರ್ಯಾಕ್ಷನ್ಸ್ – ಇಷ್ಟಪಡುವುದಿಲ್ಲ. ಅವರ ಅಂತರಂಗವಷ್ಟನ್ನೂ ಶಾಸ್ತ್ರಪ್ರಪಂಚ ದಟ್ಟವಾಗಿ ಆವರಿಸಿರುತ್ತದೆ. ಇಪ್ಪತ್ತನಾಲ್ಕು ಗಂಟೆಯೂ ಅದೇ ಆವರಣದಲ್ಲಿ ಇರುತ್ತಾರೆ. ಅದರಿಂದ ಹೊರಕ್ಕೆ ಬರಲು ಇಚ್ಛಿಸುವುದಿಲ್ಲ. ಆದರೆ ರಾಮಚಂದ್ರರಾಯರು ಇದಕ್ಕೆ

ಅಪವಾದ. ಅತ್ಯಂತ ಗಹನವಾದ ವಿಷಯದ ಗ್ರಂಥರಚನೆಯಲ್ಲಿ ಮುಳುಗಿದ್ದಾಗಲೂ ಅವರನ್ನು ಯಾರಾದರೂ ಯಾವುದೋ ವಿಚಾರಗೋಷ್ಠಿಗೋ ಸಮ್ಮೇಳನಕ್ಕೋ ಬರುವಂತೆ ಆಮಂತ್ರಿಸಿದರೆ ಅವರು ಎಂದೂ 'ನನಗೆ ಪುರಸತ್ತು ಇಲ್ಲ' ಎಂದು ಹೇಳಿದವರಲ್ಲ. ಇದಕ್ಕೆ ಒಂದು ಕಾರಣ ಅವರ ಸ್ವಭಾವಸಹಜ ಸಜ್ಜನಿಕೆಯಾದರೆ, ಇನ್ನೊಂದು ಕಾರಣ 'ನಾನು ಯಾವ ಸಮಾಜದ ಭಾಗವಾಗಿದ್ದೇನೋ ಅದಕ್ಕೆ ಸಾಧ್ಯವಾದಷ್ಟು ರೀತಿಗಳಲ್ಲಿ ನನ್ನಿಂದಾದ ಸೇವೆಯನ್ನು ಸಲ್ಲಿಸುವುದು ನನ್ನ ಮೂಲಭೂತ ಕರ್ತವ್ಯ' ಎಂಬ ಸಂತತ ಪ್ರಜ್ಞೆ. ಅವರ ಈ ಸ್ನೇಹವೃತ್ತಿಗಾಗಿ ಸಮಾಜದಿಂದ ಅವರಿಗೆ ವಿಶೇಷವಾಗಿ ಕೃತಜ್ಞತೆ ಸಲ್ಲಬೇಕಾಗಿದೆ.

ಅಂತಹ ಯಾವುದೇ ಸಂದರ್ಭದಲ್ಲಿ ಅವರಿಂದ ಆಯಾ ಗೋಷ್ಠಿಗೆ ಸಂಗತವಾದ ಉನ್ನತಮಟ್ಟದ ಮಾರ್ಗದರ್ಶನ ದೊರೆಯುತ್ತಿದ್ದುದಂತೂ ನಿಶ್ಚಿತ. ಎಲ್ಲ ಸಾಂಸ್ಕೃತಿಕ ವೇದಿಕೆಗಳೂ ಅವರ ಉಪಸ್ಥಿತಿಯನ್ನು ಅಪೇಕ್ಷಿಸುತ್ತಿದ್ದುದಕ್ಕೆ ಅವರ ಅನುಪಮವಾದ ಬಹುಶಾಸ್ತ್ರವಿದ್ವತ್ತೆಯು ಕಾರಣವಾಗಿದ್ದಂತೆಯೇ ಅವರ ವ್ಯಕ್ತಿಗುಣ-ಔನ್ನತ್ಯವೂ ಕಾರಣವಾಗಿದ್ದಿತು. ಯಾವುದೇ ಸಭೆಗೆ ರಾಮಚಂದ್ರರಾಯರು ಆಗಮಿಸಿದರೆಂದರೆ ಆ ಸಭೆಗೆ ಶೋಭೆ ಬರುತ್ತಿತ್ತು, ಗಾಂಭೀರ್ಯ ಬರುತ್ತಿತ್ತು, ಮೌಲ್ಯ ಬರುತ್ತಿತ್ತು. ರಾಯರು ತಮಗೆ ನಿಯುಕ್ತವಾಗಿದ್ದ ಅಧ್ಯಕ್ಷತೆಯನ್ನೋ ಉದ್ಘಾಟನೆಯನ್ನೋ ವಿಚಾರಮಂಡನೆಯನ್ನೋ ಸ್ಮರಣೀಯ ರೀತಿಯಲ್ಲಿ ಅರ್ಥಪೂರ್ಣವಾಗಿಯೂ ಆಕರ್ಷಕವಾಗಿಯೂ ನಿರ್ವಹಿಸುತ್ತಿದ್ದುದು ಮಾತ್ರವಲ್ಲ. ವಿಚಾರಗೋಷ್ಠಿಗಳು ಒಂದೊಂದು ಸಲ ಹಳಿ ತಪ್ಪುವುದು ಅಪರೂಪವಲ್ಲ. ಅಂತಹ ವಿಕಟಸಂದರ್ಭಗಳು ಎದುರಾದಾಗ ರಾಮಚಂದ್ರರಾಯರು ಮಧ್ಯಪ್ರವೇಶ ಮಾಡಿ ನಡವಳಿಗಳನ್ನು ಸರಿದಾರಿಗೆ ತರುತ್ತಿದ್ದರು. ಹೀಗೆ ರಾಯರು ಗೋಷ್ಠಿಗಳ ಸ್ವಾಸ್ಥ್ಯವನ್ನು ಕಾಪಾಡುವ 'ಓಮ್‌ಬುಡ್ಸ್‌ಮನ್' ಕೂಡಾ ಆಗಿರುತ್ತಿದ್ದರು.

ರಾಯರ ಅಂತರಂಗದಲ್ಲಿ ಪ್ರಶಾಂತಿ ನೆಲಸಿದ್ದುದರಿಂದ ಇದೆಲ್ಲ ಅವರಿಗೆ ಸಾಧ್ಯವಾಗುತ್ತಿತ್ತು.

ಜ್ಞಾನಾರಾಧನೆ

ಪ್ರಾಮಾಣಿಕ ಜ್ಞಾನಾನ್ವೇಷಣೆಗೆ ಕೃತಕ ಗಡಿಗಳು ಇರುವುದಿಲ್ಲ. ರಾಯರು ವೇದಾಂತ ಮೀಮಾಂಸಾದಿ ದರ್ಶನಗಳನ್ನು ಅಧ್ಯಯನ ಮಾಡಿದಷ್ಟೆ ಶ್ರದ್ಧೆಯಿಂದ ಅವೈದಿಕ ಧಾರೆಯವೆನಿಸಿರುವ ಬೌದ್ಧಾದಿ ದರ್ಶನಗಳನ್ನೂ ಅಧ್ಯಯನ ಮಾಡಿದರು. ಅದರಲ್ಲಿ ಆಳವಾಗಿ ಮುಳುಗಿದರು ಕೂಡಾ. 1955ರ ಸುಮಾರಿನಲ್ಲಿ ಅವರು ಗಾಂಧಿಬಜಾರ್ ಟಿನ್ ಸ್ಕೂಲಿನ ಎದುರಿನ ಮನೆಯಲ್ಲಿ ಇದ್ದ ಕಾಲದಲ್ಲಿ ಒಮ್ಮೆ ಅವರನ್ನು ವಾಡಿಕೆಯಂತೆ ಭೇಟಿ ಮಾಡಲು ಡಾ॥ ಎಚ್.ಎನ್. ಮೂರ್ತಿಯವರೂ ನಾನೂ

ಹೋದಾಗ ರಾಯರು 'ಮೆತ್ತಸುತ್ತ'ದ ಬೌದ್ಧ ಸಾಂಪ್ರದಾಯಿಕ ಗಾಯನಕ್ರಮವನ್ನು ನಮಗಾಗಿ ವೀಣೆಯಲ್ಲಿ ನುಡಿಸಿ ತೋರಿಸಿದರು.

ಅವರ ಅಖಂಡ ಅಧ್ಯಯನ-ಅಧ್ಯಾಪನಶ್ರದ್ಧೆಯನ್ನು ತುಂಬಾ ಮೆಚ್ಚಿದ್ದ ವಿ.ಸೀ., ಡಿ.ವಿ.ಜಿ. ಮೊದಲಾದವರಿಗೆಲ್ಲ ಅವರು ಅತ್ಯಂತ ಪ್ರೀತಿಪಾತ್ರರಾದುದು ಸಹಜವೇ ಆಗಿದೆ.

ರಾಯರನ್ನು ಸಾಮಾನ್ಯವಾಗಿ ಎಲ್ಲರೂ ನೆನೆಯುವುದು ಅವರ ಸಂಸ್ಕೃತ ವಿದ್ವತ್ತು ಮತ್ತು ಶಾಸ್ತ್ರಪಾಂಡಿತ್ಯಕ್ಕಾಗಿ. ಆದರೆ ಅವರ ಆಸಕ್ತಿಯ ಕಕ್ಷೆಯಿಂದ ಹೊರಗಿನದೆನಿಸುವ ಯಾವ ಕ್ಷೇತ್ರವೂ ಇರಲೇ ಇಲ್ಲ. ಅವರು ವೇದಾಂತದರ್ಶನದ ಬಗೆಗೆ ಮಾತನಾಡುವಷ್ಟೆ ಸೌಲಭ್ಯದಿಂದ, ಅಷ್ಟೇ ಅಧಿಕಾರದಿಂದ ಷೇಕ್‌ಸ್ಪಿಯರ್ ಬಗೆಗೋ ಹೋಮರನ ಬಗೆಗೋ ಕೂಡಾ ಮಾತನಾಡಬಲ್ಲವರಾಗಿದ್ದರು.

ಅಷ್ಟೆಲ್ಲ ರಾಶಿರಾಶಿ ವಿಷಯಗಳಿಗೆ ಅವರು ಮೆದುಳಿನಲ್ಲಿ ಹೇಗೆ ಅವಕಾಶ ಕಲ್ಪಿಸಿಕೊಂಡಿದ್ದರೆಂದು ನೆನೆದರೆ ಆಶ್ಚರ್ಯವಾಗುತ್ತದೆ.

ಅವರ ಸ್ಮರಣಶಕ್ತಿ, ಧಾರಣಾಶಕ್ತಿಗಳಂತೂ ವಿಸ್ಮಯಕಾರಿ. ಒಂದೂವರೆ ಗಂಟೆಯಷ್ಟು ಕಾಲ ನಿರರ್ಗಳವಾಗಿ ಯಾವುದೇ ಜಟಿಲ ವಿಷಯದ ಬಗೆಗೆ ಮಾತನಾಡುವಾಗಲೂ ಅವರು ವಿಸ್ತಾರವಾದ ಟಿಪ್ಪಣಿಗಳನ್ನು ತಮ್ಮೆದುರಿಗೆ ಇರಿಸಿಕೊಳ್ಳುತ್ತಿರಲಿಲ್ಲ. ಹೆಚ್ಚೆಂದರೆ ಯಾವಯಾವ ವಿಷಯಗಳನ್ನು ಸ್ಪರ್ಶಮಾಡಬೇಕೆಂಬ ಅತಿ ಸಣ್ಣ ಪಟ್ಟಿ ಇರುತ್ತಿತ್ತಷ್ಟೆ. ಅವರ 'ಲೆಕ್ಚರ್ ನೋಟ್ಸ್' ಎಂದರೆ ಅವರ ಜ್ಞಾಪಕಶಕ್ತಿಯೇ.

ರಾಯರ ಜ್ಞಾನದಾನದ ಶ್ರದ್ಧೆಯನ್ನು ವಿವರಿಸಲು ಮಾತುಗಳಿಲ್ಲ. 'ನಮಗೆ ಇದನ್ನು ಪಾಠಮಾಡಿ' ಎಂದು ಅವರಲ್ಲಿಗೆ ಹೋದ ಯಾರೂ ಬರಿಗೈಯಾಗಿ ಹಿಂದಿರುಗಿದುದಿಲ್ಲ. ಇಂತಹ ಸಂದರ್ಭಗಳು ಒದಗಿದಾಗ ರಾಯರು ಎಂದೂ ತಮ್ಮ ಆಗಿನ ಸ್ಥಿತಿಯನ್ನಾಗಲಿ ಒತ್ತಡಗಳನ್ನಾಗಲಿ ಮುಂದೆಮಾಡಿದವರಲ್ಲ. ಒಮ್ಮೆ ಭರತನಾಟ್ಯಾಚಾರ್ಯ ವಿ.ಎಸ್. ಕೌಶಿಕರೂ ನಾನೂ ರಾಯರೊಡನೆ ಮಾತುಕತೆಯಲ್ಲಿದ್ದಾಗ ಅದೇಕೋ ಭಾಗವತದ ಪ್ರಸ್ತಾವ ಬಂದಿತು. ನಾವಿಬ್ಬರೂ ರಾಯರಿಗೆ "ನಮಗೆ ಭಾಗವತದ ಮೇಲುಮೇಲಿನ ಪರಿಚಯವನ್ನಷ್ಟೆ ಮಾಡಿಕೊಳ್ಳುವುದು ಸಾಧ್ಯವಾಗಿದೆ. ಆಳಕ್ಕೆ ಹೋಗಿ ಅರ್ಥಮಾಡಿಕೊಳ್ಳುವ ಅವಕಾಶ ಬಂದಿಲ್ಲ" ಎಂದೆವು. ರಾಯರು ತತ್‌ಕ್ಷಣವೇ ಹೇಳಿದರು: "ಅದಕ್ಕೇನಂತೆ! ಒಮ್ಮೆ ಆವರ್ತನ ಮಾಡಿದರೆ ಆಯಿತಲ್ಲ - ಅದಕ್ಕೇನು ಕಷ್ಟ." ರಾಯರ ಒತ್ತಡಗಳು ಗೊತ್ತಿದ್ದ ನಾವು ಅವರನ್ನು ಹೇಗೆ ಕೇಳುವುದೆಂದು ಸಂಕೋಚಪಡುತ್ತಿದ್ದೆವು. ಆದರೆ ಮೂರನೆಯ ದಿನದಿಂದಲೇ ಆರಂಭಿಸುವುದಾಗಿ ರಾಯರು ಘೋಷಣೆ ಮಾಡಿಯೇಬಿಟ್ಟರು. ರಾಯರು ಕೇಳಿದ ಮುಂದಿನ ಪ್ರಶ್ನೆ ನಮ್ಮನ್ನು ಇನ್ನಷ್ಟು ಮೂಕರನ್ನಾಗಿಸಿತು. ಅವರು ಕೇಳಿದರು: "ನಿಮಗೆ ಯಾವ

ಸಮಯ ಅನುಕೂಲವಾಗುತ್ತದೆ?" ಹೆಚ್ಚು ವಿವರಿಸುವ ಆವಶ್ಯಕತೆಯಿಲ್ಲ. ಅದರಂತೆ ನಡೆಯಿತು. ಆ ಕಂಡೆನ್ಸ್ಡ್ ಕೋರ್ಸ್‌ನಲ್ಲಿ ನಾವು ಇದ್ದ ಶ್ರೋತೃಗಳು ಹತ್ತು-ಹನ್ನೆರಡು ಜನ. ಆದರೆ ರಾಯರು ನೂರಾರು ಜನಕ್ಕೆ ಪ್ರವಚನ ಮಾಡುವಷ್ಟೇ ಶ್ರದ್ಧೆಯಿಂದ ಭಾಗವತದ ಬಗೆಗೆ ನಮಗೆ ಬೋಧಿಸಿದರು.

ತತ್ತ್ವನಿಷ್ಠೆ

ಗೀತೆಯಲ್ಲಿ ಹೇಳಿರುವ 'ಅಲೇಪಯೋಗ' ರಾಯರಿಗೆ ಕೇವಲ ಬೋಧನೆಯ ವಿಷಯವಾಗಿರಲಿಲ್ಲ. ತಮ್ಮ ಜೀವನವನ್ನೇ ಅವರು ಹಾಗೆ ರೂಪಿಸಿಕೊಂಡಿದ್ದರು. ಪ್ರಶಸ್ತಿಗಳ ಬೆನ್ನುಹತ್ತಿ ಹೋಗುವುದು ಹಾಗಿರಲಿ. ತಮಗೆ ನ್ಯಾಯವಾಗಿ ಸಲ್ಲಬೇಕಾದುದನ್ನೂ ಅವರು ಎಂದೂ ಬಾಯಿ ಬಿಟ್ಟು ಕೇಳಿದವರಲ್ಲ. ಅದನ್ನೆಲ್ಲ ನೆನೆಯುವಾಗ, ನಮ್ಮ ಸಮಾಜ ಹಲವೊಮ್ಮೆ ಎಷ್ಟು 'ಇನ್‌ಸೆನ್ಸಿಟಿವ್' ಆಗಿರುತ್ತದೆಂದು ಯೋಚಿಸಿದರೆ ಮನಸ್ಸಿಗೆ ಬೇಸರವಾಗುತ್ತದೆ. ಅವರು ನಿಯತವಾಗಿ ಕೆಲಸ ಮಾಡುತ್ತಿದ್ದ ಒಂದು ಸರ್ಕಾರೀ ಸಂಸ್ಥೆ ಅವರಿಗೆ ಸಂಬಳ ಕೊಡುವುದನ್ನೇ ಮರೆತಿತ್ತು! ರಾಯರೂ ಕೊಡಿ ಎಂದು ಕೇಳಲಿಲ್ಲ. ಆಮೇಲೆ ಯಾವಾಗಲೋ ವ್ಯವಸ್ಥಾಪಕರಿಗೆ ಜ್ಞಾನೋದಯವಾಗಿ ರಾಯರಿಗೆ ಸಂಬಳದ ಹಣ ಸಂದಾಯವಾಯಿತು.

ರಾಮಚಂದ್ರರಾಯರ ಬರಹಗಳಲ್ಲಿ ಸ್ವೋಪಜ್ಞ ಪರಾಮರ್ಶನೆಯನ್ನೊಳಗೊಂಡ ಕೃತಿಗಳು ಹೇರಳವಾಗಿವೆ – 'Shankara and Adhyasa-bhashya', 'Shankara - A Psychological Study' ಮೊದಲಾದವು. ಅವಕ್ಕಿಂತ ಹೆಚ್ಚಾಗಿ – ಪಾರಂಪರಿಕ ವಾಙ್ಮಯವನ್ನು ನಮ್ಮ ಕಾಲಕ್ಕೆ ಆಧುನಿಕ ನುಡಿಗಟ್ಟಿನಲ್ಲಿ ಸಂಗ್ರಹಿಸಿಕೊಟ್ಟಿರುವ ಗ್ರಂಥಗಳು ಅವರ ಬರಹಗಳಲ್ಲಿ ವಿಪುಲವಾಗಿ ಇವೆ. ಆದರೆ ಈ ಬರಹಗಳಲ್ಲಿಯೂ ಅವರು ತೋರಿರುವ ಪ್ರತಿಭೆ-ಕೌಶಲಗಳು ಅಸಾಧಾರಣವಾದವು. ಮತ್ತು ಈ ಕೈಂಕರ್ಯವನ್ನು ಅಷ್ಟು ದೊಡ್ಡ ಪ್ರಮಾಣದಲ್ಲಿ ಅಷ್ಟು ಸಮರ್ಥವಾಗಿ ನಡೆಸುವ ಶಕ್ತಿ ಇದ್ದವರು ಬೇರೆ ಇರಲಿಲ್ಲ. ಅವರು ಕಲ್ಪತರು ರಿಸರ್ಚ್ ಅಕಾಡೆಮಿಯ ಮೂಲಕ ಹೊರತಂದ ವೇದವಾಙ್ಮಯ ಸಮೀಕ್ಷೆ ಹಾಗೂ ಹತ್ತಾರು ಕೋಶಗ್ರಂಥಗಳು – ಅವಷ್ಟೇ ಅವರ ಹೆಸರನ್ನು ಸ್ಥಾಯಿಯಾಗಿಸಲು ಸಾಕಾಗುತ್ತವೆ.

* * *

ರಾಯರ ತತ್ತ್ವನಿಷ್ಠೆಗೆ ಒಂದು ನಿದರ್ಶನವೆಂದರೆ ಅವರು ಮಾನಸಿಕ ಆರೋಗ್ಯ ಸಂಸ್ಥೆಯ (ಆಲ್-ಇಂಡಿಯ ಇನ್‌ಸ್ಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್ : ಈಗ 'ನಿಮ್‌ಹಾನ್ಸ್') ಪ್ರಾಧ್ಯಾಪಕತ್ವವನ್ನು ತ್ಯಜಿಸಿದ ರೀತಿ. ಯಾರಾದರೂ ಅಸೂಯೆ ಪಡಬಹುದಾದಂತಹ ಪ್ರತಿಷ್ಠಿತ ಉದ್ಯೋಗ ಅದು ಆಗಿತ್ತು. ಅದರ ಬಗೆಗೆ ರಾಯರಿಗೆ

ಜಿಹಾಸೆ ಬರಲು ಎರಡು ಕಾರಣಗಳು ಇದ್ದವು. ಅವರ ಅರ್ಹತೆಗೆ ಸಹಜವಾಗಿ ಬರಬೇಕಾಗಿದ್ದ ಪದೋನ್ನತಿ ಅವರಿಗೆ ತಾಂತ್ರಿಕ (ಟೆಕ್ನಿಕಲ್) ಕಾರಣಗಳಿಂದಾಗಿ ಸಿಗಲಿಲ್ಲ. ಆದರೆ ಇದಕ್ಕಿಂತ ಮುಖ್ಯ ಕಾರಣವೆಂದರೆ ಆಗಿನ ವ್ಯವಸ್ಥೆಯಲ್ಲಿ ಮನಃಶಾಸ್ತ್ರಪ್ರಕ್ರಿಯೆಗೆ ಪೂರಕಗಳಾದ ಸಮಾಜಶಾಸ್ತ್ರ, ಆಯುರ್ವೇದ, ಯೋಗಶಾಸ್ತ್ರ ಮೊದಲಾದ ನಿಕಟಸಂಬಂಧಿತ ಜ್ಞಾನಕ್ಷೇತ್ರಗಳ ಸಂಯೋಜನೆಗೆ ಅವಕಾಶವನ್ನು ನಿರಾಕರಿಸಲಾಗಿತ್ತು ಎಂಬುದು. ಹಾಗೆ ಬೋಧನೆ-ಚಿಕಿತ್ಸೆಗಳನ್ನು ಸಂಕುಚಿತಗೊಳಿಸುವ ಧೋರಣೆ ರಾಯರಿಗೆ ಸಮ್ಮತವಾಗಲಿಲ್ಲ.

ಇಂತಹ ಇರುಸುಮುರುಸುಗಳು ಅಪರೂಪವಲ್ಲ. ಕೇವಲ ಉದ್ಯೋಗಾರ್ಥಿಗಳಾಗಿ ಸೇರಿದವರು ಇಂತಹ ಸನ್ನಿವೇಶಗಳಿಗೆ ಹೊಂದಿಕೊಂಡಾರು. ಆದರೆ ರಾಮಚಂದ್ರರಾಯರು ಕೆಲವು ಮೌಲ್ಯಗಳಿಗಾಗಿಯೇ ಬದುಕಿದವರು. ಮೌಲ್ಯಗಳ ವಿಷಯದಲ್ಲಿ ರಾಜಿ ಮಾಡಿಕೊಂಡಾದರೂ ಕೇವಲ ಜೀವನನಿರ್ವಹಣೆಗಾಗಿ ರಾಯರಂತಹ ಸ್ವಾಭಿಮಾನಿ ವ್ಯಕ್ತಿ ಆ ಸ್ಥಾನದಲ್ಲಿ ಮುಂದುವರಿದಾರೆಂದು ನಿರೀಕ್ಷಿಸುವುದು ಅಕಲ್ಪನೀಯ ವಾಗಿತ್ತು.

ರಾಯರ ರಾಜೀನಾಮೆಯ ನಿರ್ಧಾರ ಅವರ ನಿಕಟವರ್ತಿಗಳಾಗಿದ್ದ ನಮಗೆಲ್ಲ ಆತಂಕ ತಂದದ್ದಂತೂ ಹೌದು. ಅವರು ಬಂದು ಅದನ್ನು ತಿಳಿಸಿದಾಗ ಡಿ.ವಿ.ಜಿ. ತುಂಬಾ ಖಿನ್ನರಾದರು.

ಆಮೇಲಿನ ದಿನಗಳಲ್ಲಿ ರಾಯರು ವಿವಿಧ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸಯನ್ಸ್, ಆರ್.ವಿ. ಟೀಚರ್ಸ್ ಕಾಲೇಜ್, ಕ್ಯಾಲಿಸನ್ ಕಾಲೇಜ್, ಬೆಂಗಳೂರು ವಿಶ್ವವಿದ್ಯಾಲಯ, ಇತ್ಯಾದಿ. ಅವರು ಅವುಗಳಲ್ಲಿ ಇದ್ದ ಅವಧಿಗಳಲ್ಲಿ ಉನ್ನತಮಟ್ಟದ ಬೋಧಕರಾಗಿ ಅನೇಕ ತಂಡಗಳಿಗೆ ಸ್ಮರಣೀಯ ಮಾರ್ಗದರ್ಶನ ಮಾಡಿದರು. ಏನೇ ಆದರೂ ಅವರ ಅಗಾಧಪ್ರತಿಭೆಯ ಪೂರ್ಣ ಬಳಕೆಗೆ ಅಂತಹ ವ್ಯವಸ್ಥೆಗಳಲ್ಲಿ ಅವಕಾಶವಾಗುವ ಸಂಭವ ಕಡಮೆ ಇತ್ತು. ಹೀಗಾಗಿ ಅವರು ಉದ್ಯೋಗಸ್ಥರಾಗಿದ್ದಾಗಲೂ ತಮ್ಮ ಪ್ರವಚನಗಳನ್ನೂ ಶೋಧಕಾರ್ಯವನ್ನೂ ಲೇಖನಕಾರ್ಯವನ್ನೂ ಸತತವಾಗಿ ನಡೆಸಿದರು. ಈ ಕಾರ್ಯವಾದರೋ ಅವರ ಸ್ವಭಾವಕ್ಕೆ ಒಗ್ಗಿದುದು. ಅವರಿಗೆ ಜೀವನದಲ್ಲಿ ಧನ್ಯತಾಭಾವವನ್ನು ತಂದುಕೊಟ್ಟಿದ್ದುದು ಪಾಠನ-ಲೇಖನಕಾರ್ಯವೇ. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಮನಃಶಾಸ್ತ್ರಪ್ರಾಧ್ಯಾಪಕರಾಗಿದ್ದ ಹೊಣೆಯಿಂದ ತಮ್ಮನ್ನು ಮುಕ್ತಗೊಳಿಸಿಕೊಂಡ ತರುವಾಯವೂ ಮೈಸೂರು ವಿಶ್ವವಿದ್ಯಾಲಯದ ನವಸ್ಥಾಪಿತ ವಿವೇಕಾನಂದ ಚೇರ್ ಮುಖ್ಯಸ್ಥರಾಗಿಯೂ ನ್ಯಾಷನಲ್ ಇನ್‌ಸ್ಟಿಟ್ಯೂಟ್

ಆಫ್ ಅಡ್ವಾನ್ಸ್ಡ್ ಸ್ಟಡೀಸ್‌ನಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿಯೂ ಯೋಗದಾನ ಮಾಡಿದರು.

ವಾಙ್ಮಯ ಪರಿಚರ್ಯೆ

ರಾಮಚಂದ್ರರಾಯರು 1990ರ ದಶಕದಿಂದಾಚೆಗೆ ಆದರಣೀಯ ಜ್ಯೌತಿಷತಜ್ಞ ದೈವಜ್ಞ ಸೋಮಯಾಜಿಯವರಿಂದ ಸಂಚಾಲಿತವಾದ ಕಲ್ಪತರು ರಿಸರ್ಚ್ ಅಕಾಡೆಮಿಯ ಮೂಲಕ ಹೊರತಂದ ಗ್ರಂಥಸರಣಿಗಳು ರಾಯರ ಸಾಧನೆಗೆ ಶಿಖರಪ್ರಾಯವಾದವು ಮಾತ್ರವಲ್ಲ, ಸಾರಸ್ವತಲೋಕಕ್ಕೆ ನಮ್ಮ ಕಾಲದ ಒಂದು ಪ್ರಮುಖ ಕೊಡುಗೆಯಾಗಿವೆ. ಆಗಮಕೋಶ, ಪ್ರತಿಮಾಕೋಶ, ಋಗ್ವೇದದರ್ಶನ – ಈ ಮೂರು ಗ್ರಂಥಶ್ರೇಣಿಗಳು ಅಗಾಧವಾದ ವೇದವಾಙ್ಮಯದ, ಆಗಮಗಳ ಮತ್ತು ಸ್ಥಾಪತ್ಯಾದಿ ಪರಂಪರೆಗಳ ಸಮಗ್ರವೂ ಪ್ರೌಢವೂ ಆದ ಸಮೀಕ್ಷೆಯನ್ನು ಒದಗಿಸಿವೆ. ಈ ಸಾಧನೆಯ ಗಾತ್ರವನ್ನು ನೆನೆದರೆಯೇ ವಿಸ್ಮಯಾದ್ಭುತದ ಅನುಭವವಾಗುತ್ತದೆ. ವಿಶ್ವಕೋಶರೀತಿಯ ಇಂತಹ ದೈತ್ಯಕಾರ್ಯವನ್ನು ನಿರ್ವಹಿಸಬಲ್ಲ ಸಾಮರ್ಥ್ಯವೂ ಬಹುಶಾಸ್ತ್ರಾಧಿಕಾರವೂ ಇದ್ದವರು ಇನ್ನೊಬ್ಬರಿರಲಿಲ್ಲ ಎಂದರೆ ಅದು ಉತ್ಪ್ರೇಕ್ಷೆಯ ಮಾತಾಗುವುದಿಲ್ಲ.

ಸಾಂಪ್ರದಾಯಿಕ ಶಾಸ್ತ್ರಜಗತ್ತಿನಲ್ಲಿ ಪ್ರಫುಲ್ಲಗೊಂಡವರಾದರೂ ರಾಮಚಂದ್ರ ರಾಯರು ಲೇಖನವ್ಯವಸಾಯವನ್ನು ಕೈಗೊಂಡದ್ದು ಸಾರಸ್ವತಲೋಕದ ಭಾಗ್ಯ.

ರಾಯರು ಕನ್ನಡದಲ್ಲಿ ಬರವಣಿಗೆಗೆ ಮನಸ್ಸನ್ನಿತ್ತುದು ವಯಸ್ಸು ಮೂವತ್ತು ದಾಟಿದ ಮೇಲೆಯೇ ಎನಿಸುತ್ತದೆ. 1956ಕ್ಕೆ ಹಿಂದೆ ಇಂಗ್ಲಿಷಿನಲ್ಲಷ್ಟೆ ಹಲಕೆಲವು ಬರವಣಿಗೆಗಳನ್ನು ರಾಯರು ಮಾಡಿದ್ದರು. ಇಂಗ್ಲಿಷಿನ ಬರವಣಿಗೆಯಲ್ಲಿ ಅವರಿಗೆ ಸೌಲಭ್ಯವಿದ್ದುದು ವಿಶೇಷವೇನಲ್ಲ. ಆದರೆ ಕನ್ನಡದಲ್ಲಿಯೂ ಲೇಖನಕಾರ್ಯ ಮಾಡುವುದು ಅವಶ್ಯವೆಂದು ರಾಯರಿಗೆ ಅನಿಸಿದುದು ಬಹುಶಃ 1954–55ರ ವೇಳೆಗೆ. ಅಲ್ಪಕಾಲದಲ್ಲಿ ಅವರು ಒಳ್ಳೆಯ ಸಮರ್ಥವಾದ ಕನ್ನಡ ಬರವಣಿಗೆಯನ್ನು ಸಾಧಿಸಿದರು. ಕರ್ತವ್ಯವೆನಿಸಿದುದನ್ನು ಸಾಧಿಸುವುದರಲ್ಲಿ ಗಾಢ ಪರಿಶ್ರಮವನ್ನು ತೊಡಗಿಸುವ ಅಭ್ಯಾಸದ ಬಲ ರಾಯರಲ್ಲಿ ಇದ್ದಿತು.

* * *

ಜೀವಸಂಸ್ಕಾರ

ವಿಶಾಲ ಗ್ರಂಥಪ್ರಪಂಚದಲ್ಲಿ ರಾಯರ ಮನಸ್ಸಂಚಾರ ನಡೆಯಿತು. ಇಲ್ಲಿ ಹೇಳಬೇಕಾದ ಸಂಗತಿಯೆಂದರೆ – ತಾರುಣ್ಯದ ಕಾಲದಿಂದಲೇ ಅವರು ಆತ್ಮಸಂಸ್ಕಾರಕ್ಕೂ ಮಹತ್ತ್ವ ಕೊಟ್ಟವರು. ಸ್ವನಾಮಧನ್ಯರಾದ ಜಗದ್ಗುರು ಚಂದ್ರಶೇಖರಭಾರತೀ ಸ್ವಾಮಿಗಳನ್ನು ರಾಮಚಂದ್ರರಾಯರು ಅಂತರಂಗದ ಗುರುಗಳಾಗಿ ಸ್ವೀಕರಿಸಿದ್ದುದು

ಆಕಸ್ಮಿಕವಲ್ಲ. ಇದು ಅವರ ಉನ್ನತ ಸಂಸ್ಕಾರದ ದ್ಯೋತಕ. ಈ ಜೀವಗುಣ ಇದ್ದದ್ದರಿಂದಲೇ ರಾಯರಲ್ಲಿ ಪ್ರಬುದ್ಧ ಜೀವನದೃಷ್ಟಿಯೂ ಅಂತರಂಗದ ಪ್ರಶಾಂತಿಯೂ ಸ್ಥಿತಪ್ರಜ್ಞತೆಯೂ ನೆಲಸಿತ್ತೆಂಬುದು ನಿಸ್ಸಂದೇಹ.

ರಾಯರ ಮತಾತೀತ ಉದಾರದೃಷ್ಟಿಯೂ ಅನುದ್ವೇಗವೂ ಬಹುಶಃ ಅವರ ತೀರ್ಥರೂಪ ಕೃಷ್ಣರಾಯರಿಂದ ಬಳುವಳಿಯಾಗಿ ಬಂದಿದ್ದ ಗುಣಗಳು. ರಾಯರು ಸಾಂಪ್ರದಾಯಿಕತೆಯಿಂದ ಕಿಂಚಿದ್ ಭಿನ್ನ ವರ್ತನೆ ಮಾಡಿದಂತಹ ವಿರಳ ಸಂದರ್ಭಗಳಲ್ಲಿ ಎಂದೂ ತಂದೆಯವರು ಮಗನನ್ನು ತೀಕ್ಷ್ಣವಾಗಿ ಆಕ್ಷೇಪಿಸಿದವರಲ್ಲ. ಬಹಳವೆಂದರೆ "ನೀನೇ ಯೋಚಿಸಿ ನಿನಗೆ ಯುಕ್ತ ಕಂಡ ಹಾಗೆ ನಡೆದುಕೋ" ಎನ್ನುತ್ತಿದ್ದರು – ಎಂದು ರಾಮಚಂದ್ರರಾಯರು ಆಗಾಗ ನೆನೆಯುತ್ತಿದ್ದರು.

ಪಾಂಡಿತ್ಯದಲ್ಲಷ್ಟೆ ಅಲ್ಲದೆ ಗುಣಸಮುಚ್ಚಯದಲ್ಲಿಯೂ ತುಂಬಾ ಹಿರಿಯರಾದ ಯಜ್ಞವಿಠಲಾಚಾರ್ಯರು, ಪಾಲಘಾಟ್ ನಾರಾಯಣಶಾಸ್ತ್ರಿಗಳಂತಹ ಗುರುಗಳ ಒಡನಾಟವೂ ರಾಯರ ಅಂತರಂಗವನ್ನು ಪಕ್ವಗೊಳಿಸಿತ್ತು.

ಎಲ್ಲರಿಗೂ ಹಿತವಾಗುವ ರೀತಿಯಲ್ಲಿ ನನ್ನ ವರ್ತನೆ ಇರಬೇಕು – ಎಂಬ ನಡೆ–ನುಡಿಯ ರೀತಿಯನ್ನು ರಾಯರು ತಮ್ಮದಾಗಿಸಿಕೊಂಡಿದ್ದರು. ಈ ಉದಾರತೆಯನ್ನು ರಾಯರು ತುಂಬಾ ಸಂಯಮಾಭ್ಯಾಸದಿಂದ ರೂಢಿಸಿಕೊಂಡಿದ್ದರೆಂದೇನಲ್ಲ. ಇದು ಅವರು ತಲಪಿದ್ದ ಮನಃಪಕ್ವತೆಯ ಸಹಜ ಅಭಿವ್ಯಕ್ತಿಯಷ್ಟೆ ಆಗಿದ್ದಿತು.

ಒಂದೆರಡು ಸಂದರ್ಭಗಳಲ್ಲಿ ರಾಯರ ಅಧ್ಯಯನದ ಮತ್ತು ಶೋಧನೆಯ ಫಲಿತಗಳಾಗಿದ್ದ ನಿಲವುಗಳು ತತ್ತ್ವದೃಷ್ಟಿಯಿಂದ ಸಿಂಧುವೇ ಆಗಿದ್ದರೂ ಆ ನಿಲವುಗಳು ಯಾವುದೋ ಜನವರ್ಗಕ್ಕೆ ಅಸಮಾಧಾನವನ್ನು ಉಂಟುಮಾಡಿದಾಗ ರಾಯರು ಛಲಕ್ಕೆ ಮೊರೆಹೊಗದೆ ಬಹಿರಂಗವಾಗಿ ವಿಷಾದವನ್ನು ವ್ಯಕ್ತಪಡಿಸಿದುದುಂಟು. ಅಕಾರಣವಾಗಿಯಾದರೂ ತಮ್ಮಿಂದ ಇತರರಿಗೆ ನೋವಾಗಿದೆ ಎಂಬ ಭಾವನೆ ಉಂಟಾದಾಗ ರಾಯರು ಉದಾರತೆಯನ್ನು ಮೆರೆದರು.

ಆದರೆ ಇಂತಹ ಪ್ರಕರಣಗಳು ನಡೆದದ್ದು ಒಂದೋ ಎರಡೋ ಅಷ್ಟೆ.

ಇದನ್ನು ಸ್ಮರಿಸಿದುದರ ಉದ್ದೇಶ ರಾಯರು ಪ್ರಶಾಂತಮನಸ್ಕರಾಗಿದ್ದರೆಂಬುದನ್ನು ಸೂಚಿಸುವುದು, ಅಷ್ಟೆ.

ವಿದ್ವತ್ತೆಯ ಅಥವಾ ಶಾಸ್ತ್ರಪರಿಷ್ಕಾರದ ದೃಷ್ಟಿಯಿಂದ ತಮಗೆ ಅಷ್ಟೊಂದು ಸಮರ್ಪಕವಲ್ಲ ಎನಿಸಿದಾಗ ಒಂದೆರಡು ಸಂದರ್ಭಗಳಲ್ಲಿ ರಾಯರು ಸ್ವಲ್ಪ ಅನುದಾರವಾಗಿ ಮಾತನಾಡಿದುದುಂಟು. ಇದು ವಾಸ್ತವವಾಗಿ ರಾಯರ ಸಹಜಸ್ವಭಾವದ ವ್ಯಂಜನೆಯಾಗಿರಲಿಲ್ಲ. ಆದರೂ ರಾಯರು ಅನಂತರ ತಮ್ಮ

ಅನುದಾರತೆಯ ಬಗೆಗೆ ತಾವೇ ನೊಂದುಕೊಂಡರು. ರಾಯರು ಸಮಾಧಾನವನ್ನು ಮೌಲ್ಯವಾಗಿ ಸ್ವೀಕರಿಸಿದ್ದವರು.

ಆಗಲೇ ಹೇಳಿದಂತೆ ಇವು ತೀರಾ ವಿರಳವಾದ ಮತ್ತು ಅಪವಾದಾತ್ಮಕವಾದ ಸಂದರ್ಭಗಳಷ್ಟೆ. ಅಧಿಕ ಸಂದರ್ಭಗಳಲ್ಲಿ ರಾಯರು "ಪರಗುಣಪರಮಾಣೂನ್ ಪರ್ವತೀಕೃತ್ಯ" ಎಂಬಂತೆಯೆ ನಡೆದುಕೊಳ್ಳುತ್ತಿದ್ದುದು ಎಲ್ಲರ ಅನುಭವದಲ್ಲಿದೆ.

ರಾಮಚಂದ್ರರಾಯರು ಆರ್ಷಸಂಸ್ಕೃತಿಯ ಉಚ್ಚಕೋಟಿಯ ಪ್ರತಿನಿಧಿಯಾಗಿದ್ದ ರೆಂಬುದನ್ನು ಸೂಚಿಸುವ ಅವರ ಒಂದು ಗುಣಲಕ್ಷಣ ಅವರು ತಮ್ಮ ಗುರುವರ್ಗ ದವರಲ್ಲಿಯೂ ಅವರು ಹಿರಿಯರೆಂದು ಗೌರವಿಸಿದ್ದ ಡಿ.ವಿ.ಜಿ., ರಾಳ್ಳಪಲ್ಲಿ ಅನಂತಕೃಷ್ಣ ಶರ್ಮಾ ಮೊದಲಾದವರಲ್ಲಿಯೂ ಅವರ ಜೀವನದುದ್ದಕ್ಕೂ ಉಳಿಸಿಕೊಂಡಿದ್ದ ನಿತಾಂತ ಭಕ್ತಿಭಾವ. ವೇದಿಕೆಗಳಲ್ಲಿ ಮಾತ್ರವಲ್ಲ; ಖಾಸಗಿ ಮಾತುಕತೆಯಲ್ಲಿಯೂ ಆ ಹಿರಿಯರ ಪ್ರಸ್ತಾವ ಬಂದಾಗ ರಾಯರ ಮುಖವನ್ನು ಪ್ರಣತಭಾವ ಆವರಿಸಿಬಿಡುತ್ತಿತ್ತು. ರಾಯರ ಆ ವಿನೀತ ಪ್ರವೃತ್ತಿಯನ್ನು ನೆನೆಯುವಾಗ ನಮ್ಮ ಮನಸ್ಸು ಈಗಲೂ ಆರ್ದ್ರವಾಗುತ್ತದೆ. ರಾಯರ ಮೇರುಸದೃಶ ಪಾಂಡಿತ್ಯಕ್ಕೆ ದಾರಿಮಾಡಿದವು ಅವರಲ್ಲಿ ರಕ್ತಗತವಾಗಿದ್ದ ಉದಾತ್ತ ಜೀವನಮೌಲ್ಯಗಳೇ ಎನಿಸುತ್ತದೆ.

* * *

ಸಾಮಾಜಿಕಪ್ರಜ್ಞೆ

ರಾಮಚಂದ್ರರಾಯರ ಕೃತಿಸಂಪದವನ್ನು ಗೋಷ್ವಾರೆಯಾಗಿ ನೋಡುವಾಗ ಒಂದು ಅಂಶ ಎದ್ದುಕಾಣುತ್ತದೆ. ಅವರ ಅಂತರಂಗವು ಸ್ವಾಭಾವಿಕವಾಗಿ ವಿದ್ವತ್ತಿನ ಉನ್ನತ ಮಜಲುಗಳಲ್ಲಿ ವಿಹರಿಸುತ್ತಿದ್ದುದು. ಆದರೆ ಸಾಮಾನ್ಯಜನಕ್ಕೆ ಪ್ರಯೋಜಕಗಳಾದ ಎಸಕಗಳಿಂದ ಅವರು ಎಂದೂ ಹಿಂದೆಸರಿದವರಲ್ಲ. ಇದು ಅವರ ಸಾಮಾಜಿಕಪ್ರಜ್ಞೆಯನ್ನೂ ಪ್ರಬುದ್ಧತೆಯನ್ನೂ ಪ್ರತಿಬಿಂಬಿಸುತ್ತದೆ. ಎಳೆವಯಸ್ಸಿನವರಿಗಾಗಿಯೇ ಪರಿಚಯಪುಸ್ತಿಕೆಗಳನ್ನು ಅವರು ಹತ್ತಾರು ಬರೆದರು. ರಾಷ್ಟ್ರೋತ್ಥಾನ ಪರಿಷತ್ತಿನ ಭಾರತ-ಭಾರತಿ ಮಾಲಿಕೆಗಾಗಿ 'ತ್ಯಾಗರಾಜ', 'ರಾಘವೇಂದ್ರಸ್ವಾಮಿಗಳು', 'ಕೆ. ವೆಂಕಟಪ್ಪ', 'ದೀಪಂಕರ', 'ಬೋಧಿಧರ್ಮ'; ಐಬಿಎಚ್ 'ಕನ್ನಡ ನಾಡು ಮತ್ತು ಕನ್ನಡಿಗರ ಪರಂಪರೆ' ಮಾಲಿಕೆಗಾಗಿ 'ಪುರಂದರದಾಸರು', 'ಕನಕದಾಸರು', 'ಶ್ರೀ ಮಧ್ವಾಚಾರ್ಯರು', 'ಭದ್ರಬಾಹುಸ್ವಾಮಿ', 'ಗೊಮ್ಮಟೇಶ್ವರ', 'ಮಹರ್ಷಿ ದೈವರಾತರು' ಮೊದಲಾದವು. ಅದೇ ಮಾಲಿಕೆಗಾಗಿ 'ಭಾರತದ ದೇವಾಲಯಗಳು', 'ಆಯುರ್ವೇದ', 'ಆಳ್ವಾರರ ನುಡಿಮುತ್ತುಗಳು' ಮೊದಲಾದ ಪರಿಚಯಪುಸ್ತಿಕೆಗಳನ್ನು ನೀಡಿದರು. 'ಬೆಂಗಳೂರಿನ ಕರಗ', 'ಚುಂಚನಕಟ್ಟೆ, ಸಾಲಿಗ್ರಾಮ, ಹನಸೋಗೆ' ಪುಸ್ತಿಕೆಗಳನ್ನೂ ಬರೆದರು.

ತಮ್ಮ ಪ್ರತಿಭೆ–ಪಾಂಡಿತ್ಯಗಳು ಸಮಾಜಕ್ಕೆ ಉಪಕಾರಕಗಳಾಗಬೇಕೆಂಬ ಬಗೆಗೆ ಅವರಲ್ಲಿದ್ದ ಶ್ರದ್ಧೆ ಎಷ್ಟೆಂಬುದನ್ನು ಇದರಿಂದ ಊಹಿಸಬಹುದು.

ಎಸ್. ರಾಧಾಕೃಷ್ಣನ್ ಬರಹ, ಪಿ.ವಿ. ಕಾಣೆ ಅವರ ಧರ್ಮಶಾಸ್ತ್ರ ಇತಿಹಾಸ — ಇವುಗಳ ಅನುವಾದದಲ್ಲಿಯೂ ರಾಯರು ಕೈಂಕರ್ಯ ಸಲ್ಲಿಸಿದುದು ಅವರ ಸದ್ವಿಚಾರಪ್ರಸಾರೋತ್ಸಾಹದ ದ್ಯೋತಕ.

* * *

ಕಲಾಭಿಜ್ಞತೆ

ಸಂಗೀತ, ಚಿತ್ರಕಲೆ, ಶಿಲ್ಪಕಲೆ, ಸ್ಥಾಪತ್ಯ, ಆಗಮಶಾಸ್ತ್ರ - ಈ ವಿಷಯಗಳನ್ನು ಕುರಿತು ಸಮರ್ಥವಾಗಿಯೂ ಶಾಸ್ತ್ರಶುದ್ಧವಾಗಿಯೂ ಕನ್ನಡದಲ್ಲಿ ಬರೆಯಬಲ್ಲವರು ಹಿಂದೆ ಹೆಚ್ಚು ಮಂದಿ ಇರಲಿಲ್ಲ, ಈಗಲೂ ಹೆಚ್ಚು ಮಂದಿ ಇಲ್ಲ. ಈ ಬಹು–ಆಯಾಮ ಕ್ಷೇತ್ರದಲ್ಲಿ ರಾಮಚಂದ್ರರಾಯರಷ್ಟು ವಿಶಾಲವಾಗಿ ಕೃಷಿ ಮಾಡಿದವರು ಬಹುಶಃ ಬೇರೆ ಇರಲಿಲ್ಲ. ರಾಮಚಂದ್ರರಾಯರು ಸ್ವತಃ ವೀಣಾವಾದಕರೂ ಚಿತ್ರಕಾರರೂ ಶಿಲ್ಪಕಾರರೂ ಆಗಿದ್ದುದು ಸುವಿದಿತವೇ ಆಗಿದೆ. ಈ ಹಲವು ಕ್ಷೇತ್ರಗಳಲ್ಲಿ ಅಪೂರ್ವ ಒಳನೋಟಗಳನ್ನೂ ಅವರು ಬೆಳೆಸಿಕೊಂಡಿದ್ದರು. ಅವರು ರಚಿಸಿದ ಚಿತ್ರಗಳು ಮತ್ತು ಶಿಲ್ಪಗಳೇ ಒಂದು ದೊಡ್ಡ ಪ್ರದರ್ಶನಕ್ಕೆ ಆಗುವಷ್ಟು ಇದ್ದವು. ಅವರು ಕನ್ನಡದಲ್ಲಿ ಬರೆಯತೊಡಗಿದ ಆರಂಭಕಾಲದಲ್ಲಿಯೇ 'ನಮ್ಮ ಸಂಗೀತ ಮತ್ತು ವಾಗ್ಗೇಯಕಾರರು' ಪರಿಚಯ ಪುಸ್ತಕವನ್ನು ಬರೆದರು. ಆಮೇಲಿನ ವರ್ಷಗಳಲ್ಲಿ 'ಮೂರ್ತಿಶಿಲ್ಪ: ನೆಲೆ–ಹಿನ್ನೆಲೆ', 'ಭಾರತದ ದೇವಾಲಯ', 'ಸಂಗೀತ: ಇತಿಹಾಸ – ಪರಂಪರೆ', 'ಸಂಪ್ರದಾಯ: ಶಿಲ್ಪಕಲೆ – ಚಿತ್ರಕಲೆ', 'ಗಣಪತಿಯ ರೂಪಗಳು' ಮೊದಲಾದ ನಾಲ್ಕಾರು ಸ್ಮರಣೀಯ ಕೃತಿಗಳು ಅವರಿಂದ ಹೊರಬಂದವು. 1990ರ ದಶಕದಲ್ಲಿ ಅವರು ಇಂಗ್ಲಿಷಿನಲ್ಲಿ ರಚಿಸಿದ 'ಆಗಮಕೋಶ', 'ಪ್ರತಿಮಾಕೋಶ' ಸಂಪುಟಸರಣಿಗಳಂತೂ ಮೈಲಿಗಲ್ಲುಗಳೇ ಆಗಿವೆ. ರಾಮಚಂದ್ರರಾಯರ ಕೃತಿಗಳಲ್ಲಿ ವಿವಿಧ ಕಲೆಗಳಿಗೆ ಸಂಬಂಧಪಟ್ಟವುಗಳದೇ ಗಣನೀಯ ಭಾಗವಾಗಿದೆ ಎನ್ನಬಹುದು.

ಬೆಂಗಳೂರು ವಿಶ್ವವಿದ್ಯಾಲಯದ ಪ್ರಕಟಣ ವಿಭಾಗಕ್ಕಾಗಿ 1975ರಲ್ಲಿ ಅವರು ಬರೆದ ದೊಡ್ಡ ಗಾತ್ರದ (ಕ್ರೌನ್ ಚತುರ್ಥ) 350 ಪುಟಗಳ 'ಮೂರ್ತಿಶಿಲ್ಪ: ನೆಲೆ–ಹಿನ್ನೆಲೆ'; ಅವರ ಪ್ರಧಾನ ಸಂಪಾದಕತ್ವದಲ್ಲಿ 1980ರ ದಶಕದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟಗೊಂಡ 'ಕರ್ನಾಟಕದ ಕಲೆಗಳು' ಸರಣಿಗೆ ಪ್ರವೇಶಿಕೆಯಾಗಿ ಮೊದಲ ಸಂಪುಟಕ್ಕೆ ಅವರು ಬರೆದಿರುವ ದೊಡ್ಡ ಗಾತ್ರದ 200 ಪುಟಗಳಷ್ಟರ 'ಭೂಮಿಕೆ'; – ಇವು ಈ ವಿಷಯಗಳನ್ನು ಕುರಿತ ಸಮಗ್ರ ಆಧಿಕಾರಿಕ ಬರಹಗಳಾಗಿವೆ, ಈ ಕ್ಷೇತ್ರಗಳ ಅಭ್ಯಾಸಿಗಳಿಗೆ ಆಧಾರಪಾಠ್ಯಗ್ರಂಥಗಳೆನಿಸಲು ಅರ್ಹವಾಗಿವೆ.

(ಮೇಲಿನ ಚಿತ್ರ) ತಿರುಪತಿಯ ರಾಷ್ಟ್ರೀಯ ಸಂಸ್ಕೃತಿ ವಿದ್ಯಾಪೀಠ ಆಯೋಜಿಸಿದ್ದ ಆಗಮಗಳನ್ನು ಕುರಿತ ವಿದ್ವದ್‌ಗೋಷ್ಠಿಯಲ್ಲಿ ಪ್ರೊ॥ ಎಸ್. ಕೆ. ರಾಮಚಂದ್ರರಾವ್ (20–22 ಆಗಸ್ಟ್ 2004).

(ಕೆಳಗಿನ ಚಿತ್ರ) ಭಾರತೀಯ ವಿದ್ಯಾ ಭವನದಲ್ಲಿ ಖ್ಯಾತ ಪ್ರವಚನಕಾರ ಮೊರಾರಿಬಾಪು ಅವರಿಂದ ಗಂಗೇಶ್ವರಾನಂದ ವೇದರತ್ನ ಪುರಸ್ಕಾರವನ್ನು ಸ್ವೀಕರಿಸುತ್ತಿರುವ ರಾಮಚಂದ್ರರಾವ್ (2002).

ಅವರ 'ಭರತಮುನಿಯ ನಾಟ್ಯಶಾಸ್ತ್ರ' ಪರಿಚಯಪುಸ್ತಿಕೆಯೂ ಒಂದು ದಿಗ್ದರ್ಶಕ ಕೈಪಿಡಿಯಾಗಿದೆ.

ದೇವಾಲಯ ವಿನ್ಯಾಸದ ಸಾಂಕೇತಿಕತೆಯನ್ನು ಹೀಗೆ ಸ್ಫುಟೀಕರಿಸಿದ್ದಾರೆ:

"ದೈವೀಚೈತನ್ಯವು ಮೇಲೆದ್ದು ಹರಿಯುವಾಗ ಮೂಲಬೇರವಾಗಿ ಮಾರ್ಪಡುತ್ತದೆ, ಗರ್ಭಗೃಹದ ಆಕಾರವಾಗಿ ಹೊರಹೊಮ್ಮುತ್ತದೆ. ಅದು ಕೆಳಗೆ ಹರಿಯುವಾಗ ಕಳಶದ ಮೂಲಕ ಇಳಿದು ವಿಮಾನದ ಮೈಯಲ್ಲಿ ಹೊರಹೊಮ್ಮಿ ಹರಡುತ್ತದೆ. ಗರ್ಭಗೃಹದಡಿಯಲ್ಲಿ ಹುದುಗಿದ್ದಾಗ ಅದರದ್ದು ಗರ್ಭಾವಸ್ಥೆ, ಸುಪ್ತಾವಸ್ಥೆ. ಗರ್ಭಗೃಹದಲ್ಲಿ ಅದು ವ್ಯಕ್ತವಾಗುತ್ತದೆ, ಕಾರ್ಯೋನ್ಮುಖವಾಗುತ್ತದೆ. ಶಿಖರದಲ್ಲಿ ಅದೇ ಚೈತನ್ಯ ಭೌತಿಕನೆಲೆಯನ್ನು ಮೀರಿ ಮೇಲೆದ್ದು ನಿಲ್ಲುತ್ತದೆ; ಕಳಶದ ತುದಿಯಲ್ಲಿ ಈ ಚೈತನ್ಯ ವಿಶ್ವಚೈತನ್ಯದೊಂದಿಗೆ ಬೆರೆಯುತ್ತದೆ.

ಬುಡಮೇಲಾದ ಮರದ ರೂಪಕವನ್ನು ಉಪನಿಷತ್ತುಗಳು ಬಳಸಿಕೊಂಡಾಗ ಅದರ ತಾತ್ಪರ್ಯವೇನೆಂದರೆ ಜಡ-ಚೇತನಗಳ ಈ ಪ್ರಪಂಚದ ಬೇರುಗಳು ಬ್ರಹ್ಮವಸ್ತುವಿನ ಅವ್ಯಕ್ತ ನೆಲೆಯಲ್ಲಿ ಇವೆಯೆಂಬುದು. ಇಲ್ಲಿ ಪ್ರಕೃತನಾದವನು ಮನುಷ್ಯ; ಅಜ್ಞಾನ, ಮೋಹ, ಆಸೆ, ಕರ್ಮಗಳ ಜಾಲದಲ್ಲಿ ಸಿಕ್ಕಿಕೊಂಡವನು. ಅವನ ಬೇರುಗಳು ಭೌತಿಕಶರೀರದಾಚೆ ನೆತ್ತಿಯ ಮೇಲ್ಭಾಗದಲ್ಲಿರುವ ಸಹಸ್ರಾರಚಕ್ರದಲ್ಲಿ ಅಡಗಿವೆ. ಅವನು ಈ ಬುನಾದಿಯಿಂದ ದೂರ ಸರಿದು ಪ್ರಪಂಚದಲ್ಲೆಲ್ಲ ತನ್ನ ವ್ಯವಹಾರವನ್ನು ರೆಂಬೆಕೊಂಬೆಗಳಂತೆ ಹರಡಿಕೊಳ್ಳುತ್ತಾನೆ. ಅವನ ಕರ್ತವ್ಯವು ತನ್ನ ಬೇರುಗಳನ್ನು ತಾನು ಅರಿತುಕೊಳ್ಳುವುದು; ತನ್ನ ಇರವಿಗೆ ಅದನ್ನೇ ಆಸರೆಯಾಗಿ ಇರಿಸಿಕೊಳ್ಳುವುದು. ಈ ಪುರುಷಾರ್ಥದ ಸಾಧನೆಯೆಂದರೆ ಮೇಲೆದ್ದು ಹಾಯುವುದು, ಉತ್ಥಿತಿ."

('ಭಾರತದ ದೇವಾಲಯ: ನೆಲೆ, ಹಿನ್ನೆಲೆ')

ಸಂಗೀತ ಮತ್ತು ಕಲೆಗಳ ಕ್ಷೇತ್ರದ ಹಲವರು ಅಪೂರ್ವ ಸಾಧಕರ ಜೀವನಪರಿಚಯ ಪುಸ್ತಿಕೆಗಳನ್ನೂ ರಾಯರು ನೀಡಿದ್ದಾರೆ. 'ಕೆ. ವೆಂಕಟಪ್ಪ', 'ಸಂಗೀತರತ್ನ ಮೈಸೂರು ಟಿ. ಚೌಡಯ್ಯ', 'ಪುರುಷಸರಸ್ವತಿ ರಾಳ್ಳಪಲ್ಲಿ ಅನಂತಕೃಷ್ಣಶರ್ಮಾ', 'ಸಂಗೀತಸಾಮ್ರಾಜ್ಞಿ ಎಂ.ಎಸ್. ಸುಬ್ಬುಲಕ್ಷ್ಮಿ' - ಇವು ಹೃದ್ಯವಾದ, ಗಮನಿಸಬೇಕಾದ ಬರಹಗಳು.

ಸಾಮಾನ್ಯವಾಗಿ ಹೆಚ್ಚಿನವರು ಗಮನಿಸದಿರುವ ಆದರೆ ಅತ್ಯಂತ ಸಂಗತವೂ ಮುಖ್ಯವೂ ಆದ ಒಂದು ಅಂಶಕ್ಕೆ ರಾಮಚಂದ್ರರಾಯರು ಗಮನ ಸೆಳೆದಿದ್ದಾರೆ:

"ಕಲೆ, ಸಾಹಿತ್ಯ, ನಾಟಕ, ವಾಸ್ತುಶಿಲ್ಪ, ಮನೋರಂಜನೆ, ಕ್ರೀಡೆ, ಜಾನಪದ – ಎಲ್ಲವೂ ಆಗಮಪರಂಪರೆಯಿಂದಲೇ ಉಗಮವಾಗಿರುವುದು. ಆಗಮತತ್ತ್ವವೇ

ಭಾರತೀಯಸಂಸ್ಕೃತಿಗೆ ಸಮನ್ವಯದ ಪರಿಮಳವನ್ನು ಕೊಟ್ಟಿರುವುದು. ಅದು ಅನೇಕ ಸಿದ್ಧರಿಗೆ, ಪ್ರವೀಣರಿಗೆ, ಸಾಧುಗಳಿಗೆ ಸ್ಫೂರ್ತಿಯಿತ್ತಿದೆ."

('ಭಾರತೀಯ ಸಂಸ್ಕೃತಿಯ ತಿರುಳು')

ದಾಸಸಾಹಿತ್ಯ ಅವಲೋಕನ

ರಾಮಚಂದ್ರರಾಯರ ದಾಸಸಾಹಿತ್ಯ ಅವಲೋಕನ-ಸಂಪಾದನ ಕೃತಿಗಳು ಕರ್ನಾಟಕ ಸಂಸ್ಕೃತಿಗೇ ವಿಶಿಷ್ಟವಾದ ಈ ವಾಙ್ಮಯವನ್ನು ವ್ಯವಸ್ಥಿತರೀತಿಯಲ್ಲಿ ಲಭ್ಯವಾಗಿಸಿವೆ. ಕಿರಿವಯಸ್ಸಿನವರನ್ನು ಉದ್ದೇಶಿಸಿದ ಅವರ 'ಪುರಂದರದಾಸರು', 'ಕನಕದಾಸರು' ಸಂಕ್ಷಿಪ್ತ ಜೀವನಕಥನಗಳು 1970ರ ಸುಮಾರಿಗೇ ಪ್ರಕಟವಾಗಿದ್ದವು. 'ವಿಜಯನಗರದ ಈಚಿನ ದಾಸಸಾಹಿತ್ಯ' ಕುರಿತ ಅವರ ಪ್ರೌಢ ಶೋಧಪ್ರಬಂಧವು 1987ರಲ್ಲಿ ಪ್ರಕಟಗೊಂಡಿತು. ಆ ಪ್ರಬಂಧವು ಕನ್ನಡದಲ್ಲಿ ಅದಕ್ಕೆ ಹಿಂದಿನ ಅರವತ್ತು ವರ್ಷಗಳಲ್ಲಿ - ಎಂದರೆ 20ನೇ ಶತಮಾನದ ಮಧ್ಯದ ದಶಕಗಳಲ್ಲಿ - ಹರಿದಾಸ ಸಾಹಿತ್ಯ ಕ್ಷೇತ್ರದಲ್ಲಿ ಶ್ರಮಿಸಿದ್ದವರ ಸ್ಮರಣೆಯನ್ನೂ ಒಳಗೊಂಡಿರುವುದು ವಿಶೇಷವಾಗಿ ಗಮನಿಸಬೇಕಾದದ್ದು. ಅವರ ಪ್ರಧಾನ ಸಂಪಾದಕತ್ವದಲ್ಲಿ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದಿಂದ 1980ರ ದಶಕದಲ್ಲಿ ಪ್ರಕಟಗೊಂಡ 'ಪುರಂದರ ಸಾಹಿತ್ಯ ದರ್ಶನ' ನಾಲ್ಕು ಸಂಪುಟಗಳ ಕೃತಿಶ್ರೇಣಿಯಂತೂ ವಿಶಾಲ ಜನಾದರಣೆ ಪಡೆದುಕೊಂಡಿದೆ. (1) ಜೀವನದರ್ಶನ, (2) ಅಧ್ಯಾತ್ಮದರ್ಶನ, (3) ಸಮಾಜದರ್ಶನ, (4) ಕೀರ್ತನದರ್ಶನ; - ಎಂಬ ನಾಲ್ಕು ವಿಭಾಗಗಳಲ್ಲಿ ವಿಂಗಡಣೆಗೊಂಡಿರುವ ಪುರಂದರದಾಸ ವಾಙ್ಮಯ ಇಷ್ಟು ಅಚ್ಚುಕಟ್ಟಾಗಿ, ಆಕರ್ಷಕವಾಗಿ, ಸಹಾಯಕ ಟಿಪ್ಪಣಿಗಳ ಸಮೇತ ಬೇರೆ ಯಾವ ಆವೃತ್ತಿಯಲ್ಲಿಯೂ ದೊರೆತಿಲ್ಲ. ಮೊದಲ ಸಂಪುಟಕ್ಕೆ ರಾಮಚಂದ್ರರಾಯರು ನೀಡಿರುವ 55 ಪುಟಗಳಷ್ಟು ವಿಸ್ತಾರವಾದ ಪ್ರಸ್ತಾವನೆ ಪುರಂದರದಾಸರ ಜೀವನವನ್ನೂ ಸಾಂದರ್ಭಿಕತೆಯನ್ನೂ ರಚನೆಗಳ ಸ್ವರೂಪವನ್ನೂ ಇತಿಹಾಸ ಶೋಧದೃಷ್ಟಿಗೆ ಕಾಣುವ ಹಲವಾರು ಸಂದಿಗ್ಧಾಂಶಗಳನ್ನೂ ದಾಖಲೆ ಮಾಡಿದೆ. ಅತಿವೈಭವೀಕರಣ, ಅನುದಾರ ಅವಗಣನೆ — ಎರಡರಿಂದಲೂ ದೂರ ಉಳಿದು ಸಹೃದಯ ಸಮೀಕ್ಷೆಯನ್ನು ನೀಡಿರುವುದು ರಾಮಚಂದ್ರರಾಯರ ಔನ್ನತ್ಯಕ್ಕೆ ಸಲ್ಲುವಂತಿದೆ.

ದಾಸವಾಙ್ಮಯದ ಆದರಣೀಯತೆಯನ್ನು ಕುರಿತ ರಾಮಚಂದ್ರರಾಯರ ಈ ಮಾತುಗಳು ಸ್ಮರಣೀಯವಾಗಿವೆ:

"ಹರಿದಾಸರು ಕನ್ನಡವನ್ನು ಹಿಡಿದುದು ಇಲ್ಲಿ ಮುಖ್ಯವಾದುದು. ಭಾಗವತರೂ ಪುರಾಣಿಕರೂ ಮೂಲ ಸಂಸ್ಕೃತವನ್ನೇ ಹೇಳಿ ಕನ್ನಡದಲ್ಲಿ ಅರ್ಥವನ್ನು ವಿವರಿಸುತ್ತಿದ್ದರು.

ಪಂಡಿತರಂತೂ ಸಂಸ್ಕೃತದಲ್ಲಿಯೇ ವಾಕ್ಯಾರ್ಥಗಳನ್ನೂ ವ್ಯಾಖ್ಯಾನಗಳನ್ನೂ ನಡೆಸುತ್ತಿದ್ದರು. ಕನ್ನಡವು ಮಡಿಗೆ ಬಾರದು ಎನ್ನುವ ಹಟ ಅವರಲ್ಲಿತ್ತು. ಹರಿದಾಸರಲ್ಲಿ ಆದ್ಯರು ಸಂಸ್ಕೃತ ಪಂಡಿತರೇ ಆಗಿದ್ದರೂ ಜನಗಳಿಗೆ ತಿಳಿಯಹೇಳುವ ಕೆಲಸಕ್ಕೆ ಕನ್ನಡವನ್ನು ಧಾರಾಳವಾಗಿ ಬಳಸಿದರು.

ಕನ್ನಡದ ಪುಣ್ಯ, ಈ ಹಿರಿಯರ ಆದರ್ಶ ಸಫಲವಾಯಿತು; ಕನ್ನಡದಲ್ಲಿ ಹರಿದಾಸ ಸಾಹಿತ್ಯದ ಬೆಳೆ ಯಥೇಚ್ಛವಾಗಿ ಬಂದಿತು. ಪುರಂದರದಾಸರ ಕೈಯಿಂದ ಕನ್ನಡದ ಜಾಯಮಾನ ಪ್ರೌಢವಾಯಿತು; ಮುಂದೆ ಸಾರೋದ್ಧಾರವಾಗಿ ಬೆಳೆಯಿತು. ವೇದಾಂತದ ಪ್ರಮೇಯಗಳು, ಶಾಸ್ತ್ರಗ್ರಂಥಗಳ ಸಾರ, ಆಚಾರ್ಯರ ಬೋಧೆ - ಇವೆಲ್ಲ ತಿಳಿಗನ್ನಡದಲ್ಲಿ ಸಾಮಾನ್ಯಮನುಷ್ಯರಿಗೆ ಎಟಕುವಂತೆ ಮಾಡಿದವರು ಹರಿದಾಸರು. ಮೇಲುಮಟ್ಟದ ಸಂಸ್ಕೃತಿ ಕೆಳಗಿನ ಮಟ್ಟಗಳಲ್ಲಿಯೂ ಹರಿಯುವಂತೆ ಮಾಡಲು ಅವರು ಶ್ರಮಿಸಿದರು.

"ಒಂದು ಕಾಲದಲ್ಲಿ ನಮ್ಮ ನಾಡಿನ ಹಿರಿಯರು ಬೆಳೆಸಿದ ಹರಿದಾಸ ಪಂಥ, ಅದರಿಂದ ಹೊರಹೊಮ್ಮಿದ ಅಪೂರ್ವಸಾಹಿತ್ಯ — ಎರಡೂ ನಾಡಿಗೆ ಬಲವನ್ನೂ ಕಳೆಯನ್ನೂ ಒದಗಿಸಿದುವು ಎನ್ನುವುದು ಹೆಮ್ಮೆಯನ್ನೂ ಸಮಾಧಾನವನ್ನೂ ತರುವ ನೆನಪು."

('ವಿಜಯನಗರದ ಈಚಿನ ದಾಸಸಾಹಿತ್ಯ')

ದಾರ್ಶನಿಕ ಪರಂಪರೆಯ ಪ್ರತಿಪಾದನೆ

ನಮ್ಮ ಸಾಂಸ್ಕೃತಿಕ ಮತ್ತು ದಾರ್ಶನಿಕ ಪರಂಪರೆಯ ಸ್ಫುಟೀಕರಣದ ಶ್ರೇಷ್ಠ ಕೃತಿಗಳನ್ನು ರಾಮಚಂದ್ರರಾಯರು ನೀಡಿದ್ದಾರೆ. ನೆನೆಯಬೇಕಾದ ಸಂಗತಿಯೆಂದರೆ ಶಂಕರಾಚಾರ್ಯ, ರಾಮಾನುಜಾಚಾರ್ಯ, ಮಧ್ವಾಚಾರ್ಯ — ಈ ಮೂವರು ಆಚಾರ್ಯರ ದರ್ಶನಗಳನ್ನು ಕುರಿತೂ ರಾಯರು ಬೋಧಪ್ರದ ಕೃತಿಗಳನ್ನು ರಚಿಸಿದ್ದಾರೆ. ಅವಕ್ಕೆ ಪೂರಕವಾದ ರೀತಿಯ 'ಶಂಕರವಾಣಿ' ಮೊದಲಾದ ಸಂಕಲನಗಳನ್ನೂ ನೀಡಿದ್ದಾರೆ. ಅವರು ಮಾನಸಿಕ ಗುರುಗಳಾಗಿ ಆರಾಧಿಸುತ್ತಿದ್ದ ಶ್ರೀ ಚಂದ್ರಶೇಖರಭಾರತೀ ಸ್ವಾಮಿಗಳನ್ನು ಕುರಿತ ಅವರ 'ಶಾರದಾಪೀಠದ ಮಾಣಿಕ್ಯ' ಕೃತಿಯಂತೂ ಅತ್ಯಂತ ಆರ್ದ್ರವಾದ ಆತ್ಮನಿವೇದನೆಯೇ ಆಗಿದೆ.

ಒಂದು ದೃಷ್ಟಿಯಿಂದ ಅದಕ್ಕೆ ಪೂರಕವೆನ್ನಬಹುದಾದದ್ದು ಎಲ್ಲ ಸಂಪ್ರದಾಯಗಳಿಂದ ಅತೀತರಾದ ಮತ್ತು 'ಉನ್ಮತ್ತ'ರಂತೆ ಕಾಣುವ, ಆತ್ಮಾನುಭವೈಕಸ್ಥಿತಿಯಲ್ಲಿ ರಮಿಸುವ 'ಅವಧೂತ'ರ ಚರ್ಯೆಯನ್ನು ಕುರಿತ ಪರಿಚಯಗ್ರಂಥ. ಅವಧೂತತ್ವಕ್ಕೆ ವಿಶಿಷ್ಟವಾದ 'ಸಾಕ್ಷಿಭಾವ' ಕುರಿತು ರಾಯರು ನೀಡಿರುವ ನಿರೂಪಣೆ ಮನನೀಯವಾಗಿದೆ.

ಅವರ ಒಂದು ಪ್ರಮುಖ ಬೋಧನಕ್ಷೇತ್ರವಾಗಿದ್ದ ಮನೋವಿಜ್ಞಾನ, ಆಯುರ್ವೇದ ಕುರಿತ ಅವರ ಬರಹಗಳೂ ವಿಪುಲವಾಗಿವೆ. ಹಲವಾರು ಆಯುರ್ವೇದಪರಿಚಯ ಪುಸ್ತಿಕೆಗಳಲ್ಲದೆ 'ನಾಡೀ ವಿಜ್ಞಾನ', 'ಆತ್ರೇಯವೆಂಕಟೇಶಕೃತ ವೈದ್ಯಹಿತೋಪದೇಶ', 'ಪರಾಮಾನಸಶಾಸ್ತ್ರ', 'ಅತೀಂದ್ರಿಯ ಅನುಭವ' ಇತ್ಯಾದಿ ಪೂರಕ ಸಾಹಿತ್ಯವನ್ನೂ ನೀಡಿದ್ದಾರೆ.

ತಮ್ಮ ಒಂದು ಪ್ರಮುಖ ಆಸಕ್ತಿಕ್ಷೇತ್ರವಾಗಿದ್ದ ಬೌದ್ಧಧರ್ಮ, ಜೈನಧರ್ಮಗಳಿಗೆ ಸಂಬಂಧಿಸಿದಂತೆ ಹಲವು ಉತ್ಕೃಷ್ಟಕೃತಿಗಳನ್ನು ರಾಯರು ನೀಡಿದ್ದಾರೆ: 'ಟಿಬೆಟ್ಟಿನ ಯೋಗಿ ಮಿಲರೇಪ', 'ಬೋಧಿಯ ಬೆಳಕಿನಲ್ಲಿ', 'ವರ್ಧಮಾನ ಮಹಾವೀರ', 'ವೈಶಾಖಪೂರ್ಣಿಮೆ ಸಂಬೋಧಿಯ ಸಂದರ್ಭ', ಮೊದಲಾದವು.

ನಮ್ಮ ಪರಂಪರೆಯ ಉಜ್ಜ್ವಲ ಸಾಧಕರಾದ ಅಭಿನವಗುಪ್ತ, ಆನಂದಕುಮಾರಸ್ವಾಮಿ ಮೊದಲಾದವರ ವಾಙ್ಮಯದ ಪರಾಮರ್ಶನಾತ್ಮಕ ಪರಿಚಯಗಳನ್ನು ರಾಯರು ನೀಡಿರುವುದು ತುಂಬಾ ಉಪಕಾರಕವಾಗಿದೆ.

* * *

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ರಾಜ್ಯ ಲಲಿತಕಲಾ ಅಕಾಡೆಮಿ ಪ್ರಶಸ್ತಿ, ರಾಜ್ಯ ಸಂಗೀತ-ನೃತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಶಿಲ್ಪಕಲಾ ಅಕಾಡೆಮಿ ಪ್ರಶಸ್ತಿ, ಗಾಯನ ಸಮಾಜದ 'ಸಂಗೀತ ಕಲಾರತ್ನ' ಪ್ರಶಸ್ತಿ, ಗಂಗೇಶ್ವರಾನಂದ ವೇದರತ್ನ ಸಂಮಾನ, ಶ್ರೀಶೈಲಮಠದಿಂದ 'ವಿದ್ಯಾಲಂಕಾರ', ತಿರುಪತಿ ಡೀಮ್ಡ್ ಯೂನಿವರ್ಸಿಟಿಯಿಂದ 'ವಾಚಸ್ಪತಿ', ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವ 'ಡಿ.ಲಿಟ್.' ಡಾಕ್ಟೊರೇಟ್ ಪದವಿ – ಹೀಗೆ ಹಲವಾರು ಉನ್ನತ ಸಂಮಾನಗಳು ರಾಮಚಂದ್ರರಾಯರನ್ನು ಅರಸಿ ಬಂದದ್ದು ಸ್ವಾಭಾವಿಕವೇ ಆಗಿದೆ. ಆದರೆ ಅವರ ಉನ್ನತಿಗೆ ಸರಿಗಟ್ಟುವ ಪ್ರಶಸ್ತಿ ಯಾವುದಾದರೂ ಇದ್ದೀತೆ ಎಂಬುದೇ ಸಂದೇಹಾಸ್ಪದವೆನ್ನಬೇಕಾಗಿದೆ.

* * *

ರಾಮಚಂದ್ರರಾಯರು ಶ್ರುತಿ-ಸ್ಮೃತಿ-ಇತಿಹಾಸ ಪರಿಚಾಯಕಗಳಾದ ಹಲವಾರು ಗ್ರಂಥಗಳನ್ನು ಬರೆದಿದ್ದಾರೆ. ಇವುಗಳ ಸಂಗತತೆಯನ್ನು ಅವರವೇ ಮಾತುಗಳಲ್ಲಿ ಸೂಚಿಸಬಹುದು:

"ಭಾರತೀಯ ಸಮಾಜದ ಇತಿಹಾಸ ಒಮ್ಮೆಲೇ ಸೂಚ್ಯವೂ ಹೊಂದಾಣಿಕೆಯದೂ ಆದ ವಿಶಾಲ ಸಾಂಸ್ಕೃತಿಕ ಚೌಕಟ್ಟನ್ನು ಒಳಗೊಂಡಿದೆ. ಅದನ್ನು ಇಡೀ

ಸಮಾಜಕ್ಕೆ ಮಾತ್ರವಲ್ಲ, ಉಪಸಂಸ್ಕೃತಿಗಳಿಗೂ ಒದಗಿಸಲಾಗಿತ್ತು. ಈ ಚೌಕಟ್ಟು ಜೀವಗುಣವೃದ್ಧಿಕಾರಕವಾದ ಜೀವನಶೈಲಿಯನ್ನು ತೋರಿಸುವಂಥದು. ಅದು ವಿಶ್ವವ್ಯವಸ್ಥೆ ಹಾಗೂ ಜೀವರಾಶಿಗಳ ಮತ್ತು ಪರಿಸರವ್ಯವಸ್ಥೆಗಳ ಏಕತೆ (ಋತ) ಹಾಗೂ ಮಾನವನಾಗಿ ತನ್ನ ಕುಟುಂಬ, ತನ್ನ ಸಮುದಾಯ ಹಾಗೂ ಮಾನವಜೀವಿಯಾದ ತನ್ನ ಬಗ್ಗೆಯೆ ಇರುವ ಹೊಣೆಗಾರಿಕೆ (ಋಣ) — ಈ ಎರಡು ವಿಚಾರಗಳನ್ನು ಆಧರಿಸಿತ್ತು. ಈ ವಿಚಾರಧಾರೆಯಿಂದ ಹೊಮ್ಮಿದ್ದು ಸಾಮಾನ್ಯಜೀವನದ ಅಂತಿಮ ಮೌಲ್ಯಗಳ ಪರಿಕಲ್ಪನೆ. ('ಪುರುಷಾರ್ಥ'ವೆಂದರೆ 'ಬಾಳಿನ ಗುರಿ'.)"

– ('ಭಾರತೀಯ ಸಂಸ್ಕೃತಿ: ತಿರುಳು ಮತ್ತು ಪರಂಪರೆ')

ರಾಮಚಂದ್ರರಾಯರ ಕೃತಿಗಳಲ್ಲಿ ವ್ಯಾಖ್ಯಾನರೂಪವಾದವು 'ಈಶಾವಾಸ್ಯ ಉಪನಿಷತ್ತು', 'ಶ್ರೀಸೂಕ್ತ'. ಸಂಕ್ಷಿಪ್ತ ಪರಾಮರ್ಶನಕೃತಿಗಳು: 'ವಾಲ್ಮೀಕಿಯ ಪ್ರತಿಭೆ', 'ಚಿತ್ರರಾಮಾಯಣ', 'ಗೀತೆಗೊಂದು ಕೈಪಿಡಿ' ಮೊದಲಾದವು.

ರಾಮಚಂದ್ರರಾಯರ ಪ್ರತಿಪಾದನೆಯ ವಿನೂತನತೆಯನ್ನೂ ಅಂತರ್ದೃಷ್ಟಿಯನ್ನೂ ಸೂಚಿಸಲು ಭಗವದ್ಗೀತೆಯ ವೈಶಿಷ್ಟ್ಯ ಕುರಿತ ಅವರ ವ್ಯಾಖ್ಯೆಯನ್ನು ಸ್ಮರಿಸಬಹುದು:

"ಗೀತೆಯು ಕರ್ಮ, ಯಜ್ಞ, ಯೋಗ, ಸಂನ್ಯಾಸ ಮೊದಲಾದ ಬಳಕೆಯ ಮಾತುಗಳಿಗೆಲ್ಲ ಹೊಸ ತಿರುವನ್ನು ನೀಡುತ್ತದೆ. ಹೊಸದೆಂದರೆ ಕರ್ಮಕಾಂಡದ ಚೌಕಟ್ಟಿಗೆ ಹೊಸತು ಅಷ್ಟೆ; ಇವೆಲ್ಲ ಸಾಂಪ್ರದಾಯಿಕವಾದ ವೈದಿಕ ಪ್ರತಿಮೆಗಳೇ. ಕಾಲದೇಶಾಧೀನವಾಗಿ ಸಂಕುಚಿತ ಅರ್ಥವನ್ನು ಪಡೆದುಕೊಂಡು ಸಾರ್ಥಕತೆಯನ್ನು ಕಳೆದುಕೊಂಡಿದ್ದ ಕಲ್ಪನೆಗಳಿಗೆ ಮತ್ತೆ ವಿಶಾಲವಾದ, ವ್ಯಾಪಕವಾದ, ಸಾರ್ವಜನೀನವಾದ ಅರ್ಥವನ್ನು ತುಂಬಿಸಿ ಅವನ್ನು ಸಂಸ್ಕೃತಿಸಂದರ್ಭದಲ್ಲಿ ಪುನಶ್ಚೇತನಗೊಳಿಸಿದ್ದು ಗೀತೆಯಲ್ಲಿನ ಅಪೂರ್ವತೆ."

('ಗೀತೆಗೊಂದು ಕೈಪಿಡಿ')

* * *

ಪುರುಷಾರ್ಥ ಪ್ರಕಟೀಕರಣ

ಹಲವಾರು ವಿಶಿಷ್ಟ ವಿಷಯಗಳ ವಿಶ್ಲೇಷಣಾತ್ಮಕ ಸಮೀಕ್ಷೆಗಳನ್ನು ರಾಯರು ನೀಡಿದ್ದಾರೆ: 'ಪ್ರಾಚೀನ ಸಂಸ್ಕೃತಿ', 'ಕನ್ನಡನಾಡಿನ ಧಾರ್ಮಿಕ ಪರಂಪರೆ', 'ವೇದವಾಙ್ಮಯ ಮತ್ತು ಉಪನಿಷತ್ತುಗಳು', 'ಬ್ರಾಹ್ಮಧರ್ಮ – ಬ್ರಹ್ಮೋಪಾಸನೆ', ಮೊದಲಾದವು.

ವಿಸ್ತಾರವೂ ಜಟಿಲವೂ ಆದ ವಿಷಯದ ತಾತ್ತ್ವಿಕ ಹಿನ್ನೆಲೆಯನ್ನು ನೀಡಿ ವಿಷಯದ ಹೃದಯವನ್ನು ಅಡಕವಾಗಿ ನಿರೂಪಿಸುವುದು ರಾಯರ ಕ್ರಮ. ಉದಾಹರಣೆಗೆ:

"ಧರ್ಮವನ್ನು ತಿಳಿಯಪಡಿಸುವುದು, ಧರ್ಮವನ್ನು ಪಡೆದುಕೊಳ್ಳಲು ನೆರವಾಗುವುದು, ಧರ್ಮವನ್ನು ಕುರಿತಂತೆ ವಿಚಾರಮಾಡುವುದು ವೇದದಿಂದ ನಾವು ನಿರೀಕ್ಷಿಸುವ ಪ್ರಯೋಜನಗಳು.

ಧರ್ಮವೆಂದರೇನು? ಬದುಕಿನಲ್ಲಿ ನಾವು ಕಾಲು ಜಾರುವಂತಾದಾಗ, ಎಡವಿ ಬೀಳುವಂತಾದಾಗ, ನಮಗೆ ಆಸರೆಯಾಗಿ ನಿಂತು, ನಾವು ಕಾಲು ಜಾರದಂತೆ, ಬೀಳದಂತೆ ನಮ್ಮನ್ನು ಹಿಡಿದೆತ್ತಿ ನಿಲ್ಲಿಸುವುದು – ಎಂಬುದು ಧರ್ಮವೆಂಬ ಮಾತಿನ ಮೂಲಾರ್ಥ ('ಧೃಜ್ ಧಾರಣೇ'). ಅಭ್ಯುದಯಕ್ಕೆ ನೆರವಾಗುವುದು ಧರ್ಮ, ಶ್ರೇಯಸ್ಕರವಾದುದು ಎಂಬ ವಿವರಣೆಯಿದೆ ('ಯತೋಽಭ್ಯುದಯನಿಃಶ್ರೇಯಸ ಸಿದ್ಧಿಃ ಸ ಧರ್ಮಃ', ವೈಶೇಷಿಕಸೂತ್ರ).

ಧರ್ಮವೆಂಬ ಕಟ್ಟುಪಾಡನ್ನು ಒಪ್ಪಿಕೊಳ್ಳುವವರು ಆಸ್ತಿಕರು. ಇವರೆಲ್ಲರೂ ವೇದದ ಪ್ರಾಮಾಣ್ಯವನ್ನು ಅಂಗೀಕರಿಸುತ್ತಾರೆ. ಏಕೆಂದರೆ ವೇದದ ಹಿನ್ನೆಲೆಯಿಲ್ಲದೆ ಧರ್ಮವು ತೋರಿಕೊಳ್ಳಲಾರದು, ವೇದದ ಬಲವಿಲ್ಲದೆ ಅದು ನಮ್ಮನ್ನು ಅಭ್ಯುದಯದತ್ತ ನಡೆಸಲಾಗದು."

('ವೇದವಾಙ್ಮಯ ಮತ್ತು ಉಪನಿಷತ್ತುಗಳು')

ಸಂಕೇತಾರ್ಥ ಸ್ಫುಟೀಕರಣದ ಆಶಯದ ರಾಯರ ಕೃತಿಗಳು – 'ಗಣಪತಿಯ ಕಲ್ಪನೆ', 'ಶ್ರೀಕೃಷ್ಣನ ವ್ಯಕ್ತಿತ್ವ', 'ಆಂಜನೇಯ ಕಲ್ಪನೆಯಲ್ಲಿ ಸ್ವಾರಸ್ಯ' ಮೊದಲಾದವು.

ಶ್ರೀಕೃಷ್ಣಚಾರಿತ್ರದ ಬಗೆಗೆ ಜಿಜ್ಞಾಸುಗಳಲ್ಲಿ ಸಾಮಾನ್ಯವಾಗಿ ತಲೆದೋರುವ ಶಂಕೆಗಳಿಗೆ ಸಮಾಧಾನ ನೀಡಿ ಸಮಗ್ರೀಕರಿಸುವ ರಾಮಚಂದ್ರರಾಯರ ವಿಧಾನವು ಅತ್ಯಂತ ಸ್ಪೃಹಣೀಯವೆನಿಸುತ್ತದೆ :

"ಮನುಷ್ಯನಾಗಿ ಅವತಾರದ ತಾತ್ಪರ್ಯವನ್ನು ಮೂಡಿಸಿಕೊಂಡವನು ಕೃಷ್ಣ. ಭಗವಂತನ ಸಂಬಂಧವನ್ನು ಬಿಟ್ಟರೂ, ಅವನ ಮನುಷ್ಯತ್ವದಲ್ಲಿಯೇ ಒಂದು ವಿಶೇಷವಾದ ಕಳೆಯಿದೆ, ಲೋಕಕ್ಕೆ ಉಪಕಾರಕವಾದ ಪ್ರಯೋಜನವಿದೆ.

ಮನುಷ್ಯನಾಗಿಯೇ ಇದ್ದು ಮಾನುಷವ್ಯವಹಾರದಲ್ಲೇ ತೊಡಗಿರುತ್ತ, ಮನುಷ್ಯ ಸಾಧ್ಯವಾದುದನ್ನೇ ಮಾಡಿ ಮನುಷ್ಯರಲ್ಲೆಲ್ಲ ಶ್ರೇಷ್ಠನೆನಿಸಿಕೊಂಡವನು ಕೃಷ್ಣ.

ಅನವರತವಾದ ಇಂಥ ಆಧ್ಯಾತ್ಮಿಕ ಸಾಧನೆಯಿಂದಲೇ ಮನುಷ್ಯ-ಕೃಷ್ಣನು ಲೋಕೋತ್ತರವಾದ ಕಾರ್ಯವನ್ನು ಸಾಧಿಸುವುದಾದದ್ದು. ಋಗ್ವೇದದ ಋಷಿಯಾಗಿ, ಸಾತ್ವತಪಂಥದ ಪ್ರವರ್ತಕನಾಗಿ ಬದುಕಿ ಬಾಳಿದ ಕೃಷ್ಣನು ಧರ್ಮಸಂಸ್ಥಾಪನೆಗಾಗಿ ಮಹಾಭಾರತದುದ್ದಕ್ಕೂ ಹೆಣಗಾಡಿ, ಲೋಕಕ್ಕೆ ಉಪಕಾರಕವಾದ ಭಗವದ್ಗೀತೆಯನ್ನೂ ಹೊರಹೊಮ್ಮಿಸಿದ. ಭಗವದ್ಗೀತೆ ಲೋಕಕ್ಕೆ ದೊರೆತದ್ದು ಕೃಷ್ಣನ ಈ ಸಹಜವ್ಯವಹಾರದಲ್ಲಲ್ಲ;

ತನ್ನ ಸಾಧನೆಯಿಂದ ಅಳವಡಿಸಿಕೊಂಡ ದಿವ್ಯವಿಭೂತಿ ಅವನ ಚೇತನವನ್ನು ಮೇಲೆತ್ತಿ ಬೆಳಗಿಸಿದಾಗ ಗೀತಾಶಾಸ್ತ್ರ ಕಾಣಿಸಿಕೊಂಡಿತು. ಅರ್ಜುನವಿಷಾದದ ಸಂದರ್ಭದಲ್ಲಿ ಕೃಷ್ಣನ ಚೇತನ ಹೀಗೆ ದಿವ್ಯವಿಭೂತಿಯ ವಶವಾಯಿತು; 'ಯೋಗ-ಯುಕ್ತ'ನಾದ ಅವನು ಗೀತೆಯನ್ನು ಹೇಳುವುದಾಯಿತು.

ಗೀತೆಯನ್ನು ಹೇಳುವ ಕಾಲಕ್ಕೆ ಮನುಷ್ಯನಾಗಿದ್ದ ಕೃಷ್ಣ ಮನುಷ್ಯಮಾತ್ರದವನಾಗಿರಲಿಲ್ಲ. ಎಲ್ಲ ಮಾನವರ ಸ್ವಭಾವದ ಒಳಪದರದಲ್ಲಿ ಅಡಗಿರುವ ಪ್ರಜ್ಞೆಯೊಂದು ಮೇಲೆದ್ದು ಬಂದು, ತಾತ್ಕಾಲಿಕವಾದ ಅರಿವನ್ನು ಕೊಚ್ಚಿಸಿಕೊಂಡು ಹೋಗಿದ್ದಿತು. ಆಗ ಅವನು ದೇವಕೀಪುತ್ರನಾದ, ಅರ್ಜುನನ ಮಿತ್ರನಾದ, ಅವನ ರಥಕ್ಕೆ ಸಾರಥಿಯಾದ ಕೃಷ್ಣನಾಗಿರಲಿಲ್ಲ; ವಿಶ್ವವ್ಯಾಪಕವಾದ ಪರಮಾರ್ಥತತ್ತ್ವದ ಪ್ರತಿನಿಧಿಯಾಗಿದ್ದ."

('ಶ್ರೀಕೃಷ್ಣನ ವ್ಯಕ್ತಿತ್ವ')

ನಿಷ್ಕೃಷ್ಟವಾಗಿರುವುದರ ಜೊತೆಗೆ ಸದ್ಯಃಸಂವಹನಶೀಲವೂ ಆದ ಈ ಜಾಡಿನ ವಿಶ್ಲೇಷಣೆಗಳಿಂದ ರಾಮಚಂದ್ರರಾಯರ ಬರಹಗಳು ನಿಬಿಡವಾಗಿವೆ.

ಧಾರ್ಮಿಕೇತಿಹಾಸ, ಆಗಮಾದಿ ಶಾಸ್ತ್ರಗಳು – ಈ ಎರಡೂ ಆಯಾಮಗಳನ್ನು ಒಳಗೊಂಡ ಅವರ ಬರಹಗಳು ಹಲವಿವೆ: 'ತಿರುಪತಿ ತಿಮ್ಮಪ್ಪ' (ವಿಸ್ತೃತ ಸಮಗ್ರ ಆವೃತ್ತಿ, 2006), 'ಭಾರತದ ದೇವಾಲಯ: ನೆಲೆ-ಹಿನ್ನೆಲೆ'. 'ಭಾರತೀಯ ದೇವಾಲಯಗಳ ಜಾನಪದ ಮೂಲ' (1981), 'ಅಣ್ಣಪ್ಪದೈವ' (1983, 2002) ಮೊದಲಾದವು. ಹತ್ತಿರಹತ್ತಿರ ಐವತ್ತು ವರ್ಷಗಳ ಅವಧಿಯಲ್ಲಿ ಹಲವು ಹಂತಗಳಲ್ಲಿ ಬೆಳೆದು 2006ರಲ್ಲಿ ಈಗಿನ ವಿಸ್ತೃತರೂಪ ಪಡೆದುಕೊಂಡ 'ತಿರುಪತಿ ತಿಮ್ಮಪ್ಪ' ರಾಮಚಂದ್ರರಾಯರ ಒಂದು ವಿಶಿಷ್ಟ ಶೋಧಗ್ರಂಥ. ತಿರುಪತಿ ಕ್ಷೇತ್ರದ ಬಗೆಗೆ, ದೈವದ ಬಗೆಗೆ ಇಷ್ಟು ಸಮಗ್ರವಾದ ಮತ್ತು ಸಾಹಿತ್ಯಗುಣದ ದೃಷ್ಟಿಯಿಂದಲೂ ಮೇಲ್ಮಟ್ಟದ್ದಾದ ಗ್ರಂಥ ಬಹುಶಃ ಬೇರಾವ ಭಾಷೆಯಲ್ಲಿಯೂ ಬಂದಿರಲಾರದು.

ಇಲ್ಲಿಯ ಪರಿಮಿತಿಯಲ್ಲಿ ಹೆಸರಿಸಿದವಲ್ಲದೆ ಹತ್ತಾರು ಬಿಡಿ ಕೃತಿಗಳೂ ರಾಮಚಂದ್ರರಾಯರಿಂದ ಹೊಮ್ಮಿವೆ. ಸಣ್ಣದಾಗಲಿ ದೊಡ್ಡದಾಗಲಿ – ರಾಮಚಂದ್ರರಾಯರ ಯಾವುದೇ ಬರಹವನ್ನು ಕೈಗೆತ್ತಿಕೊಂಡರೂ ಅದರಲ್ಲಿ ಪ್ರತಿಪಾದನೆಯ ಅನನ್ಯತೆಯನ್ನೂ ಅಪೂರ್ವ ಒಳನೋಟಗಳನ್ನೂ ಕಾಣಬಹುದು. ಉದಾಹರಣೆಗೆ: 'ವಿವಾಹಪದ್ಧತಿಗಳು' ಪುಸ್ತಿಕೆಯಲ್ಲಿ ಭಾರತೀಯ ವಿವಾಹವಿಧಿಗಳನ್ನು ಮಾತ್ರವಲ್ಲದೆ ಮುಸಲ್ಮಾನರ ಮತ್ತು ಕ್ರೈಸ್ತರ ವಿವಾಹಪದ್ಧತಿಗಳನ್ನೂ ಅವರು ಪರಿಚಯಿಸಿದ್ದಾರೆ.

ಸಂಕ್ಷಿಪ್ತವಾಗಿ ಹೇಳಬೇಕೆಂದರೆ: ಪಾರಂಪರಿಕ ಜ್ಞಾನರಾಶಿಗೂ ಇಪ್ಪತ್ತನೇ ಶತಮಾನದ ಜಿಜ್ಞಾಸುಗಳಿಗೂ ನಡುವಣ ಸೇತುವೆಯಾದವರು ರಾಮಚಂದ್ರರಾಯರು.

ಅಧ್ಯಯನನಿರತ

ಅವರು ಈ ದೃಷ್ಟಿಯಿಂದ ಶೇಖರಿಸಿಕೊಟ್ಟು ಹೋಗಿರುವ ವಾಙ್ಮಯರಾಶಿಯು ಸದಾಕಾಲಕ್ಕೂ ತವನಿಧಿಯಾಗಿ ಉಳಿಯುತ್ತದೆಂದು ನಿರ್ವಿವಾದವಾಗಿ ಹೇಳಬಹುದು.

'ಭಾರತೀಯ ಸಂಸ್ಕೃತಿಯ ತಿರುಳು' ಪ್ರಬಂಧದ ಉಪಸಂಹಾರದಲ್ಲಿ ರಾಮಚಂದ್ರರಾಯರು ಭಾಗವತೋಕ್ತ 'ಆದಿವೃಕ್ಷ'ವನ್ನು ಪ್ರಸ್ತಾವಿಸಿ ಆಡಿರುವ ಮಾತುಗಳ ಸಂದೇಶಾತ್ಮಕತೆಯು ಮನನೀಯವಾಗಿದೆ:

"ಅಂತಹ ಮಹಾವೃಕ್ಷದ ಅಡಿಯಲ್ಲಿ ನಾವು ಬಾಳಿದ್ದೇವೆ. ಪೀಳಿಗೆಯ ನಂತರ ಪೀಳಿಗೆ, ದಿನವಾದ ಮೇಲೆ ದಿನ ಬಾಳಿದ್ದೇವೆ. ಸಾವಿರಾರು ವರ್ಷ ಬಾಳಿದ್ದೇವೆ. ಈ ಮರವನ್ನು ಕತ್ತರಿಸಿ ಬೀಳಿಸಲು ಹೊರಗಿನಿಂದ ಪ್ರಯತ್ನಗಳು ನಡೆದಿವೆ. ಒಳಗೇ ಮರವನ್ನು ಬಾಡಿಸಿ ಒಣಗಿಸಲು ಸಾಯಿಸಲು ರೋಗ ತಟ್ಟಿದೆ. ಆದರೆ ಇದು ಜೀವನವೃಕ್ಷ, ಮತ್ತೆಮತ್ತೆ ಹೊಸದಾಗುವ ವಿಶೇಷಸಾಮರ್ಥ್ಯವುಳ್ಳ ಮರ; ಸದಾ ಕಾಲ ನಿಲ್ಲಬಲ್ಲ ಮರ; ಸುಳ್ಳಿನಿಂದ ನಿಜಕ್ಕೆ, ಕತ್ತಲಿನಿಂದ ಬೆಳಕಿಗೆ ಮತ್ತು ಸಾವಿನಿಂದ ಸಾವಿಲ್ಲದ ಬಾಳಿಗೆ ನಾವು ಸಾಗಲು ನೆರವಾಗುವ ವೃಕ್ಷ."

* * *

ದೇವರು ರಾಮಚಂದ್ರರಾಯರಿಗೆ ನೌಕರಿಯ ನಿರಂತರತೆಯನ್ನು ಕರುಣಿಸಿರಲಿಲ್ಲ. ಅವರು ಸ್ವಾಭಿಮಾನಧನರಾಗಿದ್ದುದೂ ಇದಕ್ಕೆ ಒಂದು ಕಾರಣವಿದ್ದೀತು. ಆದರೆ ದೇವರು ಒಂದು ವಿಷಯದಲ್ಲಿ ರಾಮಚಂದ್ರರಾಯರಿಗೆ ಕೊರತೆ ಮಾಡಲಿಲ್ಲ. ಅದೇಂದರೆ ಗೃಹಸೌಖ್ಯ. ವೈದಿಕ ಸಾಂಪ್ರದಾಯಿಕ ಮನೆತನದಿಂದ ಬಂದು ಹಾಲಿನಲ್ಲಿ ಮಧು ಸೇರಿದಂತೆ ರಾಯರ ಅರ್ಧಾಂಗಿಯಾದ (ವಿವಾಹ: 1959) ರಮಾದೇವಿಯವರೂ ಆ ಸುಂದರ ದಾಂಪತ್ಯದ ಪುಷ್ಪಗಳಾದ ಡಾ. ಉಮಾ ಮತ್ತು ಡಾ. ಸುದರ್ಶನ ಅವರೂ ಎಲ್ಲ ರೀತಿಗಳಲ್ಲಿಯೂ ರಾಯರಿಗೆ ಸಹಕಾರಿಗಳಾಗಿ ಮನೆಯನ್ನು ತುಂಬಿಸಿದರು. ಹೆಚ್ಚಿನ ಸಾರ್ವಜನಿಕ ಸಮಾರಂಭಗಳಿಗೆ ರಾಮಚಂದ್ರರಾಯರು ಶ್ರೀಮತಿಯವರೊಡನೆಯೇ ಬರುತ್ತಿದ್ದ ದೃಶ್ಯ ನಮ್ಮಲ್ಲನೇಕರ ಮನಸ್ಸಿನಲ್ಲಿ ಅಚ್ಚೊತ್ತಿದೆ. ಏನೇನೋ ಅನಿಶ್ಚಿತತೆಗಳ ನಡುವೆ ರಾಯರ ಮನಸ್ಸಿನ ನೆಮ್ಮದಿಯನ್ನು ಉಳಿಸಿ ಅವರ ಸತತ ಸಾಧನೆಯನ್ನು ಸಾಧ್ಯವಾಗಿಸಿದ ರಾಯರ ಕುಟುಂಬಸದಸ್ಯರಿಗೆ ನಮ್ಮೆಲ್ಲರ ಗೌರವಪೂರ್ಣ ನಮನ ಸಲ್ಲುತ್ತದೆ. ರಾಯರ ಮನೆವಾರ್ತೆಯ ಅನುರೂಪ ಸೌಹಾರ್ದಮಯ ಪರಿಸರವನ್ನು ವರ್ಷಗಳುದ್ದಕ್ಕೂ ನಾವು ನೋಡಿ ಆನಂದಿಸಿದ್ದೇವೆ. ಅಂತಹ ಭಾಗ್ಯ ಎಲ್ಲರಿಗೂ ದೊರೆಯುವಂಥದಲ್ಲ. ಈ ವಿಷಯದಲ್ಲಿ ರಾಯರು ಭಗವಂತನ ವಿಶೇಷ ಕೃಪೆಗೆ ಪಾತ್ರರಾದವರು. ಕುಟುಂಬಸದಸ್ಯರು ಅವರ ಅಧ್ಯಯನ-ಪ್ರವಚನ-ಲೇಖನ ಕಾರ್ಯಗಳಿಗೆ ಅತ್ಯಲ್ಪ ತೊಡಕೂ ಉಂಟಾಗದಂತೆ ನಡೆದುಕೊಂಡರು. ಇನ್ನು ರಾಯರಂತೂ ಎಂದೂ ಬೇರೆಯವರಿಗೆ ಭಾರವಾಗದಂತೆ ನಡೆದುಕೊಳ್ಳುವ ಜೀವಗುಣ

ಇದ್ದವರು. ತಮ್ಮ ವೈಯಕ್ತಿಕ ಒಲುಮೆಗಳನ್ನಾಗಲಿ ಅನಿಸಿಕೆಗಳನ್ನಾಗಲಿ ಎಂದೂ ಬೇರೆಯವರ ಮೇಲೆ ಹೇರಿದವರಲ್ಲ. ಅವರು ಬೆಳೆಸಿಕೊಂಡಿದ್ದ ಈ ಜೀವನಸೂತ್ರವನ್ನು ಮನೆಯವರ ವಿಷಯದಲ್ಲಿಯೂ ಅನುಸರಿಸಿದರು. ಹೀಗಿದ್ದುದರಿಂದ ಅವರ ಗೃಹಸ್ಥಜೀವನವೂ ಸಾರಸ್ವತಕಾರ್ಯವೂ ವರ್ಷಗಳುದ್ದಕ್ಕೂ ಸುಸೂತ್ರವಾಗಿ ನಡೆಯಿತು. ಅವರ ಮಾಧುರ್ಯಮಯ ಗೃಹಸ್ಥಜೀವನದ ಫಲಾನುಭವಿಯಾಯಿತು ಇಡೀ ಸಮಾಜ.

3. ವೇದಾಂತ ಸುಬ್ಬಯ್ಯ

ಇದು ನಡೆದದ್ದು ಬಹುಶಃ 1930ರ ದಶಕದ ಅಂತ್ಯಭಾಗದಲ್ಲಿ. ಮೈಸೂರಿನ ಸೀತಾವಿಲಾಸ ಛತ್ರದಲ್ಲಿ ಆಗಿಂದಾಗ ಪ್ರವಚನಾದಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿದ್ದುದು ವಾಡಿಕೆ. ಅಂತಹ ಒಂದು ಸಂದರ್ಭದಲ್ಲಿ ಸ್ವಾಮಿಗಳೊಬ್ಬರು ದ್ವೈತಮತವನ್ನು ಪ್ರಖರವಾಗಿ ಪ್ರತಿಪಾದಿಸಿದರು. ಅದೇನೂ ವಿಶೇಷವಲ್ಲ. ಆದರೆ ಅವರು ಸಾಂದರ್ಭಿಕವಾಗಿ ಅದ್ವೈತಪ್ರಸ್ಥಾನದ ಬಗೆಗೆ ಅನುದಾರವಾಗಿ ಮಾತನಾಡಿದಂತೆ ತೋರುತ್ತದೆ. ಹೆಚ್ಚಿನ ಸಂದರ್ಭಗಳಲ್ಲಿ ಇಂತಹ ಪ್ರಸಂಗಗಳ ಬಗೆಗೆ ಜನರು ಹೆಚ್ಚೇನು ಚಿಂತಿತರಾಗುವುದಿಲ್ಲ. ಆದರೆ ಶಾಸ್ತ್ರದ ಗೌರವಕ್ಕೆ ಅಪಚಾರವಾಗಬಾರದೆಂಬ ಕಳಕಳಿ ತುಂಬಿದ್ದ ಮಧ್ಯವಯಸ್ಕರೊಬ್ಬರು ವೇದಿಕೆಯನ್ನೇರಿ ಸ್ವಾಮಿಗಳು ಮಾಡಿದ್ದ ಮಂಡನೆಗಳನ್ನು ಶಾಸ್ತ್ರಗ್ರಂಥಗಳ ಮತ್ತು ತರ್ಕದ ಆಧಾರದಿಂದ ಪರಾಮರ್ಶನೆ ಮಾಡಿ ಅದ್ವೈತದರ್ಶನದ ಸ್ವೀಕಾರ್ಯತೆಯನ್ನು ಸಮರ್ಥವಾಗಿ ಎತ್ತಿಹಿಡಿದರು. ಇವರ ವ್ಯುತ್ಪತ್ತಿಯೂ ವಾದಕೌಶಲವೂ ಎಲ್ಲರ ಪ್ರಶಂಸೆಯನ್ನು ಗಳಿಸಿಕೊಂಡವು.

ಹಾಗೆಂದು ಈತ ಯಾವುದೇ ಸಾಂಪ್ರದಾಯಿಕ ಪೀಠದ ವಲಯಕ್ಕೆ ಸೇರಿದ್ದವರೇನಲ್ಲ; ವೇದಾಂತಪ್ರಸಾರಕ್ಕೆ ತಮ್ಮನ್ನು ಅರ್ಪಿಸಿಕೊಂಡಿದ್ದ ಸ್ವತಂತ್ರ ಸಜ್ಜನರು. ಬಹುಮಟ್ಟಿಗೆ ಸ್ವಂತ ಚಿಂತನೆ-ಅಧ್ಯಯನಗಳಿಂದ ದರ್ಶನಜ್ಞಾನ ಪಡೆದುಕೊಂಡಿದ್ದವರು.

ಈ ಘಟನೆಯ ಬಗೆಗೆ ಅವರಿವರಿಂದ ಕೇಳಿದ ಆಗಿನ ಶೃಂಗೇರಿ ದಕ್ಷಿಣಾಮ್ನಾಯ ಪೀಠಾಧಿಪತಿಗಳಾಗಿದ್ದ ಶ್ರೀ ಚಂದ್ರಶೇಖರಭಾರತೀ ಮಹಾಸ್ವಾಮಿಗಳು ಹರ್ಷಗೊಂಡು ತಮಗೆ ಪೂರ್ವಪರಿಚಿತರೇ ಆಗಿದ್ದ ಇವರನ್ನು ಕರೆಯಿಸಿಕೊಂಡು ಅಭಿನಂದಿಸಿ "ನೀವು ತೇಕಲ್ ಸುಬ್ಬಯ್ಯ ಅಲ್ಲ; ವೇದಾಂತದ ಸುಬ್ಬಯ್ಯ" ಎಂದು ಮೆಚ್ಚಿಕೆಯ ಮಾತನಾಡಿದರು.

ಅದುವರೆಗೆ 'ತತ್ತ್ವಪದಗಳ ಶಾಸ್ತ್ರಿಗಳು' ಎಂದೆಲ್ಲ ಜನರಲ್ಲಿ ಎಲ್ಲೆಡೆ ಪರಿಚಿತರಾಗಿದ್ದ ತೇಕಲ್ ಸುಬ್ಬಯ್ಯಶಾಸ್ತ್ರಿಗಳಿಗೆ 'ವೇದಾಂತ ಸುಬ್ಬಯ್ಯ' ಎಂಬ ಹೆಸರು ಪ್ರಚಲನೆಗೊಂಡದ್ದು ಹೀಗೆ. ಆಮೇಲಿನ ದಿನಗಳಲ್ಲಿ ಅವರಿಗೆ ಈ ಹೆಸರೇ ಸ್ಥಿರವಾಯಿತು. ಇದು ಅನ್ವರ್ಥವೂ ಆಗಿತ್ತೆಂದು ಹೇಳುವ ಆವಶ್ಯಕತೆಯಿಲ್ಲ.

ಇಪ್ಪತ್ತನೇ ಶತಮಾನದ ನಡುಭಾಗದ ಐವತ್ತು ವರ್ಷಗಳ ಬೆಂಗಳೂರು

ಸುತ್ತುಮುತ್ತಲ ಸಾಂಸ್ಕೃತಿಕ ಜೀವನವನ್ನು ಶ್ರೀಮಂತಗೊಳಿಸಿದ್ದ ಮಹನೀಯರ ಪಂಕ್ತಿಯಲ್ಲಿ ವೇದಾಂತ ಸುಬ್ಬಯ್ಯನವರಿಗೆ ಗಣ್ಯಸ್ಥಾನ ಸಲ್ಲುತ್ತದೆ.

ಸ್ವಾಮಿಗಳು ಸುಬ್ಬಯ್ಯನವರಿಗೆ ಇತ್ತ ಆದೇಶ: ಅವರಿಗೆ ಒಳ್ಳೆಯ ವೇದಾಂತಜ್ಞಾನವೂ ವೇದಾಂತಪ್ರಸಾರಾಸಕ್ತಿಯೂ ಇರುವುದರ ಹಿನ್ನೆಲೆಯಲ್ಲಿ ಅವರು ಬೆಂಗಳೂರಿನಲ್ಲಿ ಮಾತ್ರವಲ್ಲದೆ ಬೇರೆ ಊರು-ಗ್ರಾಮಗಳಿಗೂ ಯಥಾವಕಾಶ ಪ್ರವಾಸ ಮಾಡಿ ಶಾಂಕರವೇದಾಂತ ಪ್ರಚಾರ ಮಾಡುವುದು ಒಂದು ಒಳ್ಳೆಯ ಸಮಾಜಸೇವೆ ಆಗುತ್ತದೆ - ಎಂದು. ಇದು ಸುಬ್ಬಯ್ಯನವರಿಗೂ ಅಭಿರುಚಿಯ ಚಟುವಟಿಕೆಯೇ ಆಗಿತ್ತು. ಹೀಗೆ ಅನೇಕ ವರ್ಷಕಾಲ ಅವರು ರಾಜ್ಯದ ಬೇರೆಬೇರೆ ಕಡೆಗಳಲ್ಲಿ ಪ್ರವಾಸ ಮಾಡಿ ಪ್ರವಚನಗಳನ್ನೂ ಸಂಕೀರ್ತನ-ತತ್ತ್ವಪದ ಕಾರ್ಯಕ್ರಮಗಳನ್ನೂ ನಡೆಸಿದರು. ಅವರ 'ಶಂಕರಗುರುವಿಲಾಸ' ಪ್ರವಚನಗಳು ಅತಿಶಯ ಜನಪ್ರಿಯತೆಯನ್ನು ಪಡೆದುಕೊಂಡಿದ್ದವು. ಅವರು ನಡೆಸುತ್ತಿದ್ದ ಶಾಂಕರಸಪ್ತಾಹಗಳು ದೊಡ್ಡಪ್ರಮಾಣದಲ್ಲಿ ಜನರನ್ನು ಆಕರ್ಷಿಸುತ್ತಿದ್ದವು.

* * *

ಇಪ್ಪತ್ತನೇ ಶತಮಾನದ ಪೂರ್ವಾರ್ಧದ ಬೆಂಗಳೂರು

ಬೆಂಗಳೂರು ಹಾಗೂ ಅದರ ಆಚೀಚೆಯ ಭಾಗಗಳು ಕಳೆದ ಸುಮಾರು ಮುನ್ನೂರು ವರ್ಷಗಳಿಂದಲೇ ಸಂಸ್ಕೃತಿಸಂಪನ್ನವೆಂದು ವಿಶೇಷ ಗಮನ ಸೆಳೆದಿದ್ದವು. ವಿವಿಧ ಕಾರಣಗಳಿಂದ ಆಂಧ್ರದ ಕಡೆಯಿಂದ ವಲಸೆ ಬಂದ ಅನೇಕ ವಿದ್ವಾಂಸರು ಈಗ್ಗೆ ಮೂರು ಶತಮಾನಗಳ ಹಿಂದಿನಿಂದ ಈ ಪ್ರಾಂತದ ಹತ್ತಾರೆಡೆ ನೆಲಸಿದ್ದುದು, ಮೈಸೂರು ರಾಜಮನೆತನದಿಂದ ವಿದ್ವಾಂಸರಿಗೆ ದೊರೆಯುತ್ತಿದ್ದ ಹೆಚ್ಚಿನ ರಾಜಾಶ್ರಯ, ವಿದೇಶೀ ಪ್ರಭುತ್ವ ಇದ್ದಿತಾದರೂ ಹೆಚ್ಚಿನ ಕ್ಷೋಭೆಯಿಲ್ಲದ ತಿಳಿಹರಿವಿನಂತಹ ಸಾಮಾಜಿಕ ಪರಿಸರ - ಇವೆಲ್ಲ ಸಾಂಸ್ಕೃತಿಕ ಜೀವಂತಿಕೆಗೆ ಇಂಬುಗೊಟ್ಟಿರಬೇಕು. ಹತ್ತೊಂಬತ್ತನೇ ಶತಮಾನದ ಕೊನೆಯ ಭಾಗದಿಂದೀಚೆಗೆ ಇನ್ನೂ ಕೆಲವು ಪೂರಕ ಸನ್ನಿವೇಶಗಳು ಏರ್ಪಟ್ಟವು: ಶೃಂಗೇರಿ ಶ್ರೀ ಶಿವಾಭಿನವ ನೃಸಿಂಹಭಾರತೀ ಸ್ವಾಮಿಗಳಿಂದ ಒಂದು ಪ್ರಮುಖ ವೇದಾಂತಾನುಸಂಧಾನಕೇಂದ್ರವಾಗಿ ಬೆಂಗಳೂರಿನಲ್ಲಿ ಶಂಕರಮಠದ ಸ್ಥಾಪನೆ (1907), ಶ್ರೀರಾಮಕೃಷ್ಣ-ವಿವೇಕಾನಂದ-ಪ್ರೇರಿತ ಅಭಿಯಾನ, ದಿವ್ಯಜ್ಞಾನ ಸಮಾಜದ (ಥಿಯೊಸಾಫಿಕಲ್ ಸೊಸೈಟಿ) ಪ್ರಸರಣ, ಬ್ರಹ್ಮಸಮಾಜಪ್ರೇರಿತ ಕಾರ್ಯಾವಳಿ, ಇತ್ಯಾದಿ. ಈ ಪರಿಸರ ಅನುಕೂಲತೆಯಿಂದಾಗಿ ವೇದಾಂತಾಸಕ್ತಿಯೂ ಹರಿಕಥಾಪ್ರವಚನಾದಿಗಳೂ ಭಜನೆ-ಸತ್ಸಂಗ ಕೇಂದ್ರಗಳೂ ಅರಳಿ ಹಿಂದಿಗಿಂತ ಹೆಚ್ಚು ಜನರನ್ನು ಆಕರ್ಷಿಸತೊಡಗಿದ್ದವು. ಈ ಸಾಂಸ್ಕೃತಿಕ ಲವಲವಿಕೆ ಹಲವು ದಶಕಗಳ ಕಾಲ ಮುಂದುವರಿಯಿತು. ಸಂತರೂ ಸಂಕೀರ್ತನಕಾರರೂ ಹಿಂದಿನ ಎಂದರೆ

ಹತ್ತೊಂಬತ್ತನೇ ಶತಮಾನದ ಕೊನೆಯ ದಶಕಗಳಲ್ಲಿಯೂ ಇದ್ದರಾದರೂ, ಇಪ್ಪತ್ತನೇ ಶತಮಾನದ ಪೂರ್ವಾರ್ಧದಲ್ಲಿ ಹೆಚ್ಚು ವಿಶಾಲ ಜನವರ್ಗವನ್ನು ಈ ಆಧ್ಯಾತ್ಮಿಕ-ಧಾರ್ಮಿಕ ಕಲಾಪಗಳು ತಮ್ಮತ್ತ ಸೆಳೆದುಕೊಳ್ಳತೊಡಗಿದ್ದವು. 1930ರ ದಶಕದ ಆರಂಭದ ವರ್ಷಗಳಲ್ಲಿ 'ಕರ್ನಾಟಕ ಭಕ್ತಿವಿಜಯ' ಪ್ರಸಿದ್ಧ ಗ್ರಂಥವನ್ನು ರಚಿಸಿ ಪ್ರಕಟಿಸಿ ಕೀರ್ತಿಶಾಲಿಗಳಾದ ಪ್ರವಚನಕಾರ ಬೇಲೂರು ಕೇಶವದಾಸರು ಸಂಕೀರ್ತನ ಶಿಕ್ಷಣ ನೀಡುವ ಶಾಲೆಗಳನ್ನು ಮೊತ್ತಮೊದಲ ಬಾರಿಗೆ ಸ್ಥಾಪಿಸಿದ್ದರು. ಆ ದಿನಗಳ ಪ್ರಮುಖ ಸಾರ್ವಜನಿಕ ಕಾರ್ಯಕ್ರಮಗಳೆಂದರೆ ಹರಿಕಥೆ ಸಂಕೀರ್ತನೆ ಪ್ರವಚನಗಳು.

ಆ ಕಾಲಖಂಡದ ಹಳೆಮೈಸೂರಿನ ಸಾಮಾಜಿಕ ಪರಿಸರ ಹೇಗೆ ಇದ್ದಿತೆಂಬುದನ್ನು ಸೂಚಿಸಲು ಮೇಲಣ ವಿವರಗಳನ್ನು ಪ್ರಸ್ತಾವಿಸಬೇಕಾಯಿತು.

1940ರ ದಶಕದ ಈ ಚಿತ್ರವನ್ನು ಕಲ್ಪಿಸಿಕೊಳ್ಳಿ: ಒಂದು ಕೈಯಲ್ಲಿ 'ಚಿಟಿಕೆ'ಯನ್ನೂ ಇನ್ನೊಂದರಲ್ಲಿ 'ಬೌನಾಶಿ'ಯನ್ನೂ (=ಭವನಾಶಿ: ಸೋರೆಬುರುಡೆಯ ಭಿಕ್ಷಾಪಾತ್ರೆ) ಹಿಡಿದ ಭಿಕ್ಷುಕರು ರಸ್ತೆಯಲ್ಲಿ ಸಾಗುತ್ತಾ ಹಾಡುತ್ತಿದ್ದವು ಇಂತಹ 'ಪದ'ಗಳು:

ಎಲ್ಲಾ ರೂಪವು ತಾನಂತೆ – ಶಿವ – । ಎಲ್ಲೆಲ್ಲೂ ತುಂಬಿಹನಂತೆ ।
ಅಲ್ಲಲ್ಲರಸುತ ಗುಡಿಗಳ ತಿರುಗುವ । ಕಳ್ಳರ ಕಣ್ಣಿಗೆ ಕಲ್ಲಂತೆ ॥
. . . .
ಕಳೆದುಳಿಯುವುದೇ ತಾನಂತೆ – ಶಿವ – । ಉಳಿಯುವ ಕಳೆಯುವರಿಲ್ಲಂತೆ॥

ಭಿಕ್ಷುಕರ ಬಾಯಲ್ಲೂ ನಲಿಯುತ್ತಿದ್ದ ಇಂತಹ ಪದಗಳು ಜನಜನಿತವಾಗಿದ್ದವು.

ಇಂತಹ ನೂರಾರು 'ಪದ'(ಗೇಯಕೃತಿ)ಗಳನ್ನು ರಚಿಸಿದ್ದವರು 1910ಕ್ಕೆ ಹಿಂದೆ ಬೆಂಗಳೂರು-ಮೈಸೂರು ಪ್ರಾಂತದಲ್ಲಿ ವಿರಾಜಮಾನರಾಗಿದ್ದ ವೇದಾಂತಂ ಶಿವರಾಮಶಾಸ್ತ್ರಿಗಳೆಂಬ ಅವಧೂತರು. ಅವರಿಗೆ 'ಶಿವಾನಂದ' ಎಂಬ ಹೆಸರೂ ಇದ್ದಿತು. ಶಿವರಾಮಶಾಸ್ತ್ರಿಗಳಿಂದ ಅಧ್ಯಾತ್ಮಸಾಧನಪಥದಲ್ಲಿ ಮಾರ್ಗದರ್ಶನ ಪಡೆದವರು ಅಸಂಖ್ಯ ಮಂದಿ. ಆದರೆ ಅದಕ್ಕಿಂತ ಸಾವಿರಪಟ್ಟು ಹೆಚ್ಚು ಜನರಿಗೆ ದೀವಿಗೆಗಳಾಗಿದ್ದವು ಶಾಸ್ತ್ರಿಗಳು ರಚಿಸಿದ್ದ ನೂರಾರು ತತ್ತ್ವಪದಗಳು. ಕರ್ನಾಟಕದಲ್ಲಿ ತತ್ತ್ವಪದಗಳ ದೀರ್ಘ ಪರಂಪರೆ ಇದೆ. ಶತಮಾನಗಳುದ್ದಕ್ಕೂ ಗಹನ ವೇದಾಂತದರ್ಶನದ ಮುಖ್ಯ ಪ್ರಮೇಯಗಳೂ ಮತ್ತು ಸಾಧನಾನುಕೂಲ ಬೋಧೆಗಳೂ ಜನಸಾಮಾನ್ಯರನ್ನು ತಲಪಿದುದು ತತ್ತ್ವಪದಗಳ ಮೂಲಕ. ಶಿವರಾಮಶಾಸ್ತ್ರಿಗಳ ತತ್ತ್ವಪದಗಳಂತೂ ಈ ವರ್ಗದ ಕೃತಿಗಳಲ್ಲಿ ಶ್ರೇಷ್ಠಮಟ್ಟದವು. ಅವುಗಳಲ್ಲಿ ನಿಕ್ಷಿಪ್ತವಾಗಿರುವ ವೇದಾಂತಶಾಸ್ತ್ರದ ಸೂಕ್ಷ್ಮತೆಗಳೂ ಆ ಪದಗಳ ಅಸಾಮಾನ್ಯ ಕಾವ್ಯಗುಣವೂ ಎದ್ದುತೋರುವಂತಹವು. ಸಹಜವಾಗಿ ಇವು ವಿಶಾಲ ಜನಾದರಣೆಗೆ ಪಾತ್ರವಾದವು. ವೇದಾಂತಶಾಸ್ತ್ರದಲ್ಲಿ ವಿಶೇಷಾಸಕ್ತಿ ಇದ್ದವರಿಗೂ ಇವು ಅಮೂಲ್ಯ ನಿಧಿಯೇ ಆದವು. ಶಿವರಾಮಶಾಸ್ತ್ರಿಗಳು

ಬ್ರಹ್ಮೈಕ್ಯರಾದ ಮೇಲೂ ಐದಾರು ದಶಕಗಳ ಕಾಲ ಅವರ ತತ್ತ್ವಪದಗಳು ವ್ಯಾಪಕ ಪ್ರಚಲನೆ ಪಡೆದಿದ್ದವು.

ಅವುಗಳ ಸ್ಫುರಣೆಯಿಂದ ರೂಪಗೊಂಡು ಕ್ರಮೇಣ ವೇದಾಂತಪ್ರಸಾರವನ್ನೇ ಬದುಕಿನ ಗುರಿಯಾಗಿಸಿಕೊಂಡು ಅಹರ್ನಿಶಿಯೂ ತತ್ತ್ವಚಿಂತನೆಯಲ್ಲಿಯೂ ಜನಪ್ರಬೋಧನದಲ್ಲಿಯೂ ಮಗ್ನರಾಗಿ ಧನ್ಯತೆ ಹೊಂದಿದವರು ಬೆಂಗಳೂರಿನ ಟೇಕಲ್ ಸುಬ್ಬಯ್ಯಶಾಸ್ತ್ರಿಗಳು (12.2.1897 – 26.4.1982) – 'ವೇದಾಂತ ಸುಬ್ಬಯ್ಯ' ಎಂಬ ಹೆಸರಿನಿಂದಲೇ ಖ್ಯಾತರಾದವರು.

* * *

ವೇದಾಂತ ಸುಬ್ಬಯ್ಯನವರನ್ನು ನೆನೆಯುವಾಗ ಒಂದು ವೈಶಿಷ್ಟ್ಯ ಗಮನ ಸೆಳೆಯುತ್ತದೆ. ಸಾಮಾನ್ಯವಾಗಿ ಓದು–ಬರಹ–ಕೇಳ್ಮೆಗಳಿಂದ ವೇದಾಂತಾಸಕ್ತಿಯು ಚಿಗುರೊಡೆದು ಅರಿವೂ ಅನುಭವವೂ ಸಾಂದ್ರಗೊಂಡಂತೆ ಪರಮಾರ್ಥಸಾಧನೆಯತ್ತ ಮನಸ್ಸು ಹೊರಳುತ್ತದೆ. ಆದರೆ ಸುಬ್ಬಯ್ಯನವರು ವೇದಾಂತದ ಆವರಣವನ್ನು ಪ್ರವೇಶಿಸಿದ್ದು ಅನುಭೂತಿಯ ಸೆಳೆತದಿಂದ. ತಲ್ಲೀನತೆ ಗಾಢವಾದಂತೆ ಕೀರ್ತನಪಟುಗಳೂ ಪ್ರವಚನಕಾರರೂ ಆಗಿ ಅವರು ಕ್ರಮೇಣ ಶಾಸ್ತ್ರವ್ಯಾಖ್ಯಾತರೂ ದಾರ್ಶನಿಕ ಲೇಖಕರೂ ಆದರು. ಅವರದು ವೇದಾಂತಾರ್ಪಿತ ಜೀವನ. ಅವರಿಗೆ ವೇದಾಂತವೆಂಬುದು ಬರಿಯ ಬೌದ್ಧಿಕ ಕಲಾಪವಾಗಿರಲಿಲ್ಲ. ಸಾಧಕಪ್ರವೃತ್ತಿಯವರಾಗಿದ್ದುದರಿಂದಲೇ ಅವರು ವೇದಾಂತ ಶಿವರಾಮಶಾಸ್ತ್ರಿಗಳ ತತ್ತ್ವಪದಗಳ ಪ್ರಭಾವಕ್ಕೆ ಒಳಗಾಗಿ ವೇದಾಂತವನ್ನೇ ತಮ್ಮ ಉಸಿರಾಗಿಸಿಕೊಂಡದ್ದು.

ಸುಬ್ಬಯ್ಯನವರ ವೇದಾಂತಾರ್ಪಿತ ಜೀವನರೀತಿಯೂ ಗಾಢ ಅಧ್ಯಯನವೂ ಡಾ॥ ಎಸ್. ರಾಧಾಕೃಷ್ಣನ್ ಹಾಗೂ ಇತರ ಹತ್ತಾರು ಸಮಕಾಲೀನ ಮಹೋನ್ನತರ ಮೆಚ್ಚಿಕೆಗೆ ಪಾತ್ರವಾಗಿದ್ದವು. ಅವರಿಗೆ ಐವತ್ತು ವರ್ಷಕ್ಕೂ ಹೆಚ್ಚು ಕಾಲ ನಿಕಟ ಪರಿಚಿತರಾಗಿದ್ದ ಡಿ.ವಿ.ಜಿ.ಯವರು ಅವರಲ್ಲಿಗೆ ಸುಬ್ಬಯ್ಯನವರು ಬಂದಾಗಲೆಲ್ಲ ತಪ್ಪದೆ ಒಂದೆರಡು ಪದಗಳನ್ನು ಹಾಡಿಸಿ ಕೇಳಿ ಆನಂದಿಸುತ್ತಿದ್ದರು. ಇದನ್ನು ನಿರೀಕ್ಷಿಸಿ ಸುಬ್ಬಯ್ಯನವರು ಕಿಸೆಯಲ್ಲಿ 'ಚಿಟಿಕೆ'ಯನ್ನು ಇಟ್ಟುಕೊಂಡೇ ಬರುತ್ತಿದ್ದರು.

* * *

ಮನೆವಾರ್ತೆ; ಬಾಲ್ಯ

ಸುಬ್ಬಯ್ಯನವರು ಆಂಧ್ರಮೂಲದ ತೆಲುಗು–ಸ್ಮಾರ್ತ ಮುಲಕನಾಡು ಸಮುದಾಯಕ್ಕೆ ಸೇರಿದವರು: 'ಆಕುಮಳ್ಳ' ಎಂಬ ವಂಶಸ್ಥರು; ಚಿತ್ತೂರು ಜಿಲ್ಲೆಯ ಕುಪ್ಪಂನಲ್ಲಿ ನೆಲಸಿದ್ದರು. ಅವರದು ಸಾಂಪ್ರದಾಯಿಕ ಹಿನ್ನೆಲೆ. ಸುಬ್ಬಯ್ಯನವರ ತೀರ್ಥರೂಪರು

ನಂಜುಂಡಯ್ಯನವರು. ನಂಜುಂಡಯ್ಯನವರ ತೀರ್ಥರೂಪರು ವೆಂಕಟೇಶಶಾಸ್ತ್ರಿಗಳು, ಪಿತಾಮಹರು ಲಕ್ಷ್ಮಣಶಾಸ್ತ್ರಿಗಳು. ಅವರದು ಆಚಾರವಂತಿಕೆಗೆ ಹೆಸರಾದ ಸಾತ್ತ್ವಿಕ ಮನೆತನ. ನಂಜುಂಡಯ್ಯ-ಭವಾನಿಯಮ್ಮ ದಂಪತಿಗಳ ಇಬ್ಬರು ಪುತ್ರರು, ನಾಲ್ಕು ಮಂದಿ ಪುತ್ರಿಯರ ಪೈಕಿ ಸುಬ್ಬಯ್ಯನವರೇ ಜ್ಯೇಷ್ಠರು. ಸುಬ್ಬಯ್ಯನವರ ಧರ್ಮಪತ್ನಿ ಶಾರದಮ್ಮ. ಈ ದಂಪತಿಗಳಿಗೆ ಐವರು ಪುತ್ರರೂ ಮೂವರು ಪುತ್ರಿಯರೂ ಆಗಿ ಮನೆ ತುಂಬಿದರು: ನಂಜುಂಡಯ್ಯ, ಲಲಿತ, ಭಾನುಮೂರ್ತಿ, ವಿಶ್ವನಾಥ್, ಶ್ಯಾಮಲಮ್ಮ, ಶಂಕರ, ಗೀತಾಪ್ರಭು, ವಿಜಯಲಕ್ಷ್ಮಿ. ಮೈಸೂರಿನಲ್ಲಿ ಗಣಿತ ಪ್ರಾಧ್ಯಾಪಕರಾಗಿದ್ದ ಹಿರಿಯ ಮಗ ನಂಜುಂಡಯ್ಯ, ದ್ವಿತೀಯ ಪುತ್ರ ದೇಶವಿದೇಶಗಳಲ್ಲಿ ಮನ್ನಣೆ ಪಡೆದಿದ್ದ ಗಣಿತಶಾಸ್ತ್ರಜ್ಞ ಭಾನುಮೂರ್ತಿ, ತೃತೀಯ ಪುತ್ರ ವಿಶ್ವನಾಥ್ – ಇವರು ಇತ್ತೀಚೆಗೆ ಸ್ವರ್ಗವಾಸಿಗಳಾದರು. ಸುಬ್ಬಯ್ಯನವರ ಪುತ್ರರಲ್ಲಿ ನಾಲ್ಕನೆಯವರಾದ ಟಿ.ಎಸ್. ಶಂಕರ ಅವರು ಸಂನ್ಯಸ್ತರಾಗಿ ಈಗ ಶ್ರೀ ಪರಮಾನಂದಭಾರತಿಗಳೆಂದು ಖ್ಯಾತರಾಗಿದ್ದಾರೆ. ಪೂರ್ವಾಶ್ರಮದಲ್ಲಿ ಇವರು ಚೆನ್ನೈನ ಐ.ಐ.ಟಿ.ಯಲ್ಲಿ ಪ್ರಾಧ್ಯಾಪಕರಾಗಿದ್ದರು. ಉಳಿದ ಪರಿವಾರ ಸದಸ್ಯರೂ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಅಭ್ಯುದಯ ಪಡೆದಿದ್ದಾರೆ. ಸುಬ್ಬಯ್ಯನವರ ಸಾಂಸ್ಕೃತಿಕ ವಾರಸಿಕೆಯನ್ನು ಅವರ ಪರಿವಾರದವರು ಶ್ರದ್ಧಾಪೂರ್ವಕ ಉಳಿಸಿ ಮುಂದುವರಿಸಿದ್ದಾರೆ.

ಸುಬ್ಬಯ್ಯನವರ ಜನನವಾದದ್ದು ಬೆಂಗಳೂರು ಸಮೀಪದ ಆನೇಕಲ್ ತಾಲೂಕಿನ ಸರ್ಜಾಪುರದಲ್ಲಿ. ಅದು ಅವರ ತಾಯಿ ಭವಾನಿಯಮ್ಮನವರ ತವರೂರು.

ಜನನಕಾಲದಲ್ಲಿ ಸುಬ್ಬಯ್ಯನವರ ಜಾತಕ ಪರಿಶೀಲಿಸಿದ್ದ ಜ್ಯೌತಿಷ್ಕರು 'ಈ ಜಾತಕನು ವಿರಾಗಿಯಾಗುವ ಲಕ್ಷಣ ತೋರುತ್ತಿದೆ' ಎಂದಿದ್ದರಂತೆ. ಇದನ್ನು ಸ್ಥಿರೀಕರಿಸುವಂತೆ ಸುಬ್ಬಯ್ಯನವರಿಗೆ ಎಳವೆಯಲ್ಲಿಯೆ ಭಜನಮಂದಿರಗಳಿಗೆ ಹೋಗಿ ಭಜನೆಗಳನ್ನು ಕೇಳುವುದರಲ್ಲಿ ಅತಿಶಯ ಆಸಕ್ತಿ ಇದ್ದಿತು. ಮಿಡ್ಲ್‌ಸ್ಕೂಲಿನಲ್ಲಿ ಓದುತ್ತಿದ್ದ ದಿನಗಳಲ್ಲಿ ಅವರ ಪೋಷಕರೂ ಆಗಿದ್ದ ಉಪಾಧ್ಯಾಯ ಕೆ.ಎನ್.ಕೆ. ಅಯ್ಯ ಎಂಬವರ ಪತ್ನಿ ರುಕ್ಮಿಣಮ್ಮ ಅವರು ಹೇಳುತ್ತಿದ್ದ ಭಕ್ತವಿಜಯದ ಕಥೆಗಳು ಸುಬ್ಬಯ್ಯನವರ ಮೇಲೆ ಗಾಢ ಪ್ರಭಾವ ಬೀರಿದ್ದವು. ಊರಿಗೆ ಆಗಾಗ ಬರುತ್ತಿದ್ದ ಸಾಧುಗಳ ಪರಿಚರ್ಯೆಯಲ್ಲಿ ತೊಡಗುತ್ತಿದ್ದರು.

ಬಾಲ್ಯದಿಂದ 'ಸುಬ್ಬು'ವಿಗೆ ತಿರುಪತಿ ವೆಂಕಟೇಶ್ವರ ದೈವದಲ್ಲಿ ಅಪಾರ ಭಕ್ತಿ. ದರ್ಶನದ ಇಚ್ಛೆಯನ್ನು ತಡೆದುಕೊಳ್ಳಲಾಗದೆ ಒಮ್ಮೆ ಹೇಗೋ ಪ್ರಯಾಣದ ವೆಚ್ಚವನ್ನು ಹೊಂದಿಸಿಕೊಂಡು ಯಾರಿಗೂ ಹೇಳದೆ ತಿರುಪತಿಗೆ ಹೊರಟುಬಿಟ್ಟ. ಕೆಲ ದಿನಗಳಾದ ಮೇಲೆ ಯಾರೋ ಪರಿಚಿತರು ಇವನನ್ನು ನೋಡಿ ಊರಿಗೆ ಕರೆತಂದು ಬಿಟ್ಟರಂತೆ.

ಬಾಲಕನ ವಿರಕ್ತಪ್ರವೃತ್ತಿಯನ್ನು ಗಮನಿಸಿದ್ದ ಹಿರಿಯರು ಅವನು 'ದಾರಿತಪ್ಪದಿರಲಿ'

ವೇದಾಂತ ಸುಬ್ಬಯ್ಯ (ಟೇಕಲ್ ಸುಬ್ಬಯ್ಯಶಾಸ್ತ್ರೀ)
(12.2.1897 – 26.4.1982)

ಎಂದು ಶೀಘ್ರ ಮದುವೆ ಮಾಡಿಸಲು ತರದೂದು ನಡೆಸಿದರು. ಹೊಸಕೋಟೆಯ ರಾಮಶಾಸ್ತ್ರಿ–ಲಕ್ಷ್ಮೀದೇವಮ್ಮ ದಂಪತಿಗಳ ಪುತ್ರಿ ಶಾರದಮ್ಮ ಅನುರೂಪಳೆನಿಸಿತು. ಏನೇನೋ ಸನ್ನಿವೇಶಗಳಿಂದ ಮದುವೆ ನಡೆದದ್ದು ತಿರುಪತಿಯಲ್ಲಿ. ಸುಬ್ಬಯ್ಯ ಅಂತರಂಗದಲ್ಲಿ ಬಯಸಿದ್ದುದೂ ಹಾಗೆ ಆಗಬೇಕೆಂದೇ.

1918ರ ಇನ್‌ಫ್ಲುಯೆಂಜಾ ಸಾಂಕ್ರಾಮಿಕ ಎರಡೇ ದಿನಗಳ ಅವಧಿಯಲ್ಲಿ ಸುಬ್ಬಯ್ಯನವರ ತಂದೆ ನಂಜುಂಡಯ್ಯ, ಅಜ್ಜಿ ತಿಮ್ಮಮ್ಮ – ಇಬ್ಬರನ್ನೂ ಆಹುತಿ ತೆಗೆದುಕೊಂಡದ್ದು ಕುಟುಂಬಕ್ಕೆ ದೊಡ್ಡ ಆಘಾತವಾಯಿತು. ದೊಡ್ಡ ಕುಟುಂಬದ ನಿರ್ವಹಣೆಯ ಹೊಣೆ ಆಗ ಇನ್ನೂ 22 ವರ್ಷದವರಾಗಿದ್ದ ಸುಬ್ಬಯ್ಯನವರ ಹೆಗಲಿಗೆ ಬಂದಿತು. 1920ರ ಸುಮಾರಿನಲ್ಲಿ ಬೆಂಗಳೂರಿಗೆ ವಲಸೆ ಬಂದರು.

ಸುಬ್ಬಯ್ಯನವರ ವಿದ್ಯಾಭ್ಯಾಸವಾದದ್ದು ಬೆಂಗಳೂರಿನ ಯುನೈಟೆಡ್ ಮಿಶನ್ ಹೈಸ್ಕೂಲಿನಲ್ಲಿ. ಮೆಟ್ರಿಕ್ಯುಲೇಷನ್(ಎಸ್.ಎಸ್.ಎಲ್.ಸಿ)ವರೆಗೆ ವ್ಯಾಸಂಗ ಮಾಡಿ ಅನಂತರ ಮೈಸೂರು ಸರ್ಕಾರದ ಕಂಟ್ರೋಲರ್ಸ್ ಕಛೇರಿಯಲ್ಲಿ (ಲೋಕಲ್ ಆಡಿಟ್) ಅಕೌಂಟೆಂಟ್ ಆಗಿ ಉದ್ಯೋಗದಲ್ಲಿದ್ದು ನಿವೃತ್ತರಾದರು.

ಗುರುವಿನಿಂದ ಪಥದರ್ಶನ

ಬಾಲ್ಯದಿಂದಲೇ ಸುಬ್ಬಯ್ಯನವರು ಅಧ್ಯಾತ್ಮಾಸಕ್ತರು. ಆ ದಿನಗಳಲ್ಲಿ ಬೆಂಗಳೂರು ಸೀಮೆಯ ವೇದಾಂತವಲಯಗಳಲ್ಲಿ ಪ್ರಸಿದ್ಧರಾಗಿದ್ದ ಮತ್ತು ವೇದಾಂತಗೋಷ್ಠಿಗಳನ್ನು ನಡೆಸುತ್ತಿದ್ದ ಕೆ.ಎ. ಕೃಷ್ಣಸ್ವಾಮಿ ಅಯ್ಯರ್ ಅವರ ಪರಿಚಯವನ್ನೂ ಸುಬ್ಬಯ್ಯನವರು ಪಡೆದಿದ್ದರು. ಸುಬ್ಬಯ್ಯನವರ ಮೇಲೆ ಗಾಢ ಪ್ರಭಾವ ಬೀರಿದವು ಈ ಹಿಂದೆಯೆ ಸ್ಮರಿಸಿರುವ ವೇದಾಂತ ಶಿವರಾಮಶಾಸ್ತ್ರಿಗಳ ತತ್ತ್ವಪದಗಳು. ಈ ಪ್ರಭಾವ ಹರಳುಗಟ್ಟಿದುದು ಸುಬ್ಬಯ್ಯನವರು ತಾರುಣ್ಯದಲ್ಲಿ ಕಾಲಿರಿಸುವ ವೇಳೆಗೆ – ಎಂದರೆ ಅವರ ಸುಮಾರು ಇಪ್ಪತ್ತೈದರ ವಯಸ್ಸಿನಲ್ಲಿ. ಎಳವೆಯಲ್ಲಿ ತಂದೆಯೊಡನೆ ಅವರು ಒಮ್ಮೆ ಶಿವರಾಮಶಾಸ್ತ್ರಿಗಳ ದರ್ಶನವನ್ನೂ ಮಾಡಿದ್ದರಾದರೂ ಆ ಅವಧೂತರಲ್ಲಿ ತಮ್ಮ ಮಾರ್ಗದರ್ಶಕರನ್ನು ಅವರು ಕಂಡುಕೊಂಡದ್ದು ಹಲವು ವರ್ಷಗಳ ತರುವಾಯ. ಆ ವೇಳೆಗೆ ಶಿವರಾಮಶಾಸ್ತ್ರಿಗಳು ಬ್ರಹ್ಮೈಕ್ಯರಾಗಿ ಹದಿನೈದು ವರ್ಷಗಳೇ ಕಳೆದಿದ್ದವು.

ಕೆಲಸದ ನಿಮಿತ್ತ, ಎಂದರೆ ಆಡಿಟ್(ತಪಾಸಣೆ)ಗಾಗಿ ಸುಬ್ಬಯ್ಯನವರು ಊರೂರಿಗೆ ಪ್ರವಾಸ ಮಾಡಬೇಕಾಗುತ್ತಿತ್ತು. ಹಾಗೆ ದೊಡ್ಡಬಳ್ಳಾಪುರಕ್ಕೆ ಹೋಗಿದ್ದಾಗ ಅಲ್ಲಿಯ ಶಾಲಾಬೋಧಕರೊಬ್ಬರ ಮನೆಯಲ್ಲಿ ವೇದಾಂತ ಶಿವರಾಮಶಾಸ್ತ್ರಿಗಳ ಗ್ರಂಥಗಳು ಇವರ ಕೈಗೆ ದೊರೆತವು. ಅವನ್ನು ಓದಿ ಸುಬ್ಬಯ್ಯನವರು ಪುಲಕಗೊಂಡರು; ತಾವು ಅಂತರಂಗದಲ್ಲಿ ಅರಸುತ್ತಿದ್ದ ದಿಗ್ದರ್ಶನ ಲಭಿಸಿದಂತೆ ಆಯಿತು. ಆಮೇಲಿನ

ದಿನಗಳಲ್ಲಿ ಶಿವರಾಮಶಾಸ್ತ್ರಿಗಳ ಅನ್ಯ ಗ್ರಂಥಗಳನ್ನೂ ತರಿಸಿಕೊಂಡು ಅಧ್ಯಯನ ಮಾಡತೊಡಗಿದರು. ಅಲ್ಲಿಂದಾಚೆಗೆ ಜೀವನವಿಡೀ ಶಿವರಾಮಶಾಸ್ತ್ರಿಗಳ ರಚನೆಗಳ ಗಾಯನವೂ ವ್ಯಾಖ್ಯಾನವೂ ಸುಬ್ಬಯ್ಯನವರ ದೈನಂದಿನಿಯೇ ಆಯಿತು.

ಸರ್ಕಾರೀ ಉದ್ಯೋಗ ದೊರೆತು ವ್ಯಾವಹಾರಿಕ ಜೀವನ ಸ್ವಲ್ಪ ನಿಲುಗಡೆಗೆ ಬಂದೊಡನೆ ಸುಬ್ಬಯ್ಯನವರ ಮನಸ್ಸು ಆಂತರಂಗಿಕ ಜೀವನಕ್ಕೆ ತಿರುಗಿತು. ಅಧ್ಯಾತ್ಮಾನುಸಂಧಾನವೂ ವೇದಾಂತಾಧ್ಯಯನವೂ ಅವರ ಜೀವನಲಕ್ಷ್ಯಗಳಾದವು.

ವೇದಾಂತಪ್ರಸಾರಕರಲ್ಲಿ ಹಲವು ಬಗೆಯವರು ಇರುತ್ತಾರೆ. ಕೆಲವರು ಧರ್ಮಪೀಠಗಳ ಪರಿಸರದಲ್ಲಿ ಬೆಳೆದು ಅವುಗಳ ಪದ್ಧತಿಯಂತೆ ಅಧ್ಯಯನ ಮಾಡಿ ಶಾಸ್ತ್ರಪಾಂಡಿತ್ಯವನ್ನು ಗಳಿಸಿಕೊಂಡಿರುತ್ತಾರೆ. ಇನ್ನು ಕೆಲವರು ಪಂಡಿತರ ಮನೆತನದಲ್ಲಿ ಜನಿಸಿದವರಾಗಿದ್ದು ತಂದೆ ಅಥವಾ ಇತರ ಹಿರಿಯರ ಮಾರ್ಗದರ್ಶನದಲ್ಲಿ ಕೃಷಿ ಮಾಡಿ ಶಾಸ್ತ್ರದ ಮೇಲೆ ಅಧಿಕಾರ ಪಡೆದಿರುತ್ತಾರೆ. ಮತ್ತೆ ಕೆಲವರು ಸ್ವತಂತ್ರ ವಿದ್ವಾಂಸರಲ್ಲಿ ಅಧ್ಯಯನ ನಡೆಸಿದವರಾಗಿರುತ್ತಾರೆ. ಈ ಮೂರು ರೀತಿಗಳಿಂದ ಭಿನ್ನರಾದ ಹಲವರೂ ಇರುತ್ತಾರೆ. ಈ ವರ್ಗದವರಾದರೋ ಉತ್ಕಟ ಆಸಕ್ತಿಯಿಂದ ತಮ್ಮ ಸಂಪರ್ಕವಲಯದ ಹಿರಿಯರಿಂದ ಮಾರ್ಗದರ್ಶನ ಪಡೆದು ಬಹುಮಟ್ಟಿಗೆ ಸ್ವೀಯ ಅಧ್ಯಯನ-ಚಿಂತನ-ಮಂಥನಗಳ ಮೂಲಕ ಅಗಾಧ ಪರಿಶ್ರಮ ಮಾಡಿ ಶಾಸ್ತ್ರದಲ್ಲಿ ಅಧಿಕಾರವನ್ನು ಸಂಪಾದಿಸಿಕೊಂಡಿರುತ್ತಾರೆ.

ಈ ನಾಲ್ಕನೇ ವರ್ಗಕ್ಕೆ ಸೇರಿದ್ದವರು ವೇದಾಂತ ಸುಬ್ಬಯ್ಯನವರು. ಅವರ ಶಾಸ್ತ್ರಾಧ್ಯಯನ ಮತ್ತು ಅನೇಕ ದಶಕಗಳ ವೇದಾಂತಪ್ರಸಾರಕ್ಕೆ ಪ್ರೇರಕವಾಗಿದ್ದುದು ಗಾಢ ವೈಯಕ್ತಿಕ ಶಾಸ್ತ್ರಾಸಕ್ತಿ ಮತ್ತು ಅದರೊಡಗೂಡಿ ಆಚಾರ್ಯ ಶಂಕರಭಗವತ್ಪಾದರ ಜೀವಿತಕಾರ್ಯದ ಬಗೆಗೆ ಅವರಲ್ಲಿ ಮೂಡಿದ್ದ ಅತಿಶಯ ಶ್ರದ್ಧೆ. ಇಂತಹ ಜೀವನಕ್ರಮಕ್ಕೆ ಹೆಚ್ಚು ಅನುಕೂಲಕರವಾದ ಸಾಮಾಜಿಕ ಪರಿಸರ ಆಗ ಇದ್ದಿತು. ಸುಬ್ಬಯ್ಯನವರು ಜೀವನನಿರ್ವಹಣೆಗಾಗಿ ಲೌಕಿಕ ವೃತ್ತಿಯನ್ನು ಯಶಸ್ವಿಯಾಗಿ ನಡೆಸಿ ಜೊತೆಜೊತೆಗೇ ಕಠಿಣರೂಪದ ನಿರಂತರ ಶಾಸ್ತ್ರಾಧ್ಯಯನ ನಡೆಸಿ ಕ್ರಮಕ್ರಮೇಣ ತಮ್ಮ ಸಮಯ-ಪ್ರತಿಭೆಯಷ್ಟನ್ನೂ ವೇದಾಂತಪ್ರಸಾರಕ್ಕಾಗಿ ವಿನಿಯೋಗಿಸಿದರು.

ವೇದಾಂತ ಪ್ರಸಾರ

ಶಾಂಕರಸಿದ್ಧಾಂತದ ಪ್ರಸಾರಕ್ಕಾಗಿ ಜೀವನವನ್ನು ಮೀಸಲಾಗಿಸಬೇಕೆಂದು ಶ್ರೀ ಚಂದ್ರಶೇಖರಭಾರತೀ ಮಹಾಸ್ವಾಮಿಗಳು ಆದೇಶ ನೀಡಿದಾಗ ಸುಬ್ಬಯ್ಯನವರು ತಮಗೆ ಸಂಸ್ಕೃತಭಾಷೆಯಲ್ಲಿ ಹೆಚ್ಚಿನ ಪರಿಶ್ರಮ ಇರದಿದ್ದುದರಿಂದ ಶಾಂಕರತತ್ತ್ವಪ್ರಸಾರಕ್ಕೆ ಬೇಕಾದ ಅರ್ಹತೆ ತಮ್ಮಲ್ಲಿ ಇಲ್ಲವೆಂಬ ಶಂಕೆಯನ್ನು ನಿವೇದಿಸಿದರು. ಮಹಾಸ್ವಾಮಿಗಳು

"ಚಿಂತಿಸಬೇಡಿ, ನಿಮ್ಮಿಂದ ಈ ಸೇವೆ ಆಗಬೇಕೆಂಬುದು ಅಮ್ಮನವರ ಮತ್ತು ಭಗವತ್ಪಾದರ ಆದೇಶವಿದೆ. ಧೈರ್ಯವಾಗಿ ಮುಂದುವರಿಸಿ. ನಿಮ್ಮಲ್ಲಿ ಶ್ರದ್ಧೆ ಇರುವುದರಿಂದ ಶಾಸ್ತ್ರದ ವ್ಯುತ್ಪತ್ತಿ ತಾನಾಗಿ ನಿಮ್ಮಲ್ಲಿ ಬೆಳೆಯುತ್ತದೆ" ಎಂದರು. 'ವಾಚಂ ಅರ್ಥೋಽನುಧಾವತಿ' ಎಂಬಂತೆ ಗುರುಗಳ ಆಶೀರ್ವಾದ ಫಲಿಸಿತು.

ನಿಯತವಾಗಿ ಶಂಕರಜಯಂತಿಯನ್ನು ವರ್ಷೇವರ್ಷೇ ಆಚರಿಸಬೇಕೆಂದು ಸುಬ್ಬಯ್ಯನವರಿಗೆ ನಿರ್ದೇಶನ ದೊರೆತದ್ದೂ ಮಹಾಸ್ವಾಮಿಗಳಿಂದಲೇ.

ಅದಾಗಿ ಎಂಟು ದಶಕಗಳು ಕಳೆದ ಮೇಲೂ, ಸುಬ್ಬಯ್ಯನವರು ಬ್ರಹ್ಮಲೀನರಾಗಿ ಮೂವತ್ತೈದು ವರ್ಷಗಳಾದ ಮೇಲೂ ಈಗಲೂ (2017) ಸುಬ್ಬಯ್ಯನವರ ನಿವಾಸವಾಗಿದ್ದ 'ಶಂಕರಾಶ್ರಮ'ದಲ್ಲಿ ಪ್ರತಿವರ್ಷ ಶಂಕರಜಯಂತಿ ಸಂಭ್ರಮದಿಂದ ನಡೆಯುತ್ತಿದೆ.

ತಾನು ಶಂಕರಭಗವತ್ಪಾದರ ಪರಿಚಾರಕ ಎಂಬ ಭಾವನೆ ಸುಬ್ಬಯ್ಯನವರ ಕಣಕಣವನ್ನೂ ವ್ಯಾಪಿಸಿಬಿಟ್ಟಿತ್ತು: ಆಸಕ್ತರು ಕರೆದಲ್ಲಿ ಊರೂರಿಗೆ ಹೋಗಿ ವೇದಾಂತಪ್ರವಚನಗಳನ್ನು ನೀಡುವುದು, ನಿರಂತರ ಅಧ್ಯಯನ, ಗ್ರಂಥಲೇಖನ, ಬೆಂಗಳೂರಿನ ಬಸವನಗುಡಿಯ ತಮ್ಮ ನಿವಾಸದಲ್ಲಿ ಸಾಂಪ್ರದಾಯಿಕ ಧಾರ್ಮಿಕ ಕಲಾಪಗಳ ಅನುಷ್ಠಾನದ ಜೊತೆಜೊತೆಗೆ ಆಗಾಗ ವಿಶೇಷ ವೇದಾಂತ ಕಾರ್ಯಕ್ರಮಗಳು – ಇದನ್ನು ಜೀವನಪದ್ಧತಿಯಾಗಿಸಿಕೊಂಡರು.

ಶಂಕರಜಯಂತಿ

ಅವರ ಮನೆಯಲ್ಲಿ ಯಾವುದಾದರೊಂದು ವ್ಯಾಜದಲ್ಲಿ ವಿಶೇಷ ಪೂಜೆಗಳೂ ಉತ್ಸವಗಳೂ ಅನ್ನಸಂತರ್ಪಣೆಗಳೂ ಆಗಿಂದಾಗ ನಡೆಯುತ್ತಿದ್ದವು. ಎಲ್ಲಕ್ಕಿಂತ ಮುಖ್ಯವಾಗಿ ಪ್ರತಿವರ್ಷ ಹಲವಾರು ದಿನಗಳ ಅವಧಿಯ ಅತ್ಯಂತ ವಿಜೃಂಭಣೆಯ ಶಂಕರಜಯಂತಿ ಆಚರಣೆ ನಡೆಯುತ್ತಿತ್ತು. ಆ ಶಂಕರಜಯಂತಿ ಉತ್ಸವಾಚರಣೆಯ ಸಂಭ್ರಮೋತ್ಸಾಹಗಳು ಜನಜನಿತವಾಗಿದ್ದವು. ಅದಕ್ಕಾಗಿ ಜನರೆಲ್ಲ ತೀವ್ರ ಆಸಕ್ತಿಯಿಂದ ಎದುರುನೋಡುತ್ತಿದ್ದರು. ಸುಬ್ಬಯ್ಯನವರಿಗೆ ತುಂಬಾ ಜನಾದರಣೆಯನ್ನು ದೊರಕಿಸಿದ್ದವು ವೇದಾಂತ ಶಿವರಾಮಶಾಸ್ತ್ರಿಗಳ, ಕೆಲವೊಮ್ಮೆ ನಿಜಗುಣರ ತತ್ತ್ವಪದಗಳ ಹಾಡಿಕೆಯೊಡನೆ ವ್ಯಾಖ್ಯಾನ, ಕಥಾಪ್ರವಚನ ರೀತಿಯಲ್ಲಿ ಶಂಕರಭಗವತ್ಪಾದರನ್ನು ಕುರಿತ ಉಪನ್ಯಾಸಗಳು. ಇನ್ನು ನೇರ ವೇದಾಂತ ಪ್ರವಚನಗಳೂ ಬ್ರಹ್ಮಸೂತ್ರಭಾಷ್ಯಾದಿ ವಾಙ್ಮಯ ಪ್ರತಿಪಾದನೋಪನ್ಯಾಸಗಳೂ ಸದಾ ನಡೆಯುತ್ತಲೇ ಇದ್ದವು.

ಶಂಕರಜಯಂತಿಗೆ ಎರಡು ತಿಂಗಳ ಹಿಂದಿನಿಂದಲೇ ಸಿದ್ಧತೆ ಆರಂಭವಾಗುತ್ತಿತ್ತು. ಬೆಂಗಳೂರಿನ ನೆರೆಯ ಜಿಲ್ಲೆಗಳಿಂದಲೂ ದೊಡ್ಡ ಸಂಖ್ಯೆಯಲ್ಲಿ ವೇದಾಂತಾಸಕ್ತರು

ಜಯಂತಿಗಾಗಿ ಬರುತ್ತಿದ್ದರು. ವಿವಿಧೆಡೆಗಳಿಂದ ಶಿವರಾಮಶಾಸ್ತ್ರಿಗಳ ಶಿಷ್ಯ-ಪ್ರಶಿಷ್ಯರೂ ಬಂದು ಸೇರುತ್ತಿದ್ದರು.

1953ರಲ್ಲಿ ಸುಬ್ಬಯ್ಯನವರು ನಡೆಸಿದ ಶತರುದ್ರೀಯ ಯಾಗ, 1953ರಲ್ಲಿಯೆ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳು ಆಗಮಿಸಿ ದರ್ಶನವಿತ್ತು ಆಶೀರ್ವದಿಸಿದುದು, 1978ರಲ್ಲಿ (ಆಗಬೇಕಾಗಿದ್ದುದಕ್ಕಿಂತ ಎರಡು ವರ್ಷ ಮುಂಚೆಯೇ ನೆರವೇರಿಸಿದ) ಐವತ್ತನೇ ವರ್ಷದ ಶಂಕರಜಯಂತಿ, 75ನೇ ವರ್ಷದ ಶಂಕರಜಯಂತಿಯ ನಿಮಿತ್ತ ಬೆಂಗಳೂರು ಶಂಕರಮಠದಲ್ಲಿ ಆಯೋಜಿತವಾದ ವಿದ್ವತ್ ಸದಸ್ಸು – ಇವು 'ಶಂಕರಾಶ್ರಮ'ದ ಗತದಿನಗಳ ಕೆಲವು ಸ್ಮರಣೀಯ ಸಂದರ್ಭಗಳು.

* * *

ಗ್ರಂಥರಚನೆ

ಸುಬ್ಬಯ್ಯನವರು ಅಧ್ಯಯನ-ಪ್ರವಚನಗಳ ಜೊತೆಗೆ ಬರವಣಿಗೆಯ ಶಿಸ್ತನ್ನೂ ರೂಢಿಸಿಕೊಂಡು ನಾಲ್ಕಾರು ಪುಸ್ತಕಗಳನ್ನು ರಚಿಸಿದುದು ವಿಶೇಷವಾಗಿ ಉಲ್ಲೇಖಾರ್ಹವಾಗಿದೆ. ಈಗ್ಗೆ ನಾಲ್ಕೈದು ದಶಕಗಳ ಹಿಂದೆ ಗ್ರಂಥಪ್ರಕಾಶನ ಈಗಿನಷ್ಟು ಸುಲಭವಿರಲಿಲ್ಲ. ಅಲ್ಲದೆ ನೆನಪಿಡಬೇಕಾದ ಬೇರೆ ವಾಸ್ತವಗಳೂ ಇವೆ.

ಉನ್ನತಮಟ್ಟದ ಅನುಸಂಧಾನದಲ್ಲಿ ವಿಹರಿಸುವವರಲ್ಲಿ ಗ್ರಂಥಲೇಖನಕ್ಕೆ ಅವಶ್ಯವಾದ ಅಭಿರುಚಿಯೂ ಮನಃಪ್ರವೃತ್ತಿಯೂ ಸೌಲಭ್ಯವೂ ಕೂಡಿರುವುದು ವಿರಳ. ಶ್ರಮಪೂರ್ವಕ ಪಾಂಡಿತ್ಯವನ್ನು ಸಂಪಾದಿಸಿಕೊಂಡಿರುವವರು ಆ ವಿಚಾರಪ್ರಪಂಚದಲ್ಲಿ ವಿಹರಿಸುತ್ತ ತಮ್ಮ ಆನಂದವನ್ನೂ ತಾವು ಕಂಡುಕೊಂಡ ಸ್ವಾರಸ್ಯಗಳನ್ನೂ ಒಳನೋಟಗಳನ್ನೂ ಆಸಕ್ತರೊಡನೆ ಹಂಚಿಕೊಳ್ಳುವುದರಲ್ಲಿ ಸಾರ್ಥಕತೆಯನ್ನು ಕಾಣುತ್ತಿರುತ್ತಾರೆ. ಅಂತಹ ವಿಚಾರಪ್ರಪಂಚದಲ್ಲಿ ಸಂಚರಿಸುತ್ತಿರುವವರಿಗೆ ಬರವಣಿಗೆಯಂತಹ ವ್ಯವಹಾರದಲ್ಲಿ ಅಭಿನಿವೇಶ ಮೂಡುವುದು ವಿರಳ. ಹೀಗಾಗಿ ನಮ್ಮ ಸಾವಿರಾರು ವರ್ಷಗಳ ಪಂಡಿತಪರಂಪರೆಯಲ್ಲಿ ಮೌಖಿಕ ಅಧ್ಯಯನ-ಅಧ್ಯಾಪನಗಳ ಸಂಗಡಿಕೆಯಲ್ಲಿಯೆ ಜೀವನವಷ್ಟನ್ನೂ ಕಳೆದವರೇ ಅಧಿಕಮಂದಿ. ಅವರಲ್ಲಿ ಹೆಚ್ಚಿನವರ ಹೆಸರು ಕೂಡಾ ಎರಡು ಪೀಳಿಗೆಗಳಾಚೆಗೆ ನೆನಪಿನಲ್ಲಿ ಉಳಿಯುವುದು ದುಃಶಕ್ಯ. ಲೇಖನಮಾಧ್ಯಮದಲ್ಲಿ ಸಾಧನೆ ಮಾಡಿದವರು ಪ್ರಾಯಶಃ ನೂರರಲ್ಲಿ ಐದು ಮಂದಿ ಇದ್ದಾರು, ಅಷ್ಟೆ. ಆದರೆ ಶಾಸ್ತ್ರಪರಂಪರೆಯ ವಾರಸುದಾರರಾದ ಪಂಡಿತಶ್ರೇಷ್ಠರು ತಾವು ಕಂಡುಕೊಂಡ ಅಥವಾ ಆವಿಷ್ಕರಿಸಿದ ಪರಿಷ್ಕಾರಗಳನ್ನು ಗ್ರಂಥಸ್ಥಗೊಳಿಸಿದಲ್ಲಿ ಅವರ ಕೊಡುಗೆ ಹೆಚ್ಚು ದೀರ್ಘಕಾಲ ಜಿಜ್ಞಾಸುವಲಯದಲ್ಲಿ ಸ್ಮರಣೆಯಲ್ಲಿ ಉಳಿಯುವ ಸಾಧ್ಯತೆ ಇರುತ್ತದೆ.

ಈ ದೃಷ್ಟಿಯಿಂದ ನೋಡಿದಲ್ಲಿ ವೇದಾಂತ ಸುಬ್ಬಯ್ಯನವರು ಬರವಣಿಗೆಯ ಸಾಮರ್ಥ್ಯವನ್ನೂ ರೂಢಿಸಿಕೊಂಡು ಶಾಂಕರಸಿದ್ಧಾಂತಪ್ರತಿಪಾದಕಗಳಾದ ಹಲವಾರು ಗ್ರಂಥಗಳನ್ನು ರಚಿಸಿ ಪ್ರಕಟಿಸಿದುದನ್ನು ಪ್ರಶಂಸನೀಯವೆಂದು ಹೇಳಬೇಕು. ಸಂಸ್ಕೃತಮೂಲದ ಶಾಸ್ತ್ರಸಾಹಿತ್ಯವನ್ನು ಅನ್ಯ ಭಾಷೆಗಳಲ್ಲಿ ಜನಸಾಮಾನ್ಯರಿಗೆ ಗ್ರಾಹ್ಯವೂ ಆಕರ್ಷಕವೂ ಆಗುವಂತೆ ನಿವೇದಿಸುವುದು ಸುಲಭವಲ್ಲ. ಅದಕ್ಕೆ ಅನುಕೂಲವಾದ ಮನೋಧರ್ಮವೂ ಸಂವಹನಶಕ್ತಿಯೂ ಇರಬೇಕಾಗುತ್ತದೆ. ಈ ಜಟಿಲವಾದ ಕೆಲಸ ಕೆಲವರಿಗಷ್ಟೆ ಸಾಧ್ಯವಾಗುವಂತಹದು.

ವೇದಾಂತ ಸುಬ್ಬಯ್ಯನವರು ಕನ್ನಡ, ತೆಲುಗು, ಇಂಗ್ಲಿಷ್ – ಮೂರೂ ಭಾಷೆಗಳಲ್ಲಿ ವೇದಾಂತಶಾಸ್ತ್ರಸಂಬಂಧಿಯಾದ ಬರವಣಿಗೆ ಮಾಡಿದರೆಂಬುದನ್ನು ನೆನೆಯುವಾಗ ವಿಸ್ಮಯವಾಗದಿರದು. ಅವರ ಪ್ರಕಟಿತ ಕೃತಿಗಳಲ್ಲಿ ಕೆಲವು: ಕನ್ನಡದಲ್ಲಿ – 'ಸದ್ಗುರೂಪದೇಶ ವಾಕ್ಯಾವಳಿ', 'ಮುಮುಕ್ಷುಗಳಿಗೆ ಎಚ್ಚರಿಕೆ', 'ಆತ್ಮವಿಚಾರ', 'ಅದ್ವೈತಸಿದ್ಧಿ', 'ತತ್ತ್ವಸಿದ್ಧಿ' (ಗದ್ಯಪದ್ಯಾತ್ಮಕ), 'ಬ್ರಹ್ಮಸೂತ್ರಾರ್ಥ ಸಾರಸಂಗ್ರಹ', 'ಸಮ್ಯಗ್ ದರ್ಶನ'; ತೆಲುಗಿನಲ್ಲಿ – 'ನಿಜಾನುಭವ ಪ್ರಕಾಶ', 'ಪರಮಾರ್ಥಗೀತ' (ಪದ್ಯರೂಪ ತತ್ತ್ವನಿರೂಪಣೆ), 'ಶ್ರೀಶಂಕರಭಾಷ್ಯ ಸಮ್ಮತಮಾ ಈ ಭಾಮತೀ ವ್ಯಾಖ್ಯಾನಮು?'; ಇಂಗ್ಲಿಷಿನಲ್ಲಿ – 'IS THE WORLD AN ILLUSION ACCORDING TO SHANKARA?'. ಇವಲ್ಲದೆ ಇತರ ಹಲವು ಪ್ರಕರಣರೀತಿಯ ಪುಸ್ತಿಕೆಗಳನ್ನೂ ಬರೆದಿದ್ದರು. ಅವರು ರಚಿಸಿದ್ದ ಭಗವದ್ಗೀತಾಭಾಷ್ಯ ಮೊದಲಾದ ಹಲವು ಮುಖ್ಯ ಬರಹಗಳು ಅಪ್ರಕಟಿತವಾಗಿಯೆ ಉಳಿದವು. ಒಟ್ಟು ಎಂಟು-ಹತ್ತು ಸಾವಿರ ಮುದ್ರಿತ ಪುಟಗಳಿಗೆ ಕಡಮೆಯಿಲ್ಲದಷ್ಟು ಸಾಹಿತ್ಯ ಸುಬ್ಬಯ್ಯನವರಿಂದ ರಚಿತವಾಗಿದ್ದಿರಬೇಕು.

ವೇದಾಂತದರ್ಶನವನ್ನು ಕರಾರುವಾಕ್ಕಾಗಿಯೂ ಸಾಮಾನ್ಯ ನುಡಿಗಟ್ಟಿನಲ್ಲಿಯೂ ನಿರೂಪಿಸುವುದು ಸುಲಭವಲ್ಲ. ಹೀಗಿರುವಾಗ ಸುಬ್ಬಯ್ಯನವರು ಅವಸ್ಥಾತ್ರಯ, ಪಂಚಕೋಶವಿವೇಕ, ಮಾಯೆಯ ಸ್ವರೂಪ ಮೊದಲಾದ ಆಧಾರಸಿದ್ಧಾಂತಗಳನ್ನು ಕನ್ನಡದಲ್ಲಿಯೂ, ತೆಲುಗಿನಲ್ಲಿಯೂ, ಪದ್ಯರೂಪದಲ್ಲಿಯೂ ರಚಿಸಿರುವುದನ್ನು ಶ್ಲಾಘನೀಯವೆನ್ನಬೇಕು. ಈ ಅನುವಾದಗಳಾದರೋ ಕಾವ್ಯಮರ್ಯಾದೆಗೆ ಅನುಗುಣವಾಗಿದ್ದು ಸಾಮಾನ್ಯ ವ್ಯುತ್ಪತ್ತಿ ಇದ್ದವರೂ ಓದಿ ಆಸ್ವಾದಿಸಬಹುದಾಗಿವೆ.

ಉದಾಹರಣೆಗೆ – ಬಂಧಮೋಕ್ಷಗಳನ್ನು ಕುರಿತು:

ದೇಹವೇ ತಾನೆಂದು ಬಾಳುವುದೆ ಬಂಧ
ಮೋಹಕ್ಕೆ ತಾ ಸಿಲುಕಿ ಬಳಲುವುದೆ ಬಂಧ ॥ (505)

ಕರ್ಮದಿಂದುಂಟಾಯ್ತು ಘೋರಭವಬಂಧ
ನಿರ್ಮಲಾಂತಃಕರಣ-ವಿಲ್ಲದಿರೆ ಬಂಧ ॥ (509)

ಅಧ್ಯಯನನಿರತ ವೇದಾಂತ ಸುಬ್ಬಯ್ಯ

ಭಿನ್ನವೆಂಬುದು ಶೂನ್ಯವಾಗುವುದೆ ಮುಕ್ತಿ
ಚಿನ್ಮಯನೆ ತಾನಾಗಿ ಮೆರೆಯುವುದೆ ಮುಕ್ತಿ ॥ (533)

ಎಲ್ಲವನು ಕಳೆದು ತಾ-ನುಳಿಯುವುದೆ ಮುಕ್ತಿ
ಎಲ್ಲೆಲ್ಲಿಯುಂ ತುಂಬಿ ತುಳುಕುವುದೆ ಮುಕ್ತಿ ॥ (534)

ಶೋಕ ಮೋಹಗಳಿಲ್ಲದಿರುವುದೇ ಮುಕ್ತಿ
ಬೇಕು ಬೇಡೆಂಬುದನು ಬಿಟ್ಟಿರಲು ಮುಕ್ತಿ ॥ (536)

('ತತ್ತ್ವಸಿದ್ಧಿ')

ಇದಿಯೇ ನಿಜ ಪರಮಾರ್ಥಂಬಗುನು
ಇದಿ ಯೋಗೀಶುನಿ ಸುಸ್ಥಿತಿಯಗುನು
ವಿರತಿ ಭಾಗ್ಯ ಸಂಪನ್ನುಂಡತಡು
ಸ್ಥಿರಮತಿತೋ ವರ್ತಿಂಚುಚುನುಂಡು
ಇಂದ್ರಿಯಮುಲು ನಿಗ್ರಹಮ್ಮೈಯುಂಡು
ಸಂದೇಹಮುಲೆವ್ವಿಯು ಲೇಕುಂಡು
ಏ ಕೋರಿಕ ಲೇಕುಂಡೆಡುವಾಡು
ಏಕಾಂತಂಬುನ ಯತಚಿತ್ತುಂಡು॥

('ಪರಮಾರ್ಥಗೀತ')

* * *

ಶಾಸ್ತ್ರಜಿಜ್ಞಾಸೆ

ಶಾಂಕರಸಿದ್ಧಾಂತಸಂಬಂಧಿಯಾದ ಹಲವು ಅಂಶಗಳು ದೀರ್ಘಕಾಲದಿಂದ ಅನಿರ್ಣೀತವಾಗಿ ಉಳಿದಿವೆ. ನಿದರ್ಶನಕ್ಕೆ : 'ಪಂಚಪಾದಿಕಾ' ಎಂಬ ಹೆಸರಿನಲ್ಲಿ ಪ್ರಚಲಿತವಾಗಿರುವ ಅನು-ವ್ಯಾಖ್ಯಾನವು ಶಂಕರರ ನೇರ ಶಿಷ್ಯರಾದ ಪದ್ಮಪಾದರಿಂದ ರಚಿತವಾದುದೆಂದು ಶ್ರದ್ಧಾವಂತರು ಸ್ವೀಕರಿಸಿದ್ದರೂ ಸಂಶೋಧಕವಲಯಗಳಲ್ಲಿ ಇದು ನೂರಕ್ಕೆ ನೂರರಷ್ಟು ಸಿದ್ಧಗೊಂಡಿಲ್ಲ; ಶಂಕೆಗಳು ಉಳಿದಿವೆ. ಎರಡನೆಯದಾಗಿ ಮಾಯೆಯೂ ಅವಿದ್ಯೆಯೂ ಅಭಿನ್ನಗಳು ಮೊದಲಾದ ಕೆಲವು ಪಂಚಪಾದಿಕಾ ಮಂಡನೆಗಳ ಬಗೆಗೆ ವಿದ್ವಾಂಸರಲ್ಲಿ ಏಕಾಭಿಪ್ರಾಯ ಇಲ್ಲ. ಅದರಂತೆ ವಾಚಸ್ಪತಿಮಿಶ್ರರಚಿತ 'ಭಾಮತೀ' ವ್ಯಾಖ್ಯಾನದಲ್ಲಿ ಧ್ವನಿತವಾಗಿರುವ ಮಾಯೆಯೇ ಜಗತ್ಕಾರಣ ಮೊದಲಾದ ಕೆಲವು ಮಂಡನೆಗಳೂ ಶಂಕರೋಪದಿಷ್ಟ ಈಶ್ವರತತ್ತ್ವಕ್ಕೆ ಹೊಂದಿಕೆಯಾಗದು ಎಂಬ ಅಭಿಪ್ರಾಯ ಒಂದು ವಿದ್ವದ್ವರ್ಗದಲ್ಲಿ ಉಂಟು.

ಇದರ ಹೊರತಾಗಿಯೂ ವೇದಾಂತ ವಿದ್ವದ್ವಲಯಗಳಲ್ಲಿ ಅನು-ವ್ಯಾಖ್ಯಾನಗಳ ಹಲವು ವಿವರಣೆಗಳು ಶಾಂಕರಭಾಷ್ಯಸಮ್ಮತವಲ್ಲವೆಂಬ ಅಭಿಪ್ರಾಯಗಳು ಇದ್ದವು.

ಉದಾಹರಣೆಗೆ: ಅವಿದ್ಯೆಯೆಂಬುದೂ ಅಧ್ಯಾಸ ಅಥವಾ ಆರೋಪಿತವೆಂಬ ನಿಲವು ಶಾಂಕರಭಾಷ್ಯದಲ್ಲಿ ವ್ಯಕ್ತವಾಗಿದ್ದರೆ ಪಂಚಪಾದಿಕಾದಲ್ಲಿ ಅವಿದ್ಯೆಯೆಂಬುದು ಜಡಶಕ್ತಿಯೆಂದೂ ಅಧ್ಯಾಸಕ್ಕೆ ಉಪಾದಾನಕಾರಣವೆಂದೂ ಪ್ರತಿಪಾದನೆ ಇದೆ – ಎಂದರೆ ಕಾರಣರೂಪವಾದ 'ಮೂಲ ಅವಿದ್ಯೆ' ಒಂದು ಇರುತ್ತದೆ ಎನ್ನಲಾಗಿದೆ. ಆದರೆ ಈ ವಿವರಣೆಗೆ ಆಚಾರ್ಯರ ಪ್ರಸ್ಥಾನತ್ರಯ ಭಾಷ್ಯದಲ್ಲಿ ಸಮರ್ಥನೆ ಇದೆಯೆ ಎಂಬುದು ವಾದಗ್ರಸ್ತ.

ಇಂತಹ ಕೆಲವು ವಿವರಗಳು ಕೇವಲ ದರ್ಶನವನ್ನು ಚಚ್ಚೌಕಗೊಳಿಸುವ ಆಶಯದಿಂದ ಸಂರಚನೆಗೊಂಡಿವೆಯೇ ಹೊರತು ಶಾಂಕರಭಾಷ್ಯಕ್ಕೆ ಅನುಗುಣವಾಗಿಲ್ಲ ಎಂಬುದು ಸುಬ್ಬಯ್ಯನವರ ಟೀಕೆ. ಇದಕ್ಕೂ ಸಮಾಧಾನವಿಲ್ಲದೆ ಇಲ್ಲ.

ಶಾಂಕರಸಿದ್ಧಾಂತದ ಅಡಿಗಲ್ಲು ಅಧ್ಯಾಸವೆಂಬುದು. ಅಧ್ಯಾಸವೆಂದರೆ ಒಂದರ ಮೇಲೆ ಒಂದು ಆರೋಪಿತವಾಗಿರುವುದು. ಆದರೆ ಆರೋಪಿತವಾಗಿರುವವೂ ಶಕ್ತಿವಂತಗಳೇ; ಅವುಗಳ ಮೂಲಕ ಈಶ್ವರನು ಅಭಿವ್ಯಕ್ತಗೊಂಡಿರುತ್ತಾನೆ – ಎಂಬುದು ಒಂದು ವಿವರಣೆ. ಹೀಗೆ ಹೇಳುವುದರಲ್ಲಿಯೂ ತೊಡಕು ಇಲ್ಲದಿಲ್ಲ. ಈಶ್ವರನ ಜಗದುತ್ಪತ್ತಿ ಮೊದಲಾದವುಗಳ ಕಾರಕತ್ವವನ್ನು ಸ್ವೀಕರಿಸಿದರೆ ಪ್ರಕೃತ್ಯಾದಿ ತತ್ತ್ವಗಳಿಗೂ ಅಧಿಕಾರ ಏರ್ಪಡುತ್ತದೆ. ಪ್ರಕೃತ್ಯಾದಿಗಳಿಗೆ ಅಧಿಕಾರ ಇಲ್ಲವೆಂದರೆ 'ಈಶ್ವರನು ಶೂನ್ಯಕ್ಕಷ್ಟೆ ಪ್ರಭುವೆ?' – ಎಂದೆಲ್ಲ ಪ್ರಶ್ನೆಗಳು ಬರುತ್ತವೆ. ಜಗತ್ತೆಲ್ಲ ನಿರ್ನಿಮಿತ್ತವೆಂದು ಮಂಡಿಸಿದರೆ 'ಹಾಗಾದರೆ ನೀವು ಹೇಳುವ ಮೋಕ್ಷವೆಂಬುದು ಯಾವುದರಿಂದ ಬಿಡುಗಡೆ?' ಮುಂತಾದ ಉಪಪ್ರಶ್ನೆಗಳು ಏಳುತ್ತವೆ. ಪ್ರಳಯ ಆದಾಗಲೂ ಈಶ್ವರಶಕ್ತ್ಯವಶೇಷ ಮುಂದುವರಿದಿರುತ್ತದೆ ಎಂಬ ಅಭಿಪ್ರಾಯದ ಶ್ರುತಿಗಳೂ ಉಂಟು. ಮಾಯೆಯು ಆತ್ಮವನ್ನು ಆವರಿಸುವುದನ್ನು ಅವಿದ್ಯೆ ಎಂದು ವ್ಯವಹರಿಸಲಾಗಿದೆ. ಮೋಕ್ಷದ ಎಂದರೆ ಜ್ಞಾನದ ಪ್ರಾಪ್ತಿಯಿಂದ ಇಲ್ಲವಾಗುವುದು ಅಜ್ಞಾನವೇ ಹೊರತು ಮಾಯೆಯಲ್ಲ – ಎನ್ನುವುದು ಯುಕ್ತಿಸಮ್ಮತವಾಗುತ್ತದೆ. ನಾಶವಾಗದ ಮಾಯೆಯನ್ನು ಅವಿದ್ಯೆ ಎಂದು ಕೆಲವು ವ್ಯಾಖ್ಯಾನಗಳು ಕರೆದಿರುವುದುಂಟು. ಆದರೆ ಇದನ್ನು ಒಪ್ಪಿದರೆ ಜಗತ್ತೆಲ್ಲವನ್ನು ಸೃಷ್ಟಿಸುವ ಸಾಮರ್ಥ್ಯ ಅವಿದ್ಯೆಯಲ್ಲಿ ಇದೆ ಎಂದಂತಾಗುತ್ತದೆ. ಗಾಢನಿದ್ರೆ ಅಥವಾ ಸ್ವಪ್ನರಹಿತ ನಿದ್ರೆಯು ನಿಸ್ತರಂಗವೆಂಬ ಮಂಡನೆ ಇದೆ. ಸುಷುಪ್ತಿಯಲ್ಲಿ ಇರುವುದು ವಿದ್ಯೆಯೆ, ಅವಿದ್ಯೆಯೆ? ಸುಷುಪ್ತಿಯಲ್ಲಿ ಅವಿದ್ಯೆಯು ಇರುವುದಿಲ್ಲವೆಂದಲ್ಲಿ ಅವಿದ್ಯೆಯು ತನ್ನನ್ನು ತಾನೇ ನಷ್ಟಗೊಳಿಸಿದೆ ಎಂದಾಗುತ್ತದೆ. ಹಾಗೆಂದಲ್ಲಿ ಶಾಸ್ತ್ರಕಲಾಪಗಳೆಲ್ಲ ಅರ್ಥಹೀನ ಎಂದಂತಾಗದೆ? ಆದುದರಿಂದ ಸುಷುಪ್ತಿಯಲ್ಲಿಯೂ ಅವಿದ್ಯೆ ಇರುತ್ತದೆನ್ನುವುದು ಸತರ್ಕವಾಗುತ್ತದೆ. ಅದೇ 'ಮೂಲಾವಿದ್ಯಾ'; ಸುಷುಪ್ತ ಸ್ಥಿತಿಯಲ್ಲಿ ಅವಿದ್ಯೆಯು ಅವ್ಯಕ್ತವಾಗಿರುತ್ತದಷ್ಟೆ – ಎಂದು ಹೇಳಬಹುದಲ್ಲವೆ?

ಈ ವಾದಸರಣಿಯ ಮೂಲಕ ಸುಬ್ಬಯ್ಯನವರು ಖಂಡಿಸಲೆಳಸಿದುದು 'ಬ್ರಹ್ಮವು ಶುದ್ಧ ಚೈತನ್ಯವಾದುದರಿಂದ ಅದು ಸರ್ವಶಕ್ತವಲ್ಲ, ಸರ್ವಶಕ್ತನಾದ ಈಶ್ವರನು ಜಗತ್ಕಾರಣ' ಮೊದಲಾದ ಧಾಟಿಯ ಕೆಲವು ಶಾಂಕರೋತ್ತರ ವ್ಯಾಖ್ಯಾನಾಂತರ್ಗತ ಮಂಡನೆಗಳನ್ನು. ಈ ಜಾಡಿನ ಶೋಧನೆಯನ್ನು ಸುಬ್ಬಯ್ಯನವರು ಹಲವು ವರ್ಷಗಳೇ ಮಾಡಿದರು.

ಪ್ರಳಯದ ಮತ್ತು ಸುಷುಪ್ತಿಯ ಸ್ಥಿತಿಯಲ್ಲಿಯೂ ಅವಿದ್ಯೆಯು ಬೀಜರೂಪದಲ್ಲಿ ಎಂದರೆ ಅಪ್ರಕಟಿತವಾಗಿ ಇರುತ್ತದೆ – ಎಂಬ ಅಭಿಪ್ರಾಯವು ಗೋವಿಂದಾನಂದರ 'ರತ್ನಪ್ರಭಾ' ಅನು–ವ್ಯಾಖ್ಯಾನ ಮೊದಲಾದೆಡೆಗಳಲ್ಲಿ ಸೂಚಿತವಾಗಿದೆ. ಆದರೆ ಇದನ್ನು ಯಥೋಕ್ತವಾಗಿ ಸ್ವೀಕರಿಸುವುದು ಶ್ರುತಿಗೂ ಭಾಷ್ಯಕ್ಕೂ ಸಮ್ಮತವಾಗಲಾರದು. ವಿಷಯ ಇಷ್ಟಕ್ಕೆ ಮುಗಿಯುವುದಿಲ್ಲ. ಸುಷುಪ್ತ ಸ್ಥಿತಿಯಲ್ಲಿ ಅವಿದ್ಯೆಯು ಇದ್ದರೂ ಅದು ಅಭಿವ್ಯಕ್ತಗೊಳ್ಳದ ಕಾರಣದಿಂದ ಇಲ್ಲವೆಂಬಂತೆಯೇ ಆಗುತ್ತದೆ – ಇತ್ಯಾದಿ ಕೋಟಿ–ಪ್ರತಿಕೋಟಿಗಳು ಎದುರಾಗುತ್ತವೆ. ಬೇರೆ ಮಾತುಗಳಲ್ಲಿ ಹೇಳಬೇಕೆಂದರೆ: ಭಗವತ್ಪಾದರು 'ಅವಿದ್ಯೆ' ಎಂಬ ಶಬ್ದವನ್ನು ಮಿಥ್ಯಾಜ್ಞಾನ, ಭ್ರಾಂತಿಜ್ಞಾನ, ಅಧ್ಯಾಸ ಎಂಬ ಅರ್ಥದಲ್ಲಿ ಬಳಸಿದರೆ ಅನು–ವ್ಯಾಖ್ಯಾನಗಳು ಅಧ್ಯಾಸಕ್ಕೂ ಮೂಲವಾಗಿ ಆವರಣಾತ್ಮಕವಾದದ್ದು ಅವಿದ್ಯೆ ಎಂದು ಪ್ರತಿಪಾದಿಸಿವೆ.

ಇದೊಂದು ಮುಗಿಯದ ಚರ್ಚೆ. ಎರಡು ಪಕ್ಷಗಳವರಿಗೂ ವಾದವನ್ನು ಎಷ್ಟು ಹುಲುಸಾಗಿ ಬೇಕಾದರೂ ಬೆಳೆಸಲು ಆಸ್ಪದವಿದೆ. ಒಂದು ಆಯಾಮದಲ್ಲಿ ಈ ವಿಷಯವು ಜಗನ್ಮಿಥ್ಯಾತ್ವ ಸ್ಥಾಪನೆಗೆ ಸಂಬಂಧಿಸಿದೆ. ಆ ಚರ್ಚೆ ಮಧುಸೂದನಸರಸ್ವತಿಗಳ 'ಅದ್ವೈತಸಿದ್ಧಿ'ಯಲ್ಲಿಯೂ ಮುಂದುವರಿದಿದೆ.

ಭಾಷ್ಯಾನುಗುಣ ಶಾಂಕರಸಿದ್ಧಾಂತಕ್ಕೂ ವ್ಯಾಖ್ಯಾನಾನುಗುಣ ಮಂಡನೆಗೂ ನಡುವೆ ಇರುವ ಪ್ರಮುಖ ಭೇದವೆಂದು ಸುಬ್ಬಯ್ಯನವರು ಸ್ಥಾಪಿಸಲೆಳಸಿದ ಪರಾಮರ್ಶನೆಯ ಮುಖ್ಯ ಅಂಶವೆಂದರೆ: ಬ್ರಹ್ಮವು ನಿರ್ವಿಶೇಷವೆಂಬುದು ಹೌದಾದರೂ ಅದು ಸರ್ವಜ್ಞ–ಸರ್ವಶಕ್ತವಾದುದರಿಂದ ಅದೇ ಜಗತ್ತಿಗೆ ಕಾರಣವೆಂಬುದು ಭಾಷ್ಯದ ಸಿದ್ಧಾಂತ; ಇದರಿಂದ ಭಿನ್ನವಾಗಿ ಬ್ರಹ್ಮದ ಸರ್ವಜ್ಞತ್ವವು ಆಗಂತುಕವೆಂದೂ ಅದೂ ಜ್ಞಾನಬಾಧ್ಯವೆಂದೂ ಅದು ನಿರ್ವಿಶೇಷವಾಗಿರುವುದರಿಂದ ಜಗತ್ಕಾರಣವಾಗಲಾರದೆಂದೂ ಮಾಯಾವಿಶಿಷ್ಟ ಈಶ್ವರನೇ ಜಗತ್ಕಾರಣನೆಂದೂ ವ್ಯಾಖ್ಯಾನಕರ್ತರ ಪ್ರತಿಪಾದನೆ. ಈ ಎರಡು ದೃಷ್ಟಿಗಳ ಪೈಕಿ ಮೊದಲನೆಯದು ಶಾಂಕರಭಾಷ್ಯಸಮ್ಮತವೆಂದೂ ಎರಡನೇ ದೃಷ್ಟಿಯಲ್ಲಡಗಿರುವ ಯುಕ್ತಿಯು ಭಾಷ್ಯ ವಿರೋಧಿಯಾದುದೆಂದೂ ಸುಬ್ಬಯ್ಯನವರ ವಿಶ್ಲೇಷಣೆ.

ಹೇಳಿಕೇಳಿ ಇದು ಶಾಸ್ತ್ರವಿಷಯವಾದುದರಿಂದ ಆಡುಮಾತಿನಲ್ಲಿ ಈ ವಿವಾದದ ಪೂರ್ವಾಪರಗಳನ್ನು ತಿಳಿಯಪಡಿಸುವುದು ಸುಲಭವಲ್ಲ. ವಿಷಯದ ಗಂಭೀರತೆಯನ್ನು ಪರಿಚಯ ಮಾಡಿಕೊಡುವ ಉದ್ದೇಶದಿಂದಷ್ಟೆ ಅದನ್ನು ಇಲ್ಲಿ ಸಂಕ್ಷೇಪಿಸಬೇಕಾಯಿತು.

ಈ ವಿವಾದದ ನಿರ್ಣಯ ಏನೆಂಬುದು ಹೇಗಾದರಿರಲಿ. ಶಾಸ್ತ್ರದ ಪರಿಪ್ರೇಕ್ಷ್ಯದಿಂದ ಮುಖ್ಯವೆನಿಸಬಹುದಾದ ಕೆಲವು ಅಂಶಗಳನ್ನು ಸುಬ್ಬಯ್ಯನವರು ಮುನ್ನೆಲೆಗೆ ತಂದರೆಂಬುದು ಸ್ಮರಿಸಬೇಕಾದ ಸಂಗತಿ. ಈಗ್ಗೆ ಐವತ್ತು ವರ್ಷಗಳ ಹಿಂದೆ ಮೇಲಣ ವಿಷಯವು ವೇದಾಂತಪಂಡಿತರ ಎರಡು ಬಣಗಳ ನಡುವೆ ಹಲವು ವರ್ಷ ಚರ್ಚೆಗಳಿಗೆ ಗ್ರಾಸವಾಗಿದ್ದಿತು. 'ಮೂಲಾವಿದ್ಯಾ ಎಂಬುದು ಇದೆಯೆ, ಇಲ್ಲವೆ?' ಈ ಅಂಶವನ್ನು ಕೇಂದ್ರೀಕರಿಸಿಕೊಂಡು ಉನ್ನತ ವಿದ್ವದ್ವಲಯಗಳಲ್ಲಿ ತೀಕ್ಷ್ಣ ಚರ್ಚೆಗಳು ನಡೆದವು.

ಕೆಲವು ವಿಷಯಗಳ ಸ್ವರೂಪದಿಂದಾಗಿ ಇದಮಿತ್ಥಂ ಎಂಬ ನಿಷ್ಪಾದನೆಯು ದುಃಶಕ್ಯವಾಗುತ್ತದೆ. ಆಳವಾದ ಪರೀಕ್ಷಣೆಗೆ ಒಳಪಟ್ಟಿರದ ಕೆಲವು ಜಟಿಲ ಅಂಶಗಳ ಪರಿಶೀಲನೆಯಲ್ಲಿ ಭಾಷ್ಯಶ್ರದ್ಧೆಯ ಕಾರಣದಿಂದಾಗಿ ಸುಬ್ಬಯ್ಯನವರು ತೊಡಗಿಕೊಂಡರೆಂಬುದು ವಿಶೇಷ. ಅದ್ವೈತಸಿದ್ಧಾಂತದ ಸ್ಥಾಪನೆಗೆ ಶಾಂಕರಭಾಷ್ಯವೇ ಪರ್ಯಾಪ್ತವೆಂದು ಗಾಢವಾಗಿ ನಂಬಿದ್ದವರು ಸುಬ್ಬಯ್ಯನವರು. ಈ ಶ್ರದ್ಧೆಯಿಂದ ಹುಟ್ಟಿಕೊಂಡದ್ದು ಮೇಲೆ ಪ್ರಸ್ತಾವಿಸಿದ ಅವರ ಶಾಸ್ತ್ರಜಿಜ್ಞಾಸೆ. ಅವರ ಅದಮ್ಯ ಜ್ಞಾನತೃಷೆ ಇದಕ್ಕೆ ಚೋದಕವಾಗಿದ್ದಿತು.

ಹೀಗಿದ್ದೂ ಕೊನೆಕೊನೆಯ ದಿನಗಳಲ್ಲಿ ಇಂತಹ ವಿವಾದಪ್ರಪಂಚದ ಬಗೆಗೆ ಸುಬ್ಬಯ್ಯನವರು ಜಿಹಾಸೆ ತಳೆದು ಆಂತರಂಗಿಕ ಸಾಧನೆಯಲ್ಲಿ ನೆಮ್ಮದಿ ಕಾಣುತ್ತಿದ್ದರೆನಿಸುತ್ತಿತ್ತು.

ವೇದಾಂತಚಿಂತನೆಗೂ ವೇದಾಂತಪ್ರಸಾರಕ್ಕೂ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡು ಭಗವದಭಿಮುಖ ಬದುಕಿನಲ್ಲಿ ಸಾರ್ಥಕತೆ ಕಂಡುಕೊಂಡ ಧನ್ಯಜೀವಿ ವೇದಾಂತ ಸುಬ್ಬಯ್ಯನವರು. 'ಶರಣನ ಗುಣ ಮರಣದಲ್ಲಿ ನೋಡಬೇಕು' ಎಂಬ ಸಾಮತಿಗೂ ಅವರು ನಿದರ್ಶನವಾದರು. ಶಂಕರಜಯಂತಿಗೆ ಎರಡೇ ದಿನ ಮುಂಚೆ (26.4.1982) ಧ್ಯಾನಸ್ಥರಾಗಿ ಕುಳಿತಿದ್ದಂತೆಯೇ ಪ್ರಶಾಂತವಾಗಿ ಅವರು ಬ್ರಹ್ಮದಲ್ಲಿ ಲೀನರಾದರು.

[ಈ ಲೇಖನದ ಪರಿಷ್ಕರಣದಲ್ಲಿ ನೆರವನ್ನಿತ್ತ ಪೂಜ್ಯ ಶ್ರೀ ಪರಮಾನಂದಭಾರತಿ ಸ್ವಾಮಿಗಳು, ಶ್ರೀ ಗೀತಾಪ್ರಭು, ಶತಾವಧಾನಿ ಡಾ॥ ರಾ. ಗಣೇಶ್ – ಈ ಮೂವರಿಗೂ ಋಣಿಯಾಗಿದ್ದೇನೆ.

– **ಎಸ್.ಆರ್.ಆರ್.**]

4. ಬೆಳಗೆರೆ ಕೃಷ್ಣಶಾಸ್ತ್ರೀ

ಈಗ್ಗೆ ಒಂದು ವರ್ಷದ ಹಿಂದೆ ಬೆಳಗೆರೆ ಕೃಷ್ಣಶಾಸ್ತ್ರಿಗಳ (22.5.1916–23.3.2013) ಜನ್ಮಶತಾಬ್ದವನ್ನು ವಿವಿಧೆಡೆ ಸಂಭ್ರಮದಿಂದ ಆಚರಿಸಲಾಯಿತು. ಜೀವಮಾನದುದ್ದಕ್ಕೂ ಯಾವುದೇ ಪ್ರಚಾರವನ್ನಾಗಲಿ ಸಂಮಾನಗಳನ್ನಾಗಲಿ ಬಯಸದೆ ಅವಧೂತರಂತೆ ನಿರ್ಲಿಪ್ತರಾಗಿದ್ದ ಕೃಷ್ಣಶಾಸ್ತ್ರಿಗಳು ಹೀಗೆ ಉತ್ಸವಾಚರಣೆಗಳಿಗೆ ವಸ್ತುವಾದುದು ಸ್ವಾರಸ್ಯಕರ. ಇಂತಹ ಹಲವು ವಿಶೇಷತೆಗಳು ಗಮನ ಸೆಳೆಯುತ್ತವೆ. ಜೋಳಿಗೆಯ ಹೊರತು ಬೇರಾವ ಅವಲಂಬವೂ ಇಲ್ಲದ ಅವರು ಚಿತ್ರದುರ್ಗ ಜಿಲ್ಲೆಯ ಬೆಳಗೆರೆಯಂತಹ ಗ್ರಾಮೀಣ ಪ್ರದೇಶದಲ್ಲಿ ಶ್ರೀ ಶಾರದಾಮಂದಿರ ವಿದ್ಯಾಸಂಸ್ಥೆ, ಶ್ರೀ ವೇದಾವತಿ ಉಚಿತ ವಿದ್ಯಾರ್ಥಿನಿಲಯಗಳಂತಹ ಸಂಸ್ಥಾಸಮೂಹವನ್ನು ಸ್ಥಾಪಿಸಿ ಬೆಳೆಸಿದರು. (ಈಗ ಈ ಸಂಸ್ಥೆಗಳು ಅರ್ಧಶತಾಬ್ದವನ್ನು ಆಚರಿಸಿವೆ). ಸಾಹಿತಿ ಎನಿಸಿಕೊಳ್ಳುವ ಉದ್ದೇಶವಿಲ್ಲದ ಕೃಷ್ಣಶಾಸ್ತ್ರಿಗಳು ತಮ್ಮ ಆತ್ಮಾನಂದಕ್ಕಾಗಿ ಮತ್ತು ಎಲ್ಲವನ್ನೂ ಹಂಚಿಕೊಳ್ಳುವ ಸ್ವಭಾವದಿಂದಾಗಿ ಲಿಖಿತಪಡಿಸಿದ 'ಸಾಹಿತಿಗಳ ಸ್ಮೃತಿ', 'ಮರೆಯಲಾದೀತೆ?', 'ಯೇಗ್ದಾಗೆಲ್ಲಾ ಐತೆ' ಕೃತಿಗಳು ಬೆಸ್ಟ್‌ಸೆಲ್ಲರ್‌ಗಳಾದವು. ಲೋಕಪ್ರೇಮದಿಂದ, ಸ್ಫಟಿಕೋಪಮ ಚಾರಿತ್ರದಿಂದಲೇ ಎರಡು ಪೀಳಿಗೆಗಳ ಆಬಾಲವೃದ್ಧರಿಗೆ ಅವರು ಆದರಣೀಯರೆನಿಸಿದರು. ಎಲ್ಲೆಡೆ ವ್ಯಾವಹಾರಿಕದೃಷ್ಟಿಯ ದರ್ಬಾರು ನಡೆದಿರುವಾಗ ಕೃಷ್ಣಶಾಸ್ತ್ರಿಗಳಂತಹ ಧ್ಯೇಯಾರಾಧಕರು ಮನೆಮಾತಾದುದು ಒಂದು ವಿಸ್ಮಯ. ಹಾಗೆಂದು ಅವರು ಪಾರಲೌಕಿಕದತ್ತ ದೃಷ್ಟಿ ನೆಟ್ಟವರಲ್ಲ. ಜಗತ್ತನ್ನು ಅವರಷ್ಟು ಪ್ರೀತಿಸಿದವರು ಬೇರೆಯಿಲ್ಲ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ – ಜೀವದ ಸಹಜತೆಯನ್ನು ಬಿಟ್ಟುಕೊಡದೆ ಉಳಿಸಿಕೊಂಡದ್ದು ಅವರ ಅನನ್ಯತೆ – ಎನ್ನಬೇಕಾದೀತು. ಸಾರ್ಥಕ ಶಿಕ್ಷಕವೃತ್ತಿ, ಗ್ರಾಮೀಣ ಸಮಾಜದ ಸಾಂಸ್ಕೃತಿಕ ಉನ್ಮೀಲನ ಮೊದಲಾದ ಅವರ ಸಾಧನೆಗಳು ಸುತ್ತಲಿನ ಲೋಕದೊಡನೆ ಅವರು ತಳೆದಿದ್ದ ತಾದಾತ್ಮ್ಯದ ಅಭಿವ್ಯಂಜನೆಗಳಷ್ಟೆ.

'ದಂತ'ಕಥೆ

ಮೊದಲ ಪತ್ನಿಯ ನಿಧನಾನಂತರ ದ್ವಿತೀಯ ವಿವಾಹ ಆಗಬೇಕೆಂಬ ಒತ್ತಾಯ ನಂಟರಿಂದ ಬಂದಾಗ ಕೃಷ್ಣಶಾಸ್ತ್ರಿಗಳು ದಂತವೈದ್ಯರಲ್ಲಿಗೆ ಹೋಗಿ ಅಷ್ಟೂ ಹಲ್ಲುಗಳನ್ನು

ಕೀಳಿಸಿಕೊಂಡು ಬಂದು 'ವೃದ್ಧ'ರಾಗಿ ಪ್ರಕಟಗೊಂಡದ್ದು – ಮೊದಲಾದ ಘಟನೆಗಳು ಜನಜನಿತವೇ ಆಗಿವೆ. ಹೀಗೆ ಬೋಸುಬಾಯಿ, ತಲೆಗೆ ಸುತ್ತಿದ ಬಿಳಿಯ ಪಾಗು ಅವರ ಪರಿಚಾಯಕವೇ ಆಗಿಬಿಟ್ಟವು.

ಕೃಷ್ಣಶಾಸ್ತ್ರಿಗಳ ಕೈಂಕರ್ಯ ಲಭಿಸದಿದ್ದರೆ ಮುಕುಂದೂರುಸ್ವಾಮಿಗಳಂತಹ ಅವಧೂತರು ಹೊರಗಿನ ಎಂದರೆ ದೂರದ ಪ್ರದೇಶಗಳವರಿಗೆ ಬಹುಮಟ್ಟಿಗೆ ಅಪರಿಚಿತರಾಗಿಯೆ ಉಳಿದುಬಿಡುತ್ತಿದ್ದ ಸಂಭವವಿದ್ದಿತು. ಅಂತಹ ಸಾಧಕಧಾರೆಯವರು ಪ್ರಚಾರವಿಮುಖರು. ಆ ಸಾಧಕರೂ ಅನುಯಾಯಿಗಳೂ ಸತ್ಸಂಗ, ಧ್ಯಾನ, ಸಾಧನಕೇಂದ್ರಿತ ವಿಚಾರವಿನಿಮಯ, ಭಕ್ತಿಪೋಷಕ ಕಲಾಪಗಳು – ಇವುಗಳಲ್ಲಿ ಆನಂದಿಸುತ್ತಿರುತ್ತಾರೆ. ಇದನ್ನು ಅವರು ತಮ್ಮ ಜೀವನಕ್ರಮವನ್ನಾಗಿ ಮಾಡಿಕೊಂಡಿರುತ್ತಾರೆ. ಹೇಗೋ ತಮ್ಮ ಸಂಖ್ಯೆಯನ್ನು ಬೆಳೆಸಬೇಕು ಎಂಬಂತಹ ಅಂದಾಜುಗಳಿಂದ ಅವರು ಗಾವುದ ದೂರ. ಅವಧೂತರು ಬೆಳಕಿನ ಸಾನ್ನಿಧ್ಯದಲ್ಲಿ ನೆಲಸಿರುವ ಕಾರಣದಿಂದಲೇ ಅವರು ವಿಶಾಲ ಪ್ರಭಾವವನ್ನು ಬೀರಲು ಶಕ್ತರಾಗಿರುತ್ತಾರೆ. ಆತ್ಮೋತ್ಕರ್ಷವನ್ನು ಲಕ್ಷ್ಯವಾಗಿರಿಸಿಕೊಂಡ ಪ್ರಯತ್ನಶೀಲರು ಅಂತಹ ಸಿದ್ಧಪುರುಷರ ಸಂಪರ್ಕವನ್ನು ಅಹೋಭಾಗ್ಯವಾಗಿ ಭಾವಿಸುತ್ತಾರೆ.

ಬೆಳಗೆರೆ ಕೃಷ್ಣಶಾಸ್ತ್ರಿಗಳು, ಅವರ ತಂದೆ ಚಂದ್ರಶೇಖರಶಾಸ್ತ್ರಿಗಳು (1874–1966), ಕೃಷ್ಣಶಾಸ್ತ್ರಿಗಳ ಅಣ್ಣ ಸೀತಾರಾಮಶಾಸ್ತ್ರಿಗಳು (1906–1977) – ಎಲ್ಲರೂ ವಿಶಿಷ್ಟರೆನಿಸುವ ವ್ಯಕ್ತಿಗಳೇ. ಚಂದ್ರಶೇಖರಶಾಸ್ತ್ರಿಗಳನ್ನೂ ಸೀತಾರಾಮಶಾಸ್ತ್ರಿಗಳನ್ನೂ ನೋಡಿದ್ದವರಿಗೆ ಕೃಷ್ಣಶಾಸ್ತ್ರಿಗಳು 'ಸಾಮಾನ್ಯರಲ್ಲಿ ಅಸಾಮಾನ್ಯರು' ಎಂಬಂತೆ ಜೀವನ ನಡೆಸಿದುದು ಸಹಜವೆಂದೇ ಅನಿಸುತ್ತದೆ. ಒಂದಷ್ಟುಮಟ್ಟದ ಅವಧೂತಪ್ರವೃತ್ತಿ, ಲೋಕಾನುಕಂಪ, ತಮ್ಮ ಮನಃಸ್ಪಂದನಗಳನ್ನು ಇತರರೊಡನೆ ಹಂಚಿಕೊಳ್ಳುತ್ತಿರಬೇಕೆಂಬ ಉತ್ಸಾಹ, ಸದಾ ಉದಾತ್ತರೀತಿಯಲ್ಲಿಯೆ ಚಿಂತನೆ ನಡೆಸುವುದು; – ಈ ಗುಣಗಳು ಅವರೆಲ್ಲರಲ್ಲಿಯೂ ಸ್ವಭಾವಗತವಾಗಿದ್ದವು. ಕೃಷ್ಣಶಾಸ್ತ್ರಿಗಳ ಬದುಕಿನ ವಿನ್ಯಾಸವಂತೂ ಈ ಪೀಳಿಗೆಯ ಸಾವಿರಾರು ಸಹೃದಯರಿಗೂ ನೇರ ಪರಿಚಿತವೇ ಆಗಿದೆ.

ಒಂದು ಕುಟುಂಬಪರಿವಾರದಲ್ಲಿ ಅಷ್ಟೊಂದು ಪ್ರತಿಭಾಬಾಹುಳ್ಯ ಮಡುಗಟ್ಟಿದ್ದುದು ಒಂದು ವಿಸ್ಮಯ. ತಳುಕಿನ ವೆಂಕಣ್ಣಯ್ಯ, ತ.ಸು. ಶಾಮರಾಯ, ಆಶುಕವಿ ಚಂದ್ರಶೇಖರ ಶಾಸ್ತ್ರಿಗಳು, ಶಾಸ್ತ್ರಿಗಳ ಪುತ್ರಿ ಕವಯಿತ್ರಿ ಜಾನಕಮ್ಮ, ಪುತ್ರ ಖ್ಯಾತ ನಾಟಕಕಾರ 'ಕ್ಷೀರಸಾಗರ' ಕಾವ್ಯನಾಮದ ಸೀತಾರಾಮಶಾಸ್ತ್ರಿ, ಕಾದಂಬರಿಕಾರ ತ.ರಾ.ಸು., ಮುಕುಂದೂರು ಅವಧೂತರನ್ನು ಪರಿಚಯಿಸಿದ ಮತ್ತು ಸ್ವಯಂ ಅವಧೂತಸದೃಶರೇ ಆದ ಕೃಷ್ಣಶಾಸ್ತ್ರಿಗಳು.... ಅದೊಂದು ಪ್ರತಿಭೆಯ ಸಂತೆ.

ಅಣ್ಣ, ತಂದೆ

ಕೃಷ್ಣಶಾಸ್ತ್ರಿಗಳ ಅಣ್ಣ ಸೀತಾರಾಮಶಾಸ್ತ್ರಿಗಳು ಗಣಿತಶಾಸ್ತ್ರ ಪ್ರಾಧ್ಯಾಪಕರಾಗಿದ್ದವರು. ಹಲವಾರು ಕಥೆ, ಕವಿತೆ, ಜೀವನಚರಿತ್ರೆಗಳನ್ನು ಬರೆದಿದ್ದರು. ಸ್ವಕ್ಷೇತ್ರವಾದ ಗಣಿತಶಾಸ್ತ್ರ ಕುರಿತು 'ಸಂಖ್ಯೋದ್ಯಾನ', 'ಕಲನವಿನ್ಯಾಸ' ಮೊದಲಾದ ವಿರಳ ಕೃತಿಗಳನ್ನು ಬರೆದಿದ್ದರು. 'ಕ್ಷೀರಸಾಗರ' ಎಂಬ ಹೆಸರಿನಲ್ಲಿ ಅವರು ಬರೆದ 'ಕಲಹ ಕುತೂಹಲ', 'ಅರ್ಧನಾರಿ', 'ಅರ್ಧಾಂಗಿ' ಮೊದಲಾದ ಹತ್ತಾರು ವಿನೋದಪ್ರಧಾನ ನಾಟಕಗಳು 1940–1950ರ ವರ್ಷಗಳಲ್ಲಿ ವಿಶಾಲ ಜನಪ್ರಿಯತೆ ಪಡೆದಿದ್ದವು; ಅವು ಅನೇಕ ಶಾಲೆಗಳಲ್ಲಿಯೂ ಸಾಮಾಜಿಕ ವೇದಿಕೆಗಳಲ್ಲಿಯೂ ಪ್ರದರ್ಶನಗೊಳ್ಳುತ್ತಿದ್ದವು. ಭಾರತೀಯ ಗಣಿತ, ಖಗೋಳಶಾಸ್ತ್ರಜ್ಞ ಪರಂಪರೆಯ ಬಗೆಗೆ 1950ರ ದಶಕದಲ್ಲಿ ಅವರು ನೀಡುತ್ತಿದ್ದ ಉಪನ್ಯಾಸಗಳು ಮರೆಯಲಾಗದವು. ಆ ಕಾಲಕ್ಕೆ ಹೆಚ್ಚು ಪರಿಚಿತವಾಗಿರದ, ಸಂಶೋಧಕವಲಯಗಳಲ್ಲಷ್ಟೆ ಸಂಚಲನೆ ಇದ್ದ ಆರ್ಯಭಟ, ವರಾಹಮಿಹಿರ, ಭಾಸ್ಕರಾಚಾರ್ಯ ಮೊದಲಾದವರನ್ನು ಕುರಿತು ಸೀತಾರಾಮಶಾಸ್ತ್ರಿಗಳೂ ಅವರ ಸಮಕಾಲೀನರೂ ಗಣಿತಶಾಸ್ತ್ರ ಪ್ರಾಧ್ಯಾಪಕರೂ ಆಗಿದ್ದ ಪ್ರೊ॥ ಎನ್.ಕೆ. ನರಸಿಂಹಮೂರ್ತಿಗಳೂ ಮಾಡುತ್ತಿದ್ದ ಭಾಷಣಗಳು ನಮ್ಮನ್ನೆಲ್ಲ ಪುಲಕಗೊಳಿಸುತ್ತಿದ್ದವು.

ಕೃಷ್ಣಶಾಸ್ತ್ರಿಗಳ ತಂದೆ ಚಂದ್ರಶೇಖರಶಾಸ್ತ್ರಿಗಳನ್ನು ನಿಕಟವಾಗಿ ಕಂಡಿದ್ದ ಬಹುಮಂದಿಯ ಏಕರೂಪದ ಉದ್ಗಾರ 'ಅವರು ಏಕೋ ನಮಗೆ ಅರ್ಥವೇ ಆಗಿಲ್ಲ' ಎಂಬುದು. ಈ ವರ್ಣನೆಯನ್ನು ಆಗಂತುಕವೆನ್ನುವಂತಿಲ್ಲ. ಏಕೆಂದರೆ ಚಂದ್ರಶೇಖರಶಾಸ್ತ್ರಿಗಳಂಥವರೂ ಕೃಷ್ಣಶಾಸ್ತ್ರಿಗಳಂಥವರೂ ಅರ್ಥವಾಗದಿರುವುದು ಸ್ವಾಭಾವಿಕ. ಕಾರಣ ಇಷ್ಟೆ: ಅರ್ಥವಾಗುವುದು ಎಂಬ ಪ್ರಕ್ರಿಯೆ ಬೌದ್ಧಿಕವಲಯಕ್ಕೆ ಸೇರಿದುದು. ಶಾಸ್ತ್ರಿಗಳು ತಂದೆ–ಮಗ ಇಬ್ಬರೂ ಇದ್ದುದೂ ನಡೆದದ್ದೂ ಆಡಿದುದೂ ಪ್ರಜ್ಞೆಯ ಸ್ತರದಲ್ಲಿ. ಬುದ್ಧಿಯಿಂದ ಅತೀತವಾದುದನ್ನು ಬುದ್ಧಿಯ ಪರಿಭಾಷೆಯಲ್ಲಿ ಹೇಗೆ ಹಿಡಿದಿಡಲಾಗುತ್ತದೆ?

ಬೆಳಗೆರೆ ಕೃಷ್ಣಶಾಸ್ತ್ರಿಗಳು, ಅವರ ಅಕ್ಕ ಜಾನಕಮ್ಮ, ತಂದೆ ಚಂದ್ರಶೇಖರಶಾಸ್ತ್ರಿಗಳು – ಮೂವರದೂ ಒಡನಾಟವಿದ್ದವರು ದ.ರಾ. ಬೇಂದ್ರೆ. ಅರವಿಂದರು ಮೊದಲಾದ ಅನುಭಾವಿಗಳ ಅಂತರಂಗವನ್ನು ಮಥಿಸಿದ್ದ ಬೇಂದ್ರೆಯವರು ಚಂದ್ರಶೇಖರಶಾಸ್ತ್ರಿಗಳ ಬಗೆಗೆ ಹೇಳುತ್ತ "ಚಂದ್ರಶೇಖರಶಾಸ್ತ್ರಿಗಳನ್ನು ಕುರಿತು ಯೋಚಿಸಿದರೆ 'ಗಿಡದ ಗುಂಪಿನ ವಿಸ್ತಾರದಲ್ಲಿ ಅಡವಿಯೇ ಕಾಣದೋ' ಎಂಬಂತೆ ಆಗುತ್ತದೆ" – ಎಂದಿದ್ದರು. ಒಂದು ಪದ್ಯದಲ್ಲಿ ಬೇಂದ್ರೆ ಚಂದ್ರಶೇಖರಶಾಸ್ತ್ರಿಗಳನ್ನು 'ಪ್ರಾಚೀನ ದಂಡಕಾರಣ್ಯ' ಎಂದೇ ಸಂಬೋಧಿಸಿದ್ದರು.

ಅಂಟಿಲ್ಲದ ನಂಟು

ಅವಧೂತರೆಂಬವರು ಹೇಗಿರುತ್ತಾರೆ? – ಎಂದು ಯಾರಾದರೂ ಕೇಳಿದರೆ ಹೀಗಿರುತ್ತಾರೆ ಎಂದು ಬೊಟ್ಟಿಟ್ಟು ತೋರಿಸಬಹುದಾಗಿದ್ದವರು ಚಂದ್ರಶೇಖರಶಾಸ್ತ್ರಿಗಳು. ಅವಧೂತತ್ವ ಅವರಲ್ಲಿ ಅಷ್ಟು ಮಡುಗಟ್ಟಿ ಮೆರೆದಿತ್ತು. ಶ್ರಮದಿಂದ ಪಾಂಡಿತ್ಯ ಗಳಿಸಿಕೊಂಡಿದ್ದರು; ಆದರೆ ಮಾಸ್ತರಿಕೆ ಮಾಡಹೊರಡಲಿಲ್ಲ. ಪೌರೋಹಿತ್ಯದಲ್ಲಿ ನಿಷ್ಣಾತರು; ಆದರೆ ಅದನ್ನು ವೃತ್ತಿಯಾಗಿ ಮಾಡಿಕೊಳ್ಳಲಿಲ್ಲ – ಎಲ್ಲಿ ನಾಲ್ಕು ಕಾಸು ಬಂದುಬಿಟ್ಟೀತೋ ಎಂದು ಹೆದರುತ್ತಿದ್ದರೇನೋ! ಅಪಾರ ಕಾವ್ಯರಚನಾಪ್ರತಿಭೆ ಇದ್ದವರು; ಆದರೆ ವ್ಯವಸ್ಥಿತ ಸಾಹಿತ್ಯರಚನೆಯಿಂದ ಪೂರ್ತಿ ವಿಮುಖರಾಗಿದ್ದರು. ಮನೆತನದ ಹಿಡಿಯಷ್ಟು ಆಸ್ತಿಯಿಂದ ಯಾವಾಗಲೋ ಎಷ್ಟೋ ಬಂದರೆ ಬಂತು, ಇಲ್ಲದಿದ್ದರೆ ಇಲ್ಲ. ಆದರೆ ಶಾಸ್ತ್ರಿಗಳು ಎಂದೂ ಯಾರ ಮುಂದೆಯೂ ಕೈಚಾಚಲಿಲ್ಲ.

ತೆಲುಗುಸೀಮೆಯ ಸಂಗಮೇಶ್ವರಸ್ವಾಮಿಗಳೆಂಬ ಉಚ್ಚಕೋಟಿಯ ವಿದ್ವಾಂಸರು ಒಮ್ಮೆ ಬಳ್ಳಾರಿಯಲ್ಲಿ ಭಗವದ್ಗೀತೆ ಕುರಿತು ಪ್ರವಚನಮಾಡುತ್ತ "ಸ್ಥಿತಪ್ರಜ್ಞ ಹೇಗಿರುತ್ತಾನೆಂದು ಕಾಣಬೇಕಾದರೆ ಇವರನ್ನು ನೋಡಿರಿ" ಎಂದು ಸಭೆಯಲ್ಲಿ ಕುಳಿತಿದ್ದ ಚಂದ್ರಶೇಖರಶಾಸ್ತ್ರಿಗಳ ಕಡೆಗೆ ಬೆರಳು ಮಾಡಿದ್ದರು.

ಚಂದ್ರಶೇಖರಶಾಸ್ತ್ರಿಗಳು ಬಾಯಿಬಿಟ್ಟರೆ ಹೊರಡುತ್ತಿದ್ದವು ಸುಭಾಷಿತಗಳೇ: "ಬೇಸಿಗೆಯಲ್ಲಿ ಎಡವಿದ ಕಲ್ಲನ್ನು ಮಳೆಗಾಲದಲ್ಲಿ ಕೀಳಬೇಕು. ಈಗಲೇ ಕೀಳುತ್ತ ಕುಳಿತರೆ ಬರೀ ಮೈಕೈ ನೋವು, ಅಷ್ಟೆ" – ಇಂಥವು.

ಜಾತಿ–ಮತ ಭೇದಗಳು ಅರ್ಥಶೂನ್ಯವೆಂದು ಅವರು ಉಪನ್ಯಾಸ ಮಾಡಲು ಹೊರಡಲಿಲ್ಲ; ತಮ್ಮ ಬದುಕಿನ ರೀತಿಯ ಮೂಲಕವೇ ಆ ಸಂದೇಶವನ್ನು ಪ್ರಸಾರ ಮಾಡಿದರು. ನಡೆ, ನುಡಿ, ಚಿಂತನೆ – ಎಲ್ಲವೂ ಅವರಲ್ಲಿ ಏಕೀಭವಿಸಿಬಿಟ್ಟಿತ್ತು. ಹೀಗೆ ಅವರದು ಪರಿಪೂರ್ಣ ವ್ಯಕ್ತಿತ್ವ.

"ಭಾವನಾ ಪ್ರಪಂಚದೊಳಗೆ ತೇಲಿ ನಲಿವುದೇ ಸುಖ;
ಕೋವಿದರನು ಕಂಡು ತಿಳಿದು ಸುಮ್ಮನಿರುವುದೇ ಸುಖ;
ಬೇಕು ಎಂಬ ಮಾತು ಬಿಟ್ಟು, ಬೇಡವೆಂಬುದೇ ಸುಖ.
ಲೋಕದಾಟವೆಲ್ಲ ನೋಡಿ ನಗುತಲಿರುವುದೇ ಸುಖ"

– ಇದೇ ಅವರದೇ ಮಾತುಗಳಲ್ಲಿ ಅವರ ಉಪನಿಷತ್ತು.

ವಿಶ್ವಬಂಧು

ಅವರ ಆಶುಕವನದ ಮಿಂಚು ಆಗಲಿ ನಿತ್ಯಹಸನ್ಮುಖವಾಗಲಿ ಪ್ರಯತ್ನದಿಂದ ರೂಢಿಸಿಕೊಂಡವೆನಿಸುತ್ತಿರಲಿಲ್ಲ. ಅವರು ಇದ್ದದ್ದೇ ಹಾಗೆ, ಅಷ್ಟೆ. ಅವರ ಒಂದು ಲಾವಣಿ:

"ಮನಸಿರಬೇಕಣ್ಣ –
ಒಳ್ಳೆ ಮನಸಿರಬೇಕಣ್ಣ.
ಮನಸೊಂದು ಮಮತೆಯ ಬೀಡಾಗಬೇಕು;
ಮಧುವಿನಂಥ ಒಂದು ಮಾತೇ ಸಾಕು.
ನಗುತಿರಬೇಕಣ್ಣ –
ನಗೆಯೊಳು ತಿರುಳಿರಬೇಕಣ್ಣ –
ಬಗೆ ಬಗೆ ಬಣ್ಣವ ಸವಿದಿರಬೇಕು –
ಜಗವನೆ ತನ್ನೊಳು ತುಂಬಿಸುವಂಥ – ಮನಸಿರಬೇಕಣ್ಣ !"

ಕೃಷ್ಣಶಾಸ್ತ್ರಿಗಳನ್ನಾಗಲಿ ಅವರ ತಂದೆ ಚಂದ್ರಶೇಖರಶಾಸ್ತ್ರಿಗಳನ್ನಾಗಲಿ ಮುಕುಂದೂರುಸ್ವಾಮಿಗಳನ್ನಾಗಲಿ ನೆನೆಯುವಾಗ ಮನಃಪಟಲದ ಮುಂದೆ ಮೂಡುವುದು ಅವಧೂತತ್ವದ ಚಿತ್ರ ಮಾತ್ರವೇ ಹೊರತು ಯಾವುದೇ ಬಾಹ್ಯಜೀವನವಿವರಗಳಲ್ಲ. ಅವರು ನಿಜವಾಗಿ ಇದ್ದರೆ, ಅಥವಾ ಅವರು ಇದ್ದರೆಂದು ಉಳಿದವರೆಲ್ಲ ಭ್ರಮಿಸಿದ್ದರೆ? – ಎಂಬ ವಿಸ್ಮಯವಷ್ಟೆ ಉಳಿಯುತ್ತದೆ.

ಬೀಚಿ ಅವರ 'ಸರಸ್ವತೀಸಂಹಾರ' ಕಾದಂಬರಿಯಲ್ಲಿನ ಬ್ರಹ್ಮಾನಂದಶಾಸ್ತ್ರಿಗಳೆಂಬ ಪಾತ್ರಕ್ಕೆ ಮಾತೃಕೆಯಾಗಿದ್ದವರು ಬೆಳಗೆರೆ ಚಂದ್ರಶೇಖರಶಾಸ್ತ್ರಿಗಳು – ಎಂದು ಬೀಚಿ ಅವರೇ ನನ್ನಲ್ಲೊಮ್ಮೆ ಹೇಳಿದ್ದರು.

ಡಿ.ವಿ.ಜಿ., ಮಾಸ್ತಿ, ವಿ.ಸೀ., ರಾಜರತ್ನಂ ಮೊದಲಾದವರಿಗೂ ಚಂದ್ರಶೇಖರ ಶಾಸ್ತ್ರಿಗಳಿಗೂ ನಡುವೆ ಒಂದು ಅಲೌಕಿಕ ಬಾಂಧವ್ಯ ಏರ್ಪಟ್ಟಿತ್ತು. ಹೀಗೆ ಶಾಸ್ತ್ರಿಗಳು ಲಹರಿ ಮೂಡಿದಾಗ ಬೆಂಗಳೂರಿಗೆ ಹೊರಟುಬಂದುಬಿಡುತ್ತಿದ್ದರು. ಹಲವು ವಾರಗಳು ಕಳೆದ ಮೇಲೆ ಒಂದು ದಿನ ಇದ್ದಕ್ಕಿದ್ದಂತೆ ಘೋಷಿಸುವರು – "ನಾನು ಊರಿಗೆ ಹೊರಡುತ್ತೇನೆ" ಎಂದು. "ಇನ್ನು ನಾಲ್ಕು ದಿನ ಇಲ್ಲೆ ಇರಬಾರದೆ?" ಎಂದರೆ ಸುಮ್ಮನೆ ಮುಗುಳ್ನಗುವಷ್ಟೆ ಉತ್ತರವಾಗುತ್ತಿತ್ತು. ವಿ. ಸೀತಾರಾಮಯ್ಯನವರ ಮನೆಯವರು "ದಾರಿಗೆ ಏನಾದರೂ ಮಾಡಿಕೊಡುತ್ತೇವೆ" ಎನ್ನುತ್ತಿದ್ದರೆ ಇಂಥ ಯಾವ ನಚ್ಚುನಸೆಗಳಿಗೆ ಅವಕಾಶವನ್ನೇ ಕೊಡದೆ ಕಾಲ್ತೆಗೆದು ಅವರು ಗೇಟು ದಾಟಿ ಆಗಿರುತ್ತಿತ್ತು. ಬರುವುದೂ ಮೋಡದ ಹಾಗೆ, ಹೊರಡುವುದೂ ಮೋಡದ ಹಾಗೆ.

ಎಂಬತ್ತು ದಾಟಿದ ಮೇಲೆ ಅವರನ್ನು ಕುರಿತು 'ನಿಮಗೀಗ ವಯಸ್ಸು ಆಯಿತು, ಊರೂರು ಸುತ್ತುವುದನ್ನು ಈಗಲಾದರೂ ಕಡಮೆ ಮಾಡಿ' ಎಂದಾಗ ಚಂದ್ರಶೇಖರಶಾಸ್ತ್ರಿಗಳು ತಮ್ಮ ಅಭ್ಯಾಸದಂತೆ ಆಶುಕವನದ ಮೂಲಕವೇ ಉತ್ತರಿಸಿದ್ದರು:

"ಸಾಯಾನಾಂದ್ರೆ ನನಗೆ ಪುರಸತ್ತೇ ಇಲ್ಲ, ಪುರಸತ್ತೇ ಇಲ್ಲ!
ಪುರಸತ್‌ಮಾಡ್ಕೊಂಡ್ ಕುಂತ್ರೆ ಸಾವೇ ಬರದಲ್ಲ –
ಸಾವೇ ಬರದಲ್ಲ!"

ಬೆಳಗೆರೆ ಕೃಷ್ಣಶಾಸ್ತ್ರೀ

(22.5.1916 – 23.3.2013)

ಸತ್ಯದ ಸಾನ್ನಿಧ್ಯ

ಚಂದ್ರಶೇಖರಶಾಸ್ತ್ರಿಗಳ ಪ್ರತಿಭೆಯು ಅಧ್ಯಯನಾದಿಮಾರ್ಗಗಳಿಂದ ಸಿದ್ಧಿಸಿದ್ದುದಲ್ಲ; ಸ್ವಯಂಭೂ ಆದದ್ದು. ಕಾವ್ಯ, ವೇದಾಂತ, ಧರ್ಮ ಮೊದಲಾದವುಗಳ ಮೂಲರೂಪವನ್ನು ಹೃದಯಸ್ಥ ಮಾಡಿಕೊಂಡಿದ್ದವರು ಅವರು. ಹೀಗೆ ಅವರ ಮಾತುಗಳೂ ಅವರು ನಿಂತಕಾಲಲ್ಲಿ ಸುರಿಯುತ್ತಿದ್ದ ಆಶುಕವನಗಳೂ ಅಧ್ಯಾತ್ಮಸಂಪನ್ನವೂ ಕಾಂತಿಮಯವೂ ಆಗಿರುತ್ತಿದ್ದವು. ಸ್ವಯಂ ಸಂಗೀತಶಾಸ್ತ್ರವನ್ನು ಕಲಿತವರಲ್ಲದಿದ್ದರೂ ಹಳ್ಳಿಯ ರೈತರಿಗೆ ಗಾಯನಕಲೆಯನ್ನು ಕಲಿಸಿದ್ದರು.

ಅವರಮಟ್ಟಿಗೆ ತಾತ್ತ್ವಿಕ ಜಿಜ್ಞಾಸೆ ಪೂರ್ತಿ ಅಪ್ರಕೃತವೆನಿಸುತ್ತಿತ್ತು. ಸತ್ಯವು ಕಣ್ಣಿಗೇ ಢಾಳಾಗಿ ಕಾಣಿಸುತ್ತಿರುವಾಗ ಅದಕ್ಕೆ ಪ್ರಮಾಣ ಕೇಳಬೇಕೆ? – ಎಂಬುದು ಅವರ ಚಿಂತನೆಯ ಧಾಟಿ.

ಇಳಿವಯಸ್ಸಿನಲ್ಲಿ ಅನಿವಾರ್ಯವಾಗಿ ಹೆಗ್ಗರೆಯಲ್ಲಿ ವಿಶ್ರಾಂತಸ್ಥಿತಿಯಲ್ಲಿದ್ದಾಗ ಒಮ್ಮೆ ತಂದೆಯವರ ಮನಸ್ಸಿಗೆ ಲವಲವಿಕೆ ತರಲು ಕೃಷ್ಣಶಾಸ್ತ್ರಿಗಳು 'ಯಂ ಯಂ ವಾಽಪಿ ಸ್ಮರನ್ ಭಾವಂ ತ್ಯಜತಿ ಅಂತೇ ಕಲೇವರಂ' ಗೀತಾಶ್ಲೋಕದ ಅರ್ಥವೇನೆಂದು ಕೇಳಿದರು. ತಂದೆಯವರು 'ಇದು ಹೇಳುವ ಅರ್ಥವಲ್ಲ, ಮಾಡಬೇಕಾದ್ದು' ಎಂದರು. ಅದಾದ ಹಲವು ತಿಂಗಳು ಕಳೆದಮೇಲೆ ಒಂದು ದಿನ ಇದ್ದಕ್ಕಿದ್ದಂತೆ ಮಗನಿಗೆ ಆ ಹಿಂದಿನ ಪ್ರಸಂಗವನ್ನು ನೆನಪಿಸಿ 'ಈಗ ನೋಡು ಅದರ ಅರ್ಥವನ್ನು' ಎಂದವರೇ ಕಣ್ಣುಗಳನ್ನು ಮುಚ್ಚಿದರು. ಮತ್ತೆ ಕಣ್ಣು ತೆರೆಯಲಿಲ್ಲ.

ಚಂದ್ರಶೇಖರಶಾಸ್ತ್ರಿಗಳನ್ನೂ ಕೃಷ್ಣಶಾಸ್ತ್ರಿಗಳನ್ನೂ ನೋಡುವಾಗ 'ನಾವೆಲ್ಲ ಏಕೆ ಇಷ್ಟೊಂದು ಪರಿಪಾಟಲು ಪಡುತ್ತಿದ್ದೇವೆ?' ಎಂದು ಹಲವರಿಗಾದರೂ ಅನಿಸಿದ್ದೀತು. ಆದರೆ ಅವಧೂತತ್ವ ಸುಲಭಕ್ಕೆ ಸಿದ್ಧಿಸುವುದಲ್ಲ. ಅದನ್ನು ಯಾವಾವ ಜನ್ಮಾಂತರಸಂಸ್ಕಾರಗಳು ಆಗುಮಾಡಿಸುತ್ತವೋ ಯಾರು ಬಲ್ಲರು!

ವಿಚಿತ್ರವೆಂದರೆ ಕೈಯಲ್ಲಿ ದಮ್ಮಡಿ ಇಲ್ಲದ ಈ ಮಹಾನುಭಾವರುಗಳು ಅದೆಷ್ಟು ಮಂದಿಗೆ ಸಮಾಧಾನವನ್ನೂ ಪ್ರಕಾಶವನ್ನೂ ವಿತರಿಸಿದರು – ಎಂಬುದು.

ಜಗದ್‌ವ್ಯವಹಾರಗಳ ನಟ್ಟನಡುವೆ ಇದ್ದೂ ನಿಸ್ಸಂಗಿಗಳಾಗಿ ಇರುವುದು ಹೇಗೆಂಬುದನ್ನು ನಿದರ್ಶನಪಡಿಸಿದವರು ಈ ತಂದೆ–ಮಕ್ಕಳು.

ದುರ್ಲಭ ಗುಣಸಮುಚ್ಚಯ

ಬಿಳಿಯುಡುಪಿನ ಸಂನ್ಯಾಸಿ ಎಂದೆಲ್ಲ ಕೃಷ್ಣಶಾಸ್ತ್ರಿಗಳನ್ನು ಜನರು ವರ್ಣಿಸಿರುವುದುಂಟು. ಅದು ಅವರ ನಿರ್ಲಿಪ್ತತೆಯನ್ನು ಸ್ವಲ್ಪಮಟ್ಟಿಗೆ ಸೂಚಿಸಬಹುದು.

ಆದರೆ ಅವರಂತೆ ಸದಾ ಸಮಾಜಹಿತಸಾಧಕ ಪ್ರಯತ್ನಗಳಲ್ಲಿ ಮಗ್ನರಾದಂತಹ ಸಂನ್ಯಾಸವ್ರತಿಗಳು ಅತ್ಯಂತ ದುರ್ಲಭ.

ಶಂಕರಾಚಾರ್ಯರ 'ವಿವೇಕಚೂಡಾಮಣಿ'ಯ ಆರಂಭದಲ್ಲಿಯೆ ಬರುವ ಅರ್ಥಗರ್ಭಿತ ಮಾತು ಪ್ರಸಿದ್ಧವಾದುದು:

ದುರ್ಲಭಂ ತ್ರಯಮೇವೈತತ್ ದೇವಾನುಗ್ರಹಹೇತುಕಮ್ ।
ಮನುಷ್ಯತ್ವಂ ಮುಮುಕ್ಷುತ್ವಂ ಮಹಾಪುರುಷಸಂಶ್ರಯಃ ॥

"ಮೂರು ವಿಶೇಷವಾದ ಗುಣಗಳು ಜನರಲ್ಲಿ ಹೊಕ್ಕಿರುವುದು ದೈವಾನುಗ್ರಹ ಇದ್ದರೆ ಮಾತ್ರ: ಜೀವಾನುಕಂಪಾದಿ ಮಾನವೀಯ ಗುಣ, ಮೋಕ್ಷಾಭಿಮುಖತೆ, ಮಹಾಪುರುಷರ ಒಡನಾಟ."

ಈ ಮೂರೂ ಗುಣಗಳ ಸಮಾವೇಶವು ಬೆಳಗೆರೆ ಕೃಷ್ಣಶಾಸ್ತ್ರಿಗಳಲ್ಲಿ ಇದ್ದಿತು. ಸಂಸ್ಕಾರಪ್ರಾಪ್ತಿಯಿಂದಲೋ ಸ್ವಯತ್ನದಿಂದಲೋ – ಹೇಗೋ ಈ ಗುಣಗಳು ಅವರಲ್ಲಿ ದಟ್ಟವಾಗಿ ಇದ್ದುದಂತೂ ಹೌದು.

ಈ ಗುಣಗಳ ಉದಾತ್ತತೆಯನ್ನು ಗ್ರಹಿಸುವುದು ಕಷ್ಟವಲ್ಲ. ಅವು ಶಾಸ್ತ್ರಿಗಳಲ್ಲಿ ರಕ್ತಗತವಾಗಿದ್ದವೆಂಬುದು ವಿಶೇಷ. ಹೇಳಿಕೊಳ್ಳುವಂತಹ ಉಪಪತ್ತಿ ಇಲ್ಲದ, ಅತಿಸಾಮಾನ್ಯವೆನ್ನಬಹುದಾದ ಸ್ಥಿತಿಯಲ್ಲಿದ್ದ ಈ ಜಂಗಮರು ಸೇವಾವಕಾಶ ಕಂಡಲ್ಲಿ ನುಗ್ಗುತ್ತಾರೆ, ತಾವೇ ಅಂತಹ ಅವಕಾಶಗಳನ್ನು ಸೃಷ್ಟಿಸಿಕೊಳ್ಳುತ್ತಾರೆ. ಗ್ರಾಮಸ್ಥರೊಡನೆ ಅವರಿಗಿದ್ದ ತಾದಾತ್ಮ್ಯ ಪರಿಪೂರ್ಣವಾದದ್ದು. ಹೀಗಾಗಿ 'ನಾನು ಇತರರಿಗೆ ಏನೋ ಮಾಡುತ್ತಿದ್ದೇನೆ' ಎಂಬ ಭಾವನೆಯೇ ಅವರ ಮನಸ್ಸಿನಲ್ಲಿ ಹಾದುಹೋದದ್ದಿಲ್ಲ. ಇನ್ನು ಮುಮುಕ್ಷುತ್ವ ಅವರ ನರನಾಡಿಗಳಲ್ಲಿ ಇದ್ದುದರಿಂದಲೇ ಅವರು ಮುಕುಂದೂರುಸ್ವಾಮಿಗಳಂತಹ ಅವಧೂತರಿಂದ ಆಕರ್ಷಿತರಾದುದು. ಮೂರನೆಯದಾಗಿ ಮಹಾಪುರುಷಸಂಶ್ರಯ. ಸಾಮಾನ್ಯವಾಗಿ ಯಾವುದೋ ಒಂದು ವೃತ್ತಿಗೋ ಪ್ರವೃತ್ತಿಗೋ ಜಾಯಮಾನಕ್ಕೋ ಸೇರಿದವರು ಒಟ್ಟುಗೂಡುವುದು ಸ್ವಾಭಾವಿಕ. ಅಂತಹ ಒಡನಾಟ ಹೆಚ್ಚಿನ ಸಂದರ್ಭಗಳಲ್ಲಿ ಸನ್ನಿವೇಶಾನುಗುಣವೋ ಅನುಕೂಲಾನುಗುಣವೋ ಆಗಿರುತ್ತದೆ. ಆದರೆ ಈ ಜಾಡಿನಿಂದ ಭಿನ್ನವಾದದ್ದು ಕೃಷ್ಣಶಾಸ್ತ್ರಿಗಳ ಮಹಾಪುರುಷಸಂಶ್ರಯ. ಯಾವುದೇ ಕ್ಷೇತ್ರದ ಸಾಧಕರಿದ್ದರೂ ಕೃಷ್ಣಶಾಸ್ತ್ರಿಗಳು ತಾವಾಗಿ ಅವರನ್ನು ಅರಸಿ ಹೋಗುವರು, ಊರೂರು ತಿರುಗುವರು.

ಎಲ್ಲರೊಳಗೊಂದಾಗಿ....

ಜೈಮಿನಿಭಾರತದಂತಹ ಸುಲಭವಲ್ಲದ ಪ್ರೌಢಕಾವ್ಯವನ್ನು ಶಾಲಾ ಮಕ್ಕಳಿಗೆ ತನ್ಮಯತೆಯಿಂದ ಪಾಠ ಮಾಡುತ್ತಿದ್ದ ಮತ್ತು ಶಾಲಾಮಾಸ್ತರಿಕೆ ಪೂರ್ವಜನ್ಮಪುಣ್ಯದ

ಫಲವೆಂದು ನಂಬಿದ್ದ ಸಿದ್ಧಯ್ಯ, ಅವರ ಒಡನಾಡಿ ಅಲ್ಲಿಸಾಬ್, ದೇವನೂರಿನ ಪಟೇಲ – ಸಜ್ಜನಿಕೆಯ ಸಾಂದ್ರರೂಪವಾಗಿದ್ದ ಮಹಮದ್ ಹಯಾತ್‌ಸಾಬ್, ಜಾನಪದ ಹಾಡುಗಳ ಅಕ್ಷಯಪಾತ್ರೆಯಾಗಿದ್ದ ಗೊಲ್ಲರಹಟ್ಟಿಯ ಸಿರಿಯಜ್ಜಿ – ಇಂತಹ ಹತ್ತಾರು ಮಂದಿಯನ್ನು ಬೆಳಗೆರೆ ಕೃಷ್ಣಶಾಸ್ತ್ರಿಗಳು ತಮ್ಮ ವ್ಯಕ್ತಿಚಿತ್ರಣಗಳ ಮೂಲಕ ಅಮರರಾಗಿಸಿದ್ದಾರೆ.

ಇಂತಹ ಅಪೂರ್ವ ವ್ಯಕ್ತಿಗಳು ಎಲ್ಲ ಜಿಲ್ಲೆಗಳಲ್ಲಿಯೂ ಅಲ್ಲಲ್ಲಿ ಕಾಣಿಸಿಕೊಳ್ಳುತ್ತಾರೆ. ಅಂತಹವರನ್ನು ಎಲ್ಲರೂ ನೋಡಿಯೂ ಇರುತ್ತಾರೆ. ಆದರೆ ಹೊರನೋಟಕ್ಕೆ ಸಾಮಾನ್ಯರೆನಿಸುವ ಅಂತಹವರ ವ್ಯಕ್ತಿತ್ವದ ಉದಾತ್ತತೆಯನ್ನು ಗುರುತಿಸಿ ಮೆರೆಸಿರುವುದು ಬೆಳಗೆರೆ ಕೃಷ್ಣಶಾಸ್ತ್ರಿಗಳ ವಿಶಿಷ್ಟತೆ. ಸ್ವಯಂ ಉದಾತ್ತರಾದವರ ಕಣ್ಣಿಗೆ ಎಲ್ಲೆಡೆ ಉದಾತ್ತತೆಯೇ ಎದ್ದುಕಾಣುತ್ತದೆ.

ಕೃಷ್ಣಶಾಸ್ತ್ರಿಗಳ ಮನೋಧರ್ಮ ಅವರ ತಂದೆಯ ಮನೋಧರ್ಮವೇ. ಒಂದಷ್ಟು ವರ್ಷ ಕೃಷ್ಣಶಾಸ್ತ್ರಿಗಳು ಮಾಸ್ತರಿಕೆಯನ್ನು ಮಾಡಿದರು; ಆದರೆ ಎಂದೂ ತೇರೀಜುಬೇರೀಜು ಮಾಡಹೋಗಲಿಲ್ಲ. ಆಂತರಂಗಿಕ ಸಂತೃಪ್ತಿಯಲ್ಲಿ ನೆಲೆನಿಂತವರನ್ನು ಬಾಹ್ಯ ಸನ್ನಿವೇಶಗಳು ಹೇಗೆ ತಾನೆ ಬಾಧಿಸಿಯಾವು?

ಉಪಾಧ್ಯಾಯವೃತ್ತಿಯೂ ಅವರು ತುಂಬಾ ಯೋಚನೆಮಾಡಿ ಆರಿಸಿಕೊಂಡದ್ದೆಂದು ಹೇಳುವುದು ಕಷ್ಟ. ಆರಂಭದಲ್ಲಿ ಶ್ಯಾನುಭಾವಿಕೆ ನಡೆಸಿದ್ದರು. ಒಂದಷ್ಟು ಸಮಯ ಕಾರ್ಖಾನೆಯೊಂದರಲ್ಲಿ ಉದ್ಯೋಗಿಯಾಗಿದ್ದುದೂ ಉಂಟು. ಅಲ್ಲಿಯೂ ದಕ್ಷತೆಗಾಗಿ, ಕಾರ್ಯಶ್ರದ್ಧೆಗಾಗಿ ಹೆಸರು ಮಾಡಿದ್ದರು. ಹಿತೈಷಿಗಳೊಬ್ಬರು ಶಾಸ್ತ್ರಿಗಳ ಜಾಯಮಾನಕ್ಕೆ ಅಧ್ಯಾಪಕವೃತ್ತಿ ಹೆಚ್ಚು ಹೊಂದಿಕೆಯಾಗುತ್ತದೆಂದು ಸಲಹೆ ಮಾಡಿದಾಗ ಶಾಸ್ತ್ರಿಗಳು 'ಅದೇ ಆಗಲಿ' ಎಂದು ಶಾಲಾಮಾಸ್ತರರಾದರು. ಆದರೆ ಎಲ್ಲರಂತಲ್ಲ ಈ ಮಾಸ್ತರರು. ಪಾಠ್ಯಾಂಶಗಳನ್ನು ಮುಗಿಸುವುದು ಅವರಿಗೆ ಕಷ್ಟದ ಕೆಲಸವಾಗಿರಲಿಲ್ಲ. ಮಕ್ಕಳಿಂದ ಕೋಲಾಟ ಆಡಿಸುವರು, ಹಾಡುಗಳನ್ನು ಹಾಡಿಸುವರು, ನಾಟಕಗಳನ್ನು ಆಡಿಸುವರು. ಶಾಸ್ತ್ರಿಗಳು ಬರೆದ ಮತ್ತು ಆಡಿಸಿದ ನಾಟಕಗಳು ಅನೇಕ ಬಹುಮಾನಗಳನ್ನು ಪಡೆದುಕೊಂಡವು. ಅವರ 'ಹಳ್ಳಿಚಿತ್ರ' ನಾಟಕಕ್ಕೆ ಕೇಂದ್ರಸರ್ಕಾರದ ಯೋಜನಾ ಇಲಾಖೆಯ ಪಾರಿತೋಷಿಕ ದೊರೆತಿತ್ತು.

ನಿರಂತರ ಸಂಭ್ರಮೋಲ್ಲಾಸ

ಗ್ರಾಮಾಭ್ಯುದಯ, ಹಳ್ಳಿಗಳ ಏಳ್ಗೆ ಮೊದಲಾದ ಉದ್ದುದ್ದ ಮಾತುಗಳು ತಲೆಚಿಟ್ಟುಹಿಡಿಸುವಷ್ಟು ಸಲ ನಮಗೆ ಕರ್ಣತಾಡಿತವಾಗುತ್ತಿರುತ್ತವೆ. ಈ ಗಮ್ಯವನ್ನು ಯಾವುದೇ ಡಂಗುರವಿಲ್ಲದೆ ದೊಡ್ಡ ರೀತಿಯಲ್ಲಿ ಮಾಡಿ ತೋರಿಸಿದವರು ಕೃಷ್ಣಶಾಸ್ತ್ರಿಗಳು.

ಅವರು ಇದನ್ನೆಲ್ಲ ಸ್ವಪ್ರೇರಣೆಯಿಂದ ಮಾಡಿದರು – ಎಂಬುದೇ ಅವರ ಸಫಲತೆಯ ಮೂಲ. ಅವರು ಎಂದೂ ಶಾಲೆಯ ಮಾಸ್ತರಿಕೆಗೆ ತಮ್ಮನ್ನು ಮಿತಗೊಳಿಸಿಕೊಳ್ಳಲಿಲ್ಲ. ವರ್ಗವಾದ ಯಾವುದೇ ಗ್ರಾಮದಲ್ಲಿ ನೆಲೆಯೂರಿದೊಡನೆ ಪಡೆಕಟ್ಟಿಕೊಂಡು ಗ್ರಾಮನೈರ್ಮಲ್ಯೀಕರಣ ಮೊದಲಾದ ಚಟುವಟಿಕೆಗಳಲ್ಲಿ ತೊಡಗುತ್ತಿದ್ದರು. ಇಂಥವರಿಗೆ ಜನಾದರಣೆ ದೊರೆಯದೆ ಇದ್ದೀತೆ? ಇನ್ನು ಅವರ ಉತ್ಸಾಹಕ್ಕೂ ಕಾರ್ಯವಂತಿಕೆಗೂ ಮಿತಿಗಳೇ ಇರಲಿಲ್ಲ. ದೇವನೂರಿನಲ್ಲಿ ಅದ್ದೂರಿಯಾಗಿ ಅವರು ನಡೆಸಿದ ಲಕ್ಷ್ಮೀಶಕವಿಯ ಜಯಂತ್ಯುತ್ಸವ ಆ ಪ್ರಾಂತದ ಇತಿಹಾಸದ ಒಂದು ಮೈಲಿಗಲ್ಲು ಆಯಿತು. ಅದು ಒಂದಾದ ಮೇಲೊಂದರಂತೆ ಸರಣಿ ಚಟುವಟಿಕೆಗಳಿಗೆ ನಾಂದಿಯಾಯಿತು. ಒಮ್ಮೆ ವಿವಿಧ ಕಲಾ ಪ್ರದರ್ಶನ; ಒಮ್ಮೆ ಗೀತಾಜಯಂತಿ; ಒಮ್ಮೆ ನಾಟಕ; ಒಮ್ಮೆ ಗಮಕವಾಚನ; ಒಮ್ಮೆ ಜಾನಪದ ಉತ್ಸವ. ಇದು ಯಾವುದೇ ಒಂದು ಹಳ್ಳಿಯಲ್ಲಲ್ಲ. ಅವರು ಹೋದ ಎಲ್ಲೆಡೆ ಇಂಥದೇ ಸಾಹಸಸರಣಿ. ಹೆಗ್ಗರೆಯಾಗಲಿ ಮೀರಸಾಬಿಹಳ್ಳಿಯಾಗಲಿ ಆ ಕಾಲದಲ್ಲಿ ಯಾವ ಮೇಷ್ಟರೂ ಇಷ್ಟಪಟ್ಟು ಹೋಗುತ್ತಿದ್ದ ಜಾಗಗಳಲ್ಲ. ಅಂತಹ ಹಳ್ಳಿಗಳನ್ನು ಕೃಷ್ಣಶಾಸ್ತ್ರಿಗಳು ನಂದನವನಗಳನ್ನಾಗಿಸಿದರು. ಅವರು ಸ್ವಂತ ಶ್ರಮದಿಂದಲೂ ಅಣ್ಣ ಮತ್ತಿತರರ ನೆರವಿನಿಂದಲೂ ಗ್ರಾಮಸ್ಥರ ತೊಡಗುವಿಕೆಯಿಂದಲೂ ನಿರ್ಮಿಸಿರುವ ಹೆಗ್ಗರೆಯ ಶಾಲೆ ಮೊದಲಾದವು ನಿಜವಾದ ಅರ್ಥದಲ್ಲಿ ಶಾಸ್ತ್ರಿಗಳ ಸ್ಮೃತಿಗೆ ಪ್ರಜ್ವಲ ಸ್ಮಾರಕಗಳಾಗಿವೆ.

ಲೋಕಸಂಗ್ರಹಶ್ರದ್ಧೆ

ಯಾವುದೇ ನಿರ್ದಿಷ್ಟ ಆರ್ಥಿಕ ಬೆಂಬಲವಿಲ್ಲದೆ ಅಚ್ಚರಿಗೊಳಿಸುವ ಮಟ್ಟದ ಶಿಕ್ಷಣಸಂಸ್ಥೆಗಳ ನಿರ್ಮಾಣ ಮತ್ತು ಪೋಷಣೆ, ತಮ್ಮ ಚಟುವಟಿಕೆಗಳ ಸಹಜ ಪರಿಧಿಗಳಿಂದಾಚೆಗೆ ಜಿಗಿದು ಸತತವಾಗಿ ತಮ್ಮ ಸುತ್ತಲಿನ ಸಮುದಾಯಜೀವನವನ್ನು ಉನ್ಮುಖಗೊಳಿಸುವ ಹಲವಾರು ಉಪಕ್ರಮಗಳು – ಇವೆಲ್ಲ ವಿಸ್ಮಯಕರಗಳೇ. ಸಮಾಜದೊಡನೆ ಸಂಪೂರ್ಣ ತಾದಾತ್ಮ್ಯಕ್ಕೆ ಕೃಷ್ಣಶಾಸ್ತ್ರಿಗಳು ಒಂದು ವ್ಯಾಖ್ಯಾನ – ಎಂದಷ್ಟೆ ಹೇಳಬಹುದು. ಕೃಷ್ಣಶಾಸ್ತ್ರಿಗಳು ಪಡೆದಷ್ಟು ಜನಾದರಣೆ ಗಳಿಸಿದ ಸಾಧಕರು ಅತ್ಯಂತ ವಿರಳ. ಅವರು ಸಾಧಿಸಿದ ಶೈಕ್ಷಣಿಕ ಮತ್ತು ಜನಜಾಗೃತಿಪ್ರಯತ್ನಗಳು ಹೊರಗಿನ ವ್ಯಾವಹಾರಿಕ ಅಳತೆಗೋಲಿನಿಂದಲೂ ಅದ್ಭುತವೇ.

ಕೃಷ್ಣಶಾಸ್ತ್ರಿಗಳು ಆಧ್ಯಾತ್ಮಿಕ ಪ್ರಕಾಶದ ಹೊನಲಿನಲ್ಲಿಯೆ ಈಜಾಡಿದವರು ಎಂಬುದನ್ನು ಈಗಿನ ಪೀಳಿಗೆಯವರನೇಕರೂ ಕಣ್ಣಿಂದ ನೋಡಿದ್ದಾರೆ. ಅವರ ಸದಾ ಉನ್ಮುಖವಾದ ಮನೋವ್ಯಾಪಾರ, ಭಾವಜಗತ್ತಿನಲ್ಲಿ ಅವರ ತಲ್ಲೀನತೆ ಮೊದಲಾದ ಸ್ವಭಾವವನ್ನು ಗಮನಿಸಿದಾಗ ಅವರ ಒಂದಷ್ಟು ವರ್ಷಗಳ ಮಾಸ್ತರಿಕೆ, ಶಾಲೆಗಳ ನಿರ್ಮಾಣ, ನಾಟಕಗಳನ್ನು ಬರೆದು ಆಡಿಸಿದುದು, ಲಕ್ಷ್ಮೀಶೋತ್ಸವ

ಮೊದಲಾದವನ್ನು ಸಂಘಟಿಸಿದುದು – ಮೊದಲಾದ ವ್ಯಾವಹಾರಿಕ ಸಾಹಸಗಳೆಲ್ಲ ಅವರ ಮೂಲಸ್ವಭಾವಕ್ಕೆ ಸ್ವಲ್ಪ ಹೊರತಾದ ಆಗಂತುಕ ಸಾಧನೆಗಳೆಂದೇ ಭಾಸವಾದೀತು. ಅವನ್ನೆಲ್ಲ ಅವರಿಂದ ಮಾಡಿಸಿದುದು ಅವರ ಲೋಕಸಂಗ್ರಹಶ್ರದ್ಧೆಯಷ್ಟೆ. ಅವರ ಸಾತ್ತ್ವಿಕತೆಯು ಗಳಿಸಿಕೊಂಡಿದ್ದ ವಿಶಾಲ ಜನಾನುರಾಗದ ಫಲಿತಗಳೆಂದು ಅವನ್ನು ಭಾವಿಸಬಹುದು. ಅವರಲ್ಲಿ ಸ್ವಕೇಂದ್ರಿತ ಚಿಂತನೆಯ ಲವಲೇಶವೂ ಇರಲಿಲ್ಲವೆಂಬುದು ಎಷ್ಟು ಪಾರದರ್ಶಕ ಸಂಗತಿಯಾಗಿತ್ತೆಂದರೆ – ಅವರ ಸೇವಾಕಾರ್ಯಗಳ ಖರ್ಚು ಸದಾ ಅವರ ಸಂಗ್ರಹಕ್ಕಿಂತ ಎಷ್ಟು ಹೆಚ್ಚಾಗಿರುತ್ತಿತ್ತು ಎಂದರೆ – ಅವರ ಕಿಸೆಯಲ್ಲಿ ನೂರೋ ಐನೂರೋ ರೂಪಾಯಿ ಕಂಡರೆ ಅದು ನಿಕಟವರ್ತಿಗಳಲ್ಲಿ ವಿನೋದದ ವಿಷಯವೇ ಆಗುತ್ತಿತ್ತು.

ಬದುಕಿನ ಬಗೆಗೆ ಪ್ರೀತಿ

ಬದುಕಿನ ಬಗೆಗಿನ ಪ್ರೀತಿಯೇ ಅವರ ಪ್ರಮುಖ ಬೋಧನಸಾಮಗ್ರಿಯಾಗಿತ್ತು ಎನ್ನಬಹುದು. ಅವರಿಗೆ ವರ್ಗವಾದ ಊರುಗಳಲ್ಲಿ ಶಾಲೆಗೆ ಕಟ್ಟಡ ಇಲ್ಲದಿದ್ದಲ್ಲಿ ತಾವೇ ದೇಣಿಗೆ ಸಂಗ್ರಹಿಸಿ ಗ್ರಾಮಸ್ಥರನ್ನು ಶ್ರಮದಾನದಲ್ಲಿ ತೊಡಗಿಸಿ ಸೌಕರ್ಯಗಳನ್ನು ನಿರ್ಮಿಸಿದರು. ಅವಶ್ಯವಿದ್ದಲ್ಲಿ ಮೇಷ್ಟರುಗಳಿಗೆ ವಸತಿಗಳನ್ನೂ ಯೋಜಿಸಿದರು, ವಿದ್ಯಾರ್ಥಿಗಳಿಗಾಗಿ ಊಟ-ವಸತಿಗಳನ್ನೂ ಏರ್ಪಡಿಸಿದರು, ತೀವ್ರ ಅವಶ್ಯವಿದ್ದೆಡೆ ಆಸ್ಪತ್ರೆಯನ್ನೂ ಕಟ್ಟಿಸಿದರು. ಒಂದೆ, ಎರಡೆ! ಸದಾ ಬರಿಗೈಯವರಾದ ಶಾಸ್ತ್ರಿಗಳು ಅದೆಷ್ಟು ಬಡಮಕ್ಕಳಿಗೆ ಧನಸಹಾಯ ಮಾಡಿದರೋ ಲೆಕ್ಕವಿಟ್ಟವರಿಲ್ಲ.

ವ್ಯಾವಹಾರಿಕತೆಗೆ ಅತೀತವಾದ ಅವರ ಈ ಲೋಕಸಂಗ್ರಹಕಾರ್ಯ ಹೋಲಿಕೆಯಿಲ್ಲದ್ದು. ಪಾರದರ್ಶಕ ಸಾತ್ತ್ವಿಕತೆ, ಎಂದೂ ಮಾಸದ ಬೋಸುಬಾಯಿಯ ಮುಗುಳ್ನಗೆ – ಇಷ್ಟು ಬಂಡವಾಳದಿಂದ ಶಾಸ್ತ್ರಿಗಳು ಎಂತಹ ಸಾಧನೆ ಮೆರೆದರು – ಎಂಬುದು ಎಲ್ಲರ ಪಾಲಿಗೂ ನಿರಂತರ ವಿಸ್ಮಯವಾಗಿಯೆ ಉಳಿಯುತ್ತದೆ. ಈ ಪವಾಡ-ಸರಣಿ ಮುಕುಂದೂರು ಅವಧೂತರು ಎಸಗಿದ ಪವಾಡಗಳಷ್ಟೆ ಚೇತೋಹಾರಿ.

ಚಿತ್ರದುರ್ಗ ಜಿಲ್ಲೆಯ ಸ್ಪೆಷಲ್ ಡೆಪ್ಯುಟಿ ಕಮಿಷನರಾಗಿದ್ದ ರಾಜಪುರೋಹಿತರ ಅಧ್ವರ್ಯದಲ್ಲಿ ತಳುಕು ಗ್ರಾಮದಲ್ಲಿ ವೆಂಕಣ್ಣಯ್ಯನವರ ಸ್ಮಾರಕವೊಂದನ್ನು ನಿರ್ಮಿಸುವ ತರದೂದು ನಡೆದಿತ್ತು. ಅಸ್ತಿಭಾರಶಿಲೆಯನ್ನೇನೊ ಆಗಿನ ಮುಖ್ಯಮಂತ್ರಿ ದೇವರಾಜ ಅರಸು ಅವರ ಕೈಯಿಂದ ಮಾಡಿಸಿದ್ದು ಆಗಿತ್ತು. ಅದೊಂದು ರಾತ್ರಿ ಊರ ಹತ್ತು ಸಮಸ್ತರೂ ಹಲವರು ಅನ್ಯ ಗಣ್ಯರೂ ಸೇರಿ ಸ್ಮಾರಕನಿರ್ಮಾಣಕ್ಕೆ ಹಣ ಎಲ್ಲಿಂದ ತರುವುದು ಎಂದು ಸಮಾಲೋಚನೆ ನಡೆಸಿದ್ದರು. ಸರ್ಕಾರವನ್ನು ಕೇಳೋಣ, ಶ್ರೀಮಂತರಿಂದ ಸಂಗ್ರಹಿಸೋಣ – ಎಂದೆಲ್ಲ ಸಲಹೆಗಳ ಹಾರಾಟ ನಡೆದಿತ್ತು.

ರಾಷ್ಟ್ರೋತ್ಥಾನ ಪರಿಷತ್ ಸಭಾಂಗಣದಲ್ಲಿ 'ಯೇಗ್ದಾಗೆಲ್ಲಾ ಐತೆ' ನಾಟಕವನ್ನು ವೀಕ್ಷಿಸುತ್ತಿರುವ ಬೆಳಗೆರೆ ಕೃಷ್ಣಶಾಸ್ತ್ರಿಗಳು (16.2.2011).

ಆದರೆ ಗಟ್ಟಿ ಸಹಾಯಕ್ಕೆ ಯಾರೂ ತಾವಾಗಿ ಮುಂದಾಗಲಿಲ್ಲ. ಅದುವರೆಗೆ ಮೌನದಿಂದ ಕುಳಿತಿದ್ದ ಬೆಳಗೆರೆ ಕೃಷ್ಣಶಾಸ್ತ್ರಿಗಳು ಎದ್ದುನಿಂತು ಮುಂದೆ ಬಂದು "ದಯವಿಟ್ಟು ನನ್ನ ವಂತಿಗೆ ಒಂದು ಸಾವಿರ ರೂಪಾಯಿ ತೆಗೆದುಕೊಳ್ಳಿರಿ" ಎಂದು ಹೇಳಿ ಹಣವನ್ನು ಅಲ್ಲಿಟ್ಟು ಹಿಂದಕ್ಕೆ ಹೋಗಿ ಕುಳಿತುಬಿಟ್ಟರು. ಕೃಷ್ಣಶಾಸ್ತ್ರಿಗಳಾದರೊ ಸಾಮಾನ್ಯ ಸ್ಕೂಲ್ ಮೇಷ್ಟ್ರು. ಆ ದಿನಗಳ ಸಂಬಳವನ್ನು ನೆನೆದರೆ ಈಗ ಅದು ಹಾಸ್ಯದ ವಿಷಯವಾಗಬಹುದಷ್ಟೆ. ಅಂತಹ ಶಾಸ್ತ್ರಿಗಳಲ್ಲಿ ಆ ಕಾಲಕ್ಕೆ ದೊಡ್ಡದೇ ಆದ ಸಾವಿರ ರೂಪಾಯಿ ಎಲ್ಲಿಂದ ಬಂದಿತು – ಎಂದು ಎಲ್ಲರೂ ದಿಗ್‌ಭ್ರಾಂತರಾದರು.

ನಡೆದಿದ್ದುದೇನೆಂದರೆ – ಆಗ್ಗೆ ಕೆಲವು ದಿನಗಳ ಹಿಂದೆಯಷ್ಟೆ 'ಆದರ್ಶ ಶಿಕ್ಷಕ' ಎಂಬ ಪ್ರಶಸ್ತಿಯ ನಿಮಿತ್ತ ಕೇಂದ್ರಸರ್ಕಾರದಿಂದ ಬಹುಮಾನವಾಗಿ ಬಂದಿದ್ದ ಹಣ ಅದು.

ಅನಿಕೇತನ

ಅದನ್ನೆಲ್ಲ ನೆನೆಯುವಾಗ ಮೂಡುವ ಅನಿಸಿಕೆ ಇದು: ಬೆಳಗೆರೆ ಕೃಷ್ಣಶಾಸ್ತ್ರಿಗಳು ಏನನ್ನೂ ಮಾಡಲಿಲ್ಲ; ಅವರು ತಾವಾಗಿ ಇದ್ದರು ಅಷ್ಟೆ. ಹೂವಿನ ಪರಿಮಳ ದೂರಕ್ಕೂ ಹರಡುವಂತೆ, ಕೃಷ್ಣಶಾಸ್ತ್ರಿಗಳ ಅಕೃತ್ರಿಮ ಸೌಗಂಧವು ಈಗ ಅದೇ ಒಂದು ಇತಿಹಾಸಖಂಡವಾಗಿಬಿಟ್ಟಿದೆ.

ಅನೇಕ ವರ್ಷಕಾಲ ಬೆಳಗೆರೆ ಕೃಷ್ಣಶಾಸ್ತ್ರಿಗಳ 'ವಸತಿ'ಯಾಗಿದ್ದುದು ಅವರ ತೋಟದ ಮೂಲೆಯೊಂದರಲ್ಲಿ ಕಟ್ಟಿದ್ದ ಗುಡಿಸಲು. ಎಲ್ಲಿಂದಲೋ ಬಂದ ಕಪ್ಪೆ, ಗುಬ್ಬಚ್ಚಿ, ಮೈನಾಹಕ್ಕಿ, ಒಮ್ಮೊಮ್ಮೆ ವಿಸಿಟಿಂಗ್ ಪ್ರೊಫೆಸರ್ ಆಗಿ ಬರುತ್ತಿದ್ದ ಹಾವು – ಇವಾವುದೂ ಅವರನ್ನು ವಿಚಲಿತಗೊಳಿಸುತ್ತಿರಲಿಲ್ಲ. 'ಅವುಗಳ ಜಾಗದಲ್ಲಿ ನಾನು ಇದ್ದೇನಷ್ಟೆ' ಎಂದು ಬೊಚ್ಚುಬಾಯಿಯ ನಗು ನಕ್ಕು ಸುಮ್ಮನಾಗುತ್ತಿದ್ದರು.

ಮಾತನ್ನು ಕೇಳಿಸಿಕೊಳ್ಳುವ ಗಿರಾಕಿ ಯಾರಾದರೂ ದೊರೆತರೆ ಕೃಷ್ಣಶಾಸ್ತ್ರಿಗಳಿಂದ ಹೊರಡುತ್ತಿದ್ದುದು ಮಾತಿನ ನಯಾಗರಾ ಜಲಪಾತ. ಅವರು ಸದಾ ಹೇಳಬಯಸುತ್ತಿದ್ದುದು ಅವರು ಕಂಡ ಹಿರಿಯರ ಬಗೆಗೆ ಮತ್ತು ತಮ್ಮ ಒಡನಾಟದಲ್ಲಿ ಬಂದ ಸಾಮಾನ್ಯರಲ್ಲಿ ಅತಿಸಾಮಾನ್ಯರಾದ ಮುಗ್ಧ ಸಜ್ಜನರ ಬಗೆಗೆ. ಇವೆಲ್ಲ ಅವರ ಅಂತರಂಗವನ್ನು ಆವರಿಸಿದ್ದ ಸಂಗತಿಗಳು. ಹೀಗಾಗಿ ಆ ವೃತ್ತಾಂತಗಳನ್ನು ಅವರು ನೂರನೆಯ ಬಾರಿ ಹೇಳುವಾಗಲೂ ಪುಲಕವನ್ನು ಅನುಭವಿಸುತ್ತಿದ್ದರು.

ನಮ್ಮ ರಾಜ್ಯದ ಹಲವಾರು ಕಡೆಗಳಲ್ಲಿ ಅವಧೂತರು ಆಗಿಹೋದ ಮಾಹಿತಿ ಲಭ್ಯವಿದೆ. ಆದರೆ ಅದೇನೋ ಕಾರಣದಿಂದ ಚಿತ್ರದುರ್ಗ ಜಿಲ್ಲೆಯ ಭಾಗದಲ್ಲಿಯೆ ಹಲವಾರು ಅವಧೂತರು ಮೆರೆದುಹೋದರೆಂಬುದು ಕುತೂಹಲಕರ. ಹದಿನೆಂಟನೇ

ಶತಮಾನದಲ್ಲಿ ಚಿತ್ರದುರ್ಗ ಸಮೀಪದ ಸಜ್ಜನಕೆರೆಯನ್ನು ವಾಸ್ತವ್ಯ ಮಾಡಿಕೊಂಡಿದ್ದ ಬಸಪ್ಪತಾತ, ಕಳೆದ ಶತಮಾನದ ಪೂರ್ವಾರ್ಧದಲ್ಲಿ ಹಿರಿಯೂರು ಸಮೀಪದ ಮೇಟಿಕುರಿಕೆಯ ಹಠಯೋಗಿ ಉಗುರುಸ್ವಾಮಿಗಳು, ಹಿರಿಯೂರು ಆಸುಪಾಸಿನಲ್ಲಿಯೆ ಶ್ರೀರಾಮಪುರದಲ್ಲಿ ಈಗ್ಗೆ ನಲವತ್ತೈದು ವರ್ಷ ಹಿಂದಿನವರೆಗೆ ವಿರಾಜಮಾನರಾಗಿದ್ದ ಪರಪ್ಪತಾತ, ಚಿತ್ರದುರ್ಗ–ಬಳ್ಳಾರಿ ಜಿಲ್ಲೆಗಳ ಗಡಿಪ್ರಾಂತದಲ್ಲಿ ಹತ್ತೊಂಬತ್ತನೇ ಶತಮಾನದ ಉತ್ತರಾರ್ಧದಲ್ಲಿ ಬೆಳಗಿ ವಿಪುಲವಾಗಿ ತತ್ತ್ವಪದಗಳನ್ನು ರಚಿಸಿದ್ದ ಹನುಮಂತಮೂರ್ತಿಸಾಧುಗಳು – ಮೊದಲಾದವರು ನೆನಪಿಗೆ ಬರುತ್ತಾರೆ. ಇವರೆಲ್ಲರ ವೃತ್ತಾಂತಗಳು ಅವರವರ ಜೀವಿತಾವಧಿಗಳಲ್ಲಿ ರಾಜ್ಯದೆಲ್ಲಕಡೆಗಳ ಅಧ್ಯಾತ್ಮಾಸಕ್ತ ವಲಯಗಳಲ್ಲಿ ಚಲಾವಣೆಯಲ್ಲಿದ್ದವು. ಆದರೆ ಇಂತಹ ಯಾರ ಬಗೆಗೂ ಜೀವಿತವಿವರಗಳಾಗಲಿ ಅವರ ಬೋಧನೆಗಳ ನಮೂನೆಗಳಾಗಲಿ ಎಲ್ಲಿಯೂ ಸಮಗ್ರವಾಗಿ ದಾಖಲೆಗೊಂಡಂತಿಲ್ಲ. ಈ ರೀತಿಯ ವೃತ್ತಸಂಗ್ರಹದ ರೂಢಿ ನಮ್ಮಲ್ಲಿ ಬೆಳೆಯಲಿಲ್ಲ. ಹೀಗಾಗಿ ಕಾಲಕಳೆದಂತೆ ಅವರ ಹೆಸರುಗಳೋ – ವಿರಳವಾಗಿ ಗದ್ದುಗೆಗಳೋ – ಅಷ್ಟೆ ಉಳಿದಾವು. ಮುಂದಿನ ದಶಕಗಳಲ್ಲಿ ಆ ಹೆಸರುಗಳೂ ಮರೆಯಾಗಿಹೋದರೆ ಆಶ್ಚರ್ಯವಿಲ್ಲ.

ಮುಕುಂದೂರುಸ್ವಾಮಿಗಳು

ಇದನ್ನು ಗಮನಿಸುವಾಗ ಚಿತ್ರದುರ್ಗ ಸೀಮೆಯನ್ನೇ ಲೀಲಾಕ್ಷೇತ್ರವನ್ನಾಗಿ ಮಾಡಿಕೊಂಡಿದ್ದ ಮುಕುಂದೂರುಸ್ವಾಮಿಗಳು ಭಾಗ್ಯಶಾಲಿಗಳು. ಈ ಪೀಳಿಗೆಯ ವಿಶಾಲ ಜನವರ್ಗಕ್ಕೆ ಮುಕುಂದೂರುಸ್ವಾಮಿಗಳು ಪರಿಚಿತರಾಗಿದ್ದಾರೆ. ಇದು ಸಾಧ್ಯವಾದದ್ದು ಬೆಳಗೆರೆ ಕೃಷ್ಣಶಾಸ್ತ್ರಿಗಳ ಕೈಂಕರ್ಯದಿಂದ. ತಾವು ಕಂಡ ಮುಕುಂದೂರುಸ್ವಾಮಿಗಳನ್ನು ಕೃಷ್ಣಶಾಸ್ತ್ರಿಗಳು ಚಿತ್ರಿಸಿರುವ ಬಗೆಯು ಅನುಪಮವಾಗಿದೆ. ಅದನ್ನು ಅನನ್ಯವಾಗಿಸಿರುವ ಸಂದರ್ಭಗಳು ಹಲವಾರು. ತಾವು ಆಯ್ದುಕೊಂಡ ವಸ್ತುವಿನಲ್ಲಿ ಶಾಸ್ತ್ರಿಗಳು ಬೆಳೆಸಿಕೊಂಡ ತನ್ಮಯತೆ, ವಸ್ತುವಿನ ಮಹತ್ತ್ವವನ್ನು ಗ್ರಹಿಸಿ ಅದನ್ನು ಹೊರಜಗತ್ತಿಗೆ ತಲಪಿಸಬೇಕೆಂಬ ಅವರ ಶ್ರದ್ಧೆ, ಶಾಸ್ತ್ರಿಗಳ ಅಕೃತಕ ವಾಗ್‌ರೀತಿ – ಇವೆಲ್ಲ ಶಾಸ್ತ್ರಿಗಳ ಬರಹವನ್ನು ರೂಪಿಸಿವೆ. ಇವೆಲ್ಲಕ್ಕಿಂತ ಮಿಗಿಲಾದ ಸಂಗತಿಯೂ ಒಂದುಂಟು. ಅದೆಂದರೆ ಕೃಷ್ಣಶಾಸ್ತ್ರಿಗಳೂ ಒಂದಷ್ಟುಮಟ್ಟಿಗಾದರೂ ಸ್ವಯಂ ಅವಧೂತಪ್ರಜ್ಞೆ ಬೆಳೆಸಿಕೊಂಡವರು. ಉದಾತ್ತವಾದುದನ್ನು ಕಂಡಲ್ಲಿ ಅದನ್ನು ಅಂತಃಸ್ಥ ಮಾಡಿಕೊಂಡು ಸಂದರ್ಭ ಒದಗಿದಾಗಲೆಲ್ಲ ಆ ಭಾವಸ್ಪಂದನವನ್ನು ಸಮಾನಮನಸ್ಕರೊಡನೆ ಹಂಚಿಕೊಳ್ಳುವುದನ್ನು ಅವರು ಜೀವನಕ್ರಮವಾಗಿ ಮಾಡಿಕೊಂಡಿದ್ದರು. ಆ ಆತ್ಮನಿವೇದನೆಗಳೇ ಕ್ರಮೇಣ ಬರಹದ ಆಕಾರ ತಳೆದವು. ಹೀಗೆ ಶಾಸ್ತ್ರಿಗಳು ಅನುದ್ದಿಷ್ಟವಾಗಿಯೆ ಮತ್ತು ಯಾವುದೇ ಪ್ರತಿಷ್ಠಾಕಾಮನೆ ಇಲ್ಲದೆಯೇ ಸಾಹಿತಿಯೂ

ಆದರು. ಇದನ್ನು ಸದ್ಯೋಜಾತ ಸಾಹಿತ್ಯ ಎಂದು ಬೇಕಾದರೆ ಕರೆಯಬಹುದು. ಈ ಸಾಹಿತ್ಯಪ್ರಕಾರದ ಪ್ರವರ್ತಕರೂ ಅನುಸಂಧಾನಿಗಳೂ ಕೃಷ್ಣಶಾಸ್ತ್ರಿಗಳು ಮಾತ್ರ.

ಡಾ. ಬಿ.ಜಿ.ಎಲ್. ಸ್ವಾಮಿ ಹೇಳುತ್ತಿದ್ದರು: "ನಾನು ವಿಜ್ಞಾನ ಎಂದು ಬರೆದದ್ದು ಸಾಹಿತ್ಯವಾಯಿತು; ಸಾಹಿತ್ಯ ಎಂದು ಬರೆದದ್ದು ಹ್ಯೂಮರ್ ಆಯಿತು" – ಎಂದು. ಕೃಷ್ಣಶಾಸ್ತ್ರಿಗಳದ್ದೂ ಹಾಗೆಯೇ. ಅವರು ಬರೆದದ್ದೆಲ್ಲ ಸ್ವಾನುಭವಗಳೇ – ಎಂಬ ಸಂಗತಿ ಮಾತ್ರ ಅದಕ್ಕೆ ಪ್ರಮಾಣ, ಮೌಲ್ಯಮಾಪಕ – ಎಲ್ಲವೂ. ಇದು ಯಾವುದೇ ವಿಶ್ಲೇಷಣೆಗೂ ವರ್ಗೀಕರಣಕ್ಕೂ ಅತೀತವಾದುದು. ಅದನ್ನು ಬೇರೆ ರೀತಿಯಾಗಿ ಲಕ್ಷಣೀಕರಿಸುವುದು ಸಾಧ್ಯವೂ ಅಲ್ಲ, ಅವಶ್ಯವೂ ಅಲ್ಲ. ಅದನ್ನು ಪರಿಮಳಭರಿತ ಹೂವಿನಂತೆ ಆಸ್ವಾದಿಸಬೇಕಷ್ಟೆ. ಹೀಗೆ ಅದು ಅನನುಕರಣೀಯವೂ ಆಗಿದೆ.

ಇದರಿಂದಾಗಿ ನಮ್ಮ ನಾಡಿನ ಸಾಮಾಜಿಕ ಇತಿಹಾಸದ ದೃಷ್ಟಿಯಿಂದ ಮಹತ್ತ್ವದ್ದಾದ ಸಾಮಗ್ರಿಯನ್ನು ಬೆಳಗೆರೆ ಕೃಷ್ಣಶಾಸ್ತ್ರಿಗಳು ಉಳಿಸಿ ಹೋಗಿದ್ದಾರೆ.

ಅವರ 'ಸಾಹಿತಿಗಳ ಸ್ಮೃತಿ' ಮೊದಲಾದ ಕಥನಗಳಲ್ಲಿ ನಮ್ಮ ಸಾಹಿತ್ಯಕ್ಷೇತ್ರದ ಧೀಮಂತರ ಮತ್ತು ಇತರ ವಿರಳವ್ಯಕ್ತಿಗಳ ಬಗೆಗೆ ಅನ್ಯತ್ರ ದುರ್ಲಭವಾದ ವೃತ್ತಾಂತಗಳೂ ಒಳನೋಟಗಳೂ ತುಂಬಿವೆ.

ಶಾಸ್ತ್ರಿಗಳ ಸ್ಮೃತಿಗೆ ಶತನಮನಗಳು.

5. ಎಸ್.ವಿ. ನಾರಾಯಣಸ್ವಾಮಿರಾವ್

ಇನ್ವೆಸ್ಟ್‌ಮೆಂಟ್ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಪ್ರತಿಷ್ಠಿತರೆನಿಸಿರುವ ಸೌರಭ ಮುಖರ್ಜಿ ಅವರು ತಮ್ಮ ಇತ್ತೀಚಿನ ಗ್ರಂಥದಲ್ಲಿ ಒಂದು ಹೊಸದೆನಿಸುವ ಮಂಡನೆಯನ್ನು ಮಾಡಿದ್ದಾರೆ, ಕಂಪೆನಿಗಳ ಆಗುಹೋಗುಗಳ ಸಂದರ್ಭದಲ್ಲಿ. ಮೂಲಧನ, ಆಡಂಬರ, ಬಹಿರ್ಮುಖ ಸ್ವಭಾವ, ಪ್ರಚಾರ – ಇವೇ ಮೊದಲಾದ ತಂತ್ರಗಳನ್ನು ಅಳವಡಿಸಿಕೊಂಡ ಕಂಪೆನಿಗಳು ಯಶಸ್ಸನ್ನು ಗಳಿಸಿಕೊಳ್ಳುತ್ತವೆ ಎಂಬುದು ಸಾಮಾನ್ಯ ಗ್ರಹಿಕೆಯಾಗಿದೆಯಷ್ಟೆ. ಸೌರಭ ಮುಖರ್ಜಿಯವರು ವಾದಿಸಿರುವುದು: ಅಬ್ಬರವಿಲ್ಲದ ಸೌಮ್ಯತೆ, ಅಂತರ್ಮುಖತೆ, ಮನೋದಾರ್ಢ್ಯ, ಬುದ್ಧಿಪೂರ್ವಕ ಪ್ರಯತ್ನಸಾತತ್ಯ – ಈ ಸ್ವಭಾವವನ್ನುಳ್ಳವರಿಂದ ಅಸಾಮಾನ್ಯ ಸಾಧನೆಯಾಗುತ್ತದೆ – ಎಂದು. ಈ ಭಿನ್ನ ಕಾರ್ಯದೃಷ್ಟಿಯು ವ್ಯಕ್ತವಾಗುವುದು ಹೇಗೋ ಅಂದಂದಿನ ಸನ್ನಿವೇಶವನ್ನು ನಿಭಾಯಿಸೋಣ ಎಂದು ಹೊರಡದೆ ನಿರಂತರತೆಯತ್ತ ನೆಟ್ಟ ದೃಷ್ಟಿ, ತಮ್ಮ ಆಸಕ್ತಿವಲಯದವರೊಡನೆ ದೃಢವಾದ ಸತ್ಸಂಬಂಧ, ಮೂರನೆಯದಾಗಿ ಕೇವಲ ಆಕರ್ಷಿಸುವ ಉದ್ದೇಶದ ದುಂದುವೆಚ್ಚಗಳಲ್ಲಿ ತೊಡಗದಿರುವ ಮೌಲ್ಯನಿಷ್ಠೆ – ಈ ಅನುಶಾಸನಗಳಲ್ಲಿ. ಹೀಗೆಂದರೆ ಕಳಪೆಮಟ್ಟದ ಕಾರ್ಯಶೈಲಿಗೆ ಹೊಂದಿಕೊಂಡಿರಬೇಕೆಂದಲ್ಲ; ಪ್ರತಿಯಾಗಿ ರಾಜಿಯಿರದ ಉತ್ತಮ ಗುಣಮಟ್ಟದ ಅನುಸರಣೆ, ಹಣದ ವ್ಯವಹಾರಗಳಲ್ಲಿ ಅನುಶಾಸನಬದ್ಧತೆ – ಈ ಎರಡರ ಸಮುಚಿತ ಸಮನ್ವಯ ಇರಬೇಕೆಂಬುದು ತಾತ್ಪರ್ಯ.

'ಸಾಂಸ್ಕೃತಿಕ ಕೇಂದ್ರ'

ಬೆಂಗಳೂರು ನಗರ ಹಲವು ಅನ್ಯ ಹೆಸರುಗಳಿಂದಲೂ ಪ್ರಸಿದ್ಧಿ ಪಡೆದಿದೆ. ಅವುಗಳಲ್ಲಿ ಈಚಿನ ವರ್ಷಗಳಲ್ಲಿ ಸೇರ್ಪಡೆಯಾಗಿರುವುದು 'ಸೈಬರ್ ಸಿಟಿ' ಎಂಬುದು. ಕೆಲವು ದಶಕಗಳ ಹಿಂದೆ ಅನ್ಯ ಪ್ರಾಂತಗಳವರ ದೃಷ್ಟಿಯಲ್ಲಿ ಇದು ಬೇಸಗೆ ವಿಶ್ರಾಮಧಾಮ ಎನಿಸಿತ್ತು. ತಮಿಳುನಾಡು ಮೊದಲಾದೆಡೆಗಳಿಂದ ಗಣನೀಯ ಪ್ರಮಾಣದ ಆಢ್ಯರು ಬೇಸಗೆಕಾಲದ ಎರಡು–ಮೂರು ವಾರಗಳನ್ನೋ ತಿಂಗಳೊಪ್ಪತ್ತನ್ನೋ ಕಳೆಯಲು ತಂಪುಹವೆಯ ಬೆಂಗಳೂರಿಗೆ ಬರುವುದು ವಾಡಿಕೆಯಾಗಿತ್ತು. ದೀರ್ಘಕಾಲದಿಂದ ಬೆಂಗಳೂರಿಗೆ ವಿಶಾಲ ಪ್ರಸಿದ್ಧಿ ಇದ್ದುದು ಉದ್ಯಾನನಗರಿ ಎಂದು.

ಮೇಲಿನವಲ್ಲದೆ ಬಗೆಬಗೆಯ ಸಾಂಸ್ಕೃತಿಕ ಚಟುವಟಿಕೆಗಳ ಪ್ರಮುಖ ಕೇಂದ್ರವೆಂಬ ವರ್ಣನೆಯೂ ಬೆಂಗಳೂರಿಗೆ ಸಲ್ಲುತ್ತದೆ. ಕರ್ನಾಟಕ ಸಂಗೀತ, ಹಿಂದೂಸ್ತಾನಿ ಸಂಗೀತ,

ಚಿತ್ರಕಲೆ, ನಾಟಕ, ಭರತನಾಟ್ಯ ಮತ್ತಿತರ ನೃತ್ಯಪ್ರಕಾರಗಳು – ಈ ಹಲವು ಕ್ಷೇತ್ರಗಳ ಗಣ್ಯ ಕಲಾವಿದರಿಗೆ ದೊಡ್ಡ ಆಕರ್ಷಣೆಯಾಗಿರುವುದು ಬೆಂಗಳೂರು ನಗರ. ದೇಶದ ನಾನಾ ಪ್ರಾಂತಗಳವರಿಗೂ ನಾನಾ ಭಾಷಿಕರಿಗೂ ಬೆಂಗಳೂರು ಪ್ರಶಾಂತವಾದ ಆಸರೆ ನೀಡಿರುವುದೂ ಇದಕ್ಕೆ ಕಾರಣವಾಗಿದೆ. ಇನ್ನು ಧಾರ್ಮಿಕ ಪ್ರವಚನಾದಿಗಳ ವಿಷಯ ಹೇಳಲೇಬೇಕಾಗಿಲ್ಲ. ಹಿಂದೆ ಈ ಭಾಗಕ್ಕೆ ಹೆಚ್ಚು ಪರಿಚಿತವಿರದಿದ್ದ ಯಕ್ಷಗಾನ–ತಾಳಮದ್ದಲೆ ಕಲಾಪ್ರಕಾರಗಳಿಗೂ ದೊಡ್ಡ ಪೋಷಕವರ್ಗ ಈಚಿನ ವರ್ಷಗಳಲ್ಲಿ ಏರ್ಪಟ್ಟಿದೆ.

ಬೆಂಗಳೂರಿನ ಬಸವನಗುಡಿ ಮೊದಲಾದ ಬಡಾವಣೆಗಳು ಸೇರಿದ ದಕ್ಷಿಣ ಭಾಗದಲ್ಲಿ ಸಾಹಿತಿಗಳ, ಕಲಾವಿದರ, ವಿವಿಧ ಕ್ಷೇತ್ರ ಸಾಧಕರ, ಧಾರ್ಮಿಕ ಕೇಂದ್ರಗಳ ದಟ್ಟಣೆ ಇದೆ ಎಂಬ ಜನಜನಿತ ಪ್ರಥೆ ಹಿಂದಿನಿಂದ ಇದೆ. ಈ ಕೀರ್ತಿಗೆ ಆಧಾರವಾಗಿರುವ ಸಂಗತಿಗಳಲ್ಲೊಂದು ಶ್ರೀರಾಮಸೇವಾ ಮಂಡಲಿಯ ವಾರ್ಷಿಕ ರಾಮೋತ್ಸವ ಸಂಭ್ರಮ.

ಕರ್ನಾಟಕ ಸಂಗೀತದ ಮಟ್ಟಿಗೆ ಬೆಂಗಳೂರನ್ನು ಒಂದು ಪ್ರಮುಖ ಆಕರ್ಷಣಕೇಂದ್ರವಾಗಿಸುವುದರಲ್ಲಿ ಕೋಟೆ ಶ್ರೀರಾಮಸೇವಾ ಮಂಡಲಿಯ ಪಾತ್ರ ಹಿರಿದಾದುದು. ದೇಶದಲ್ಲಿಯೆ ಬಹಳ ಹಿಂದಿನದಾದ ಗಾಯನ ಸಮಾಜವೂ ಬೆಂಗಳೂರು ನೆಲೆಯದೇ. ಬೆಂಗಳೂರಿನ ಹಲವು ಬಡಾವಣೆಗಳಲ್ಲಿ (ನರಸಿಂಹರಾಜ ಕಾಲೊನಿ, ಶೇಷಾದ್ರಿಪುರ ಇತ್ಯಾದಿ) ರಾಮೋತ್ಸವ ಕಾರ್ಯಕ್ರಮಸರಣಿಗಳು ಏಳೆಂಟು ದಶಕಗಳ ಹಿಂದಿನಿಂದ ನಡೆದುಕೊಂಡುಬರುತ್ತಿವೆ. ಚಿಕ್ಕಪೇಟೆ, ಅಲಸೂರುಪೇಟೆ, ನಗರ–ದಂಡು ಗಡಿಭಾಗ ಮೊದಲಾದ ಹತ್ತಾರು ಪ್ರದೇಶಗಳ ಭಜನಮಂದಿರಗಳಿಗೂ ದೀರ್ಘ ಇತಿಹಾಸವಿದೆ. ಆದರೂ ಶ್ರೀರಾಮಸೇವಾ ಮಂಡಲಿಯು ನಿರ್ಮಿಸಿಕೊಂಡಿರುವ ಪ್ರತಿಷ್ಠೆ ಅತಿಶಯವಾದುದು. ಇಲ್ಲಿ ಸೇರುವ ಜನಸ್ತೋಮ, ಇಲ್ಲಿಯ ಉತ್ಸವದ ಪರಿವೇಷ (ಆ್ಯಂಬಿಯೆನ್ಸ್) – ಎಲ್ಲವೂ ಅನನ್ಯವೇ. ಒಂದು ಸಾಂಪ್ರದಾಯಿಕ ಸಾತ್ತ್ವಿಕ ಕಲಾಪಸರಣಿಗೆ ಇಷ್ಟು ಅಗಾಧಪ್ರಮಾಣದ ಜನವರ್ಗ ಇಷ್ಟು ಹೃದಯಪೂರ್ವಕವಾಗಿ ಸ್ಪಂದಿಸುತ್ತಿರುವುದು ಒಂದು ಉದಾತ್ತವೂ ಸ್ಪೃಹಣೀಯವೂ ಆದ ಅನುಭವ.

ಸಂಗೀತದ ಸಾಮೂಹಿಕೀಕರಣ

1950ರ ದಶಕಕ್ಕೆ ಹಿಂದೆಯೂ ಬೆಂಗಳೂರಿನಲ್ಲಿ ಹಲವಾರೆಡೆ ಸಂಗೀತ ಕಾರ್ಯಕ್ರಮಗಳು ನಡೆಯುತ್ತಿದ್ದುದುಂಟು. ಆ ದಿನಗಳಲ್ಲಿ ನೂರು ಜನ ಶ್ರೋತೃಗಳು ಕಚೇರಿಗೆ ಬಂದರೆಂದರೆ ಅದು ಯಶಸ್ವಿ ಕಾರ್ಯಕ್ರಮವೆನಿಸುತ್ತಿತ್ತು. ಹಾರ್ಡಿಂಗ್ ರಸ್ತೆಯ (ಈಗ 'ಪಂಪಮಹಾಕವಿ ರಸ್ತೆ') ಕಡೆಗಿದ್ದ ಹಳೆಯ ಕಟ್ಟಡದಲ್ಲಿ ('ಶಂಕರಯ್ಯ ಹಾಲ್') ಗಾಯನ ಸಮಾಜ ನಡೆಯುತ್ತಿದ್ದಾಗ ಅಗ್ರಮಾನ್ಯ ಗಾಯಕ–ವಾದಕರ ಕಚೇರಿಗಳಿಗೆ ನೂರು–ನೂರಿಪ್ಪತ್ತು ಜನರಷ್ಟೇ ಬರುತ್ತಿದ್ದುದು ಅಪರೂಪವಾಗಿರಲಿಲ್ಲ.

ಆದರೆ ಬರುವವರಲ್ಲಿ ಹೆಚ್ಚಿನವರು ಅಭಿಜ್ಞರೇ ಆಗಿರುತ್ತಿದ್ದರು – ಚಿತ್ರಕಲಾವಿದ ವೈಣಿಕ ಕೆ. ವೆಂಕಟಪ್ಪ, ವಿ. ಸೀತಾರಾಮಯ್ಯ, ಚಿಂತಲಪಲ್ಲಿ ವೆಂಕಟರಾಯರು – ಇಂತಹವರು. ನಿವೃತ್ತ ಮುಖ್ಯ ನ್ಯಾಯಮೂರ್ತಿ ಕೆ.ಎಸ್. ಚಂದ್ರಶೇಖರ ಅಯ್ಯರ್ ತಪ್ಪದೆ ಬರುತ್ತಿದ್ದರು (ದರ್ಬಾರು ಪೋಷಾಕಿನಲ್ಲಿಯೆ ಬರುತ್ತಿದ್ದರು; ಅವರೊಬ್ಬರಿಗಾಗಿ ವೇದಿಕೆಯ ಬಳಿ ಕುರ್ಚಿ ಇರುತ್ತಿತ್ತು. ಸಭಿಕರೆಲ್ಲ ಕೂರುತ್ತಿದ್ದುದು ನೆಲದ ಮೇಲೆಯೆ.)

ಸಂಗೀತ ಹಾಗೂ ಪ್ರವಚನ ಕಾರ್ಯಕ್ರಮಗಳಿಗೆ ಅಧಿಕಸಂಖ್ಯೆಯ ಜನತೆ ಬರಲು ಆರಂಭವಾದದ್ದು ಹಲವು ಬಡಾವಣೆಗಳಲ್ಲಿ ಹಿಂದಿಗಿಂತ ಹೆಚ್ಚು ಭವ್ಯವಾದ ರಾಮೋತ್ಸವಗಳು ನಡೆಯತೊಡಗಿದ ಮೇಲೆ. ಹೀಗೆ ಗರಿಗೆದರಿದ ಉತ್ಸವಗಳಲ್ಲಿ ಅಲ್ಪಕಾಲದಲ್ಲಿ ಹೆಚ್ಚು ಪ್ರತಿಷ್ಠೆಗೆ ಪಾತ್ರವಾದದ್ದು ಶ್ರೀರಾಮಸೇವಾ ಮಂಡಲಿಯದು.

ಸಂಗೀತವನ್ನು ಸಾಮೂಹಿಕೀಕರಣಗೊಳಿಸಿದುದರಲ್ಲಿ ಶ್ರೀರಾಮಸೇವಾ ಮಂಡಲಿಯದು ದೊಡ್ಡ ಪಾತ್ರವಿದೆ.

ಒಂದೊಮ್ಮೆ ಹತ್ತೋ ಇಪ್ಪತ್ತೋ ರೂಪಾಯಿಗಳಂತೆ ಸಂಗ್ರಹ ಮಾಡಿ ಉತ್ಸವವನ್ನು ನಿರ್ವಹಿಸುತ್ತಿದ್ದ ಮಂಡಲಿ ಈಗ ಪ್ರತಿವರ್ಷ ಶ್ರೇಷ್ಠ ಕಲಾವಿದರೊಬ್ಬರಿಗೆ ಸ್ಥಾಪಕ ಎಸ್.ವಿ. ನಾರಾಯಣಸ್ವಾಮಿರಾಯರ ಹೆಸರಿನಲ್ಲಿ ರೂ. 50,000 ಮೊತ್ತವನ್ನೊಡಗೂಡಿದ ಪ್ರಶಸ್ತಿಯನ್ನು ನೀಡುವ ಸ್ಥಿತಿಗೆ ತಲಪಿದೆ. ಮಂಡಲಿಯ ಹತ್ತಿರಹತ್ತಿರ ಎಂಟು ದಶಕಗಳ ಉಜ್ಜ್ವಲವೂ ನಿರಂತರವೂ ಆದ ಸೇವೆಗೆ ಸಮಾಜ ಹೇಗೆ ಸ್ಪಂದಿಸಿದೆ ಎಂಬುದಕ್ಕೆ ಇದೊಂದು ಪುರಾವೆ ಎನ್ನಬಹುದು.

ಈಗಿನ ಸೈಬರ್ ಯುಗದಲ್ಲಿ ಸಾಂಪ್ರದಾಯಿಕ ಕಲೆಗಳಿಗೆ ಪ್ರಾಶಸ್ತ್ಯ ಕಡಮೆಯಾಗಿದೆ ಎಂಬ ಮಾತು ಆಗೀಗ ಕೇಳಬರುತ್ತದೆ. ಅದಕ್ಕೆ ಒಂದು ಅಪವಾದವೆಂದರೆ ಚಾಂದ್ರಮಾನ ಸಂವತ್ಸರಾರಂಭದಲ್ಲಿ ಪ್ರತಿವರ್ಷ ಈಗಲೂ ನಲವತ್ತೈವತ್ತು ವರ್ಷಗಳ ಹಿಂದಿನಂತೆಯೇ ಭವ್ಯವಾಗಿ ನಡೆಯುತ್ತಿರುವ ಶ್ರೀರಾಮಸೇವಾ ಮಂಡಲಿಯ ರಾಮೋತ್ಸವ ಕಾರ್ಯಕ್ರಮಸರಣಿ.

ಅಪೂರ್ವ ಸಂಭ್ರಮ

ಪ್ರತಿವರ್ಷ ಚೈತ್ರಮಾಸ ಸಮೀಪಿಸಿತೆಂದರೆ ಬೆಂಗಳೂರಿನ ಮತ್ತು ಆಸುಪಾಸಿನ ಸಂಗೀತಾಸಕ್ತರ ಮನಸ್ಸು ಸಂಭ್ರಮದಿಂದ ತುಳುಕತೊಡಗುತ್ತದೆ. ಐದಾರು ವಾರಗಳ ಕಾಲ ಕರ್ನಾಟಕ ಸಂಗೀತ ಕ್ಷೇತ್ರದ ಶ್ರೇಷ್ಠ ಗಾಯಕ–ವಾದಕರ ಕಚೇರಿ ಸರಣಿಯನ್ನು ಆಲಿಸಿ ಆನಂದಿಸಲು ಹಲವು ಸಾವಿರ ಸಂಗೀತರಸಿಕರು ಸಜ್ಜಾಗುತ್ತಾರೆ. ನಿಯತವಾಗಿ ನಡೆಯುವ ಇಷ್ಟು ಉನ್ನತ ಮಟ್ಟದ ಪ್ರತಿಷ್ಠಿತ ಕಚೇರಿ ಸರಣಿಗಳು ಇಡೀ ದೇಶದಲ್ಲಿ ಬೆರಳೆಣಿಕೆಯಷ್ಟೆ ಇದ್ದಾವು. ಜನರ ಸಂಭ್ರಮವೇನು, ಆ ಉತ್ಸವ ವಾತಾವರಣವೇನು!

ಸಹಸ್ರ ಸಹಸ್ರ ಸಮಾನಾಸಕ್ತರ ವಾರಗಳಗಟ್ಟಲೆ ಒಡನಾಟದ ಆನಂದವೇನು; ಸಾಮಾನ್ಯ ಸಭಾ ಸರ್ಕ್ಯೂಟ್‌ಗಳಲ್ಲಿ ದೊರೆಯದಂತಹ ವಿರಳ ಶ್ರೇಣಿಯ ಕಲಾವಿದರ ಕಾರ್ಯಕ್ರಮಗಳು ಆದಾಗ ಆ ಕಲಾವಿದರ ಶೈಲಿಯ ಮತ್ತು ವಿಶಿಷ್ಟಾಂಶಗಳ ವಿಶ್ಲೇಷಣೆಯ ಮಾತುಕತೆಗಳ ತನ್ಮಯತೆಯೇನು!.... ಹೀಗೆ ಅದೊಂದು ಸ್ವಪ್ನಲೋಕವೇ ನಿರ್ಮಾಣಗೊಂಡಿರುತ್ತದೆ. ಇಲ್ಲೊಬ್ಬ-ಅಲ್ಲೊಬ್ಬರನ್ನು ಹೊರತುಪಡಿಸಿದರೆ ಅಲ್ಲಿ ಸೇರುವವರೆಲ್ಲ ಮಧ್ಯಮವರ್ಗದವರು. ಹೀಗೆ ಸಾವಿರಾರು ಜನರು ಪ್ರತಿವರ್ಷ ತಲ್ಲೀನತೆಯಿಂದ ದಿನಗಳಗಟ್ಟಲೆ ತೊಡಗಿಕೊಳ್ಳಲು ಅವಕಾಶ ಕಲ್ಪಿಸುವ ಸಂಗೀತ ಸಂದರ್ಭ ಬಹುಶಃ ಬೇರೆ ಇರದು. ಹೀಗೆ ಸೇರುವವರ ಪೈಕಿ ನೂರಾರು ಜನರು ಅನೇಕ ವರ್ಷಗಳಿಂದ ಈ ಉತ್ಸವದಲ್ಲಿ ಪಾಲ್ಗೊಳ್ಳುತ್ತ ಬಂದವರು.

ಮಂಡಲಿಯ ಕಾರ್ಯಕ್ರಮಗಳಿಗೆ ಸ್ಥಳೀಯರು ಮಾತ್ರವಲ್ಲದೆ ತುಮಕೂರು, ಕೋಲಾರ ಮೊದಲಾದ ನೆರೆಯ ಜಿಲ್ಲೆಗಳಿಂದಲೂ ಗಣನೀಯ ಸಂಖ್ಯೆಯ ಜನರು ಬರುತ್ತಾರೆ.

ಉತ್ಸವದ ಪರಿಸರದೊಡನೆ ಸಭಿಕರ ತಲ್ಲೀನತೆ ಎಷ್ಟು ಪರಿಪೂರ್ಣವಾಗಿರುತ್ತದೆಂದರೆ, ಬೇರೆ ಎಷ್ಟೋ ಕಾರ್ಯಕ್ರಮಗಳಲ್ಲಿ ಕಾಣುವಂತಹ ಸಭಿಕರ ಅಶಿಸ್ತಾಗಲಿ ಕಾರ್ಯಕ್ರಮದ ನಡುವೆ ಪರಸ್ಪರ ಮಾತನಾಡಿಕೊಳ್ಳುವುದಾಗಲಿ ಮಂಡಲಿಯಲ್ಲಿ ಎಂದೂ ಕಂಡದ್ದಿಲ್ಲ. ಹೀಗೆ ಒಳ್ಳೆಯ ಸಭ್ಯ ಶ್ರೋತೃಸಂಸ್ಕೃತಿಯನ್ನು ಬೆಳೆಸಿರುವುದರಲ್ಲಿಯೂ ಮಂಡಲಿಯ ಶ್ಲಾಘನೀಯ ಪಾತ್ರವಿದೆ.

ಹಲವು ದಶಕಗಳಿಂದ ತಪ್ಪದೆ ಬರುತ್ತಿರುವವರಿಗೂ ಕಡಮೆಯಿಲ್ಲ. ಐವತ್ತು ವರ್ಷಗಳ ಹಿಂದಿನ ಇಲ್ಲಿಯ ರಾಮೋತ್ಸವಸಂಬಂಧಿ ಘಟನೆಗಳನ್ನು ಮೆಲುಕುಹಾಕುವವರೂ ಇದ್ದಾರೆ.

ಹಲವು ವರ್ಷ ಮಂಡಲಿಯ ಉತ್ಸವ ಚೆಂಬೈ ವೈದ್ಯನಾಥ ಭಾಗವತರ್ ಅವರ ಕಚೇರಿಯೊಂದಿಗೆ ಆರಂಭವಾಗುವುದು ಪದ್ಧತಿಯೇ ಆಗಿತ್ತು.

ಜನಸಾಮಾನ್ಯರಿಗೆ ಶ್ರೇಷ್ಠ ಕಲಾವಿದರ ಕಚೇರಿಗಳನ್ನು ಕೇಳುವ ಅವಕಾಶಗಳು ಪರಿಮಿತವಾಗಿದ್ದ ಆ ದಿನಗಳಲ್ಲಿ - ಎಂದರೆ 1950-1960ರ ವರ್ಷಗಳಲ್ಲಿ - ಮಂಡಲಿಯ ರಾಮೋತ್ಸವ ಕಾರ್ಯಕ್ರಮಸರಣಿ ಈ ಭಾಗದ ಜನರಿಗೆ ಒಂದು ವರದಾನವೇ ಆಗಿತ್ತು.

1950ರ ದಶಕದಲ್ಲಿ ಅರಿಯಾಕುಡಿ ರಾಮಾನುಜ ಅಯ್ಯಂಗಾರ್, ಶೆಮ್ಮಂಗುಡಿ ಶ್ರೀನಿವಾಸ ಅಯ್ಯರ್, ದ್ವಾರಂ ವೆಂಕಟಸ್ವಾಮಿ ನಾಯುಡು ಮೊದಲಾದವರಿಂದ ಮಂಡಲಿಯಲ್ಲಿ ನಡೆದ ಕಚೇರಿಗಳ ನೆನಪು ಅವನ್ನು ಕೇಳಿದವರ ಪಾಲಿಗೆ

ಅವಿಸ್ಮರಣೀಯವಾಗಿ ಉಳಿದಿದೆ. ಚೌಡಯ್ಯನವರ ಪಿಟೀಲು, ಪಳನಿ ಸುಬ್ರಹ್ಮಣ್ಯ ಪಿಳ್ಳೆಯವರ ಮೃದಂಗದೊಡನೆ ಜಿ.ಎನ್. ಬಾಲಸುಬ್ರಹ್ಮಣ್ಯಂ ಶ್ರೀರಾಮಸೇವಾ ಮಂಡಲಿಯಲ್ಲಿ ನಡೆಸಿದ ಕಚೇರಿಯನ್ನಾಗಲಿ ಮದುರೈ ಮಣಿ ಅಯ್ಯರ್ ಮೊದಲಾದ ದಿಗ್ಗಜರ ಕಚೇರಿಗಳನ್ನಾಗಲಿ ಸಂಗೀತರಸಿಕರು ಮರೆಯಲಾದೀತೆ?

ಶೂನ್ಯದಿಂದ ಸೃಷ್ಟಿ

ಈ ಪ್ರತಿವಾರ್ಷಿಕ ಉತ್ಸವ 78 ವರ್ಷಗಳಿಂದ (ಸ್ಥಾಪನೆ: 1939) ಅಖಂಡವಾಗಿ ನಡೆದುಬಂದಿರುವುದು ದಾಖಲೆಗೆ ಅರ್ಹವಾದ ಸಂಗತಿ. ಇಲ್ಲಿ ದಶಕಗಳ ಹಿಂದೆ ಇದ್ದಂತಹದೇ ಜೀವಂತವೂ ಉತ್ಸಾಹಪೂರ್ಣವೂ ಆದ ಕ್ರಿಯಾಶೀಲತೆ ಈಗಲೂ ಮುಂದುವರಿದಿರುವುದು ಗಮನ ಸೆಳೆಯುತ್ತದೆ.

ಈ ವಿಶಾಲ ವಟವೃಕ್ಷಕ್ಕೆ ಬೀಜಾರೋಪ ಮಾಡಿ ಅದನ್ನು ಪೋಷಿಸಿ ಬೆಳೆಸಿ ಅರವತ್ತು ವರ್ಷಕಾಲ ಅದರ ಸಾರಥ್ಯ ವಹಿಸಿದವರು ಎಸ್.ವಿ. ನಾರಾಯಣಸ್ವಾಮಿರಾವ್.

ಸಾಮಾನ್ಯವಾಗಿ ಯಾವುದೇ ದೊಡ್ಡ ಉತ್ಸವ ನಡೆಸುವ ಸಂಕಲ್ಪ ಏರ್ಪಟ್ಟರೆ ಆ ತಂಡದವರು ಮೊದಲು ಬೆರಳೆಣಿಕೆಯಷ್ಟಾದರೂ ಸಮಾನಮನಸ್ಕರನ್ನೂ ಸಾಧ್ಯವಿದ್ದಲ್ಲಿ ಒಬ್ಬಿಬ್ಬ 'ಗಣ್ಯ'ರನ್ನೂ ಒಳಗೊಂಡ ತಂಡವನ್ನು ಏರ್ಪಡಿಸಿಕೊಳ್ಳುವುದು, ಧನಸಂಗ್ರಹದಲ್ಲಿ ತೊಡಗುವುದು, ಕಾಲಕ್ರಮದಲ್ಲಿ ಈ ವ್ಯವಸ್ಥೆಗೆ ಒಂದು ಸಾಂಸ್ಥಿಕ ರೂಪವನ್ನು ಕೊಡುವುದು – ಇವೆಲ್ಲ ರೂಢಿಯ ಸಂಗತಿಗಳು. ಆದರೆ ಇದರಂತಲ್ಲದೆ ಅಪವಾದಾತ್ಮಕ ಸಂಘಟನೆಗಳೂ ಉಂಟು. ನಿಯಮ-ಕಟ್ಟಲೆಗಳಿಗಿಂತ ಚಟುವಟಿಕೆಯೇ ಪ್ರಧಾನವೆಂದು ನಂಬಿ ನಡೆಯುವವು ಈ ಸಂಘಟನೆಗಳು. ಹಾಗೆಂದು ಇವುಗಳಲ್ಲಿ ಹೊಣೆಗಾರಿಕೆ ಇರುವುದಿಲ್ಲವೆಂದೇನಲ್ಲ; ಪ್ರತಿಯಾಗಿ ಉತ್ಕಟ ಶ್ರದ್ಧೆ-ಅನುಶಾಸನಗಳೇ ಇರುತ್ತವೆ. ಚಟುವಟಿಕೆಗಳು ವಿಸ್ತರಿಸಿದಂತೆ ಇದಕ್ಕೆ ಔಪಚಾರಿಕ ಸಂಸ್ಥೆಯ ರೂಪವೂ ಅನಿವಾರ್ಯವಾಗಿ ಬರುತ್ತದೆ.

ಶ್ರೀರಾಮಸೇವಾ ಮಂಡಲಿ ಶೂನ್ಯದಿಂದ ಸೃಷ್ಟಿಗೊಂಡ ಒಂದು ಅದ್ಭುತ.

ಶ್ರೀರಾಮಸೇವಾ ಮಂಡಲಿಯ ಹುಟ್ಟು-ವಿಕಾಸಗಳ ಹಿನ್ನೆಲೆ ಸಾಕಷ್ಟು ವಿದಿತವೇ ಆಗಿದೆಯಾದುದರಿಂದ ಇಲ್ಲಿ ಅದರ ಪುನಃಸ್ಮರಣೆ ಚರ್ವಿತಚರ್ವಣ ಆದೀತು. ನಾರಾಯಣಸ್ವಾಮಿರಾಯರ (25.12.1924–5.1.2000) ಸಮಾಜಕಾರ್ಯೋತ್ಸಾಹ ಪ್ರಕಟಗೊಂಡಾಗ ಅವರು ಹದಿನಾಲ್ಕು ವರ್ಷದ ಬಾಲಕ. ಅವರ ಜೊತೆಗಾರರೂ ಅದೇ ವಯಸ್ಸಿನ ಆಸುಪಾಸಿನವರು. ಆ ವಯಸ್ಸಿನವರಲ್ಲಿ ಆ ದಿನಗಳಲ್ಲಿ ಎಂದರೆ 1937–38ರಲ್ಲಿ ಸಾಮಾನ್ಯ ರೂಢಿಯಿದ್ದಂತೆ ಚಾಮರಾಜಪೇಟೆಯ ಬೀದಿಗಳಲ್ಲಿ ಓಡಾಡಿ ಪರಿಕರಗಳನ್ನೂ ಪುಡಿಗಾಸುಗಳನ್ನೂ ಸಂಗ್ರಹಿಸಿ ಕಾಮನಹಬ್ಬವನ್ನೂ

ಗಣೇಶೋತ್ಸವವನ್ನೂ ಆಚರಿಸತೊಡಗಿದರು. ಇವರು ಹೋಗಿ ಬೇಡಿದವರಲ್ಲಿ ಇಪ್ಪತ್ತೋ ಮೂವತ್ತೋ ಜನ ಒಬ್ಬೊಬ್ಬರು ಕಾಲಾಣೆ (ತಾಮ್ರದ 'ತೂತು ಮೂರುಕಾಸು') ಕೊಟ್ಟರೂ ಆಗಿನ ಆವಶ್ಯಕತೆಗೆ ಸಾಕಾಗುತ್ತಿತ್ತು. ಆ ಕಾಲದಲ್ಲಿ – ಎಂದರೆ ಎಂಬತ್ತು ವರ್ಷ ಹಿಂದೆ – ಉತ್ಸವಕಲಾಪಗಳಿಗೆ ಹೆಚ್ಚು ಖರ್ಚು ಬರುತ್ತಿರಲಿಲ್ಲ. ಸೀರಿಯಲ್ ಲೈಟ್, ಲೌಡ್‌ಸ್ಪೀಕರ್‌ಗಳ ಅವಾಂತರ ಇರುತ್ತಿರಲಿಲ್ಲ. ಪೂಜೆ–ಭಕ್ತಿಗಳದೇ ಮೇಲುಗೈಯಾಗಿರುತ್ತಿತ್ತು. ಹಣದ ಓಡಾಟ ಇಲ್ಲವೆಂಬಷ್ಟು ಕನಿಷ್ಠ ಪ್ರಮಾಣದ್ದಿರುತ್ತಿತ್ತು. ಬಗೆಬಗೆಯ ರೀತಿಗಳಲ್ಲಿ ಸುತ್ತಮುತ್ತಲಿನವರು ಸಂತೋಷದಿಂದ ಸಹಕರಿಸುತ್ತಿದ್ದರು.

ಹೀಗೆ ಒಂದು ವರ್ಷ ಗಣೇಶೋತ್ಸವವನ್ನು ಆಚರಿಸಿದ ಮೇಲೆ ನಾರಾಯಣಸ್ವಾಮಿರಾಯರ ಕೈಯಲ್ಲಿ ಹನ್ನೆರಡಾಣೆಯಷ್ಟು ದೊಡ್ಡ ಮೊತ್ತ ಉಳಿದುಬಿಟ್ಟಿತಂತೆ. ಅದನ್ನು ಏನು ಮಾಡಬೇಕು? – ಎಂಬ ಪ್ರಶ್ನೆ ಎದ್ದಿತು. ಹಲವರು ಹಿತೈಷಿಗಳ ಸಲಹೆಯಂತೆ ಮುಂದಿನ ಸಂವತ್ಸರಾರಂಭದಲ್ಲಿ ರಾಮೋತ್ಸವ ನಡೆಸುವುದೆಂದು ನಿರ್ಧಾರವಾಯಿತು. ಅದರಂತೆ ನಡೆಯಿತು. ಇನ್ನಷ್ಟು ಚಂದಾ ಸಂಗ್ರಹವಾಗಿ ನಿರೀಕ್ಷೆಗೆ ಮೀರಿದ ಪ್ರಮಾಣದಲ್ಲಿಯೆ ರಾಮೋತ್ಸವದ ಆಚರಣೆ ನಡೆಯಿತು. ಹೀಗೆ ಆರಂಭಗೊಂಡು ವರ್ಷದಿಂದ ವರ್ಷಕ್ಕೆ ವರ್ಧಿಸುತ್ತಹೋದದ್ದು ಶ್ರೀರಾಮಸೇವಾ ಮಂಡಲಿ.

ಇಲ್ಲಿ ಮುಖ್ಯ ಸಂಗತಿಯೆಂದರೆ – ಶೂನ್ಯದಿಂದ ಅವತರಿಸಿದ ಸಂಸ್ಥೆಯು ರಾಷ್ಟ್ರಮಟ್ಟದಲ್ಲಿಯೆ ಪ್ರತಿಷ್ಠಿತವೆನಿಸಿದೆ ಎಂಬುದು ಮಾತ್ರವಲ್ಲ; ಅದೂ ರೋಚಕವೇ. ಆದರೆ ಅದಕ್ಕಿಂತ ಮಹತ್ತ್ವದ್ದೆಂದರೆ – ಆ ಎಳೆವಯಸ್ಸಿನಲ್ಲಿಯೂ ನಾರಾಯಣಸ್ವಾಮಿರಾಯರಲ್ಲಿ ಅಂಕುರಗೊಂಡಿದ್ದ ಕಾರ್ಯೋತ್ಸಾಹ ಮತ್ತು ಸಾರ್ವಜನಿಕರಿಂದ ಸಂಗ್ರಹಗೊಂಡ ಹಣ ಸಾರ್ವಜನಿಕೋದ್ದೇಶಕ್ಕಾಗಿಯೆ ವಿನಿಯೋಗವಾಗಬೇಕೆಂಬ ಶ್ರದ್ಧೆ. ಈ ಸಮಾಜಾಭಿಮುಖತೆ ಮತ್ತು ಹೊಣೆಗಾರಿಕೆಯ ಭಾವನೆಯೇ ಶ್ರೀರಾಮಸೇವಾ ಮಂಡಲಿಯ ತಾತ್ತ್ವಿಕ ಭೂಮಿಕೆಯಾಗಿದ್ದು ಅದನ್ನು ಈಗಲೂ ಮುನ್ನಡೆಸಿರುವುದು.

ಒಂದು 'ಲೈಫ್ ಮಿಶನ್'

ನಾರಾಯಣಸ್ವಾಮಿರಾಯರ ಮನೆತನದ ಮೂಲಸ್ಥಾನ ದೇವನಹಳ್ಳಿಯ ಸಮೀಪದ ಅರಸನಹಳ್ಳಿ. ಅವರದು ಧಾರ್ಮಿಕ ಮನೆತನವಾಗಿದ್ದುದರಿಂದ ನಾರಾಯಣಸ್ವಾಮಿರಾಯರಿಗೆ ದೈವಭಕ್ತಿ ಪಿತ್ರಾರ್ಜಿತವಾಗಿತ್ತೆಂದೇ ಹೇಳಬಹುದು. ಅವರ ತಂದೆ ಎಸ್. ವಾಸುದೇವರಾಯರು ಶಿವಾರಪಟ್ಟಣದಲ್ಲಿ ಅಮಲ್ದಾರರಾಗಿದ್ದರು. ಹಿಂದೆ ಮಾವಳ್ಳಿಯಲ್ಲಿದ್ದ ಈ ಕುಟುಂಬ ನಾರಾಯಣಸ್ವಾಮಿರಾಯರ ಬಾಲ್ಯದ ವೇಳೆಗೆ ಚಾಮರಾಜಪೇಟೆ ಬಡಾವಣೆಯಲ್ಲಿ ನೆಲೆಗೊಂಡಿತ್ತು.

ಎಸ್. ವಿ. ನಾರಾಯಣಸ್ವಾಮಿರಾವ್
(25.12.1924 – 5.1.2000)

ಸಾಮಾಜಿಕ ಕಾರ್ಯದ ಕನಸನ್ನು ಅಂತರಂಗದಲ್ಲಿ ತುಂಬಿಕೊಂಡಿದ್ದ ನಾರಾಯಣ ಸ್ವಾಮಿರಾಯರಿಗೆ ಶಾಲಾ-ಕಾಲೇಜು ವ್ಯಾಸಂಗದಲ್ಲಾಗಲಿ ಸಂಬಳದ ನೌಕರಿಯಲ್ಲಾಗಲಿ ಅಭಿರುಚಿ ಬರದಿದ್ದುದು ಸ್ವಾಭಾವಿಕ. ಆದರೂ ಜೀವಿಕೆ ನಡೆಯಬೇಕಲ್ಲ! ಅವರಿಗೆ 18 ವರ್ಷವಾದಾಗ ಕೆಲಸಕ್ಕೆ ಸೇರಿದರು. ಹಿಂದೂಸ್ತಾನ್ ಏರ್‌ಕ್ರಾಫ್ಟ್ ಕಾರ್ಖಾನೆ, ಇನ್‌ಶ್ಯೂರೆನ್ಸ್ ಇಲಾಖೆ ಮೊದಲಾದೆಡೆ ಸ್ವಲ್ಪಕಾಲ ಉದ್ಯೋಗ ಮಾಡಿದರು. ಆದರೆ ಅದು ಹೆಚ್ಚು ಕಾಲ ನಡೆಯುವ ಸಂಭವವಿರಲಿಲ್ಲ. ಅಲ್ಪ ಕಾಲಾನಂತರ ರಾಮೋತ್ಸವಾದಿ ಸಂಘಟನಕಾರ್ಯದ ಆಕರ್ಷಣೆಯೇ ಪ್ರಮುಖವಾಗಿ – ಕೌಟುಂಬಿಕ ಸ್ಥಿತಿಗತಿಯನ್ನೂ ಲೆಕ್ಕಿಸದೆ – ಕೆಲಸದಿಂದ ಮುಕ್ತಿ ಪಡೆದು ತಮ್ಮ ಸಮಯವಷ್ಟನ್ನೂ ಶ್ರೀರಾಮಸೇವೆಗೇ ಮುಡುಪಿಟ್ಟರು. ಏತನ್ಮಧ್ಯೆ 1953ರಲ್ಲಿ ತುಮಕೂರು ಜಿಲ್ಲೆ ಮಂಡಿಗೇನಹಳ್ಳಿಯ ವೆಂಕಟಕೃಷ್ಣಯ್ಯ-ಇಂದಿರಾಬಾಯಿ ದಂಪತಿಗಳ ಪುತ್ರಿ ನರಸಮ್ಮನವರೊಡನೆ ವಿವಾಹವೂ ಆಯಿತು.

ದಿನಗಳು ಕಳೆದಂತೆ ರಾಮೋತ್ಸವವೇ ಅವರ 'ಲೈಫ್ ಮಿಶನ್' ಆಗಿಬಿಟ್ಟಿತು – ಅವರ ಬದುಕಿನಲ್ಲಿ ರಾಮಸೇವೆಯ ಹೊರತು ಬೇರಾವ ಯೋಚನೆಗಳಿಗೂ ಆಸ್ಪದವೇ ಇಲ್ಲವೆಂಬಷ್ಟು. ರಾಮೋತ್ಸವಸಂಬಂಧಿತ ಕಾರ್ಯಗಳಲ್ಲಿ ಸಹಜವಾಗಿ ಗಣನೀಯ ಸಮಯವನ್ನೂ ಶ್ರಮವನ್ನೂ ತೊಡಗಿಸಬೇಕಾಗುತ್ತಿತ್ತು. ಆದರೆ ಸರ್ಕಾರೀ ಸ್ವಾಮ್ಯದ ಕೆ.ಜಿ.ಐ.ಡಿ. ಮೊದಲಾದ ಸಂಸ್ಥೆಗಳಲ್ಲಿ ಸರಣಿಯಾಗಿ ದಿನಗಟ್ಟಲೆ ರಜೆ ಸಿಗುತ್ತಿರಲಿಲ್ಲ. ಹೀಗಾಗಿ ನೌಕರಿಗಳ ಉಪದ್ವ್ಯಾಪಗಳೇ ಬೇಡವೆಂದು ನಿರ್ಧರಿಸಿ ತಮ್ಮ ಇಷ್ಟದೈವದ ಮೇಲೆ ಭಾರ ಹಾಕಿ ಉದ್ಯೋಗಕ್ಕೆ ರಾಜೀನಾಮೆ ಸಲ್ಲಿಸಿಬಿಟ್ಟರು. ಅಲ್ಲಿಂದಾಚೆಗೆ ರಾಮೋತ್ಸವದ ಏರ್ಪಾಡುಗಳಿಗೆ ಸಂಬಂಧಿಸಿದ ಸಿದ್ಧತೆ ಕಾರ್ಯಕಲಾಪಗಳೇ ಅವರ ಪೂರ್ಣಾವಧಿ ಕಾರ್ಯವಾಯಿತು. ದೈವವು ಅವರ ಕೈಬಿಡಲಿಲ್ಲ. ಅವರ ನಾಲ್ವರು ಪುತ್ರರೂ (ರಾಮಪ್ರಸಾದ್, ಕೃಷ್ಣಪ್ರಸಾದ್, ವೆಂಕಟೇಶ್ ಪ್ರಸಾದ್, ವರದರಾಜ್) ಪುತ್ರಿ ಅನೂರಾಧಾ ಅವರೂ ಕ್ರಮೇಣ ಪ್ರವರ್ಧಮಾನರಾಗಿ ನೆಲೆನಿಂತು ಮಂಡಲಿಯ ಕಲಾಪಗಳಲ್ಲಿಯೂ ನಾರಾಯಣಸ್ವಾಮಿರಾಯರಿಗೆ ಸಹಕಾರಿಗಳಾದರು. ರಾಯರ ಸ್ವರ್ಗವಾಸವಾದ ಮೇಲೆ ಅವರ ಪುತ್ರ ವರದರಾಜ್ ತಮ್ಮನ್ನು ಮಂಡಲಿಯ ಕಾರ್ಯಕ್ಕಾಗಿಯೆ ಪೂರ್ಣವಾಗಿ ಅರ್ಪಿಸಿಕೊಂಡಿದ್ದಾರೆ.

ರಾಯರ ಜ್ಯೇಷ್ಠಪುತ್ರ ರಾಮಪ್ರಸಾದ್ ಅವರು ನೆನೆಯುವಂತೆ "ಆ ಕಷ್ಟದ ದಿನಗಳಲ್ಲಿ ನಮ್ಮ ತಾಯಿ ಕುಟುಂಬವನ್ನು ಹೇಗೆ ನಿರ್ವಾಹ ಮಾಡಿದರೆಂದು ನೆನಪಿಸಿಕೊಂಡರೆ ನತಮಸ್ತಕರಾಗುತ್ತೇವೆ. ಯಾವುದೇ ನಿಶ್ಚಿತ ವರಮಾನವಿಲ್ಲದೆ ದೊಡ್ಡ ಕುಟುಂಬವನ್ನು ಪೋಷಿಸುವುದೆಂದರೆ ಸ್ವಲ್ಪದ ಮಾತೆ? ಈ ಭಾರದ ನಡುವೆಯೇ ತಾಯಿಯವರು ನಮ್ಮ ತೀರ್ಥರೂಪರ ನಿರಂತರ ಮಂಡಲಿ ವಹಿವಾಟುಗಳಿಗೆ ದೃಢವಾದ ಬೆಂಬಲವನ್ನೂ ನೀಡಿದರು."

ಆರಂಭದ ದಿನಗಳು

ಮೊದಮೊದಲ ದಿನಗಳಿಂದಲೇ ಉತ್ಸವಾಚರಣೆಯ ಎಲ್ಲ ಅಂಗಗಳನ್ನೂ ನಾರಾಯಣಸ್ವಾಮಿರಾಯರು ಬಹುಮಟ್ಟಿಗೆ ಏಕಾಂಗಿಯಾಗಿಯೆ ನಿರ್ವಹಿಸುತ್ತಿದ್ದರು. ಆರಂಭದ ಕಾಲದಲ್ಲಿ ಹೇಳಿಕೊಳ್ಳುವಂತಹ ಕಾರ್ಯಕರ್ತ ತಂಡವಾಗಲಿ ಬೆಂಬಲಿಗರಾಗಲಿ ಇರುತ್ತಿದ್ದುದು ಕಡಮೆ; ಮತ್ತು ಸ್ವಂತ ಪರಿಶ್ರಮದ ಭಗವತ್ಸೇವೆಯಲ್ಲಿ ಧನ್ಯತಾಭಾವವನ್ನು ಕಂಡುಕೊಳ್ಳುವ ಮನಃಪ್ರವೃತ್ತಿಯಂತೂ ಇದ್ದೇ ಇದ್ದಿತು. ಇಂತಹ ಅಪರಿಮಿತ ಶ್ರದ್ಧೆ-ಉತ್ಸಾಹಗಳಿಗೆ ಕ್ರಮಕ್ರಮವಾಗಿ ಸಮಾಜದ ಹಾರ್ದಿಕ ಸ್ಪಂದನ ದೊರೆಯತೊಡಗಿತು; ಉತ್ಸವದ ಗಾತ್ರ ಬೆಳೆಯುತ್ತಹೋಯಿತು.

ಏಳೆಂಟು ವರ್ಷ ಚಾಮರಾಜಪೇಟೆಯ ಮೂರನೇ ರಸ್ತೆಯಲ್ಲಿ ಉತ್ಸವ ನಡೆದು, ಸ್ಥಳ ಸಾಲದೆ ರಾಮೇಶ್ವರ ದೇವಾಲಯದ ಆವರಣದಲ್ಲಿ ಒಂದೆರಡು ವರ್ಷ ಮುಂದುವರಿದು, 1949-1951ರ ವರ್ಷಗಳಲ್ಲಿ ಪಂಪಮಹಾಕವಿ ರಸ್ತೆಯ ಬೆಂಗಳೂರು ಜಿಲ್ಲಾ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ್ ಕಟ್ಟಡದ ಮಹಡಿಯಲ್ಲಿ ಏರ್ಪಟ್ಟು, ಅಲ್ಲಿಯೂ ಸ್ಥಳ ಸಾಲದೆ 1952ರಿಂದಾಚೆಗೆ ಕೋಟೆಯ ಮಕ್ಕಳ ಕೂಟದೆದುರಿನ ಸಿಟಿ ಇನ್‌ಸ್ಟಿಟ್ಯೂಟ್ ಆವರಣದಲ್ಲಿ ವಿಶಾಲ ಚಪ್ಪರ ನಿರ್ಮಿಸಿ ಅದರಲ್ಲಿ ಉತ್ಸವ ನಡೆಯುತ್ತಿತ್ತು. 13-14 ವರ್ಷಗಳೇ ಉತ್ಸವ ಆ ನಿವೇಶನದಲ್ಲಿ ಸಂಭ್ರಮಪೂರ್ಣವಾಗಿ ನಡೆಯಿತು.

ಆದರೆ ವರ್ಷದಿಂದ ವರ್ಷಕ್ಕೆ ಉತ್ಸವಕ್ಕೆ ಬರುವ ಜನಸ್ತೋಮ ಬೆಳೆಯುತ್ತಲೇ ಹೋಯಿತು. 1967ರಿಂದಾಚೆಗೆ ಕರ್ನಾಟಕ ಸರ್ಕಾರದ ಕೃಪೆಯಿಂದ ಲಬ್ಧವಾದ ಕೋಟೆ ಹೈಸ್ಕೂಲ್ ಆವರಣದಲ್ಲಿ 8ರಿಂದ 10 ಸಾವಿರ ಜನ ಕುಳಿತುಕೊಳ್ಳಬಹುದಾದ ಭವ್ಯವೂ ಸುಸಜ್ಜಿತವೂ ಆದ ಶಾಮಿಯಾನಾದಲ್ಲಿ ಉತ್ಸವ ಈಗಲೂ (2017) ಮುಂದುವರಿದಿದೆ.

ಮೊದಲಿಗೆ 10-12 ದಿನ ನಡೆಯುತ್ತಿದ್ದ ಉತ್ಸವಾಚರಣೆ ಬೆಳೆಯುತ್ತಹೋಗಿ ಮಂಡಲಿಯ ಸುವರ್ಣೋತ್ಸವ ವರ್ಷದ ವೇಳೆಗೆ 54 ದಿನಗಳಷ್ಟು ಅವಧಿಗೆ ವಿಸ್ತರಿಸಿತು. ಮಂಡಲಿಯ ವಜ್ರೋತ್ಸವ (ಅರವತ್ತನೇ ವರ್ಷ) ಸಂದರ್ಭದಲ್ಲಿ 62 ದಿನಗಳ ಅಖಂಡ ಉತ್ಸವ ನಡೆದು ದಾಖಲೆಯೇ ಆಯಿತು.

ದೈವಿಕ ಸಹಕಾರ

ಜಗದ್‌ವ್ಯವಹಾರಗಳ ಮುನ್ನಡೆಯಲ್ಲಿ 'ದೈವಂ ಚೈವಾತ್ರ ಪಂಚಮಮ್' ಎಂಬ ಉಕ್ತಿ ಇದೆಯಷ್ಟೆ. ಯಾವುದೇ ಮಾನುಷ ಯೋಜನೆಗಳಲ್ಲಿ ಎಷ್ಟೇ ದೃಢಪ್ರಯತ್ನವೂ ಶ್ರದ್ಧೆಯೂ ಜನ-ಸಹಕಾರವೂ ಇದ್ದರೂ ಅವಕ್ಕೆ ಪೂರಕವಾಗಿ ಭಗವದನುಗ್ರಹವೂ ಇರಲೇಬೇಕಾಗುತ್ತದೆ. ನಾರಾಯಣಸ್ವಾಮಿರಾಯರ ನಿಷ್ಠಾವಂತ ಪ್ರಯತ್ನಕ್ಕೆ ಹಾಗೆ

ಭಗವತ್ಕೃಪೆ ಒದಗಿಬಂದದ್ದು ಟಿ. ಚೌಡಯ್ಯನವರ ಮತ್ತು ಟಿ.ಆರ್. ಮಹಾಲಿಂಗಂ ಅವರ ನಿರಂತರ ಸಹಕಾರದ ಮೂಲಕ. ಶ್ರೀರಾಮಸೇವಾ ಮಂಡಲಿ ಇನ್ನೂ ಅಂಕುರಗೊಳ್ಳುತ್ತಿದ್ದ ಹಂತದಲ್ಲಿ ಈ ಇಬ್ಬರು ಮಹಾನ್ ಕಲಾವಿದರ ದೋಹದ ದೊರೆತದ್ದರಿಂದಾಗಿ ಮಂಡಲಿಯ ಬೇರುಗಳು ದೃಢಗೊಂಡವು; ಘನಿಷ್ಠವಾದ ಅಸ್ತಿಭಾರ ನಿರ್ಮಿತವಾಯಿತು. ಅನಂತರದ ಕಾಲದಲ್ಲಿ ಮೃದಂಗವಾದಕ ಎಂ.ಎಲ್. ವೀರಭದ್ರಯ್ಯ, ಘಟಂ ವಿದ್ವಾನ್ ಕೆ.ಎಸ್. ಮಂಜುನಾಥ್ ಮೊದಲಾದ ಹಲವಾರು ಶ್ರೇಷ್ಠ ಕಲಾವಿದರೂ ಸಾಮಾಜಿಕ ಗಣ್ಯರೂ ಮಂಡಲಿಯ ನಿಕಟಪರಿವಾರದ ಭಾಗವಾದರು. ಟಿ. ಚೌಡಯ್ಯನವರ ಸ್ಥಾಯಿಯವರು 'ನಾನೇ ಪಿಟೀಲು ಪಕ್ಕವಾದ್ಯ ನುಡಿಸುತ್ತೇನೆ, ತಾವು ಬಂದು ಗಾಯನ ಕಚೇರಿ ನಡೆಸಿ' ಎಂದು ಕೇಳಿದರೆ ಯಾವ ಅಗ್ರಣಿ ಗಾಯಕರು ತಾನೆ ಆಗದೆಂದಾರು? ಅಂತಹ ಕಾರ್ಯಕ್ರಮಗಳಿಂದ ಮಂಡಲಿಯ ಪ್ರತಿಷ್ಠೆ ಕ್ಷಿಪ್ರವಾಗಿ ಬೆಳೆಯಿತು. ಎಷ್ಟುಮಟ್ಟಿಗೆ ಎಂದರೆ ತಮಿಳುನಾಡಿಗೋ ಆಂಧ್ರಕ್ಕೋ ನಾರಾಯಣಸ್ವಾಮಿರಾಯರು ಹೋಗಿ ಕಲಾವಿದರನ್ನು ಭೇಟಿಯಾದೊಡನೆ ಅವರು ಹೇಳುತ್ತಿದ್ದುದು ಒಂದೇ ಮಾತು – "ದಿನಾಂಕ ತಿಳಿಸಿ" ಎಂದು. ಇನ್ನು ಸಂಭಾವನೆಯ ಬಗೆಗಂತೂ ತ್ವಂಚಾಹಂಚವೇ ಇಲ್ಲ. ಮಂಡಲಿ ನೀಡುತ್ತಿದ್ದ ಸಾಂಕೇತಿಕ ಸಂಭಾವನೆಯನ್ನು ಶ್ರೀರಾಮಪ್ರಸಾದವೆಂದು ಸ್ವೀಕರಿಸಿ ಅಗ್ರಮಾನ್ಯ ಕಲಾವಿದರು ಬಂದು ಸಂತೋಷದಿಂದ ಕಚೇರಿ ನಡೆಸಿ ಶ್ರೋತೃಗಳನ್ನು ಆನಂದಪಡಿಸುತ್ತಿದ್ದರು.

1940–1950ರ ವರ್ಷಗಳಲ್ಲಿ ಜನಪ್ರಿಯತೆಯ ಶಿಖರದಲ್ಲಿದ್ದ ಪಾಲಘಾಟ್ ಮಣಿ ಅಯ್ಯರ್ ಅವರು ನಾರಾಯಣಸ್ವಾಮಿರಾಯರ ಶ್ರದ್ಧೋತ್ಸಾಹಗಳಿಗೆ ಎಷ್ಟು ಮಾರುಹೋದರೆಂದರೆ ಅವರು ಮಂಡಲಿಯ ಕಾರ್ಯಕರ್ತರಂತೆಯೆ ಆಗಿಬಿಟ್ಟರು. ತಮಿಳುನಾಡು ಭಾಗದ ಉನ್ನತ ಕಲಾವಿದರನ್ನು ಸಂಪರ್ಕಿಸುವುದರಲ್ಲಿ ನಾರಾಯಣಸ್ವಾಮಿರಾಯರಿಗೆ ಬಲಗೈಯಂತೆ ಆಗಿದ್ದರು ಅವರು.

ತಮಿಳುನಾಡು ಮೊದಲಾದೆಡೆಗಳ ಕಲಾವಿದರನ್ನು ವಿಶೇಷವಾಗಿ ಆಕರ್ಷಿಸಿದ್ದುದು ನಾರಾಯಣಸ್ವಾಮಿರಾಯರ ಶ್ರದ್ಧೆ, ನಿಃಸ್ವಾರ್ಥ ಮತ್ತು ಮರ್ಯಾದಾಪೂರ್ವಕ ವ್ಯವಹಾರ. ಮದರಾಸಿನ ಕಲಾವಿದರನ್ನು ಕಂಡು ಆಮಂತ್ರಿಸುವಾಗ ತಾಂಬೂಲದಲ್ಲಿ ಸಾಂಕೇತಿಕ ಮುಂಗಡವನ್ನಿಟ್ಟು ಬೇಡಿಕೆ ಸಲ್ಲಿಸುತ್ತಿದ್ದುದುಂಟು. ಆ ಕಲಾವಿದರಾದರೋ ಇವರಿಂದ ಯಾವ ಔಪಚಾರಿಕತೆಯನ್ನೂ ನಿರೀಕ್ಷಿಸದೆ ಇವರ ಅಪೇಕ್ಷೆಯನ್ನು ನೆರವೇರಿಸಲು ತವಕಿಸುತ್ತಿದ್ದರು.

ಪ್ರತಿಷ್ಠೆ, ಜನಾದರಣೆ

ಹೀಗೆ ಹೆಜ್ಜೆಯಿರಿಸತೊಡಗಿದ ಮಂಡಲಿ ಕೆಲವೇ ವರ್ಷಗಳ ಅವಧಿಯಲ್ಲಿ ವೇಗವಾಗಿ ಬೆಳೆಯತೊಡಗಿ ವರ್ಷದಿಂದ ವರ್ಷಕ್ಕೆ ಹೆಚ್ಚು ವಿಸ್ತಾರಗೊಂಡಿತು. 1950ರ

ದಶಕದ ವೇಳೆಗೇ ಮಂಡಲಿಗೆ ಎಷ್ಟು ಜನಾದರಣೆ ಲಭಿಸಿತ್ತೆಂದರೆ ಮಂಡಲಿಯದು ಇಡೀ ನಗರದಲ್ಲಿಯೆ ಅತ್ಯಂತ ಪ್ರತಿಷ್ಠಿತ ರಾಮೋತ್ಸವವೆಂಬ ಗಣನೆಗೆ ಪಾತ್ರವಾಗಿತ್ತು. ಈಚಿನ ದಶಕಗಳಲ್ಲಂತೂ ಇಡೀ ರಾಷ್ಟ್ರದಲ್ಲಿಯೆ ಪ್ರತಿಷ್ಠಿತ ಸಂಗೀತೋತ್ಸವಗಳ ಪಂಕ್ತಿಯಲ್ಲಿ ಶ್ರೀರಾಮಸೇವಾ ಮಂಡಲಿಯ ಉತ್ಸವ ಹೆಮ್ಮೆಯ ಸ್ಥಾನವನ್ನು ಪಡೆದುಕೊಂಡಿದೆ; ಎಷ್ಟುಮಟ್ಟಿಗೆ ಎಂದರೆ ಮಂಡಲಿಯಲ್ಲಿ ಕಚೇರಿ ನಡೆಯುವುದು ಸಂಗೀತ ಕ್ಷೇತ್ರದಲ್ಲಿ ಕಲಾವಿದರ ಉನ್ನತ ಸ್ಥಾನದ ಸೂಚಕವೆನಿಸಿದೆ.

ಅರಿಯಾಕುಡಿ ರಾಮಾನುಜ ಅಯ್ಯಂಗಾರ್ಯರೂ ಮಂಡಲಿಯ ಬೆನ್ನೆಲುಬಾಗಿದ್ದ ಚೌಡಯ್ಯನವರೂ 1960ರ ದಶಕದಲ್ಲಿ ಅಸ್ತಂಗತರಾದುದು ಮಂಡಲಿಯ ಪಾಲಿಗೆ ಒಂದು ಭರಿಸಲಾಗದ ನಷ್ಟವೆನಿಸಿತ್ತು. 1974ರಲ್ಲಿ ಚೆಂಬೈ ಅವರೂ ಸ್ವರ್ಗವಾಸಿಗಳಾದರು. ಆದರೆ ಕರ್ನಾಟಕ ಶಾಸ್ತ್ರೀಯ ಸಂಗೀತಗಂಗೆಯ ಪ್ರವಾಹನಿತ್ಯತ್ವವನ್ನು ಪುರಾವೆಗೊಳಿಸುವಂತೆ ಆಮೇಲಿನ ದಿನಗಳಲ್ಲಿ ಅಗ್ರಪಂಕ್ತಿಭಾಜನರಾದ ಹತ್ತಾರು ಶ್ರೇಷ್ಠ ಕಲಾವಿದರು ಮಂಡಲಿಯ ಉತ್ಸವಗಳನ್ನು ಉಜ್ಜ್ವಲಗೊಳಿಸಿದ್ದಾರೆ.

ಆರಂಭದ ವರ್ಷಗಳಲ್ಲಿ ಉನ್ನತಶ್ರೇಣಿಯ ಕಲಾವಿದರ ಕಚೇರಿಗಳಷ್ಟೆ ಇರುತ್ತಿದ್ದವು. ಆದರೆ ಸ್ವಲ್ಪಮಟ್ಟಿನ ಅನುಕೂಲತೆಯೊದಗಿದಾಗಿನಿಂದ ಈಚಿನ ವರ್ಷಗಳಲ್ಲಿ ಉದಯೋನ್ಮುಖ ಕಲಾವಿದರ ಕಾರ್ಯಕ್ರಮಗಳೂ ಉತ್ಸವದ ಭಾಗವಾಗಿವೆ.

ಕಳೆದ ಮೂರು ಪೀಳಿಗೆಗಳ ಕಲಾವಿದಶ್ರೇಷ್ಠರು ಶ್ರೀರಾಮಸೇವಾ ಮಂಡಲಿಯಲ್ಲಿ ಕಚೇರಿಗಳನ್ನು ನಡೆಸಿ ದೇಶದ ಸಂಗೀತ ನಕ್ಷೆಯಲ್ಲಿ ಬೆಂಗಳೂರು ಗುರುತಿಸಲ್ಪಡಲು ಕಾರಣರಾಗಿದ್ದಾರೆ.

1970ರ ದಶಕದ ಆರಂಭದ ವರ್ಷಗಳಲ್ಲಿ ಮಂಡಲಿಯ ಆಶ್ರಯದಲ್ಲಿ ಕೆ.ಜೆ. ಯೇಸುದಾಸ್, 'ಚೈಲ್ಡ್ ಪ್ರಾಡಿಜಿ' ರವಿಕಿರಣ್, ಜಾನ್ ಹಿಗ್ಗಿನ್ಸ್ ಮೊದಲಾದ ಉದಯೋನ್ಮುಖರು ಆರಂಭದ ಕಚೇರಿಗಳನ್ನು ನೀಡಿದುದು ಮಂಡಲಿಯ ಹಾಗೂ ಸಂಗೀತ ಕ್ಷೇತ್ರದ ಇತಿಹಾಸದ ಕೆಲವು ಸುವರ್ಣಕ್ಷಣಗಳು.

ಅದೊಂದು ವರ್ಷ ಕೆ.ಜೆ. ಯೇಸುದಾಸ್ ಅವರ ಗಾಯನವನ್ನು 12 ಗಂಟೆ ನಡುರಾತ್ರಿಯವರೆಗೂ ಆಕಾಶವಾಣಿ ನೇರ ಪ್ರಸಾರ ಮಾಡಿದ್ದುದುಂಟು.

1947ರಷ್ಟು ಹಿಂದಿನಿಂದ ಆರಂಭಿಸಿ 1998ರಲ್ಲಿ ನಿಧನರಾಗುವವರೆಗೆ ಪ್ರತಿವರ್ಷ ಮಂಡಲಿಯಲ್ಲಿ ಕಚೇರಿ ನೀಡಿದ್ದ ವೈಣಿಕ ವಿ. ದೊರೆಸ್ವಾಮಿ ಅಯ್ಯಂಗಾರ್ಯರು ಹೇಳುತ್ತಿದ್ದರು: "ಈ ಮಂಡಲಿಯದು ತುಂಬಾ ಪ್ರತಿಷ್ಠಿತವಾದ ವೇದಿಕೆ. ಇಲ್ಲಿ ಕಚೇರಿ ನೀಡಿದರೆಂದರೆ ಅವರು ಅಗ್ರಶ್ರೇಣಿಯವರೇ ಆಗಿರಬೇಕು ಎಂದು ಸಾರ್ವಜನಿಕರ ಅನಿಸಿಕೆ ಇದೆ. ಜೊತೆಜೊತೆಗೇ ಭರವಸೆಯ ಹೊಸ ಕಲಾವಿದರಿಗೂ ಇಲ್ಲಿ ಅವಕಾಶ

ದೊರೆಯುತ್ತದೆ. ಇಲ್ಲಿ ಸೇರುವ ಶ್ರೋತೃಗಳು ಅನುಭವಿಗಳು ಮತ್ತು ವ್ಯುತ್ಪನ್ನರು; ಆದುದರಿಂದ ಇಲ್ಲಿ ಕಚೇರಿ ನೀಡಿ ಸಫಲರಾಗುವುದು ಸುಲಭವಲ್ಲ, ಸವಾಲಿನದೇ."

ಸಮುನ್ನತರ ಸಂಗಡಿಕೆ

"ಹಿಂದಿನ ಪೀಳಿಗೆಯ ಎಲ್ಲ ದಿಗ್ಗಜರೂ ಕಚೇರಿ ನೀಡಿದ್ದ ಮಂಡಲಿಯ ವೇದಿಕೆಯಲ್ಲಿಯೇ ಈಗ ನಾವು ಕಚೇರಿ ಮಾಡಲು ಅವಕಾಶವಾಗಿರುವುದು ನಮಗೆ ಅತುಲನೀಯ ಸ್ಫೂರ್ತಿಯನ್ನು ಕೊಡುತ್ತಿರುವ ಸಂಗತಿಯಾಗಿದೆ" – ಎನ್ನುತ್ತಿದ್ದರು ಆರ್.ಕೆ. ಶ್ರೀಕಂಠನ್.

"ಶ್ರೀರಾಮಸೇವಾ ಮಂಡಲಿಗೆ ಕರ್ನಾಟಕದ ಸಂಗೀತರಸಿಕರೆಲ್ಲರ ಆಳವಾದ ಕೃತಜ್ಞತೆ ಸಲ್ಲುತ್ತದೆ" ಎಂದು ಉದ್ಗರಿಸಿದವರು ಶೆಮ್ಮಂಗುಡಿ ಶ್ರೀನಿವಾಸ ಅಯ್ಯರ್. ಇದೇ ಭಾವನೆಯನ್ನು ವ್ಯಕ್ತಮಾಡಿರುವ ಅಗ್ರಪಂಕ್ತಿಯ ಸಂಗೀತ ವಿದ್ವಾಂಸರು ಅಗಣಿತ.

ಇಲ್ಲಿಯ ಉತ್ಸವಗಳನ್ನು ಹಿಂದಿನ ವರ್ಷಗಳಲ್ಲಿ ಯಾರಾರು ಉದ್ಘಾಟಿಸಿದರು ಎಂಬುದನ್ನು ನೆನೆದರೆ ನಮ್ಮ ನಾಡಿನಲ್ಲಿ 20ನೇ ಶತಮಾನದ ಸಾರ್ವಜನಿಕ ಜೀವನದಲ್ಲಿ ಉನ್ನತರೆನಿಸಿದ ಅನೇಕರ ಹೆಸರುಗಳು ನಮ್ಮ ಸ್ಮೃತಿಪಟಲದಲ್ಲಿ ಹಾದುಹೋಗುತ್ತವೆ. ವಿವಿಧ ಕಾಲಖಂಡಗಳ ರಾಷ್ಟ್ರಪತಿಗಳು, ಉಪರಾಷ್ಟ್ರಪತಿಗಳು, ರಾಜ್ಯಪಾಲರುಗಳು, ನ್ಯಾಯಾಧೀಶರುಗಳು, ಮುಖ್ಯಮಂತ್ರಿಗಳು, ಪೀಠಾಧಿಪತಿಗಳು, ಸರ್ಕಾರದ ಅತ್ಯುನ್ನತ ಅಧಿಕಾರಿಗಳು ಮೊದಲಾದ ಅಸಂಖ್ಯ ಗಣ್ಯರಿಂದ ಇಲ್ಲಿಯ ಉತ್ಸವಗಳು ಉದ್ಘಾಟನೆಗೊಂಡಿವೆ.

1955ರಲ್ಲಿ ಉತ್ಸವವನ್ನು ಆಗಿನ ರಾಜ್ಯಪಾಲ ಶ್ರೀ ಜಯಚಾಮರಾಜ ಒಡೆಯರ್ ಅವರು ಉದ್ಘಾಟಿಸಿದುದು, 1957ರಲ್ಲಿ ಉತ್ಸವವು ಚಕ್ರವರ್ತಿ ರಾಜಗೋಪಾಲಾಚಾರ್ಯರಿಂದ ಉದ್ಘಾಟಿತವಾದುದು, 1959ರಲ್ಲಿ ಆಗಿನ ರಾಷ್ಟ್ರಾಧ್ಯಕ್ಷ ಡಾ॥ ಸರ್ವೆಪಲ್ಲಿ ರಾಧಾಕೃಷ್ಣನ್ ಅವರು (ಅನಿವಾರ್ಯ ಕಾರಣಗಳಿಂದಾಗಿ ಧ್ವನಿಮುದ್ರಿತ ಭಾಷಣದ ಮೂಲಕ) ಭಾಗವಹಿಸಿದುದು, 62 ದಿನಗಳಷ್ಟು ದೀರ್ಘಕಾಲ ನಡೆದ 1988ರ ಸುವರ್ಣೋತ್ಸವ ಕಾರ್ಯಕ್ರಮಸರಣಿಯನ್ನು ಆಗಿನ ರಾಷ್ಟ್ರಾಧ್ಯಕ್ಷ ಆರ್. ವೆಂಕಟರಾಮನ್ ಉದ್ಘಾಟಿಸಿದುದು – ಇವೆಲ್ಲ ಮಂಡಲಿಯ ಎಂಟು ದಶಕಗಳ ಇತಿಹಾಸದ ಕೆಲವು ಸ್ಮರಣೀಯ ಪದಚಿಹ್ನೆಗಳು.

ಶ್ರದ್ಧೆಯ ಪವಾಡ

ಯಾವುದೇ ವ್ಯಕ್ತಿಯಾಗಲಿ ಸಂಘಟನೆಯಾಗಲಿ ಅರವತ್ತು ವರ್ಷಗಳನ್ನು ಪೂರೈಸಿದಾಗ ಒಂದು ಸಂವತ್ಸರಚಕ್ರ ಮುಗಿದು ಎರಡನೇ ಚಕ್ರ ಉಪಕ್ರಮಗೊಂಡಿತೆಂದು

ಸಂಭ್ರಮಾಚರಣೆ ನಡೆಯುತ್ತದೆ. ಶ್ರೀರಾಮಸೇವಾ ಮಂಡಲಿ ಒಂದು ಸಂವತ್ಸರಚಕ್ರವನ್ನು ಯಶಸ್ವಿಯಾಗಿ ಮುಗಿಸಿ ಎರಡನೇ ಸಂವತ್ಸರಚಕ್ರ ಪರ್ಯಾಯದಲ್ಲಿಯೂ ಹತ್ತಿರಹತ್ತಿರ ಎರಡು ದಶಕಗಳನ್ನು ದಾಟುತ್ತಿದೆ. ಯಾವುದೇ ನಿಶ್ಚಿತ ಸಂಪನ್ಮೂಲವಿಲ್ಲದೆ ಕೇವಲ ಶ್ರದ್ಧೋತ್ಸಾಹದ ಮತ್ತು ಸಾರ್ವಜನಿಕ ಬೆಂಬಲದ ಆಧಾರದ ಮೇಲೆ ಇಂತಹ ಬೃಹತ್‌ಪ್ರಮಾಣದ ನಿಯತಕಾಲಿಕ ಉತ್ಸವ ಇಷ್ಟು ದೀರ್ಘಕಾಲ ಮುಂದುವರಿದಿರುವುದು ಮಾತ್ರವಲ್ಲದೆ ಹೆಚ್ಚುಹೆಚ್ಚು ಜನಾನುರಾಗಕ್ಕೆ ಪಾತ್ರವಾಗುತ್ತ ಸಾಗಿರುವ ನಿದರ್ಶನಗಳು ವಿರಳ.

ಇನ್ನೊಂದು ದೃಷ್ಟಿಯಿಂದ ನೋಡುವಾಗ ಶ್ರೀರಾಮಸೇವಾ ಮಂಡಲಿಯು ಕಳೆದ 78 ವರ್ಷಗಳಲ್ಲಿ ಕ್ರಮಿಸಿರುವ ದಾರಿಯನ್ನು ಮೆಲುಕುಹಾಕಿದರೆ ಅಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತವು ಈ ಎಂಟೊಂಬತ್ತು ದಶಕಗಳಲ್ಲಿ ಕ್ರಮಿಸಿರುವ ಉಜ್ಜ್ವಲ ಮಾರ್ಗದ ಒಂದು ಸೀಳುನೋಟವೇ ನಮ್ಮ ಕಣ್ಣೆದುರಿಗೆ ಪ್ರತ್ಯಕ್ಷವಾಗುತ್ತದೆ. ಈಗ ಇತಿಹಾಸದ ಪುಟಗಳಿಗೆ ಸೇರಿಹೋಗಿರುವ ಮಹಾರಾಜಪುರಂ ವಿಶ್ವನಾಥ ಅಯ್ಯರ್, ಮದುರೈ ಮಣಿ ಅಯ್ಯರ್, ಆಲತ್ತೂರು ಸೋದರರಿಂದ ಆರಂಭಿಸಿ ಇದೀಗ ವಿರಾಜಮಾನರಾಗಿರುವ ಸುಧಾ ರಘುನಾಥನ್, ನಿತ್ಯಶ್ರೀ ಮಹಾದೇವನ್ ಮೊದಲಾದವರ ಪೀಳಿಗೆಯವರೆಗೆ – ಎಂದರೆ ಮೂರು ತಲೆಮಾರುಗಳ ಅಗ್ರಮಾನ್ಯರುಗಳಿಂದ ಮಂಡಲಿಯ ಉತ್ಸವಗಳಲ್ಲಿ ವಿನಿಕೆಗಳು ಆಗಿವೆ. ಚೆಂಬೈ ವೈದ್ಯನಾಥ ಭಾಗವತರ್, ಡಿ.ಕೆ. ಪಟ್ಟಮ್ಮಾಳ್, ಚಿತ್ತೂರು ಸುಬ್ರಹ್ಮಣ್ಯ ಪಿಳ್ಳೆ, ಕೆ.ಬಿ. ಸುಂದರಾಂಬಾಳ್, ಎಂ.ಕೆ. ತ್ಯಾಗರಾಜ ಭಾಗವತರ್, ದ್ವಾರಂ ವೆಂಕಟಸ್ವಾಮಿ ನಾಯುಡು ಅವರಿಂದ ಹಿಡಿದು ಯೇಮನಿ ಶಂಕರಶಾಸ್ತ್ರಿ, ಮಹಾರಾಜಪುರಂ ಸಂತಾನಂ ಮೊದಲಾದವರವರೆಗೆ, ಎಂ.ಡಿ. ರಾಮನಾಥನ್, ಬಾಲಮುರಳಿಕೃಷ್ಣ, ಟಿ.ಎನ್. ಕೃಷ್ಣನ್ ಮೊದಲಾದವರವರೆಗೆ, ನಮ್ಮವರೇ ಆದ ಬಿ.ಎಸ್. ರಾಜ್ಯೈಯಂಗಾರ್, ಬಿ. ದೇವೇಂದ್ರಪ್ಪನವರಿಂದ ಹಿಡಿದು ಹೊನ್ನಪ್ಪ ಭಾಗವತರ್, ಎ. ಸುಬ್ಬರಾವ್, ಎಂ.ಎಸ್. ಶೀಲಾ, ಕದ್ರಿ ಗೋಪಾಲನಾಥ್, ಮೈಸೂರು ನಾಗರಾಜ್–ಮೈಸೂರು ಮಂಜುನಾಥ್ ಜೋಡಿ, ಸುಮಾ ಸುಧೀಂದ್ರರವರೆಗೆ ಮಂಡಲಿಯಲ್ಲಿ ಕಚೇರಿ ಮಾಡದವರಿಲ್ಲ.

ಮಂಡಲಿಯಲ್ಲಿ ಕಳೆದ 78 ವರ್ಷಗಳಲ್ಲಿ ಭಾಗವಹಿಸಿರುವ ಕಲಾವಿದರನ್ನು ಪಟ್ಟಿಮಾಡಿದರೆ ಅದು 20ನೇ ಶತಮಾನದ ಕರ್ನಾಟಕ ಶಾಸ್ತ್ರೀಯ ಸಂಗೀತದ ಇತಿಹಾಸವೇ ಆಗುತ್ತದೆ.

ಒಂದು ಕಾಕತಾಳೀಯವೆಂಬಂತೆ ಮಂಡಲಿಯ ಉತ್ಸವ ಸಿಟಿ ಇನ್‌ಸ್ಟಿಟ್ಯೂಟ್ ಆವರಣದಲ್ಲಿ ನಡೆಯತೊಡಗಿದ ಮೊದಲ ವರ್ಷವೇ (1952) ಎಂ.ಎಸ್. ಸುಬ್ಬುಲಕ್ಷ್ಮಿಯವರ ಕಚೇರಿಯನ್ನು ಮಂಡಲಿ ಏರ್ಪಡಿಸುವುದು ಸಾಧ್ಯವಾಯಿತು.

ಅಲ್ಲಿಂದಾಚೆಯ ನಾಲ್ಕು ದಶಕಗಳ ಅವಧಿಯಲ್ಲಿ ಸುಬ್ಬುಲಕ್ಷ್ಮಿಯವರ 31 ಕಚೇರಿಗಳು ಇಲ್ಲಿ ನಡೆದವು. ಹಲವಾರು ವರ್ಷ ಮಂಡಲಿಯಲ್ಲಿ ನಡೆದ ಸುಬ್ಬುಲಕ್ಷ್ಮಿ ಅವರ ಕಚೇರಿಗಳು ದಕ್ಷಿಣಭಾರತದ ಎಲ್ಲ ಆಕಾಶವಾಣಿ ಕೇಂದ್ರಗಳಲ್ಲಿ ಕಚೇರಿಗಳು ನಡೆದ ಸಮಯದಲ್ಲಿಯೆ ಪ್ರಸಾರಗೊಳ್ಳುತ್ತಿದ್ದವು.

ಸಹಜವಾಗಿಯೆ ಎಂ.ಎಸ್. ಸುಬ್ಬುಲಕ್ಷ್ಮಿ ಅವರ ಕಚೇರಿಗಳಿಗೆ ಸೇರುತ್ತಿದ್ದ ಜನಸ್ತೋಮವು ದಾಖಲೆ ರೀತಿಯದಾಗಿರುತ್ತಿತ್ತು. ಪೂರ್ಣ ಪೂರ್ವಸಿದ್ಧತೆಯೊಡನೆ, ವಾದನ-ಸಹಕಾರಿಗಳೊಡನೆ ನಿಗದಿಯಾದ ಸಮಯಕ್ಕೆ ಸರಿಯಾಗಿ ಅವರು ವೇದಿಕೆಯನ್ನೇರಿ ವಿಳಂಬಕ್ಕೆ ಸ್ವಲ್ಪವೂ ಅವಕಾಶವನ್ನೀಯದೆ ಗಾನಸುಧೆಯನ್ನು ಹರಿಯಿಸತೊಡಗಿ ಕಾರ್ಯಕ್ರಮದ ಮೂರು ತಾಸುಗಳ ಅವಧಿಯ ಪ್ರತಿ ನಿಮಿಷವನ್ನೂ ಸಾರ್ಥಕಗೊಳಿಸುತ್ತಿದ್ದುದು ಒಂದು ಅವಿಸ್ಮರಣೀಯ ಅನುಭವವಾಗಿತ್ತು. ಆರಂಭದಲ್ಲಿ ಮೈಕ್‌ಗಳನ್ನು ಹೊಂದಿಸಿಡಲು ಕೆಲವು ನಿಮಿಷ ಹಿಡಿಯುತ್ತಿತ್ತಷ್ಟೆ. ಒಂದೊಂದು ಸಣ್ಣ ವಿವರದಲ್ಲಿಯೂ ಹೇಗೆ ಔನ್ನತ್ಯ (ಪರ್‌ಫೆಕ್‌ಶನ್) ವ್ಯಕ್ತವಾಗುತ್ತಿತ್ತು ಎಂಬುದನ್ನು ಶ್ರೋತೃಗಳು ಎಂದಿಗೂ ಮರೆಯಲಾರರು.

ಶ್ರೀರಾಮಸೇವಾ ಮಂಡಲಿ ಆರಂಭಕಾಲದಿಂದಲೇ ಸ್ವಯಂವಿಹಿತ ಅನುಶಾಸನಕ್ಕೆ ಬದ್ಧವಾಗಿದೆ; ಮತ್ತು ಇದರಿಂದಾಗಿ ಸಾರ್ವಜನಿಕರ ಮತ್ತು ಕಲಾವಿದರ ವಿಶ್ವಾಸವನ್ನೂ ಪಡೆದುಕೊಂಡಿದೆ. ಈಗ್ಗೆ ಕೆಲವು ವರ್ಷ ಹಿಂದಿನವರೆಗೆ ಅಗ್ರಶ್ರೇಣಿಯ ಕಲಾವಿದರೂ ಮಂಡಲಿಯಿಂದ ಪಡೆಯುತ್ತಿದ್ದುದು ಸಾಂಕೇತಿಕ ಸಂಭಾವನೆಯನ್ನು ಮಾತ್ರ. ಇದಕ್ಕೆ ಕಾರಣ ಇಲ್ಲಿ ನಡೆಯುವುದು ನೈಜ ಶ್ರದ್ಧಾವಂತರ ಸಮಾವೇಶ ಮತ್ತು ಇಲ್ಲಿ ಸಂಗೀತದ ಮೂಲಕ ನಡೆಯುವುದು ಭಗವದಾರಾಧನೆ - ಎಂಬ ವಾಸ್ತವದ ಮನವರಿಕೆ.

ಮೂಲಸ್ರೋತ

ಅಮೆರಿಕದ ತತ್ತ್ವಶಾಸ್ತ್ರಜ್ಞ ರಾಲ್ಫ್ ವಾಲ್ಡೊ ಎಮರ್ಸನ್ನನ ಪ್ರಸಿದ್ಧೋಕ್ತಿಯೊಂದಿದೆ - ಪ್ರತಿ 'ಸಂಸ್ಥೆ'ಯೂ ಯಾರೋ ಒಬ್ಬ 'ವ್ಯಕ್ತಿ'ಯ ದೀರ್ಘಚ್ಛಾಯೆಯಾಗಿರುತ್ತದೆ ಎಂದು. ವ್ಯಕ್ತಿಪ್ರತಿಭೆಯೇ ಕಾಲಕ್ರಮದಲ್ಲಿ ಔಪಚಾರಿಕವಾಗಿ ಸಂಸ್ಥೆ ಎನಿಸುತ್ತದೆ.

ನಾರಾಯಣಸ್ವಾಮಿರಾಯರ ಕರ್ತೃತ್ವವನ್ನೂ ಶ್ರೀರಾಮಸೇವಾ ಮಂಡಲಿಯ ಹೊರ-ಆಕಾರವನ್ನೂ ಒಂದರಿಂದೊಂದನ್ನು ಬೇರ್ಪಡಿಸುವುದು ಅಸಾಧ್ಯ. ಮಂಡಲಿಯೆಂದರೆ ನಾರಾಯಣಸ್ವಾಮಿರಾಯರು; ನಾರಾಯಣಸ್ವಾಮಿರಾಯರೆಂದರೆ ಮಂಡಲಿ. ಹೀಗೆ ಇಂದಿಗೂ ಅಸ್ಖಲಿತವಾಗಿ ಮುಂದುವರಿದಿರುವ ಇಲ್ಲಿಯ ಒಂದೊಂದು ಕಲಾಪದಲ್ಲಿಯೂ ನಾರಾಯಣಸ್ವಾಮಿರಾಯರ ಅರವತ್ತು ವರ್ಷಕ್ಕೂ ಹೆಚ್ಚಿನ ಏಕಾಗ್ರ ತಪಸ್ಸಿನ ಗಾಢವಾದ ಮುದ್ರಿಕೆಯನ್ನು ಕಾಣಬಹುದು.

(ಮೇಲಿನ ಚಿತ್ರ) ಕೊಲ್ಕತಾದ ಈಡನ್ ಗಾರ್ಡನ್ಸ್‌ನಲ್ಲಿ ವೃಕ್ಷದಡಿಯಲ್ಲಿ ಕೊಳಲು ನುಡಿಸುತ್ತಿರುವ ಟಿ.ಆರ್. ಮಹಾಲಿಂಗಂ ಅವರೊಡನೆ ಎಸ್.ವಿ. ನಾರಾಯಣಸ್ವಾಮಿರಾವ್.

(ಕೆಳಗಿನ ಚಿತ್ರ) 1954ರಲ್ಲಿ ಶ್ರೀರಾಮಸೇವಾ ಮಂಡಲಿಯ ಉತ್ಸವದಲ್ಲಿ ಜಿ. ಎನ್. ಬಾಲಸುಬ್ರಹ್ಮಣ್ಯಂ ಅವರ ಗಾಯನ; ಪಿಟೀಲು ನುಡಿಸುತ್ತಿರುವವರು ಸಂಗೀತರತ್ನ ಟಿ. ಚೌಡಯ್ಯ; ಮೃದಂಗ ವಾದಕ ಪಳನಿ ಸುಬ್ರಹ್ಮಣ್ಯ ಪಿಳ್ಳೆ.

ಇಷ್ಟೊಂದು ಸಂಕೀರ್ಣವಾದ ಕಾರ್ಯಕ್ರಮಗಳ ನಿರ್ವಹಣೆ ನಾಜೂಕಿನದೇ. ಎಷ್ಟೇ ಪೂರ್ವಸಿದ್ಧತೆಯಾಗಿದ್ದರೂ ಕೊನೆಘಳಿಗೆಯಲ್ಲಿ ಏನೋ ಒಂದು ಸಮಸ್ಯೆ ತಲೆದೋರುವುದು ವಿರಳವಲ್ಲ: ಪಕ್ಕವಾದ್ಯದವರ ಏನೋ ಸಮಸ್ಯೆ, ಮೈಕಿನ ಏನೋ ಸಮಸ್ಯೆ, ಏನೋ ಆಗಂತುಕ ಕಾರಣಗಳಿಂದ ಯಾರೋ ಕಲಾವಿದರು ಸಮಯಕ್ಕೆ ತಲಪಲಾಗದಿರುವುದು, ಇತ್ಯಾದಿ. ಇಂತಹ ಕ್ಲೇಶಗಳನ್ನು ನಾರಾಯಣಸ್ವಾಮಿರಾಯರು ಕೌಶಲದಿಂದಲೂ ಸಮಯಪ್ರಜ್ಞೆಯಿಂದಲೂ ನಿರ್ವಾಹ ಮಾಡುತ್ತಿದ್ದರು. ಇನ್ನು ಕುಂಭದ್ರೋಣ ಮಳೆ ಎರಗಿ ವ್ಯವಸ್ಥೆಗಳನ್ನೆಲ್ಲ ಏರುಪೇರು ಮಾಡುತ್ತಿದ್ದುದೂ ಉಂಟು. ಅದನ್ನು ನಿಭಾಯಿಸಲು ಹರಸಾಹಸವನ್ನೇ ಮಾಡಬೇಕಾಗುತ್ತಿತ್ತು.

ನಾರಾಯಣಸ್ವಾಮಿರಾಯರು ಸ್ವಭಾವತಃ ಮಿತಭಾಷಿಗಳು. ಮನೆಯೊಳಗೂ ಕುಟುಂಬ ಸದಸ್ಯರೊಡನೆ ಎಷ್ಟು ಅವಶ್ಯವೋ ಅಷ್ಟೇ ಮಾತು. ತಮ್ಮ ಅಷ್ಟೂ ಶಕ್ತಿಯು ಸ್ವವಿಹಿತ ಕರ್ತವ್ಯಾಚರಣೆಗೆ ಮೀಸಲಿರಬೇಕೆಂಬ ಅವರ ವ್ರತನಿಷ್ಠೆಯಲ್ಲಿ ವ್ಯರ್ಥ ಆಲಾಪಗಳಿಗಾಗಲಿ ಅನ್ಯ ಮನೋವಿಕ್ಷೇಪಗಳಿಗಾಗಲಿ ಅವಕಾಶವೇ ಇರಲಿಲ್ಲ. ಹಾಗೆಂದು ಅವರು ಸ್ವಕೇಂದ್ರಿತ ವ್ಯಕ್ತಿ ಎನ್ನಲಾಗದು. ತಮ್ಮ ಕಾರ್ಯದ ಕಕ್ಷೆಯಲ್ಲಿ ಯಾರಾದರೂ ಸಹಾಯ ಬಯಸಿದರೆ ಅವರು ಸ್ವಲ್ಪವೂ ಮೀನಮೇಷ ನೋಡದೆ ಅಪೇಕ್ಷಿತ ನೆರವನ್ನು ನೀಡುತ್ತಿದ್ದರು – ಬೇರಾವುದೊ ಕಾರ್ಯಕ್ರಮಕ್ಕೆ ಹಿರಿಯ ಕಲಾವಿದರುಗಳನ್ನು ಜೋಡಿಸುವುದು, ಇತ್ಯಾದಿ. ಮಂಡಲಿಯ ಕಾರ್ಯಕ್ರಮಗಳಿಗೆ ಪ್ರತಿದಿನದ ಹಾಗೂ ಸೀಜನ್ ಟಿಕೆಟ್‌ಗಳ ವ್ಯವಸ್ಥೆ ಇರುವುದು ಅನಿವಾರ್ಯವಷ್ಟೆ. ಆದರೆ ಗಣ್ಯರಿಗೂ ಕಲಾವಿದರಿಗೂ ಹಿತೈಷಿಗಳಿಗೂ ದೀರ್ಘಕಾಲದ ಅಭಿಮಾನಿಗಳಿಗೂ ನಿಃಶುಲ್ಕ ಪಾಸುಗಳನ್ನು ಧಾರಾಳವಾಗಿ ನಾರಾಯಣಸ್ವಾಮಿರಾಯರು ವಿತರಿಸುತ್ತಿದ್ದರು. ಯಾವುದೇ ಕಾರಣಕ್ಕೂ ಆಸಕ್ತರಿಗೆ ಕಚೇರಿಗಳನ್ನು ಕೇಳುವ ಅವಕಾಶ ತಪ್ಪಬಾರದೆಂಬುದು ಅವರ ಕಾಳಜಿಯಾಗಿತ್ತು.

ಸಂಘಟನಕೌಶಲ

ಕಲಾವಿದರ ಆಯ್ಕೆ, ಆಯಾ ಕಲಾವಿದರಿಗೆ ಹೊಂದಿಕೆಯಾಗುವ ಪಕ್ಕವಾದ್ಯಗಳವರ ಸಂಯೋಜನೆ – ಮೊದಲಾದ ವಿವರಗಳನ್ನು ಕೌಶಲಪೂರ್ಣವಾಗಿ ದಶಕಗಳುದ್ದಕ್ಕೂ ನಿರ್ವಹಿಸುತ್ತಿದ್ದವರು ನಾರಾಯಣಸ್ವಾಮಿರಾಯರು. ಇದು ಸಾಧ್ಯವಾದುದು ಅವರು ವ್ಯವಸ್ಥಾಪಕರಷ್ಟೆ ಆಗಿರದೆ ಸ್ವಯಂ ಕಲಾಭಿಜ್ಞರೂ ಆಗಿದ್ದು ಸಂಗೀತದ ಸೂಕ್ಷ್ಮಾಂಶಗಳ ಪರಿಜ್ಞಾನವನ್ನು ಬೆಳೆಸಿಕೊಂಡಿದ್ದುದರಿಂದ. ಮಂಡಲಿಯ ಉತ್ಸವಕ್ಕೆ ಕಲಾವಿದರನ್ನು ಆಮಂತ್ರಿಸುವುದಕ್ಕೆ ಪೂರ್ವದಲ್ಲಿ ಅವರ ಹಲವು ಕಚೇರಿಗಳನ್ನು ತಾವೇ ಆಲಿಸಿ ಅವರ ಪ್ರಸ್ತುತಿಯ ಸ್ವರೂಪವನ್ನೂ ಶೈಲಿಯನ್ನೂ ಖಚಿತವಾಗಿ ಗುರುತಿಸಿರುತ್ತಿದ್ದರು.

ಈ ಹಿನ್ನೆಲೆ ಇದ್ದುದರಿಂದಲೇ ವರ್ಷಗಳುದ್ದಕ್ಕೂ ಮಂಡಲಿಯ ಉತ್ಸವಗಳು ಉನ್ನತ ಗುಣಮಟ್ಟದವಾಗಿರುತ್ತಿದ್ದವು. ಅಷ್ಟು ದೊಡ್ಡ ಉತ್ಸವ ವರ್ಷವರ್ಷವೂ ಕ್ರಮತಪ್ಪದೆ ಸಂಭ್ರಮಪೂರ್ಣವಾಗಿ ಯಾವುದೇ ಲೋಪಗಳಿಲ್ಲದೆ ಸುಯೋಜಿತವಾಗಿ ನಡೆಯುತ್ತಬಂದಿರುವುದು ಅತ್ಯಂತ ಪ್ರಶಂಸನೀಯವೆಂದರೆ ಹೆಚ್ಚು ಹೇಳಿದಂತಾಗದು. ಮಂಡಲಿಯ ಪ್ರತಿಷ್ಠೆ ಬೆಳೆದಂತೆ ಕ್ರಮೇಣ ಅವಶ್ಯವಿದ್ದಷ್ಟು ಪ್ರಾಯೋಜಕತ್ವವೂ ಲಭಿಸತೊಡಗಿತ್ತು. ಇದರಷ್ಟೆ ಮುಖ್ಯ ಸಂಗತಿಯೆಂದರೆ ಹೆಚ್ಚುಕಡಮೆ ದಿನವಿಡೀ ಸಾಗಬೇಕಾಗಿದ್ದ ಕಲಾಪಗಳ ಸಜ್ಜಿಕೆಯಲ್ಲಿ ಸ್ವಯಂಸ್ಫೂರ್ತರಾಗಿ ಹರ್ಷದಿಂದ ತೊಡಗಿಕೊಳ್ಳುವ ತರುಣ ತಂಡಗಳೂ ಲಬ್ಧರಾದರು. ಉತ್ಸವದ ಆರಂಭಕ್ಕೆ ಎರಡು ತಿಂಗಳಷ್ಟು ಹಿಂದಿನಿಂದಲೇ ಸಿದ್ಧತೆಗಳು ಉಪಕ್ರಮಗೊಂಡಿರುತ್ತವೆ. ಉತ್ಸವ ಮುಗಿದ ಮೇಲೂ ಹಲವಾರು ದಿನಗಳು ಹಿಡಿಯುವ ಕೆಲಸಗಳು ಇರುತ್ತವೆ. ಇಡೀ ಕಾರ್ಯತಂಡ ಹಗಲುರಾತ್ರಿ ಶ್ರಮಪಡದೆ ಗತ್ಯಂತರವಿರದು. ಇನ್ನು ನಾರಾಯಣಸ್ವಾಮಿರಾಯರ ಕುಟುಂಬಕ್ಕಂತೂ ಇಡೀ ಉತ್ಸವದ ಅವಧಿಯಲ್ಲಿ ಶಿಬಿರಜೀವನವೇ.

ಉತ್ಸವ ನಡೆಯುವುದು ಒಂದೂವರೆ ತಿಂಗಳಿನಷ್ಟೇ ಆದರೂ ತತ್ಸಂಬಂಧಿತ ವ್ಯವಹಾರಗಳು ಇಡೀ ವರ್ಷವೇ ನಡೆಯಬೇಕಾಗಿರುತ್ತದೆ. ನೆರವಿಗರ ಸಂಪರ್ಕಗಳು, ಕಲಾವಿದರ ಸಂಪರ್ಕಗಳು, ಇವಕ್ಕೆ ಸಂಬಂಧಿಸಿದ ಪ್ರವಾಸಗಳು, ವಿವಿಧ ಬಾಹ್ಯ ವ್ಯವಸ್ಥೆಗಳ ಸಂಯೋಜಕರ ಸಂಪರ್ಕಗಳು, ಸರ್ಕಾರೀ ಇಲಾಖೆಗಳೊಡನೆ ಸಂಪರ್ಕ, ಧನಸಂಗ್ರಹ; – ಹೀಗೆ ಅದೊಂದು ನಿರಂತರ ಯಜ್ಞಸದೃಶ ಕಾರ್ಯಾವಳಿ.

ಗಮನ ಸೆಳೆಯುವ ಒಂದು ಸಂಗತಿಯೆಂದರೆ ಹಲವು ವಾರಗಳಷ್ಟು ಅವಧಿಯ ಇಂತಹ ಸಂಕೀರ್ಣ ಕಾರ್ಯಕ್ರಮಸರಣಿಯ ಸೂತ್ರಧಾರರು ನಾರಾಯಣ ಸ್ವಾಮಿರಾಯರೆಂಬುದು ಸರ್ವವಿದಿತವೇ ಆಗಿದ್ದರೂ ಅವರು ವೇದಿಕೆಯ ಮೇಲಾಗಲಿ ಮೈಕಿನ ಹಿಂದೆಯಾಗಲಿ ಎಂದೂ ಕಾಣಿಸಿಕೊಳ್ಳುತ್ತಿರಲಿಲ್ಲ. ಅವರ ಚಟುವಟಿಕೆ ಏನಿದ್ದರೂ ತೆರೆಯ ಹಿಂದೆಯಷ್ಟೆ. ಕೀರ್ತಿಕಾಮನೆಯಿಂದಲೂ ಪ್ರಚಾರೇಚ್ಛೆಯಿಂದಲೂ ಅವರಷ್ಟು ವಿಮುಖರಾಗಿದ್ದವರು ವಿರಳ.

ಉತ್ಸವದ ಕಾರ್ಯಕ್ರಮ ಮುಗಿದ ಮೇಲೆ ನಗರದ ದೂರದ ಬಡಾವಣೆಗಳಿಗೆ ಜನರನ್ನು ಒಯ್ಯಲು ಸಾರಿಗೆ ಇಲಾಖೆಯ ಬಸ್‌ಗಳು ಸಿದ್ಧವಿರುತ್ತವೆ. ಹೀಗೆ ಶ್ರೋತೃಗಳು ನಿರಾತಂಕವಾಗಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಆನಂದಿಸುತ್ತಾರೆ.

ಉತ್ಸವದ ಕಾರ್ಯಕ್ರಮಗಳ ಬಗೆಗೆ ಸಂಗೀತದ ಅಭಿಜ್ಞರು ಬರೆದ ವರದಿಗಳು ಪತ್ರಿಕೆಗಳಲ್ಲಿ ಪ್ರಕಟಗೊಳ್ಳುವಂತೆಯೂ ನಾರಾಯಣಸ್ವಾಮಿರಾಯರು ಆಸಕ್ತಿ ವಹಿಸುತ್ತಿದ್ದರು.

ಹೀಗೆ ಉತ್ಸವದ ಉತ್ಕೃಷ್ಟತೆಗೆ ಪೂರಕವಾದ ಎಲ್ಲ ವಿವರಾಂಶಗಳಿಗೂ ಸೂಕ್ಷ್ಮ ಗಮನವೀಯುತ್ತಿದ್ದ ನಾರಾಯಣಸ್ವಾಮಿರಾಯರ ಸಂಘಟನಕೌಶಲವನ್ನು ವರ್ಣಿಸಲು ಮಾತುಗಳು ಸಾಲವು.

ಭಕ್ತಿಯ ಬೀಡು

ಮಂಡಲಿಯು ವರ್ಷದಿಂದ ವರ್ಷಕ್ಕೆ ದಾಪುಗಾಲಿಟ್ಟು ಬೆಳೆಯುತ್ತಹೋದುದರ ಕೀರ್ತಿಯ ಸಿಂಹಪಾಲು ಸಲ್ಲುವುದು ನಾರಾಯಣಸ್ವಾಮಿರಾಯರ ವ್ಯಕ್ತಿತ್ವಕ್ಕೇ ಎಂಬುದು ಅಲ್ಲಗಳೆಯಲಾಗದ ತಥ್ಯ. ಅವರ ನೈಜ ದೈವಭಕ್ತಿ, ಕಾರ್ಯೋತ್ಸಾಹ, ನಿರಂತರ ಪರಿಶ್ರಮ, ಸಜ್ಜನಿಕೆ, ಎಲ್ಲರೊಡನೆ ಸೌಹಾರ್ದಯುತ ಸಂಬಂಧ. ಔದಾರ್ಯಸ್ವಭಾವ, ನಿಃಸ್ವಾರ್ಥ – ಈ ಗುಣಗಳು ಎಷ್ಟು ಪಾರದರ್ಶಕವಾಗಿದ್ದವೆಂದರೆ ಅವರ ಯಾವುದೇ ಕೋರಿಕೆಗೆ ಇತರರು ಹಾರ್ದಿಕವಾಗಿ ಸ್ಪಂದಿಸುತ್ತಿದ್ದರು. ಗಾಯಕ–ವಾದಕ ಕಲಾವಿದರಂತೂ ಅಪವಾದರಹಿತವಾಗಿ ಎಲ್ಲರೂ ನಾರಾಯಣಸ್ವಾಮಿರಾಯರಲ್ಲಿ ಸೋದರಭಾವ ತಳೆದಿರುತ್ತಿದ್ದರು.

ನಾರಾಯಣಸ್ವಾಮಿರಾಯರ ದೃಷ್ಟಿಯಲ್ಲಿ ಮಂಡಲಿಯ ರಾಮೋತ್ಸವವೆಂದರೆ ಕೇವಲ ಒಂದು ಕಾರ್ಯಕ್ರಮಸರಣಿಯಾಗಿರದೆ ಒಂದು ಶಾಸ್ತ್ರೀಯ ಕಲೆಯಾಗಿ ಸಂಗೀತದ ಸಂವರ್ಧನೆಗೂ ಇದೊಂದು ಕೊಡುಗೆಯಾಗಬೇಕು – ಎಂಬುದಾಗಿತ್ತು. ಕಳೆದ ಎರಡು–ಮೂರು ದಶಕಗಳ ಕಾರ್ಯಕ್ರಮವಿನ್ಯಾಸದಲ್ಲಿಯೂ ಈ ಸೂಕ್ಷ್ಮದೃಷ್ಟಿಯು ಬಿಂಬಿತವಾಗಿದೆ.

ಕಚೇರಿಗಳಲ್ಲಿ ಹೆಚ್ಚಿನವು ಸಹಜವಾಗಿ ಕರ್ನಾಟಕ ಶಾಸ್ತ್ರೀಯ ಪ್ರಾಕಾರದವಾದರೂ ಉತ್ತರಾದಿ ಸಂಗೀತ ಕ್ಷೇತ್ರದ ಅಗ್ರಮಾನ್ಯರ ಗಾಯನ–ವಾದನಗಳೂ 1950ರ ದಶಕದಿಂದಲೇ ನಡೆಯುತ್ತಬಂದಿವೆ.

ಬೆಂಗಳೂರಿಗೆ ಮೊತ್ತಮೊದಲಬಾರಿಗೆ ಶಹನಾಯಿ ಮಾಂತ್ರಿಕ ಉಸ್ತಾದ್ ಬಿಸ್ಮಿಲ್ಲಾ ಖಾನ್ ಅವರನ್ನು ಕರೆಯಿಸಿ ಕಾರ್ಯಕ್ರಮ ಏರ್ಪಡಿಸಿದವರು ನಾರಾಯಣಸ್ವಾಮಿರಾಯರು – 1957ರಲ್ಲಿ. (ಕಾಕತಾಳೀಯವಾಗಿ ಖಾನ್‌ಸಾಹೇಬರ ಬಹುಶಃ ಕಟ್ಟಕಡೆಯ ಕಚೇರಿ ನಡೆದದ್ದೂ ಬೆಂಗಳೂರಿನಲ್ಲಿಯೇ – 2005ರಲ್ಲಿ.)

ಇದೀಗ ರಾಷ್ಟ್ರಸ್ತರದಲ್ಲಿಯೆ ಅಗ್ರಪಂಕ್ತಿಯಲ್ಲಿರುವ ರಾಜನ್ ಮಿಶ್ರಾ–ಸಾಜನ್ ಮಿಶ್ರಾ ಗಾಯಕ ಸೋದರರಿಂದ ಹೊಮ್ಮಿದ ಉದ್ಗಾರ ಮಂಡಲಿಯಲ್ಲಿ ಕಚೇರಿಗಳನ್ನು ನೀಡುತ್ತಬಂದಿರುವ ಎಲ್ಲ ಕಲಾವಿದರ ಅನಿಸಿಕೆಯನ್ನು ಬಿಂಬಿಸುತ್ತದೆ ಎನ್ನಬಹುದು: "ಈ ರಾಮಸೇವಾ ಮಂಡಲಿಯಲ್ಲಿ ಹಾಡುವುದೆಂದರೆ ನಮಗೆ ಅತಿಶಯ ಆನಂದವಾಗುತ್ತದೆ. ಏಕೆಂದರೆ ಇಲ್ಲಿ ನಡೆಯುವುದು ಕೇವಲ ಕಲಾರಾಧನೆಯಷ್ಟೆ

ಅಲ್ಲ. ಇಲ್ಲಿ ನಡೆಯುವುದು ಆಧ್ಯಾತ್ಮಿಕ ಅನುಭವವನ್ನು ತಂದುಕೊಡುವ ಕಲಾಪಸರಣಿ. ಇದೊಂದು ಉಪಾಸನಾ ಸತ್ರ."

ಉತ್ಸವದ ವಾತಾವರಣದಿಂದ ಮೋಹಿತರಾದ ವಿಖ್ಯಾತ ಸರೋದ್ ವಾದಕ ಅಮ್ಜದ್ ಅಲಿ ಖಾನ್ ತಮ್ಮ ಕಚೇರಿಗಾಗಿ ಸಂಭಾವನೆಯನ್ನು ತೆಗೆದುಕೊಳ್ಳಲಿಲ್ಲ.

ಮಂಡಲಿಯೊಡನೆ ಒಮ್ಮೆ ನಂಟು ಏರ್ಪಟ್ಟರೆ ಅದು ಅವ್ಯಾಹತವಾಗಿ ಮುಂದುವರಿಯುವುದು ನಿಶ್ಚಿತ. ಇಂತಹದು ಇಲ್ಲಿಯ 'ರಾಮರಾಜ್ಯ'. 1940ರ ದಶಕದಲ್ಲಿ ನೇತೃತ್ವ ವಹಿಸಿಕೊಂಡಿದ್ದ ಎನ್. ಶ್ರೀರಾಮ್ ಅವರ ತರುವಾಯ 1952ರಲ್ಲಿ ಅಧ್ಯಕ್ಷರಾದ ಅಡ್ವೊಕೇಟ್ ಎ.ಎನ್. ರಾಮರಾವ್ 36 ವರ್ಷಗಳಷ್ಟು ದೀರ್ಘಕಾಲ ಹೊಣೆಯನ್ನು ನಿರ್ವಹಿಸಿ ಯಶಃಕಾಯರಾದರು. ಆಮೇಲಿನ ವರ್ಷಗಳಲ್ಲಿ ಅಧ್ಯಕ್ಷರಾಗಿ ಯೋಗದಾನ ನೀಡಿದವರು ಎನ್. ಭೀಮಾಚಾರ್, ಸಿ.ವಿ.ಎಸ್. ರಾವ್, ಎನ್. ಲಕ್ಷ್ಮಣರಾವ್, ಜಿ.ಕೆ ಶ್ರೀನಿವಾಸ್. ಅಲ್ಲಿಂದೀಚಿನ ವರ್ಷಗಳಲ್ಲಿ ಸರ್ಕಾರದ ಉನ್ನತಾಧಿಕಾರಿ ಡಾ॥ ಸಿ.ಎಸ್. ಕೇದಾರ್, ಡಾ॥ ಎ. ರವೀಂದ್ರ ಮೊದಲಾದವರು ಮಂಡಲಿಯೊಡನೆ ಅವಿನಾಭಾವ ತಳೆದಿದ್ದಾರೆ.

ಮಂಡಲಿಯ ಉತ್ಸವಗಳ ಒಂದು ಪ್ರಮುಖ ಆಕರ್ಷಣೆಯೆಂದರೆ ಅಲ್ಲಿಯ ಭಕ್ತಿಯ ಆವರಣ. ಎಲ್ಲ ಕಲಾಪಗಳೂ ದೈವಭಕ್ತಿಯ ಅನುಸರಣೆಯೆಂಬ ರೀತಿಯಲ್ಲಿಯೆ ನಡೆಯುತ್ತವೆ. ಉತ್ಸವ ನಡೆಯುವಷ್ಟು ದಿವಸಗಳೂ ಅಲ್ಲಿ ಸಾಕ್ಷಾತ್ತಾಗಿಯೂ ಸಂಕೇತಾತ್ಮಕವಾಗಿಯೂ ಮೆರೆದಿರುವುದು ಶ್ರೀರಾಮ ಪಂಚಾಯತನ ಸಾನ್ನಿಧ್ಯವೇ.

ಯಾವುದೇ ಮಹಾರಾಜರ ಆಸ್ಥಾನದ ದರ್ಬಾರಿಗಾಗಲಿ ಧರ್ಮಪೀಠಗಳ ಸನ್ನಿಧಿಗಾಗಲಿ ಕಡಮೆಯಲ್ಲದುದು ಇಲ್ಲಿಯ ಭವ್ಯತೆ – ಎಂದರೆ ಉತ್ಪ್ರೇಕ್ಷೆಯಲ್ಲ.

ರಾಮೋತ್ಸವದ ಸಂಗೀತಕಚೇರಿಗಳು ನಡೆಯುವುದು ಸಂಜೆಯಾದರೂ ವಿಧ್ಯುಕ್ತವಾಗಿ ಸ್ಥಾಪನೆಗೊಂಡ ದೈವಸನ್ನಿಧಿಯಲ್ಲಿ ಶಾಸ್ತ್ರಪ್ರಕಾರವಾಗಿ ನಡೆಯಬೇಕಾದ ಪೂಜೆಗಳೂ ತತ್ಸಂಬಂಧಿತ ಕಲಾಪಗಳೂ ಸೂರ್ಯೋದಯದಿಂದ ಆರಂಭಿಸಿ ರವೆಯಷ್ಟೂ ಲೋಪವಿಲ್ಲದೆ ಇಲ್ಲಿ ನಡೆಯುತ್ತವೆ. ಬೆಳಗಿನ ಹೊತ್ತು ಶ್ರೇಷ್ಠ ವಿದ್ವಾಂಸರುಗಳಿಂದಲೂ ಪೀಠಾಧಿಪತಿಗಳಿಂದಲೂ ನಡೆಯುವ ಧಾರ್ಮಿಕ ಪ್ರವಚನಗಳೂ ರಾಮೋತ್ಸವದ ಒಂದು ಅವಿಭಾಜ್ಯ ಅಂಗ. ಈ ಪ್ರವಚನಗಳಿಗೂ ಸಾವಿರಾರು ಮಂದಿ ಭಕ್ತರು ಪ್ರತಿದಿನ ಸೇರುತ್ತಾರೆ.

ಹೀಗೆ ಇಲ್ಲಿ ನಡೆಯುವುದು ಕೇವಲ ರಂಜನೆಯಾಗಿರದೆ ನಿಜಾರ್ಥದಲ್ಲಿ ಆರಾಧನೆಯೇ ಆಗಿದೆಯೆಂಬುದು ಎದ್ದುಕಾಣುತ್ತದೆ. ಇಲ್ಲಿಯ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಬರುವ ಕಲಾವಿದರು, ಶ್ರೋತೃಗಳು – ಎಲ್ಲರೂ ಆರಾಧನಾಭಾವದಿಂದಲೇ ಬರುತ್ತಾರೆ.

ಇದು ಹೀಗೆ ನಡೆಯಬೇಕೆಂಬುದೇ ಮಂಡಲಿಯ ಆರಂಭಕಾಲದಿಂದ ನಾರಾಯಣಸ್ವಾಮಿರಾಯರ ಸಂಕಲ್ಪವೂ ಪ್ರಯತ್ನವೂ ಆಗಿದ್ದು ಇಂದಿಗೂ ಅದು ಹಾಗೆಯೇ ಮುಂದುವರಿದಿದೆ.

ಈಚಿನ ವರ್ಷಗಳಲ್ಲಿ ಎಲ್ಲೆಡೆ ಆಡಂಬರ ಮತ್ತು ಹಣದ ವಹಿವಾಟೇ ಪ್ರಧಾನವಾಗಿರುವ ಉತ್ಸವಗಳು ಪ್ರಚುರಗೊಳ್ಳುತ್ತಿರುವುದನ್ನು ಗಮನಿಸಿದರೆ ಶ್ರೀರಾಮಸೇವಾ ಮಂಡಲಿಯು ಕ್ರಮಿಸಿರುವ ರಾಜಮಾರ್ಗದ ಬಗೆಗೆ ಗೌರವ ಮೂಡುತ್ತದೆ.

ಹಲವಾರು ಮೈಲಿಗಲ್ಲುಗಳನ್ನು ಮಂಡಲಿ ದಾಟಿದೆ.

ಬಹಳ ವರ್ಷಗಳಿಂದಿರುವ ಹಳೆಯ ಸಂಸ್ಥೆಗಳು ಒಂದಷ್ಟು ಅವಧಿಯ ತರುವಾಯ ಸತ್ತ್ವವಂತಿಕೆಯನ್ನೂ ರಭಸವನ್ನೂ ಕಳೆದುಕೊಳ್ಳುವಂತಹ ನಿದರ್ಶನಗಳಿಗೆ ಕೊರತೆಯಿಲ್ಲ. ಆದರೆ ಇದಕ್ಕೆ ವಿರುದ್ಧವಾಗಿ ನಾರಾಯಣಸ್ವಾಮಿರಾಯರು ಸ್ವರ್ಗವಾಸಿಗಳಾಗಿ (2000) ಒಂದೂವರೆ ದಶಕ ಕಳೆದ ಮೇಲೂ ವರ್ಷದಿಂದ ವರ್ಷಕ್ಕೆ ಮಂಡಲಿಯು ವೃದ್ಧಿಂಗತವಾಗಿರುವುದನ್ನು ಕಾಣಬಹುದು.

ನಾರಾಯಣಸ್ವಾಮಿರಾಯರು ಹಲವಾರು ಸಂಘಸಂಸ್ಥೆಗಳಿಂದ ಸಂಮಾನಿತರಾಗಿದ್ದುದು ಸಹಜ.

ಬೆಂಗಳೂರು ಗಾಯನ ಸಮಾಜದ 27ನೇ ಸಂಗೀತ ಸಮ್ಮೇಳನದ ಸಂದರ್ಭದ (19-11-1995) ವಿದ್ವತ್‌ಸದಸ್ಸು ನಾರಾಯಣಸ್ವಾಮಿರಾಯರ ಆರು ದಶಕಗಳ ಸಾಧನೆಗಾಗಿ ಅವರನ್ನು ಗೌರವಿಸಿತು.

ಕರ್ನಾಟಕ ಸರ್ಕಾರವು ನೀಡುವ ಉನ್ನತ ಸಂಮಾನವಾದ ರಾಜ್ಯೋತ್ಸವ ಪ್ರಶಸ್ತಿ ನಾರಾಯಣಸ್ವಾಮಿರಾಯರಿಗೆ ದೊರೆತಿತ್ತು.

ಚಾಮರಾಜಪೇಟೆಯಲ್ಲಿ ನಾರಾಯಣಸ್ವಾಮಿರಾಯರು ವಾಸವಿದ್ದ ಮನೆಯ ರಸ್ತೆಗೆ ನಗರಪಾಲಿಕೆ 'ಎಸ್.ವಿ. ನಾರಾಯಣಸ್ವಾಮಿರಾವ್ ರಸ್ತೆ' ಎಂದು ನಾಮಕರಣ ಮಾಡಿದೆ.

ಇವೆಲ್ಲ ಬಾಹ್ಯ ಲಾಂಛನಗಳು. ಕರ್ನಾಟಕದ ಸಾಂಸ್ಕೃತಿಕ ನಕ್ಷೆಯಲ್ಲಿ ನಾರಾಯಣಸ್ವಾಮಿರಾಯರು ನಿರ್ಮಿಸಿರುವ ಮುದ್ರಿಕೆಯಂತೂ ಚಿರಕಾಲ ಉಳಿಯುತ್ತದೆ.

6. ಟಿ. ಆರ್. ಶಾಮಣ್ಣ

ಬೆಂಗಳೂರು ಸಂಜಯನಗರ ನಿವಾಸಿ ಈಗ ವಯಸ್ಸು 73 ದಾಟಿರುವ ಕೆ. ಎಂ. ರಾಜಶೇಖರಯ್ಯ. ಅವರು ಪೋಲಿಯೊ–ಪೀಡಿತರು. ಆದರೆ ಈ ಅಶಕ್ತತೆಯನ್ನೂ ಮೆಟ್ಟಿ ಅವರು ವರ್ಷಗಳುದ್ದಕ್ಕೂ ನಡೆಸಿಕೊಂಡುಬಂದಿರುವ ಸಮಾಜಸೇವೆ ಅನುಪಮವಾದದ್ದು. ಪಿ.ಯು.ಸಿ. ಹಂತದ ಸಾವಿರಾರು ವಿದ್ಯಾರ್ಥಿಗಳಿಗೆ ಅವರು ಉಚಿತವಾಗಿ ವಾಣಿಜ್ಯಶಾಸ್ತ್ರದ ಮನೆಪಾಠ ಮಾಡಿದ್ದಾರೆ, ಈಗಲೂ ಮಾಡುತ್ತಿದ್ದಾರೆ. ಅವರ ಈ ಸೇವಾಕಾರ್ಯಕ್ಕೆ ಸ್ಫೂರ್ತಿಸ್ಥಾನವಾದವರು ದಿವಂಗತ ಟಿ. ಆರ್. ಶಾಮಣ್ಣ. ಮೂಲತಃ ಕನಕಪುರ ತಾಲೂಕಿನ ಕೋಡಿಹಳ್ಳಿಯವರಾದ ರಾಜಶೇಖರಯ್ಯ 1960ರ ದಶಕದ ಆರಂಭದ ವರ್ಷಗಳಲ್ಲಿ ಆಗ ಟಿ. ಆರ್. ಶಾಮಣ್ಣ ನಡೆಸುತ್ತಿದ್ದ ರಂಗನಾಥ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಸಂಸ್ಥೆಯಲ್ಲಿ ವ್ಯಾಸಂಗ ಮಾಡಿ ವಾಣಿಜ್ಯ, ತೆರಿಗೆ ಮತ್ತು ಕಾಸ್ಟಿಂಗ್‌ನಲ್ಲಿ ಡಿಪ್ಲೊಮಾ ಗಳಿಸಿ ಎಚ್.ಎ.ಎಲ್.ನಲ್ಲಿ ನೌಕರಿಗೆ ಸೇರಿ ನಿವೃತ್ತರಾದರು. 1968ರಿಂದಲೇ ಬಿಡುವಿನ ಸಮಯದಲ್ಲಿ ನಿಃಶುಲ್ಕವಾಗಿ ಮನೆಪಾಠ ಮಾಡುತ್ತಿದ್ದರು. 2004ರಲ್ಲಿ ನಿವೃತ್ತರಾದ ಮೇಲೆ ತಮ್ಮ ಪೂರ್ಣಸಮಯವನ್ನು ಉಚಿತ ಮನೆಪಾಠಗಳಿಗೇ ಮೀಸಲಿರಿಸಿದ್ದಾರೆ. ಫಲಾಪೇಕ್ಷೆಯಿಲ್ಲದ ಅವರ ಶಿಕ್ಷಣಸೇವೆಯನ್ನು ಕುರಿತು ಸಿದ್ಧಗಂಗಾಮಠದ ಶ್ರೀ ಶಿವಕುಮಾರಸ್ವಾಮಿಗಳು, ಧರ್ಮಸ್ಥಳದ ಧರ್ಮಾಧಿಕಾರಿ ಡಾ॥ ವೀರೇಂದ್ರ ಹೆಗ್ಗಡೆ ಮೊದಲಾದ ಗಣ್ಯರು ಅತಿಶಯ ಮೆಚ್ಚಿಕೆ ವ್ಯಕ್ತಪಡಿಸಿದ್ದಾರೆ. 'ಕರ್ನಾಟಕ ಶಿಕ್ಷಣರತ್ನ' ಮೊದಲಾದ ಪ್ರಶಸ್ತಿಗಳಿಗೂ ಅವರು ಭಾಜನರಾಗಿದ್ದಾರೆ. ಇಂದಿಗೂ ಮುಂಜಾನೆ ಟಿ. ಆರ್. ಶಾಮಣ್ಣನವರ ಭಾವಚಿತ್ರಕ್ಕೆ ಕೈಮುಗಿದೇ ರಾಜಶೇಖರಯ್ಯ ತಮ್ಮ ದಿನಚರಿಯನ್ನು ಆರಂಭಿಸುವುದು.

ತಮ್ಮ ಧ್ಯೇಯಸಮರ್ಪಿತ ಬದುಕಿನ ಮೂಲಕ ಹೀಗೆ ಲೆಕ್ಕವಿಲ್ಲದಷ್ಟು ಜನರ ಅಂತರಂಗದಲ್ಲಿ ಮೌಲ್ಯನಿಷ್ಠೆಯನ್ನು ಬಿತ್ತಿದ ಯಶಃಕಾಯರು ಟಿ. ಆರ್. ಶಾಮಣ್ಣ.

ಶಾಮಣ್ಣನವರ ಪೋಷಣೆಯಿಂದ ಅದೆಷ್ಟು ಜನರಿಗೆ ಜೀವನೋಪಾಯ ಕಲ್ಪಿತವಾಯಿತೆಂಬುದನ್ನು ಲೆಕ್ಕಮಾಡುವುದೇ ಕಷ್ಟ. ಅಂತಹ ಉಪಕೃತರು ಪೂರ್ವಪರಿಚಿತರೇ ಆಗಿರಬೇಕೆಂದೇನಿರುತ್ತಿರಲಿಲ್ಲ. ಶಾಮಣ್ಣನವರು ಮುಖ್ಯವಾಗಿ ಗಮನಿಸುತ್ತಿದ್ದುದು 'ಈ ವ್ಯಕ್ತಿ ಪ್ರಾಮಾಣಿಕವಾಗಿ ಶ್ರಮಪಡಲು ಸಿದ್ಧನಾಗಿದ್ದಾನೆಯೆ?' ಎಂಬ ಅಂಶವನ್ನು ಮಾತ್ರ.

ಶಿಕ್ಷಣದ ಅಥವಾ ಸಂಪರ್ಕಗಳ ಯಾವ ಅನುಕೂಲತೆಗಳೂ ಇಲ್ಲದೆ ಉದ್ಯೋಗಾಕಾಂಕ್ಷಿಯಾಗಿ ಹೊಸೂರಿನಿಂದ ಬೆಂಗಳೂರಿಗೆ 15ರ ವಯಸ್ಸಿನಲ್ಲಿ ಬಂದು ಹೊಟೇಲೊಂದರಲ್ಲಿ ಸಪ್ಲೈಯರ್ ಆಗಿದ್ದು ಕ್ರಮೇಣ ಡ್ರೈವಿಂಗ್ ಕಲಿತು ಶಾಮಣ್ಣನವರಲ್ಲಿ ಆಟೋರಿಕ್ಷಾ ಓಡಿಸುವ ಕೆಲಸಕ್ಕೆ ಸೇರಿದ ಡಿ.ಎಂ. ಶಿವಣ್ಣ ಶಾಮಣ್ಣನವರ ಬೆಂಬಲದಿಂದ ಹಾಲಿನ ಏಜೆನ್ಸಿ ಪಡೆದುಕೊಂಡು ಪರಿಶ್ರಮಪಟ್ಟು ಸ್ಥಿರಗೊಂಡು ರಾಜ್ಯದಲ್ಲಿಯೆ ಮೊದಲ ಸ್ಥಾನದ ಹಾಲು ವಿತರಕರಾಗಿ ಪ್ರಶಸ್ತಿಗಳಿಗೂ ಭಾಜನರಾಗಿದ್ದಾರೆ. ಶಿವಣ್ಣನವರ ವಿವಾಹ ನಡೆದದ್ದೂ ಶಾಮಣ್ಣನವರ ಮಧ್ಯಸ್ಥಿಕೆಯಿಂದಲೇ. ಹೀಗೆ ಶಾಮಣ್ಣನವರು ಬದುಕಿನಲ್ಲಿ ಮೇಲಕ್ಕೆ ತಂದವರ ಪಟ್ಟಿ ದೊಡ್ಡದಿದೆ.

ವಿಶೇಷವೆಂದರೆ ಇಂತಹ ಪರಹಿತಕಾರ್ಯಗಳನ್ನು ಯಾವುದೇ ಅಬ್ಬರವಿಲ್ಲದೆ ಸ್ವಾಭಾವಿಕವೆಂಬಂತೆ ಶಾಮಣ್ಣನವರು ಮಾಡುತ್ತಿದ್ದುದು.

ಉನ್ನತ ಲಕ್ಷ್ಯ ಸತತ ಪರಿಶ್ರಮ

ಕರ್ನಾಟಕದ ಈಚಿನ ರಾಜಕೀಯ ಇತಿಹಾಸದಲ್ಲಿ ನಿರಂತರ ಜನಹಿತಕಾರ್ಯಗಳಲ್ಲಿ ತೊಡಗಿಕೊಂಡವರೆಂದೂ ಸ್ಫಟಿಕಶುಭ್ರ ಚಾರಿತ್ರದವರೆಂದೂ ಹೆಸರಾದವರನ್ನು ಸ್ಮರಣೆ ಮಾಡಿಕೊಳ್ಳಹೊರಟರೆ ಮೊದಮೊದಲೇ ಎದ್ದುಕಾಣುವ ಹೆಸರು ಟಿ. ಆರ್. ಶಾಮಣ್ಣ ಅವರದು. ಜೀವನದುದ್ದಕ್ಕೂ ಕಠಿಣ ಪರಿಶ್ರಮದಿಂದಲೇ ಮೇಲಕ್ಕೆ ಬಂದದ್ದೂ ಅವರ ವಿಶಿಷ್ಟತೆ. ಉನ್ನತ ಧ್ಯೇಯವನ್ನು ಮನಸ್ಸಿನ ಮುಂದೆ ಇರಿಸಿಕೊಂಡು ಜೀವನದುದ್ದಕ್ಕೂ ಪರಿಶ್ರಮ ಮಾಡಿದವರು ಅವರು. ಅವರ ಅಂತರಂಗವನ್ನು ಸದಾ ತುಂಬಿರುತ್ತಿದ್ದುದು ಸಮುದಾಯಹಿತದ ಆಕಾಂಕ್ಷೆಯೇ. ಸ್ವಲಾಭದ ಮತ್ತು ಹಣದ ಯಾಜಮಾನ್ಯವೇ ಮೆರೆದಿರುವ ಇಂದಿನ ಕಾಲಮಾನದಲ್ಲಿ ಟಿ. ಆರ್. ಶಾಮಣ್ಣ ಅವರಂತಹವರು ತುಂಬಾ ವಿರಳ. ಹೆಚ್ಚಿನ ಪ್ರಸಂಗಗಳಲ್ಲಿ ಶಾಮಣ್ಣನವರ ಸೆಣಸಾಟ ಫಲದಾಯಕವೂ ಆಯಿತೆಂಬುದು ಸ್ಮರಣೀಯ.

ಶಾಲೆ-ಕಾಲೇಜುಗಳಿಗಿಂತ ಶಾಮಣ್ಣ ಜೀವನವೆಂಬ ವಿಶ್ವವಿದ್ಯಾಲಯದಲ್ಲಿ ಕಲಿತದ್ದೇ ಹೆಚ್ಚು. ಹೀಗಾಗಿ ಅವರು ಪುರಸಭೆಯಲ್ಲಿಯೂ ವಿಧಾನಸಭೆಯಲ್ಲಿಯೂ ಮಾಡುತ್ತಿದ್ದ ಗಂಭೀರವಿಷಯಕ ಮಂಡನೆಗಳೂ ನೆಲದ ಸೊಗಡಿನ ಆಡುಮಾತಿನಲ್ಲಿಯೇ ಇರುತ್ತಿದ್ದವು.

ಪ್ರತಿಯೊಬ್ಬರೂ ಸ್ವಾವಲಂಬಿಯಾಗಿರಬೇಕು. ಸರಳಜೀವನದಲ್ಲಿ ಸಂತೃಪ್ತಿಯನ್ನು ಕಾಣುವ ಅಭ್ಯಾಸವನ್ನು ಬೆಳೆಸಿಕೊಳ್ಳಬೇಕು. ಎಲ್ಲ ಸನ್ನಿವೇಶಗಳಲ್ಲಿಯೂ ಜನಹಿತಪರ ವಾಗಿಯೇ ಚಿಂತಿಸಬೇಕು. ತನಗೆ ಜನಹಿತಪರವೆನಿಸಿದ ನಿಲವನ್ನು ಪ್ರಕಟಿಸುವುದರಲ್ಲಿ ಸಂಕೋಚಕ್ಕಾಗಲಿ ರಾಜಿಗಾಗಲಿ ಒಳಗಾಗಬಾರದು; ಜನಹಿತಕ್ಕೆ ಪ್ರತಿಕೂಲವಾದ

ಧೋರಣೆಯನ್ನು ಗಣ್ಯರು ತಳೆದಾಗ ಅವರು ಎಷ್ಟೇ ಪ್ರತಿಷ್ಠಿತರಾಗಿದ್ದರೂ ಅವರನ್ನು ವಿರೋಧಿಸಲು ಹಿಂದೆಗೆಯಬಾರದು. ಖಾಸಗಿ ಬದುಕಿನಲ್ಲಿ ನಿಃಸ್ಪೃಹತೆಯನ್ನೂ ಪ್ರಾಮಾಣಿಕತೆಯನ್ನೂ ರೂಢಿಸಿಕೊಳ್ಳಬೇಕು; ಸಾರ್ವಜನಿಕ ಸ್ಥಾನಮಾನಗಳನ್ನು ಎಂದೂ ಸ್ವಲಾಭಕ್ಕಾಗಿ ಬಳಸಿಕೊಳ್ಳಬಾರದು; ಈ ಗುಣಗಳನ್ನು ಸಾರ್ವಜನಿಕ ಜೀವನದಲ್ಲಿರುವವರು ಆದರ್ಶಗಳಾಗಿ ಮನಸ್ಸಿನ ಮುಂದೆ ಸದಾ ಇರಿಸಿಕೊಂಡಿರಬೇಕು; – ಎಂದೆಲ್ಲ ಪುಸ್ತಕಗಳಲ್ಲಿ ಓದುತ್ತೇವೆ. ಈ ಮಾನದಂಡಗಳನ್ನು ವಾಸ್ತವದಲ್ಲಿ ಅನುಸರಿಸುವವರು ಈಗಂತೂ ವಿರಳ. ಆದರೆ ಈ ಉದಾತ್ತ ಮೌಲ್ಯಗಳನ್ನು ದಶಕಗಳುದ್ದಕ್ಕೂ ತಪ್ಪದೆ ಆಚರಿಸಿದ ವಿರಳ ಜನನಾಯಕರೊಬ್ಬರು ನಮ್ಮ ನಡುವೆಯೇ ಇದ್ದರೆಂಬುದು ಈಗಿನವರಿಗೆ ಆಶ್ಚರ್ಯಕರವಾಗಿ ಕಂಡೀತು. ಆ ವಿರಳ ವ್ಯಕ್ತಿ ದಿವಂಗತ ಟಿ. ಆರ್. ಶಾಮಣ್ಣ.

ಬೇರೆ ಯಾರಿಗೂ ಹೋಲಿಸಲಾಗದ ವಿಲಕ್ಷಣ ವ್ಯಕ್ತಿತ್ವ ಟಿ. ಆರ್. ಶಾಮಣ್ಣನವರದು. ಹತ್ತು ಜನರ ನಡುವೆ ಗಮನ ಸೆಳೆಯುವ ಯಾವ ಲಕ್ಷಣವೂ ಅವರಲ್ಲಿ ಇರಲಿಲ್ಲ. ಅತಿಸಾಮಾನ್ಯವೆನಿಸುವ ಮುಖಚಹರೆ. ತೀರಾ ಸಾದಾ ಖಾದಿ ಕೋಟು, ಖಾದಿ ಟೋಪಿ. ಕಪ್ಪು ಫ್ರೇಮಿನ ಕನ್ನಡಕ. ಸಭೆಗಳಲ್ಲಿ ಎಂದೂ ಸ್ವಪ್ರತಿಷ್ಠೆ ಮೆರೆದವರಲ್ಲ. ಮುಖ್ಯ ವಿಷಯಗಳನ್ನೂ ಆಗಬೇಕಾದ ಕಾರ್ಯಗಳನ್ನೂ ಬಿಟ್ಟು ಬೇರಾವುದರಲ್ಲೂ ಆಸಕ್ತಿ ತೋರುತ್ತಿರಲಿಲ್ಲ. ತಮ್ಮ ಹೆಚ್ಚುಗಾರಿಕೆಯನ್ನು ಎಂದೂ ಮುಂದೆಮಾಡಿದವರಲ್ಲ. ಅವರ ವ್ಯಕ್ತಿತ್ವದ ವೈಶಿಷ್ಟ್ಯವು ವ್ಯಕ್ತವಾಗುತ್ತಿದ್ದುದು ಅವರ ಕಾರ್ಯವಂತಿಕೆಯಲ್ಲಿ ಮಾತ್ರ. ಅವರು ಯಾವುದೋ ವಿನೋದವನ್ನೋ ಮನೋರಂಜನೆಯನ್ನೋ ಅರಸಿ ಹೋದುದನ್ನು ಯಾರೂ ಕಾಣರು. ಆದರೆ ಯಾವುದೇ ಸಾರ್ವಜನಿಕ ಹಿತದ ಕೆಲಸ ಎದುರಾದರೂ ಅವರು ಕೂಡಲೆ ಉತ್ಸಾಹಿತರಾಗುತ್ತಿದ್ದರು. ಯಾರನ್ನಾದರೂ ಮೆಚ್ಚಿಸಬೇಕೆಂಬ ಯೋಚನೆಯೇ ಬಹುಶಃ ಅವರ ಮನಸ್ಸಿನಲ್ಲಿ ಎಂದೂ ಹಾಯ್ದದ್ದಿಲ್ಲ.

ಹೀಗೆ ಯಾವ ದೃಷ್ಟಿಯಿಂದಲೂ 'ಆಕರ್ಷಕ'ವೆನ್ನಲಾಗದ ವ್ಯಕ್ತಿತ್ವದ ಟಿ. ಆರ್. ಶಾಮಣ್ಣ ನೋಡುನೋಡುತ್ತಿದ್ದಂತೆ ಸಮುನ್ನತ ನಾಯಕರಾಗಿ ಬೆಳೆದದ್ದು ವಿಸ್ಮಯಕರವೆನಿಸುತ್ತದೆ.

ಸ್ವಾವಲಂಬನೆ, ಕಠಿಣ ಪರಿಶ್ರಮ – ಈ ಎರಡು ಚಕ್ರಗಳ ಮೇಲೆ ನಡೆದದ್ದು ಶಾಮಣ್ಣನವರ ವ್ಯಾವಹಾರಿಕ ಜೀವನ. ಹದಿಹರೆಯದಲ್ಲಿಯೇ ಕಠಿಣ ಜೈಲುವಾಸ ಮೊದಲಾದ ಅನುಭವಗಳು ಆಗಿದ್ದುದರಿಂದ ನಿರಂತರ ಶ್ರಮ ಶಾಮಣ್ಣನವರಿಗೆ ಎಂದೂ ಭಾರವೆನಿಸಲಿಲ್ಲ.

ಸಮುದಾಯದ ಒಡಲಿನಲ್ಲಿ

ಬೆಂಗಳೂರು ಬಸವನಗುಡಿಯ ನರಸಿಂಹರಾಜ ಕಾಲೊನಿಯ ನಿವಾಸಿಯಾಗಿದ್ದ ಟಿ. ಆರ್. ಶಾಮಣ್ಣ ಅವರು ಸಾರ್ವಜನಿಕರಿಂದ ವಿಭಿನ್ನ 'ಬಿರುದು'ಗಳಿಗೆ ಪಾತ್ರರಾಗಿದ್ದರು. 1940ರ ದಶಕದಿಂದ ಟೈಪಿಂಗ್ ಇನ್‌ಸ್ಟಿಟ್ಯೂಟ್ ನಡೆಸುತ್ತಿದ್ದುದು ಅವರ ಪರಿಚಯವೆನಿಸಿತ್ತು. ಸ್ವಲ್ಪ ಕಾಲಾನಂತರ 'ಕಂಟ್ರ್ಯಾಕ್ಟರ್ ಶಾಮಣ್ಣ' ಎಂದು ಅವರನ್ನು ಜನ ಕರೆಯತೊಡಗಿದರು. ನಗರಸಭೆಯ ಸದಸ್ಯರಾದ ಮೇಲೆ ಸೈಕಲ್ ತೆರಿಗೆಯ ರದ್ದತಿಗಾಗಿ ನಡೆಸಿದ ಸಫಲ ಹೋರಾಟದಿಂದಾಗಿ 'ಸೈಕಲ್ ಶಾಮಣ್ಣ' ಎಂಬ ಹೆಸರು ಜನಜನಿತವಾಯಿತು. 'ನೀರಿನ ಶಾಮಣ್ಣ' ಎಂದೂ ಜನ ಅವರನ್ನು ಕರೆಯುತ್ತಿದ್ದುದುಂಟು – ನಗರಕ್ಕೆ ಕಾವೇರಿ ನೀರಿನ ಒದಗಣೆಗಾಗಿ ಆಂದೋಲನ ನಡೆಸಿದುದಕ್ಕಾಗಿ. ಹೀಗೆ ಸಾರ್ವಜನಿಕರು ಪ್ರೀತಿಯಿಂದ ನೀಡಿದ ಹಲವಾರು 'ಪ್ರಶಸ್ತಿ'ಗಳಿಗೆ ಪಾತ್ರರಾಗಿದ್ದ ಅಸಾಮಾನ್ಯ ನಿಷ್ಠಾವಂತ ಸಮಾಜಸೇವಕ ಟಿ. ಆರ್. ಶಾಮಣ್ಣ.

ಸರ್ಕಾರವು ಬಸವನಗುಡಿ ಬ್ಯೂಗಲ್ ರಾಕ್ ('ಕಹಳೆಬಂಡೆ') ಉದ್ಯಾನವನಕ್ಕೆ ಸಾರ್ವಜನಿಕರ ಅಪೇಕ್ಷೆಯಂತೆ ಟಿ. ಆರ್. ಶಾಮಣ್ಣನವರ ಹೆಸರನ್ನಿಟ್ಟಿದ್ದು ಔಚಿತ್ಯಪೂರ್ಣವಾಗಿದೆ.

ಬೆಂಗಳೂರಿನ ದಕ್ಷಿಣಭಾಗದಲ್ಲಿ ಶಾಮಣ್ಣನವರಿಂದ ಒಂದಲ್ಲ ಒಂದು ರೀತಿಯಲ್ಲಿ ನೆರವನ್ನು ಪಡೆಯದ ಸಂಸ್ಥೆಗಳು ಬಹುಶಃ ಯಾವುದೂ ಇರಲಾರವು. ನ್ಯಾಷನಲ್ ಹೈಸ್ಕೂಲ್, ಬೆಂಗಳೂರು ಹೈಸ್ಕೂಲ್, ಡಿ.ವಿ.ಜಿ. ರಸ್ತೆಯ ಅಬಲಾಶ್ರಮ, ನ್ಯಾಷನಲ್ ಕೋ–ಆಪರೇಟಿವ್ ಬ್ಯಾಂಕ್ ಮೊದಲಾದ ನಾಲ್ಕಾರು ಸಂಸ್ಥೆಗಳ ಕಲಾಪಗಳಲ್ಲಿ ಅವರ ಯೋಗದಾನವಿದ್ದಿತು.

ಟಿ. ಆರ್. ಶಾಮಣ್ಣನವರು ನಿಧನರಾಗಿ ಕಾಲುಶತಮಾನವೇ ಕಳೆದಿದೆ. ಆದರೆ ಅವರನ್ನು ಕಂಡಿದ್ದ ಯಾರ ಮನಃಪಟಲದಿಂದಲೂ ಅವರ ಚಿತ್ರ ಮರೆಯಾಗುವುದು ಸಾಧ್ಯವಿಲ್ಲ.

1950ರ ದಶಕದಲ್ಲಿ ಸಮಾಜಸೇವೆಯನ್ನು ವೃತ್ತಿಯಾಗಿಸಿಕೊಳ್ಳುವ ಅಥವಾ ಲಾಭಪ್ರದಗೊಳಿಸಿಕೊಳ್ಳುವ ಪ್ರವೃತ್ತಿ ಅಷ್ಟಾಗಿ ಬೆಳೆದಿರಲಿಲ್ಲ. ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ಆಗ ಜನತೆಯ ಎದುರಿಗೆ ನಿಃಸ್ಪೃಹ ದೇಶಸೇವಕರ ಹಲವಾರು ಉದಾಹರಣೆಗಳು ಲಭ್ಯವಿದ್ದವು: ವೀರಕೇಸರಿ ಸೀತಾರಾಮಶಾಸ್ತ್ರಿ, ತಿ.ತಾ. ಶರ್ಮ, ಸಿದ್ದವನಹಳ್ಳಿ ಕೃಷ್ಣಶರ್ಮ ಮೊದಲಾದವರು. ಆ ಧ್ಯೇಯನಿಷ್ಠ ಪರಿಸರದಲ್ಲಿ ತಮ್ಮನ್ನು ರೂಪಿಸಿಕೊಂಡವರು ಶಾಮಣ್ಣ.

ಸ್ಥಳೀಯ ಸಮುದಾಯದ ಒಡಲಿನಿಂದ ಹೊಮ್ಮಿದ ಸಾಮಾಜಿಕ ಕಾರ್ಯಕರ್ತರೆಂದು ವಿ. ಎಸ್. ಕೃಷ್ಣ ಅಯ್ಯರ್, ಟಿ. ಆರ್. ಶಾಮಣ್ಣ, ಜಿ. ನಾರಾಯಣ – ಇವರನ್ನು ಬೆಂಗಳೂರು ದಕ್ಷಿಣಭಾಗದ ಜನತೆ ಒಟ್ಟೊಟ್ಟಿಗೆ ಸ್ಮರಿಸುವುದು ರೂಢಿಯಾಗಿತ್ತು.

ಜೀವನವನ್ನು ಕಲುಷಿತಗೊಳಿಸಿಕೊಳ್ಳದೆ ಉನ್ನತ ಆದರ್ಶಗಳಿಗೆ ಬದ್ಧರಾಗಿದ್ದ ಕಾಂಗ್ರೆಸ್ ಪರಿವಾರದ ಹಿರಿಯರ ಸಹವಾಸದಲ್ಲಿ ದೃಢಗೊಂಡಿದ್ದುದು ಶಾಮಣ್ಣನವರ ಮಾನಸಿಕತೆ. (ಆ ದಿನಗಳಲ್ಲಿ ಹೇಳಿಕೊಳ್ಳುವಂತಹ ಬೇರೆ ಪಕ್ಷಗಳು ಇರಲೂ ಇಲ್ಲವೆನ್ನಿ.) ದಿನಗಳು ಕಳೆದಂತೆ ಶಾಮಣ್ಣನವರು ಯಾವುದೇ ಪಕ್ಷಗಳಿಗಿಂತ ಎತ್ತರವಾಗಿ ಬೆಳೆದರು. ತಮ್ಮ ಸ್ವಂತ ವ್ಯಕ್ತಿಯೋಗ್ಯತೆಯಿಂದಲೇ ಯಾವ ಲಕ್ಷ್ಯವನ್ನಾದರೂ ಸಾಧಿಸಬಲ್ಲ ಎತ್ತರಕ್ಕೆ ಅವರು ಬೆಳೆದರು. ಹೀಗಾಗಿ ಶಾಮಣ್ಣನವರಿಂದ ಪಕ್ಷಗಳು ಬಲಗೊಂಡವೇ ಹೊರತು ಯಾವುದೇ ಪಕ್ಷದ ಒಡನಾಟವೂ ಅವರಿಗೆ ಹೆಚ್ಚು ಪ್ರಯೋಜನಕರವಾಗಬಲ್ಲ ಸ್ಥಿತಿ ಇರಲಿಲ್ಲ.

ತಮ್ಮ ಸುತ್ತಲಿನ ಸಾಮಾನ್ಯ ಜನರೊಡನೆ ನಿರಂತರ ನಿಕಟ ಸಂಪರ್ಕದಲ್ಲಿ ಇರುತ್ತಿದ್ದುದು ಶಾಮಣ್ಣನವರ ಒಂದು ಸ್ವಭಾವಸಹಜ ವಿಶಿಷ್ಟತೆ. ಇದರಲ್ಲಿ ಅವರಿಗೆ ಸರಿಗಟ್ಟಬಲ್ಲವರು ಇದ್ದುದು ವಿರಳ.

ಮೌಲ್ಯಬದ್ಧತೆ

ಗಾಂಧಿ–ಪ್ರವರ್ತಿತ ಮೌಲ್ಯಗಳ ಅಳವಡಿಕೆಯನ್ನಾಗಲಿ ಖಾದಿ–ನಿಷ್ಠೆಯನ್ನಾಗಲಿ ಶಾಮಣ್ಣನವರು ತಮ್ಮ ಸ್ವೀಕೃತ ಜೀವನಕ್ರಮವೆಂದು ಪ್ರಚಾರ ಮಾಡಬೇಕಾದ ಆವಶ್ಯಕತೆಯೇ ಎಂದೂ ಬೀಳಲಿಲ್ಲ. ಅಷ್ಟುಮಟ್ಟಿಗೆ ಅವರು ಆ ಮೌಲ್ಯಗಳ ಮೂರ್ತರೂಪರಾಗಿದ್ದರು. ಖಾದಿ ಟೊಪ್ಪಿಗೆ, ಖಾದಿ ಕೋಟು ಇಲ್ಲದೆ ಶಾಮಣ್ಣನವರನ್ನು ಕಲ್ಪಿಸಿಕೊಳ್ಳುವುದೇ ಸಾಧ್ಯವಿರಲಿಲ್ಲ.

ಶಾಮಣ್ಣನವರ ಸರಳತೆಯೇ ಹಲವೊಮ್ಮೆ ಹಾಸ್ಯವಿಷಯವಾಗುತ್ತಿದ್ದುದುಂಟು. ಮಿತ್ರರೊಬ್ಬರು ಓಡಿಸುತ್ತಿದ್ದ ಸ್ಕೂಟರಿನಲ್ಲಿ 'ಪಿಲಿಯನ್ ರೈಡರ್' ಆಗಿ ತಮ್ಮ ಓಡಾಟವನ್ನು ನಿರ್ವಹಿಸುತ್ತಿದ್ದ ಶಾಮಣ್ಣ ಕೆಲಕಾಲಾನಂತರ ಸೌಕರ್ಯಕ್ಕಾಗಿ ಆಟೋರಿಕ್ಷಾ ಕೊಂಡರು. ಆ ವೇಳೆಗೆ ಅವರು ಆರ್ಥಿಕವಾಗಿ ಪ್ರಗತಿ ಹೊಂದಿದ್ದುದರಿಂದ ಕಾರನ್ನು ಕೊಳ್ಳುವುದು ಅವರಿಗೆ ಕಷ್ಟವಾಗಿರಲಿಲ್ಲ. ಆದರೆ ತನ್ನ ಆವಶ್ಯಕತೆಗೆ ಆಟೋರಿಕ್ಷಾ ಸಾಕೆಂದು ನಿಶ್ಚಯಿಸಿದರು. ಆವಶ್ಯಕತೆಗೆ ಮೀರಿ ವೆಚ್ಚಮಾಡುವುದನ್ನು ರಾಷ್ಟ್ರದ್ರೋಹವೆಂದೇ ಅವರು ಭಾವಿಸಿದ್ದರು. ಆಟೋರಿಕ್ಷಾ ಕೊಂಡಾಗ ಅವರನ್ನು ಮಿತ್ರರು 'ನಿಮಗೆ ಇನ್‌ಕ್ರಿಮೆಂಟ್ ಸಿಕ್ಕಹಾಗಾಯಿತು' ಎಂದು ನಗೆಯಾಡಿದ್ದರು.

ನಿಷ್ಕಾಮಕರ್ಮವೆಂಬ ಆದರ್ಶವನ್ನು ಕುರಿತು ಕೇಳುತ್ತೇವೆ. ಆ ಆದರ್ಶವು ಶಾಮಣ್ಣನವರಲ್ಲಿ ಮೂರ್ತೀಕೃತವಾಗಿತ್ತು. ವಿಶೇಷವೆಂದರೆ ಉನ್ನತ ಆದರ್ಶಗಳನ್ನು ಕುರಿತು ಅವರು ಎಂದೂ ಭಾಷಣ ಮಾಡಹೊರಡುತ್ತಿರಲಿಲ್ಲ. ಅವರು ಮಾನ್ಯ ಮಾಡಿದ್ದ ಆದರ್ಶಗಳು ಅವರ ವರ್ತನೆಯಲ್ಲಿ ನಿಚ್ಚಳವಾಗಿ ಎದ್ದುಕಾಣುತ್ತಿದ್ದವು. ಮಾತನಾಡಲೇಬೇಕಾದ ಸಂದರ್ಭಗಳಲ್ಲಿ ಅವರ ಮಾತುಗಳು ನೇರವಾಗಿ ಅಂತರಂಗದಿಂದ ಹೊಮ್ಮಿರುತ್ತಿದ್ದವು. ಅವರು ಗಾಢ ದೈವಭಕ್ತರು; ಆದರೆ ಇದನ್ನು ಎಂದೂ ಪ್ರಚಾರ ಮಾಡಿದವರಲ್ಲ. ದೊಡ್ಡ ಗಣೇಶ ದೇವಸ್ಥಾನದ ಮುಂದೆ ನಿಂತು ಕೈಮುಗಿದು ದೈನಂದಿನಿಯನ್ನು ಮುಂದುವರಿಸುವುದು ಅವರ ರೂಢಿಯಾಗಿತ್ತು. ಅಂತಿಮ ದಿನಗಳಲ್ಲಿ ಒಮ್ಮೆ ರುಗ್ಣಸ್ಥಿತಿಯಲ್ಲಿದ್ದರೂ ಕಾಲ್ನಡಿಗೆಯಲ್ಲೇ ತಿರುಪತಿ ಬೆಟ್ಟವನ್ನು ಹತ್ತಿ ದೇವರ ದರ್ಶನ ಮಾಡಿದರು.

ಶಾಮಣ್ಣನವರು ರಾಜಕೀಯ ಜೀವನದ ಉಚ್ಛ್ರಾಯದಲ್ಲಿದ್ದ ವರ್ಷಗಳು ಭಾರತದ ಇತಿಹಾಸದಲ್ಲಿ ಒಂದಷ್ಟು ಕ್ಷೋಭೆ ತುಂಬಿದ್ದ ವರ್ಷಗಳು. ಆದರೆ ಆ ಯಾವ ಸನ್ನಿವೇಶಗಳೂ ಅವರ ವ್ಯಕ್ತಿತ್ವವರ್ಧನೆಗೆ ಬಾಧಕಗಳಾಗಲಿಲ್ಲ. ಅವರ ಪ್ರಾಮಾಣಿಕತೆಯೂ ನಿರಂತರ ಜನಹಿತಸಾಧನೆಯೂ ಅಷ್ಟು ಪ್ರಖರವಾಗಿದ್ದವು.

'ಎಲ್ಲರೊಳಗೊಂದಾಗಿ' ಬಾಳಿದ ಶಾಮಣ್ಣನವರು ಅಸಹನೆ ತಳೆಯುತ್ತಿದ್ದುದು ಅನ್ಯಾಯ ಮತ್ತು ಅಪ್ರಾಮಾಣಿಕತೆಯ ವಿರುದ್ಧ ಮಾತ್ರ.

ಅತಿ ಬಳಕೆಯಿಂದಲೂ ಟೊಳ್ಳು ಚಲಾವಣೆಯಿಂದಲೂ ಈಚಿನ ವರ್ಷಗಳಲ್ಲಿ ಅಗ್ಗವಾಗಿರುವ ಶಬ್ದಪುಂಜ 'ಮೌಲ್ಯಾಧಾರಿತ ರಾಜಕಾರಣ'. ಆದರೆ ಈಗ್ಗೆ ನಾಲ್ಕು ದಶಕಗಳ ಹಿಂದೆ ಯಥಾರ್ಥದಲ್ಲಿ ಮೌಲ್ಯವಂತ ಸಾರ್ವಜನಿಕ ಜೀವನವನ್ನು ನಡೆಸಿದ ಟಿ. ಆರ್. ಶಾಮಣ್ಣನವರಂತಹವರು ನಮ್ಮ ನಡುವೆ ಇದ್ದರೆಂಬುದು ನಮ್ಮ (ಎಂದರೆ ಈಗ ಎಂಬತ್ತರ ವಯಸ್ಸು ದಾಟಿರುವ) ಪೀಳಿಗೆಯವರಿಗೆ ಒಂದು ಮರೆಯಲಾಗದ ಮತ್ತು ಹೃದ್ಯವಾದ ನೆನಪಾಗಿ ಉಳಿದಿದೆ.

ಒಂದು ದೃಷ್ಟಿಯಿಂದ ನೋಡಿದರೆ ಶಾಮಣ್ಣನವರ ಕರ್ತೃತ್ವಶಕ್ತಿಯಲ್ಲಿ 'ರಹಸ್ಯ'ವೇನೂ ಇರಲಿಲ್ಲ. ಅಲ್ಲಿ ಇದ್ದದ್ದು ನಿರಂತರ ಶ್ರದ್ಧಾಪೂರ್ವಕ ಪರಿಶ್ರಮವಷ್ಟೆ. ಸದಾ ಜನರ ಸಂಪರ್ಕದಲ್ಲಿ ಇರುವುದು, ಅವರ ಸಮಸ್ಯೆಗಳನ್ನು ಕುರಿತು ವಿಚಾರಿಸುವುದು, ಅವನ್ನು ಅಧ್ಯಯನ ಮಾಡಿ ಪರಿಷ್ಕಾರಗಳನ್ನು ಅರಸುವುದು, ಅನಂತರ ಅದನ್ನು ಸಂಬಂಧಪಟ್ಟ ಅಧಿಕಾರಿಗಳ ಬಳಿಗೆ ಒಯ್ದು ಅವರನ್ನು ಕಾರ್ಯೋನ್ಮುಖಗೊಳಿಸುವುದು; – ಇದರ ವಿನಾ ಬೇರೆ ದಾರಿ ಯಾವುದಿದೆ? ಶಾಮಣ್ಣನವರು ಈ ಕೆಲಸವನ್ನು ಅವಿರತವಾಗಿ ದಶಕಗಳುದ್ದಕ್ಕೂ ಮಾಡಿದರು – ಎಂಬುದೇ ಅವರ ವಿಶೇಷತೆ.

* * *

ಟಿ.ಆರ್. ಶಾಮಣ್ಣ
(12.3.1913 – 30.8.1990)

ಮನೆತನ; ಬಾಲ್ಯ

ಶಾಮಣ್ಣನವರ (12.3.1913–30.8.1990) ಮನೆತನ ಬೆಂಗಳೂರು ಸಮೀಪದ ಮಾಗಡಿ ಪ್ರಾಂತದಲ್ಲಿ ಮಾಗಡಿಗೆ ಒಂದೆರಡು ಮೈಲಿಯಷ್ಟು ದೂರದಲ್ಲಿರುವ ತಿರುಮಲೆಯಲ್ಲಿ ನೆಲಸಿದ್ದುದು. ತಂದೆ ಮಾಗಡಿ ರಂಗಣ್ಣ ಅರಣ್ಯ ಇಲಾಖೆಯಲ್ಲಿ ಉದ್ಯೋಗಲ್ಲಿದ್ದವರು; ತಾಯಿ ಜಾನಕಮ್ಮ. ಶಾಮಣ್ಣನವರಿಗೆ ಮೂವರು ಸೋದರರು, ಐದು ಜನ ಸೋದರಿಯರು. ಹೀಗೆ ಅವರದು ತುಂಬುಕುಟುಂಬ. ಹಿಂದಿನಿಂದ ಬಂದಿದ್ದ ಸ್ವಲ್ಪ ಬೇಸಾಯ, ಸ್ವಲ್ಪ ಹೈನುಗಾರಿಕೆ, ಆಗೀಗ ಸಣ್ಣಪುಟ್ಟ ಗುತ್ತಿಗೆ ಕೆಲಸಗಳು – ಇವು ಜೀವನಕ್ಕೆ ಅವಲಂಬವಾಗಿದ್ದವು. ಹೇಳಿಕೊಳ್ಳುವಂತಹ ಸಂಪನ್ನತೆ ಇಲ್ಲದಿದ್ದರೂ ಆ ಸುಸಂಸ್ಕೃತ ಮನೆವಾರ್ತೆಯಲ್ಲಿ ಅತಿಥಿಸತ್ಕಾರಾದಿಗಳಿಗೆ ಎಂದೂ ಕೊರತೆಯಾಗುತ್ತಿರಲಿಲ್ಲ. ಮಾಗಡಿ ರಂಗನಾಥಸ್ವಾಮಿಯ ಜಾತ್ರೆ ಆ ಸೀಮೆಯಲ್ಲಿಯೆ ಭವ್ಯತೆಗೆ ಹೆಸರಾಗಿರುವುದು. ಆ ಜಾತ್ರೆಗಾಗಿ ಹತ್ತಾರು ಸುತ್ತಮುತ್ತಲ ಮತ್ತು ದೂರದ ಊರುಗಳಿಂದಲೂ ಬರುವ ಸಾವಿರಾರು ಜನಕ್ಕೆ ರಂಗಣ್ಣನವರ ಕುಟುಂಬದ ಕಡೆಯಿಂದ ಐದಾರು ದಿನಗಳ ಕಾಲ ಅನ್ನಸಂತರ್ಪಣೆ ನಡೆಸುವ ಪರಂಪರೆ ಇದ್ದಿತು.

ಆಸ್ತಿಗೆ ಸಂಬಂಧಿಸಿದಂತೆ ಹುಟ್ಟಿಕೊಂಡಿದ್ದ ವಿವಾದ–ಖಟ್ಲೆಗಳಿಂದ ಬೇಸತ್ತು ರಂಗಣ್ಣನವರು 1930ರ ಆಸುಪಾಸಿನಲ್ಲಿ ತಿರುಮಲೆಯ ಜಮೀನನ್ನು ಮಾರಿ ಬೆಂಗಳೂರಿಗೆ ಬಂದು ವಾಸ್ತವ್ಯ ಹೂಡಿದರು. ಇಲ್ಲಿ ನೆಲಸಿದ ಮೇಲೆ ಅವರು ಬದುಕಿದ್ದುದು ಐದಾರು ವರ್ಷ ಮಾತ್ರ. ಅವರ ಕೊನೆಯ ದಿನಗಳು ಯಾತನಾಮಯವೇ ಆಗಿದ್ದವು. ಕೆಲಕಾಲ ಅರೆಪ್ರಜ್ಞಾವಸ್ಥೆಯಲ್ಲಿದ್ದು ಕೊನೆಯುಸಿರೆಳೆದರು. ಕೊನೆಗಾಲದಲ್ಲಿ ಮಗ ಶಾಮಣ್ಣನವರನ್ನು ಒಮ್ಮೆ ನೋಡಲು ಬಯಸಿದ್ದರೂ ಅದು ಈಡೇರಲಿಲ್ಲ. ಆ ವೇಳೆಗೇ ರಾಜಕೀಯ ಚಟುವಟಿಕೆಗಳಲ್ಲಿ ವ್ಯಸ್ತರಾಗಿದ್ದ ಶಾಮಣ್ಣ ತಂದೆಯ ಅವಸಾನದ ಸಮಯದಲ್ಲಿ ಯೆರವಾಡಾ ಸೆರೆಮನೆಯಲ್ಲಿ ಬಂದಿಯಾಗಿದ್ದರು.

ಮಾಗಡಿಯಲ್ಲಿ ಲೋವರ್ ಸೆಕಂಡರಿ ('ಐದು ರೂಪಾಯಿ ಪರೀಕ್ಷೆ' ಎಂದು ಕರೆಯುತ್ತಿದ್ದರು) ಮುಗಿಸಿ ಶಾಮಣ್ಣ 1927ರಲ್ಲಿ ಬೆಂಗಳೂರಿಗೆ ಸ್ಥಾನಾಂತರಗೊಂಡು ದೇಶೀಯ ವಿದ್ಯಾಶಾಲೆ (ನ್ಯಾಷನಲ್ ಹೈಸ್ಕೂಲ್) ಸೇರಿದರು. ಬಡ ವಿದ್ಯಾರ್ಥಿಗಳಿಗಾಗಿ ಶಾಲೆಯು ನಡೆಸುತ್ತಿದ್ದ ಹಾಸ್ಟೆಲಿನಲ್ಲಿ ಇರಲು ಅನುಮತಿಯನ್ನು ದೊರಕಿಸಿಕೊಳ್ಳುವುದು ಸಾಧ್ಯವಾಯಿತು. ಸ್ವಾತಂತ್ರ್ಯ ಹೋರಾಟಗಾರ್ತಿ ಆ್ಯನಿಬೆಸೆಂಟ್‌ರವರಿಂದ ಸ್ಥಾಪಿತವಾಗಿದ್ದ ಆ ವಿದ್ಯಾಶಾಲೆ ಉಳಿದವಕ್ಕಿಂತ ಭಿನ್ನವಾಗಿತ್ತು. ಅಲ್ಲಿ ನಿಗದಿಯಾದ ಪಾಠ್ಯಗಳ ಕಲಿಕೆಯ ಜೊತೆಗೆ ರಾಷ್ಟ್ರೀಯತಾಪರ ಶಿಕ್ಷಣ, ಶಾರೀರಿಕ ವ್ಯಾಯಾಮ, ಶ್ರೀರಾಮಕೃಷ್ಣ–ವಿವೇಕಾನಂದ ಸಾಹಿತ್ಯದ ಬೋಧನೆ, ಪೌರನೀತಿಯ ಅಂಶಗಳ ಬೋಧನೆ ಮೊದಲಾದವನ್ನೂ ಅಳವಡಿಸಲಾಗಿತ್ತು. ಬೆಂಗಳೂರಿಗೆ ಪ್ರವಾಸ ನಿಮಿತ್ತ ಬಂದ

ರಾಷ್ಟ್ರನಾಯಕರ ಭಾಷಣಗಳೂ ವಿದ್ಯಾಶಾಲೆಯಲ್ಲಿ ನಡೆಯುತ್ತಿದ್ದವು. ಗ್ರಾಮೀಣ ಪರಿಸರದ ಹಿನ್ನೆಲೆಯಿಂದ ಬಂದಿದ್ದ ಶಾಮಣ್ಣನವರಿಗೆ ಇಲ್ಲಿ ಒಂದು ಹೊಸ ಪ್ರಪಂಚವೇ ತೆರೆದುಕೊಂಡಂತೆ ಆಯಿತು. ಶಾಲೆಯಲ್ಲಿ ಕಲಿಸಲು ಕೆ.ಎಸ್. ಕೃಷ್ಣ ಅಯ್ಯರ್, ಕೆ. ಸಂಪದ್ಗಿರಿರಾವ್, ಕಂದಾಡೆ ಕೃಷ್ಣ ಅಯ್ಯಂಗಾರ್ ಮೊದಲಾದ ಸ್ವನಾಮಧನ್ಯ ಪಡೆಯೇ ಇದ್ದಿತು.

ಸ್ವಾತಂತ್ರ್ಯಾಂದೋಲನದ ತೆಕ್ಕೆಯಲ್ಲಿ

ದೇಶೀಯ ವಿದ್ಯಾಶಾಲೆಯ ಪರಿಸರ ಶಾಮಣ್ಣನವರಲ್ಲಿ ಬಾಲ್ಯದಿಂದಲೇ ಸುಪ್ತವಾಗಿದ್ದ ರಾಜಕೀಯ ಪ್ರಜ್ಞೆಯನ್ನು ಇನ್ನಷ್ಟು ಉದ್ದೀಪನಗೊಳಿಸಿತು. ಆ ದಿನಗಳಲ್ಲಿ ಸಾಹಸವಂತ ತರುಣರಾರೂ ಸ್ವಾತಂತ್ರ್ಯಾಂದೋಲನದ ಪ್ರಭಾವಕ್ಕೆ ಒಳಗಾಗದಿರುವುದು ಸಾಧ್ಯವಿರಲಿಲ್ಲ. ಶಾಮಣ್ಣನವರಾದರೋ – ಕೌಟುಂಬಿಕ ಪರಿಸ್ಥಿತಿ ಪ್ರತಿಕೂಲವೇ ಆಗಿದ್ದರೂ – ಮಾನಸಿಕ ದ್ವೈಧಕ್ಕೆ ಸಿಲುಕಿದರು: ದೇಶಾದ್ಯಂತ ನಡೆಯುತ್ತಿದ್ದ ಸ್ವಾತಂತ್ರ್ಯಪರ ಚಟುವಟಿಕೆಗಳಲ್ಲಿ ಸೇರಿಕೊಳ್ಳಬೇಕೆ, ಅಥವಾ ಸದ್ಯದಮಟ್ಟಿಗಾದರೂ ಶಾಲೆಯ ಶಿಕ್ಷಣಕ್ಕೆ ಅಂಟಿಕೊಂಡಿರಬೇಕೆ? ಈ ಡೋಲಾಯಮಾನ ಮನಃಸ್ಥಿತಿಯಲ್ಲಿಯೆ ಹೇಗೊ ಮೆಟ್ರಿಕ್ಯುಲೇಷನ್‌ವರೆಗಿನ ವ್ಯಾಸಂಗವನ್ನು ಮುಗಿಸಿದರು. ಪರೀಕ್ಷೆ ಆಗುವವರೆಗೆ ಸಂಯಮದಿಂದಿದ್ದು ಪರೀಕ್ಷಾಸರಣಿ ಮುಗಿದ ಮರುದಿನವೇ ಯಾರಿಗೂ ತಿಳಿಸದೆ ರೈಲುಹತ್ತಿ ಹೊರಟುಬಿಟ್ಟರು. ಹುಬ್ಬಳ್ಳಿಗೆ ಹೋಗಿ ಡಾ। ನಾ. ಸು. ಹರ್ಡೀಕರ್ ನಡೆಸುತ್ತಿದ್ದ ಸತ್ಯಾಗ್ರಹಿ ತರಬೇತಿ ಶಿಬಿರದಲ್ಲಿ ಸೇರಿಕೊಂಡರು. ಸ್ವಾತಂತ್ರ್ಯದ ಸಂದೇಶವನ್ನೂ ಶಾಸನವಿರೋಧಿ ಚಟುವಟಿಕೆಗಳ ಮೂಲಕ ಆರೂಢ ಸರ್ಕಾರಕ್ಕೆ ಪ್ರತಿಭಟನೆಯನ್ನು ಸಂಘಟಿಸುವುದರ ಅನಿವಾರ್ಯತೆಯ ಸಂದೇಶವನ್ನೂ ಹಳ್ಳಿಗಳ ಸಮುದಾಯಗಳಿಗೆ ಮನವರಿಕೆ ಮಾಡಿಸಿದರು.

ಅಲ್ಪಕಾಲಾನಂತರ ಗಾಂಧಿಯವರು ಕೈಗೊಳ್ಳಲಿದ್ದ ದಂಡೀಯಾತ್ರೆಯಲ್ಲಿ ಸೇರಿಕೊಳ್ಳುವಂತೆ ಅವರಿಗೆ ಸೂಚನೆ ಕೊಡಲಾಯಿತು. ಆದರೆ ಶಾಮಣ್ಣ ಪುಣೆ ತಲಪುತ್ತಿದ್ದಂತೆಯೇ ಅವರ ತಂಡದವರನ್ನೆಲ್ಲ ದಸ್ತಗಿರಿ ಮಾಡಿ ಅಧಿಕಾರಿಗಳು ಸೊಲ್ಲಾಪುರಕ್ಕೆ ವಿಚಾರಣೆಗಾಗಿ ಕಳಿಸಿದರು. ವಿಚಾರಣೆ ನಡೆಸುತ್ತಿದ್ದ ಆಂಗ್ಲ ಜಡ್ಜನು ಶಾಮಣ್ಣನವರಿಗೆ "ನೀನಿನ್ನೂ ಎಳೆವಯಸ್ಸಿನವನು, ದೂರದಿಂದ ಬಂದಿದ್ದೀ. ತಪ್ಪೊಪ್ಪಿಕೊಂಡು ಕ್ಷಮೆಕೋರಿದಲ್ಲಿ ನಿನ್ನನ್ನು ಬಿಡುತ್ತೇವೆ. ನೀನು ಊರಿಗೆ ಹಿಂದಿರುಗಿ ಓದನ್ನು ಮುಂದುವರಿಸು" ಎಂದು ಹಿತವಾದ ಹೇಳಿದ. ಬಿಸಿರಕ್ತದ ಶಾಮಣ್ಣ ಗಟ್ಟಿ ದನಿಯಲ್ಲಿ ಉತ್ತರಿಸಿದರು: "ನಾನು ವಾಪಸ್ ಹೋಗಲು ಬಂದಿಲ್ಲ. ವಿದೇಶೀಯರಾದ ನಿಮ್ಮನ್ನು ಹಿಂದಕ್ಕೆ ಕಳಿಸುವುದಕ್ಕಾಗಿ ಬಂದಿದ್ದೇನೆ" – ಎಂದು. ನ್ಯಾಯಾಧೀಶನು ನಿರ್ವಾಹವಿಲ್ಲದೆ ಶಾಮಣ್ಣನವರಿಗೂ ಜೊತೆಗಾರರಿಗೂ ಒಂಬತ್ತು ತಿಂಗಳ ಕಠಿಣ

ಸಜೆ ಮತ್ತು ರೂ. 20 ದಂಡವನ್ನು ವಿಧಿಸಿದ. ಕಿರಿಯ ವಯಸ್ಸಿಗೇ ಶಾಮಣ್ಣನವರಲ್ಲಿ ಹರಳುಗಟ್ಟಿದ್ದ ದೇಶಪ್ರೇಮವೂ ನಿರ್ಭೀತಿಯೂ ಅಸಾಮಾನ್ಯ.

ಈ ಸತ್ಯಾಗ್ರಹಿ ತಂಡವನ್ನು ಬಿಜಾಪುರದ ಜೈಲಿಗೂ ಅಲ್ಲಿಂದ ಮೂರು ತಿಂಗಳಾದ ಮೇಲೆ ಯೆರವಾಡಾ ಜೈಲಿಗೂ ಕಳಿಸಿದರು. ಸಾಮಾನ್ಯ ಸತ್ಯಾಗ್ರಹಿಗಳ ಬಗೆಗೆ ಸೈನಿಕರು ತೋರುತ್ತಿದ್ದ ನಿಷ್ಕಾರಣ ಪಾಶವೀಯತೆಗೆ ಮಿತಿಯೇ ಇರಲಿಲ್ಲ. ಹತ್ತು ಹೆಜ್ಜೆ ನಡೆದುಹೋಗುವಾಗಲೂ ಎರಡೂ ಕಡೆಗಳಿಂದ ಪೊಲೀಸರು ಲಾಠಿಗಳಿಂದ ಥಳಿಸುತ್ತಲೇ ಇರುತ್ತಿದ್ದರು. ಯೆರವಾಡಾ ಸೆರೆಮನೆಯಲ್ಲಿ ಪ್ರಾಥಮಿಕ ಸೌಕರ್ಯಗಳೂ ಇರಲಿಲ್ಲ. ಸ್ನಾನ ಶೌಚಾದಿಗಳೂ ಶಿಕ್ಷೆಯ ರೀತಿಯಲ್ಲಿಯೆ ಇರುತ್ತಿದ್ದವು. ಸತ್ಯಾಗ್ರಹಿಗಳ ಸಂಖ್ಯೆ ಬೆಳೆಯುತ್ತಹೋದಂತೆ ಕೋಣೆಗಳಲ್ಲಿಯೂ ಸ್ಥಳವಿರದೆ ಬಯಲೇ ಆಲಯವಾಯಿತು. ಡೇರೆಗಳಲ್ಲಿ ಶುದ್ಧ ಗಾಳಿಬೆಳಕಾದರೂ ಇದೆಯೆಂದು ಸಮಾಧಾನಪಡಬೇಕಾಗಿತ್ತು. ಕಿರಿಯ ವಯಸ್ಸಿನವರಾದುದರಿಂದ ಶಾಮಣ್ಣನವರಿಗೆ ರೊಟ್ಟಿಗಳನ್ನು ಎಣಿಸುವಂತಹ ಸುಲಭ ಕೆಲಸಗಳನ್ನು ಜೈಲು ಅಧಿಕಾರಿಗಳು ವಿಧಿಸುತ್ತಿದ್ದರು.

ಪ್ರಸಿದ್ಧ ಕ್ರಾಂತಿಕಾರಿಗಳಾದ ಭಗತ್‌ಸಿಂಗ್, ಸುಖದೇವ್ ಮೊದಲಾದ ದೇಶಭಕ್ತ ತರುಣರನ್ನು ಗಲ್ಲಿಗೇರಿಸಿದುದು ಶಾಮಣ್ಣ ಮತ್ತು ಸಂಗಡಿಗರ ಮನಸ್ಸುಗಳಿಗೆ ಎಷ್ಟು ನೋವನ್ನು ತಂದಿತೆಂಬುದನ್ನು ಊಹಿಸಬಹುದು. ಇಡೀ ದಿನ ಉಪವಾಸವಿದ್ದು ಪ್ರಾರ್ಥನೆ ಮಾಡಿ ಶ್ರದ್ಧಾಂಜಲಿಯನ್ನು ಅರ್ಪಿಸಿದರು.

ಗಾಂಧಿ–ಅರ್ವಿನ್ ಒಡಂಬಡಿಕೆಯಂತೆ ಎಲ್ಲ ರಾಜಕೀಯ ಬಂದಿಗಳನ್ನೂ ವಿಮೋಚನೆಗೊಳಿಸಲಾಯಿತಾದರೂ ಶಾಮಣ್ಣ ಮತ್ತು ಸಂಗಡಿಗರನ್ನು ಬಂಧನದಲ್ಲಿಯೇ ಮುಂದುವರಿಸಲಾಗಿತ್ತು. ಅವರನ್ನು ಬಿಡುಗಡೆ ಮಾಡಿದುದು ಅಲ್ಲಿಂದ ಒಂದೂವರೆ ತಿಂಗಳು ಕಳೆದ ಮೇಲೆ. ಹೀಗೆ ಅಧಿಕ ಅವಧಿಯ ಸೆರೆವಾಸಕ್ಕೆ ಒಳಗಾದುದನ್ನು ಗುರುತಿಸುವ ದೃಷ್ಟಿಯಿಂದ ಶಾಮಣ್ಣನವರಿಗೆ ಕರಾಚಿ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಲು ಆಮಂತ್ರಣ ನೀಡಲಾಯಿತು. ಶಾಮಣ್ಣನವರು ಕರಾಚಿಯಲ್ಲಿ ಇದ್ದಾಗಲೇ ತಂದೆಯ ಅನಾರೋಗ್ಯದ ವಾರ್ತೆ ಪರಿಚಿತರಿಂದ ತಿಳಿಯಿತು. ಬೆಂಗಳೂರಿಗೆ ಹಿಂದಿರುಗಲು ನಿಶ್ಚಯಿಸಿ ಕರಾಚಿಯಿಂದ ಮುಂಬಯಿಗೆ ಹೋಗುವ ಹಡಗನ್ನು ಏರಿದರು.

ಅವರು ಬೆಂಗಳೂರು ತಲಪುವ ವೇಳೆಗೆ ದುರದೃಷ್ಟವಶಾತ್ ತಂದೆ ರಂಗಣ್ಣನವರು ತೀರಿಕೊಂಡಿದ್ದರು.

ತಂದೆಯ ಅಗಲುವಿಕೆಯ ನೋವಿನ ಜೊತೆಗೆ ದೊಡ್ಡ ಕುಟುಂಬದ ನಿರ್ವಹಣೆಯ ಹೊಣೆಗಾರಿಕೆಯೂ ಶಾಮಣ್ಣನವರ ಪಾಲಿಗೆ ಬಂದಿತು. ಈ ಹಿನ್ನೆಲೆಯಲ್ಲಿ ತಮ್ಮ ಸನ್ನಿವೇಶವನ್ನು ಎಷ್ಟು ಮಾತ್ರವೂ ಲಕ್ಷಿಸದೆ ಶಾಮಣ್ಣನವರು

ಕೆಲವು ಧ್ಯೇಯಾಭಿಮುಖ ನಿರ್ಧಾರಗಳನ್ನು ಕೈಗೊಂಡರು: ಜೀವಮಾನ ಪರ್ಯಂತ ತಾನು ಸ್ವಾವಲಂಬಿಯಾಗಿರಬೇಕು; ಸರ್ಕಾರೀ ನೌಕರಿಗೆ ಸೇರಬಾರದು; ಅತ್ಯಂತ ಸರಳ ಜೀವನವನ್ನು ನಡೆಸಬೇಕು; – ಇತ್ಯಾದಿ. ಈ ವ್ರತಗಳನ್ನು ಅವರು ಎಂದೂ ಕೈಬಿಡಲಿಲ್ಲ. ವ್ಯಾಸಂಗವನ್ನು ಮುಂದುವರಿಸುತ್ತಲೇ ಶಕ್ಯವಾದ ಪ್ರಮಾಣದಲ್ಲಿ ಸ್ವಾತಂತ್ರ್ಯಾಂದೋಲನಕ್ಕೆ ಇಂಬುಗೊಡುವ ಕೆಲಸವನ್ನು ಮುಂದುವರಿಸಿದರು – ಭೂಗತ ಚಟುವಟಿಕೆಗಳ ಸಂಯೋಜನೆ, ಪ್ರಚಾರಸಾಹಿತ್ಯದ ನಿರ್ಮಾಣ ಮತ್ತು ಪ್ರಸಾರ, ಇತ್ಯಾದಿ.

ಶಾಮಣ್ಣನವರ ಸತ್ಯಾಗ್ರಹಿ ಅನುಭವಗಳು ರೋಚಕವೂ ಸಾಹಸಮಯವೂ ಆಗಿದ್ದವು. ಸದಾ ಅವರನ್ನು ಬೆಂಬತ್ತುತ್ತಿದ್ದ ಪೊಲೀಸರಿಂದ ತಪ್ಪಿಸಿಕೊಳ್ಳಲು ಅವರು ಹೂಡುತ್ತಿದ್ದ ಉಪಾಯಗಳು ಅವರ ಹೋರಾಟಗಾರ ಪ್ರವೃತ್ತಿಗೆ ನಿದರ್ಶನಗಳಾಗಿದ್ದವು. ಒಮ್ಮೆ ಬಳಸಿದ ತಂತ್ರವನ್ನು ಇನ್ನೊಮ್ಮೆ ಬಳಸುತ್ತಿರಲಿಲ್ಲ. ಮುಂಬಯಿಗೆ ಒಮ್ಮೆ ಸಾಹಿತ್ಯವನ್ನು ಒಯ್ಯುತ್ತಿದ್ದಾಗ ಗೂಢಚಾರರು ಕಂಡೊಡನೆ ಚಲಿಸುತ್ತಿದ್ದ ರೈಲಿಗೆ ಹತ್ತಿಕೊಂಡರು. ಮುಂದಿನ ಪ್ರಯಾಣದಲ್ಲಿ ಮತ್ತೆ ಗೂಢಚಾರರು ಬರುವುದನ್ನು ನಿರೀಕ್ಷಿಸಿದ್ದ ಶಾಮಣ್ಣನವರು ತಮ್ಮಲ್ಲಿದ್ದ ಸಾಮಗ್ರಿಯನ್ನು ಸಹೃದಯ ಪ್ರಯಾಣಿಕರೊಬ್ಬರಿಗೆ ಹಸ್ತಾಂತರಿಸಿ ತಮ್ಮ ಪೆಟ್ಟಿಗೆಯಲ್ಲಿ ಹಣ್ಣುಹಂಪಲು ತುಂಬಿಕೊಂಡರು. ಅನಂತರ ಪರೀಕ್ಷೆ ನಡೆದಾಗ ಏನಾಯಿತೆಂದು ವಿವರಿಸುವ ಆವಶ್ಯಕತೆಯಿಲ್ಲ. ಇಂತಹ ಅನುಭವಗಳು ಹಲವಾರು.

ವೃತ್ತಿಜೀವನ

ಶಾಮಣ್ಣನವರ ಅಲೆಮಾರಿ ಬದುಕಿಗೆ ಸ್ವಲ್ಪಮಟ್ಟಿನ ಸ್ಥಿರತೆ ದೊರೆತದ್ದು ಅವರು 1938ರಲ್ಲಿ ಕೆ.ಎಸ್. ಕೃಷ್ಣಯ್ಯರ್ ಮೊದಲಾದ ಹಿತೈಷಿಗಳ ಸಲಹೆಯಂತೆ ದೇಶೀಯ ವಿದ್ಯಾಶಾಲೆಯ ಆವರಣದಲ್ಲಿಯೆ ರಂಗನಾಥ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಸಂಸ್ಥೆಯನ್ನು ಸ್ಥಾಪಿಸಿದ ಮೇಲೆ. ಅಲ್ಲಿ ಟೈಪಿಂಗ್, ಶೀಘ್ರಲಿಪಿ, ವಾಣಿಜ್ಯ ವಿದ್ಯಾರ್ಥಿಗಳಿಗೆ ಪಾಠಗಳು – ಇವು ನಿಯತವಾಗಿ ನಡೆಯುತ್ತಿದ್ದವು.

ಜೀವನನಿರ್ವಹಣೆಗೆ ಹೀಗೆ ಒಂದು ಆಧಾರ ಏರ್ಪಟ್ಟ ಮೇಲೆ 1943ರಲ್ಲಿ ಸಕಲೇಶಪುರ ಸಮೀಪದ ಕಾಫಿತೋಟ ಮಾಲೀಕ ವೆಂಕಟಸುಬ್ಬಯ್ಯ ಎಂಬವರ ಪುತ್ರಿ ಗೌರಮ್ಮನವರೊಡನೆ ಶಾಮಣ್ಣನವರ ವಿವಾಹ ನೆರವೇರಿತು. ದುರದೃಷ್ಟದಿಂದ ಪತ್ನಿಯೂ ಜನಿಸಿದ್ದ ಹೆಣ್ಣುಮಗುವೂ ಅಲ್ಪಾಯುಷಿಗಳಾದರು. ಕೆಲಕಾಲಾನಂತರ ಚೆನ್ನೈ ಮೂಲದವರಾಗಿ ಬೆಂಗಳೂರಿನಲ್ಲಿ ನೆಲಸಿದ್ದ ಸುಬ್ರಮಣಿ ಅಯ್ಯರ್ ಅವರ ಪುತ್ರಿ ಮುತ್ತುಲಕ್ಷ್ಮಿಯವರು ಶಾಮಣ್ಣನವರ ದ್ವಿತೀಯ ಪತ್ನಿಯಾಗಿ ಮನೆ ತುಂಬಿದರು.

ಶಾಮಣ್ಣನವರ ಬಂಧುಬಳಗ-ಆಶ್ರಿತರ ಪರಿವಾರ ದೊಡ್ಡದಿತ್ತು. ಅಷ್ಟೊಂದು ಜನರ ಯೋಗಕ್ಷೇಮ ನಿರ್ವಹಿಸುವುದು ಸುಲಭವಿರಲಿಲ್ಲ. ಕ್ರಮೇಣ ಶಾಮಣ್ಣ-ಮುತ್ತುಲಕ್ಷ್ಮಿ ಸಂತಾನವೂ ಬೆಳೆಯಿತು. ಐವರು ಪುತ್ರಿಯರು – ಶಾರದಾ, ವಿದ್ಯಾ, ಗೌರಿ, ಕಲಾವತಿ ಮತ್ತು ಜಯಂತಿ. ಎಲ್ಲರೂ ಸುಸಂಸ್ಕೃತರೂ ಪ್ರತಿಭಾವಂತರೂ ಆಗಿ ಪ್ರವರ್ಧಮಾನರಾದರು. ಹಿರಿಯ ಮಗ ಟಿ. ಎಸ್. ರಂಗಾ ಸುಪ್ರಸಿದ್ಧ ಚಲನಚಿತ್ರ ನಿರ್ದೇಶಕರು; ರಂಗಭೂಮಿಯಲ್ಲಿಯೂ ಸುಪರಿಚಿತರು. ದ್ವಿತೀಯ ಪುತ್ರ ಟಿ.ಎಸ್. ರವಿಚಂದರ್ ಪ್ರೌಢ ವ್ಯಾಸಂಗ ನಡೆಸಿ ಕಂಪ್ಯೂಟರ್ ಕನ್ಸಲ್ಟೆಂಟ್ ಆಗಿ ಚೆನ್ನೈಯಲ್ಲಿ ನೆಲಸಿದರು.

ವಾಣಿಜ್ಯ ಶಾಲೆ ಬೆಳೆಯುತ್ತಿದ್ದಂತೆ ನ್ಯಾಷನಲ್ ಹೈಸ್ಕೂಲಿನಲ್ಲಿ ಲಭ್ಯವಿದ್ದ ಸ್ಥಳ ಸಾಲದೆಹೋಯಿತು; ಸ್ವತಂತ್ರ ವ್ಯವಸ್ಥೆಯ ಬಗೆಗೆ ಯೋಚಿಸುವ ಅನಿವಾರ್ಯತೆ ಯುಂಟಾದದ್ದು ಸಹಜ. ಹೀಗಾಗಿ ಶಂಕರಮಠ ರಸ್ತೆಯ ದಕ್ಷಿಣದ ತುದಿಯ ಬಳಿ ನಿವೇಶನವೊಂದನ್ನು ಪಡೆದು 1951ರಲ್ಲಿ ಟೈಪಿಂಗ್ ಇತ್ಯಾದಿಗಳ ಕಲಿಸುವಿಕೆಗೂ ವಾಣಿಜ್ಯ ತರಗತಿಗಳಿಗೂ ಅನುಕೂಲವಾಗುವಂತಹ ಸ್ವಂತ ಕಟ್ಟಡವನ್ನು ಶಾಮಣ್ಣ ಏರ್ಪಡಿಸಿಕೊಂಡರು.

ಶಾಮಣ್ಣನವರ ಕಾಮರ್ಸ್ ಶಾಲೆಯಲ್ಲಿ ಕಲಿತ ಅನೇಕರು ಅನಂತರದ ದಿನಗಳಲ್ಲಿ ಉನ್ನತ ಹುದ್ದೆಗಳಿಗೆ ಏರಿದರು. ಹಿಂದುಸ್ತಾನ್ ಏರೊನಾಟಿಕ್ಸ್ ಕಾರ್ಖಾನೆಯಲ್ಲಿ ಪ್ರಧಾನ ಫಿನಾನ್ಸ್ ಮ್ಯಾನೇಜರ್ ಆಗಿದ್ದ ಎಸ್.ಕೆ. ಬದರೀನಾಥ್ ಅವರೂ ಶಾಮಣ್ಣನವರ ವಿದ್ಯಾರ್ಥಿಯಾಗಿದ್ದವರೇ.

ಆ ದಿನಗಳಲ್ಲಿ ಟೈಪ್‌ರೈಟಿಂಗ್ ಶಾಲೆಯ ಶುಲ್ಕ ಹೆಚ್ಚೇನೂ ಇರುತ್ತಿರಲಿಲ್ಲ. ಆದರೆ ಆ ಅಲ್ಪಶುಲ್ಕವನ್ನೂ ತೆರಲಾರದ ಹಲವರು ವಿದ್ಯಾರ್ಥಿಗಳು ಇರುತ್ತಿದ್ದರು. ಶಾಮಣ್ಣ 'ಇದೇನು ಧರ್ಮಛತ್ರವೆಂದು ತಿಳಿದುಕೊಂಡಿರೇನೋ?' ಎಂದು ಹುಸಿಕೋಪದ 'ಆಶೀರ್ವಾದ' ಮಾಡುತ್ತಲೇ ಶುಲ್ಕದಲ್ಲಿ ರಿಯಾಯಿತಿ ತೋರುತ್ತಿದ್ದರು.

ಶಾಮಣ್ಣನವರು ಅನೇಕ ವರ್ಷಕಾಲ ರಾಜ್ಯ ವಾಣಿಜ್ಯಶಾಲೆಗಳ ಸಂಘದ ಅಧ್ಯಕ್ಷರೂ ಆಗಿದ್ದರು.

ಅದೇ ವರ್ಷಗಳಲ್ಲಿ ಬಿಲ್ಡಿಂಗ್ ಕಾಂಟ್ರ್ಯಾಕ್ಟ್ ಉದ್ಯಮದಲ್ಲಿಯೂ ತೊಡಗಿಕೊಂಡರು. ಯಾವುದೇ ಕೆಲಸವನ್ನು ಕೈಗೆತ್ತಿಕೊಂಡರೂ ಅಖಂಡ ಪರಿಶ್ರಮ ಮಾಡುವ ಅಭ್ಯಾಸ ಇದ್ದದ್ದರಿಂದ ಕೆಲವೇ ವರ್ಷಗಳಲ್ಲಿ ಕಟ್ಟಡ ನಿರ್ಮಾಣ ಉದ್ಯಮದಲ್ಲಿಯೂ ಸಾಫಲ್ಯ ಗಳಿಸಿ ಹೆಸರು ಮಾಡಿದರು. ನಗರದ ಅನೇಕ ಪ್ರತಿಷ್ಠಿತ ಕಟ್ಟಡಗಳು ಶಾಮಣ್ಣನವರ ಕೌಶಲದಿಂದ ನಿರ್ಮಾಣಗೊಂಡವು. ಹಾರ್ಡಿಂಗ್ ರಸ್ತೆಯ (ಈಗ ಪಂಪಮಹಾಕವಿ ರಸ್ತೆ) ಚಂದ್ರಶೇಖರ ಭಾರತೀ ಕಲ್ಯಾಣಮಂಟಪ ಸಮುಚ್ಚಯ, ಕೋಟೆಭಾಗದ

ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಮೊದಲಾದ ಅನೇಕ ಕಟ್ಟಡಗಳು ಶಾಮಣ್ಣನವರ ನಿರ್ಮಿತಿಗಳು.

ಶಿಕ್ಷಣ ಕ್ಷೇತ್ರದಲ್ಲಿ ಶಾಮಣ್ಣನವರು ಬೆಳೆಸಿಕೊಂಡಿದ್ದ ವಿಶೇಷ ಆಸಕ್ತಿಯ ಕಾರಣದಿಂದಾಗಿ ಬೆಂಗಳೂರು ಹೈಸ್ಕೂಲ್, ಆಚಾರ್ಯ ಪಾಠಶಾಲೆ ಮೊದಲಾದ ನಾಲ್ಕಾರು ವಿದ್ಯಾಲಯಗಳ ಆಡಳಿತ ಮಂಡಳಿಗಳ ಅಪೇಕ್ಷೆಯಂತೆ ಆ ಮಂಡಳಿಗಳ ಸದಸ್ಯರಾಗಿ ಆ ಸಂಸ್ಥೆಗಳ ಏಳ್ಗೆಯಲ್ಲಿ ಯೋಗದಾನ ಮಾಡಿದರು.

ಟೈಪಿಂಗ್ ಇನ್‌ಸ್ಟಿಟ್ಯೂಟಿನಂತಹ ಯಾವುದೇ ಆಡಂಬರ–ಆಕರ್ಷಣೆಗಳಿಲ್ಲದ ಚಟುವಟಿಕೆಯನ್ನು ಜಿಗಿಹಲಗೆಯಾಗಿ ಮಾಡಿಕೊಂಡು ಪ್ರತಿಷ್ಠೆ ಗಳಿಸುತ್ತಹೋದದ್ದು ಶಾಮಣ್ಣನವರ ಕರ್ತೃತ್ವಶಕ್ತಿಗೆ ನಿದರ್ಶನವೆನ್ನಬಹುದು. ಆ ಸಂಸ್ಥೆಯ ಮಾಧ್ಯಮದಿಂದ ಆ ದಿನಗಳಲ್ಲಿ ಜೀವನೋಪಾಯ ಕಂಡುಕೊಂಡವರು ಸಾವಿರಾರು ಮಂದಿ.

ಸಾಮಾನ್ಯ ಜನರ ಬದುಕಿನಲ್ಲಿ ತಾರಕವಾಗುವುದು ನಿಷ್ಠೆ, ಪರಿಶ್ರಮ, ಉಪಕಾರಸ್ವಭಾವಗಳೇ ಎಂಬುದಕ್ಕೆ ಶ್ರೇಷ್ಠ ಉದಾಹರಣೆ ಶಾಮಣ್ಣನವರು.

ಸಮಾಜದೊಡನೆ ತಾದಾತ್ಮ್ಯ

ಸಾರ್ವಜನಿಕ ಕೆಲಸಗಳ ಬಗೆಗೆ ಶಾಮಣ್ಣನವರಲ್ಲಿ ಒಂದು ಬಗೆಯ ಆವೇಶ ಇದ್ದಿತೆಂದೇ ಹೇಳಬಹುದು. ಹಲವೊಮ್ಮೆ ಚಡಪಡಿಸುತ್ತ ಹೊರಡುತ್ತಿದ್ದ ಸ್ಥಿತಿಯಲ್ಲಿ ಅವರನ್ನು ಪ್ರಶ್ನಿಸಿದಾಗ ಹೊಮ್ಮುತ್ತಿದ್ದುದು ಯಾರದೋ ನಿತ್ಯಜೀವನ ಸಮಸ್ಯೆಗೆ ಪರಿಹಾರಕ್ಕಾಗಿ ಅವರು ಧಾವಿಸುತ್ತಿದ್ದರೆಂಬುದು. ಈ ಕಾಯಕ ವರ್ಷದ ಅಷ್ಟೂ ದಿನಗಳಲ್ಲಿ ಸಾಗುತ್ತಿತ್ತು. ಇಂತಹ ಕೆಲಸಗಳನ್ನು ಶಾಮಣ್ಣನವರು ಎಂದೂ ದಣಿವಿನವೆಂದು ಭಾವಿಸುತ್ತಿರಲಿಲ್ಲ. ಈ ಸ್ವಾಭಾವಿಕ ಶ್ರದ್ಧೆಯಿಂದಾಗಿಯೇ ನಗರಸಭೆಯಲ್ಲಾಗಲಿ ಶಾಸನಸಭೆಯಲ್ಲಾಗಲಿ ಶಾಮಣ್ಣನವರು ಆಡುತ್ತಿದ್ದ ಮಾತಿಗೆ ಎಲ್ಲರೂ ಬೆಲೆಕೊಡುತ್ತಿದ್ದುದು. ರಾಜಕೀಯವಾಗಿ ಅನ್ಯಪಕ್ಷಕ್ಕೆ ಸೇರಿದ್ದವರೂ ಎಂದೂ ಶಾಮಣ್ಣನವರನ್ನು ಲಘುವಾಗಿ ಕಂಡದ್ದಿಲ್ಲ.

ಬೇರೆ ಊರುಗಳಿಂದಲೋ ಹಳ್ಳಿಗಳಿಂದಲೋ ಬಂದ ಬಡಹುಡುಗರಿಗೆ ಸಮರ್ಪಕ ಏರ್ಪಾಡು ಆಗುವವರೆಗೆ ಅವರಿಗೆ ಶಾಮಣ್ಣನವರು ಎಷ್ಟೋ ವೇಳೆ ತಮ್ಮ ಮನೆಯಲ್ಲಿಯೆ ವ್ಯವಸ್ಥೆ ಮಾಡುತ್ತಿದ್ದುದುಂಟು. ಆದರೆ ಇಂತಹ ಯಾವ ಪರೋಪಕಾರವೂ ತಮ್ಮ ಹೆಚ್ಚುಗಾರಿಕೆಯೆಂದು ಶಾಮಣ್ಣನವರು ಎಂದೂ ಭಾವಿಸುತ್ತಿರಲಿಲ್ಲ.

ಹೆಚ್ಚುಕಡಮೆ ಪ್ರತಿದಿನ ಯಾವುದೋ ದಾಖಲೆಯ ಸ್ಥಿರೀಕರಣಕ್ಕೋ ಯಾವುದೋ ಕೆಲಸದ ಶಿಫಾರಸಿಗೋ ಯಾವುದೋ ಸರ್ಕಾರೀ ಇಲಾಖೆಯ ಕಟಾಕ್ಷಕ್ಕಾಗಿಯೋ

ಶಾಮಣ್ಣನವರ ಮನೆಯ ಮುಂದೆ ಜನರು ಸಾಲುಗಟ್ಟಿರುತ್ತಿದ್ದರು. ಶಾಮಣ್ಣನವರಲ್ಲಿಗೆ ಹೋದವರಲ್ಲಿ ಸಾಕಷ್ಟು ಮಂದಿಗೆ ಸಮಸ್ಯೆಗೆ ಪರಿಹಾರ ಸಿಗುತ್ತಿತ್ತು; ಕನಿಷ್ಠ ಪಕ್ಷ ಉಪಯುಕ್ತ ಮಾರ್ಗದರ್ಶನವಾದರೂ ದೊರೆಯುತ್ತಿತ್ತು. ಹೀಗೆ ವರ್ಷಗಳುದ್ದಕ್ಕೂ ಜನಸಮುದಾಯಕ್ಕೆ ಶಾಮಣ್ಣನವರು ನೀಡಿದ ನೆರವು, ಸಾಂತ್ವನಗಳಿಗೆ ಬೆಲೆ ಕಟ್ಟಲಾದೀತೆ?

ಉತ್ತಮ ಸಂಘಟಕರೆಂದು ಶಾಮಣ್ಣನವರು ಹೆಸರಾಗಿದ್ದರು. ಅವರ ಪ್ರಮುಖ ಆಸಕ್ತಿಯದಲ್ಲದ ಹತ್ತಾರು ಭಾರಿ ಸಮಾವೇಶಗಳ ನಿರ್ವಹಣೆಯ ಹೊಣೆಯನ್ನೂ ತಾವಾಗಿ ಸಂತೋಷದಿಂದ ಸ್ವೀಕರಿಸಿ ಮನ್ನಣೆಗೆ ಪಾತ್ರರಾದವರು ಶಾಮಣ್ಣ. ಶ್ರೀಮತಿ ಯಶೋಧರಾ ದಾಸಪ್ಪ ಅವರ ಅಧ್ಯಕ್ಷತೆಯಲ್ಲಿ 1978ರಲ್ಲಿ ಗಾಂಧಿಭವನದಲ್ಲಿ ನಡೆದ ಮದ್ಯಪಾನನಿರೋಧ ಸಮ್ಮೇಳನದ ವ್ಯವಸ್ಥೆಯನ್ನು ಅತ್ಯಂತ ಅಚ್ಚುಕಟ್ಟಾಗಿ ನಿರ್ವಾಹ ಮಾಡಿದವರು ಶಾಮಣ್ಣನವರು.

ತಾವು ಶ್ರಮಪೂರ್ವಕ ಕಟ್ಟಿಬೆಳೆಸಿದ ಸಂಸ್ಥೆಗಳಿಗೆ ಯುಕ್ತ ಉತ್ತರಾಧಿಕಾರಿಗಳು ಕಂಡಾಗ ನಿರ್ಮಮತೆಯಿಂದ ಅವನ್ನು ಅವರಿಗೆ ವಹಿಸಿ ಧನ್ಯತೆಯನ್ನು ಅನುಭವಿಸುತ್ತಿದ್ದ ಶಾಂತಮನಸ್ಕರು ಶಾಮಣ್ಣ. ಇಂದು ವಿಶಾಲವಾಗಿ ಬೆಳೆದು ಜನಾದರಣೆಗೆ ಪಾತ್ರವಾಗಿರುವ ನ್ಯಾಷನಲ್ ಕೋ-ಆಪರೇಟಿವ್ ಬ್ಯಾಂಕ್ ಮೊದಲಾದ ಹಲವಾರು ಸಂಸ್ಥೆಗಳಿಗೆ ಬೀಜಾರೋಪ ಮಾಡಿ ದೃಢವಾದ ಅಸ್ತಿಭಾರ ನಿರ್ಮಿಸಿದ್ದವರು ಶಾಮಣ್ಣನವರೇ.

ಯಾವ ಜನಹಿತಕಾರ್ಯವನ್ನೂ ಶಾಮಣ್ಣನವರು ತಮ್ಮ ಪರಿಧಿಗೆ ಹೊರತಾದುದೆಂದು ಭಾವಿಸಿದವರಲ್ಲ. ಸರ್ಕಾರೀ ಆಸ್ಪತ್ರೆಗಳಿಗೆ ಬರುವವರು ಸಾಮಾನ್ಯವಾಗಿ ಆರ್ಥಿಕವಾಗಿ ಸಂಪನ್ನರಾದವರಲ್ಲ. ಇಂತಹ ರೋಗಿಗಳ ಚಿಕಿತ್ಸೆಯ ಸಮಯದಲ್ಲಿ ಅವರೊಡನೆ ಬರುತ್ತಿದ್ದ ಪೋಷಕರಿಗೆ ವಸತಿ ಮೊದಲಾದ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಶಾಮಣ್ಣನವರು ಶ್ರಮಿಸಿದುದು ಅವರ ಉದಾತ್ತ ಮನಃಪ್ರವೃತ್ತಿಗೆ ಇನ್ನೊಂದು ನಿದರ್ಶನ.

* * *

ನಗರಸಭಾಸದಸ್ಯ

ಬಸವನಗುಡಿಯೂ ಸೇರಿದಂತೆ ದಕ್ಷಿಣ ಬೆಂಗಳೂರಿನಲ್ಲಿ ಅತ್ಯಂತ ಜನಪ್ರಿಯ ವ್ಯಕ್ತಿಯೆನಿಸಿದ್ದ ಶಾಮಣ್ಣನವರು 1957ರಲ್ಲಿ ಕಾರ್ಪೊರೇಟರ್ – ನಗರಸಭೆಯ ಸದಸ್ಯ ಸ್ಥಾನಕ್ಕೆ ಅಭ್ಯರ್ಥಿಯಾಗಿ ಸುಲಭವಾಗಿಯೆ ವಿಜಯ ಗಳಿಸಿದರು. ಅದು ಅವರ ಶಾಸಕೀಯ ಜೀವನಕ್ಕೆ ನಾಂದಿಯಾಯಿತು.

ಯಾವುದೇ ಹೊಣೆಗಾರಿಕೆಯನ್ನೂ ಗಂಭೀರವಾಗಿ ಪರಿಗಣಿಸಿ ಕಾರ್ಯಶೀಲರಾಗುವ ಸ್ವಭಾವ ಅವರದಾಗಿದ್ದುದರಿಂದ ಅವರ ಸಕ್ರಿಯತೆ ಪುರಾವೆಗೊಳ್ಳಲು ಹೆಚ್ಚು ಸಮಯ ಹಿಡಿಯಲಿಲ್ಲ. ಅವರು ಇಡೀ ನಗರಸಭೆಯಲ್ಲಿ ಅತ್ಯಂತ ಚೇತರಿಕೆಯುಳ್ಳ ಸದಸ್ಯರೆನಿಸಿದರು. ಆರ್ಥಿಕ ಸ್ಥಾಯೀಸಮಿತಿಯ ಅಧ್ಯಕ್ಷರಾಗಿ ಆ ಸಮಿತಿಯಲ್ಲಿ ಹೆಚ್ಚಿನ ಜೀವಂತಿಕೆ ತಂದರು.

ಶಾಮಣ್ಣನವರ ಮೊದಮೊದಲ ಹೋರಾಟಗಳಲ್ಲಿ ಒಂದು ನಗರಸಭೆ ವಿಧಿಸಿದ್ದ ಸೈಕಲ್ ತೆರಿಗೆಯ ರದ್ದತಿಗಾಗಿ. ಈ ತೆರಿಗೆಯನ್ನು ವಿಧಿಸಿದ್ದುದರ ಔಚಿತ್ಯ-ಅನೌಚಿತ್ಯ ಪರಾಮರ್ಶೆಗಿಂತ ಹೆಚ್ಚಾಗಿ ಶಾಮಣ್ಣನವರನ್ನು ಉದ್ವಿಗ್ನಗೊಳಿಸಿದುದು ಅತಿಸಾಮಾನ್ಯ ಜನರ ಬಗೆಗೆ ಸರ್ಕಾರಕ್ಕೆ ಅನುಕಂಪ ಬೇಡವೆ? – ಎಂಬ ಯೋಚನೆ. ಶಾಮಣ್ಣನವರು ಕೈಗೆತ್ತಿಕೊಳ್ಳುವವರೆಗೆ ಈ ವಿಷಯದ ಬಗೆಗೆ ಯಾರೂ ತಲೆಕೆಡಿಸಿಕೊಂಡಿರಲಿಲ್ಲ.

ಅದಾರದೋ ಸಲಹೆಯಂತೆ ನಗರಪಾಲಿಕೆ ದಿನಬಳಕೆಯ ಬೈಸಿಕಲ್ಲಿಗೆ ರೂ. 2 ವಾರ್ಷಿಕ ಶುಲ್ಕವನ್ನು ವಿಧಿಸಿತು. ಅದನ್ನು ಪಾವತಿ ಮಾಡಿ ಪಡೆದ ಸಣ್ಣ ಲೈಸೆನ್ಸ್ ಬಿಲ್ಲೆಯನ್ನು ಮಾಂಗಲ್ಯದಂತೆ ಸೈಕಲಿಗೆ ತಗುಲಿಸಿ ಪ್ರದರ್ಶಿಸಬೇಕಾಗಿತ್ತು. ಮೊದಲನೆಯದಾಗಿ ಆ ದಿನಗಳಲ್ಲಿ ಬಡವರ ಪಾಲಿಗೆ ರೂ. 2 ಸಾಮಾನ್ಯ ಮೊತ್ತವಾಗಿರಲಿಲ್ಲ. ಎರಡನೆಯದಾಗಿ ಸಾಮಾನ್ಯ ಜನರನ್ನು ತೊಂದರೆಗೆ ಸಿಗಿಸುವ ಈ ಯೋಚನೆಯೇ ಅವಹೇಳನಕಾರಿ ಎಂದೂ ಶಾಮಣ್ಣನವರಿಗೆ ಅನಿಸಿತು. ಅವರು ಹೋರಾಟಕ್ಕೆ ಇಳಿದರು. ಬಸವನಗುಡಿಯ ಎಲ್ಲೆಡೆ ಮತ್ತು ಬೇರೆ ಕಡೆಗಳಲ್ಲಿಯೂ ಸಾರ್ವಜನಿಕ ಸಭೆಗಳನ್ನು ಆಯೋಜಿಸಿ ಸೈಕಲ್ ತೆರಿಗೆ ರದ್ದತಿಗಾಗಿ ಜನಾಭಿಪ್ರಾಯವನ್ನು ಮೂಡಿಸುವುದರಲ್ಲಿ ಯಶಸ್ವಿಯಾದರು. ಆ ಪ್ರಮಾಣದ ಜನಪ್ರತಿಭಟನೆಯನ್ನು ನಗರಸಭೆ ನಿರೀಕ್ಷಿಸಿರಲಿಲ್ಲವೇನೋ. ಶಾಮಣ್ಣನವರ ಸತ್ಯಾಗ್ರಹಾನುಗುಣ ವಿಧಾನ ಸಫಲಗೊಂಡದ್ದು ಮಾತ್ರವಲ್ಲದೆ ಸಾಮಾಜಿಕ ಕಾರ್ಯಕರ್ತರಾಗಿ ಅವರಿಗೆ ಅಸಾಮಾನ್ಯ ಜನಪ್ರಿಯತೆಯನ್ನು ದೊರಕಿಸಿಕೊಟ್ಟಿತು.

ಶಾಮಣ್ಣನವರು ಜನಹಿತ ದೃಷ್ಟಿಯಿಂದ ನಡೆಸಿದ ಆ ಸಫಲ ಹೋರಾಟದ ಪರಿಣಾಮವಾಗಿ ಅನಂತರದ ದಿನಗಳಲ್ಲಿ ಆಡಳಿತದಲ್ಲಿ ಸ್ವಲ್ಪ ಹೆಚ್ಚಿನ ಹೊಣೆಗಾರಿಕೆ ಮೂಡುವಂತೆ ಆಯಿತು.

ಸಾರ್ವಜನಿಕ ಹಿತದ ಯಾವುದಾದರೂ ಕಾರ್ಯ ಆಗಬೇಕಿದ್ದರೆ ಬೇರಾರದೇ ಪ್ರೇರಣೆಗಾಗಲಿ ಪ್ರೋತ್ಸಾಹಕ್ಕಾಗಲಿ ಬೆಂಬಲಕ್ಕಾಗಲಿ ಕಾಯದೆ ತಾವಾಗಿ ಮುನ್ನುಗ್ಗುತ್ತಿದ್ದುದು ಶಾಮಣ್ಣನವರ ಸ್ವಭಾವ. ಅಂತಹ ಸಂದರ್ಭ ಇದ್ದಾಗಲೂ 'ಕಾದು ನೋಡೋಣ, ಏನಾದರೂ ದಾರಿ ಆದೀತು' ಎಂದು ದೀರ್ಘಸೂತ್ರತೆಗೆ ಒಳಗಾಗುವವರೇ ಅಧಿಕ ಮಂದಿ. ಆ ಪ್ರವೃತ್ತಿಗೆ ಶಾಮಣ್ಣನವರು ಪೂರ್ತಿ ಹೊರತಾದವರು. ಬೆಂಗಳೂರಿಗೆ

ನೀರಿನ ಒದಗಣೆಗೆ ಕಾವೇರಿ ಯೋಜನೆಯನ್ನು ಕ್ಷಿಪ್ರಗೊಳಿಸುವುದೊಂದೇ ಪರಿಹಾರ ಎಂದು ಮನಗಂಡು ಅದಕ್ಕಾಗಿ ಆರಂಭದಿಂದಲೇ ಆಗ್ರಹಿಸಿದ್ದವರು ಶಾಮಣ್ಣ.

ಶಾಮಣ್ಣ ನಗರಸಭೆಯ ಹಣಕಾಸು ಮತ್ತು ತೆರಿಗೆ ಸ್ಥಾಯೀಸಮಿತಿಯ ಅಧ್ಯಕ್ಷರಾಗಿದ್ದಾಗ ನಗರಸಭೆಯ ಇತಿಹಾಸದಲ್ಲಿಯೆ ಮೊತ್ತಮೊದಲ ಬಾರಿಗೆ ಆಯವ್ಯಯಪತ್ರವನ್ನು ಕನ್ನಡದಲ್ಲಿ ಮಂಡಿಸಿದರು. ಶಾಮಣ್ಣ ಸ್ವಯಂಸ್ಫೂರ್ತಿಯಿಂದ ಮಾಡಿದ ಇಂತಹ ಅನೇಕ ಸಾಧನೆಗಳು ಚರಿತ್ರಾರ್ಹವೆನಿಸಿದವು.

ನಗರಸಭಾಸದಸ್ಯರಾಗಿ ಮತ್ತು ವಿಧಾನಸಭಾಸದಸ್ಯರಾಗಿ ಶಾಮಣ್ಣನವರ ಸಾಧನೆಗಳು ಜನಜನಿತವಾದವು. 1957ರಲ್ಲಿ ಶಾಮಣ್ಣನವರು ಪ್ರತಿನಿಧಿಸಿದ್ದುದು ಕಾಂಗ್ರೆಸ್ ಪಕ್ಷವನ್ನು. ಆದರೆ ಆಮೇಲಿನ ದಿನಗಳಲ್ಲಿ ಕಾಂಗ್ರೆಸ್ ಧೋರಣೆಗಳಿಂದ ಭ್ರಮನಿರಸನಗೊಂಡು 'ಪೌರಸಮಿತಿ'ಯ ಪ್ರಮುಖ ಪ್ರವರ್ತಕರಾದರು. ಅನಂತರದ ಕಾಲದಲ್ಲಿ ಜನತಾಪಕ್ಷ ಸೇರಿದರು.

ಕಾಂಗ್ರೆಸ್ ಸರ್ಕಾರ ನಿಷ್ಕಾರಣವಾಗಿ ನಗರಸಭೆಯನ್ನು ಅಮಾನತ್ತುಗೊಳಿಸಿದುದು ಶಾಮಣ್ಣನವರನ್ನು ಕ್ರುದ್ಧರಾಗಿಸಿತು. ಅದರ ವಿರುದ್ಧ ತೀಕ್ಷ್ಣ ಹೋರಾಟ ನಡೆಸಿದರು.

ವಿಧಾನಸಭಾಸದಸ್ಯ

ಗಣನೀಯ ಪ್ರಮಾಣದ ಜನರ ಬೆಂಬಲ ಪ್ರಕಟಗೊಳ್ಳದ ಸಂದರ್ಭಗಳಲ್ಲಿಯೂ ಶಾಮಣ್ಣನವರು ಏಕಾಂಗಿಯಾಗಿಯೆ ತಮಗೆ ನ್ಯಾಯವೆನಿಸಿದ ಉದ್ದೇಶಗಳಿಗಾಗಿ ಹೋರಾಟ ನಡೆಸಲು ಹಿಂದೆಗೆಯುತ್ತಿರಲಿಲ್ಲ. ಹೀಗೆ ವಿಧಾನಸಭೆಯಲ್ಲಿ ಒಮ್ಮೆ ಆಸ್ತಿ ತೆರಿಗೆ ಹೆಚ್ಚಳವನ್ನು ವಿರೋಧಿಸಿ ಒಬ್ಬರೇ ವಿಧಾನಸೌಧದ ಮುಂಗಟ್ಟಿನಲ್ಲಿ ಧರಣಿ ನಡೆಸಿ ಸರ್ಕಾರವು ಉದ್ದಿಷ್ಟ ಹೆಚ್ಚಳವನ್ನು ಕೈಬಿಡುವಂತೆ ಮಾಡಿದರು. ಸ್ವಯಂ ಆಗಿನ ಮುಖ್ಯಮಂತ್ರಿಗಳೇ ಬಂದು ಕೈಜೋಡಿಸಿ ಅವರನ್ನು ಓಲೈಸಿದರು.

1968ರಲ್ಲಿ ಕೋಟೆ ಕ್ಷೇತ್ರದಿಂದ ಶಾಮಣ್ಣ ಅನಾಯಾಸವಾಗಿಯೆ ವಿಧಾನಸಭಾ ಸದಸ್ಯರಾಗಿ ಆಯ್ಕೆಯಾದರು. 1971ರಲ್ಲಿ ಹಿಂದಿಗಿಂತ ಹೆಚ್ಚು ಮತಗಳನ್ನು ಗಳಿಸಿ ಚುನಾಯಿತರಾದರು. 1978ರ ವಿಧಾನಸಭೆಯ ಚುನಾವಣೆಯಲ್ಲಿ ಶಾಮಣ್ಣನವರು ಇಡೀ ರಾಜ್ಯದಲ್ಲಿಯೆ ಅತ್ಯಧಿಕ ಮತಗಳನ್ನು ಗಳಿಸಿ ಆಯ್ಕೆಗೊಂಡದ್ದು ಇತಿಹಾಸವನ್ನೇ ನಿರ್ಮಿಸಿತು. ಅದು ಕರ್ನಾಟಕದ ರಾಜಕೀಯ ಇತಿಹಾಸದಲ್ಲಿಯೇ ಒಂದು ದೊಡ್ಡ ದಾಖಲೆಯಾಗಿ ಉಳಿದಿತ್ತು.

ಅವರ ಗೆಲವು ಬಹುತೇಕ ನಿಶ್ಚಿತವೇ ಆಗಿದ್ದರೂ ಜನಜಾಗೃತಿಯ ದೃಷ್ಟಿಯಿಂದ ಚುನಾವಣೆಗೆ ಮೊದಲು ಒಂದಷ್ಟು ಪ್ರಚಾರ ಅವಶ್ಯ ಬೀಳುತ್ತದಷ್ಟೆ. ಆ ಕಾರ್ಯಕ್ಕಾಗಿ

(ಮೇಲಿನ ಚಿತ್ರ) ಜವಾಹರಲಾಲ್ ನೆಹರು ಅವರು ಬೆಂಗಳೂರಿಗೆ ಭೇಟಿ ನೀಡಿದಾಗ ಅವರೊಡನೆ ಮಾತುಕತೆಯಲ್ಲಿ ಟಿ.ಆರ್.ಶಾಮಣ್ಣ (1962).

(ಕೆಳಗಿನ ಚಿತ್ರ) ನ್ಯಾಷನಲ್ ಕೋ–ಆಪರೇಟಿವ್ ಬ್ಯಾಂಕಿನ ಸಂಸ್ಥಾಪಕ ವೈ.ವಿ. ಕೇಶವಮೂರ್ತಿಯವರೊಡನೆ ಟಿ. ಆರ್. ಶಾಮಣ್ಣ.

ಶಾಮಣ್ಣನವರು ಬೆಳಗ್ಗೆ ಹೊರಡುವಾಗ ಅವರೊಡನೆ ಸ್ವಸಂತೋಷದಿಂದ ಸೇರಿಕೊಳ್ಳುತ್ತಿದ್ದ ಯುವಕರಲ್ಲಿ ಒಬ್ಬೊಬ್ಬರದೂ ತಿಂಡಿ-ಕಾಫಿ ಆಗಿದೆಯೇ ಎಂದು ಶಾಮಣ್ಣನವರು ತಪ್ಪದೆ ವಿಚಾರಿಸುತ್ತಿದ್ದರು. ಅನಂತರವೇ ಮನೆಮನೆ ಭೇಟಿ, ಇತ್ಯಾದಿ.

ಸಾಮಾನ್ಯವಾಗಿ ರಾಜಕೀಯ ಪಕ್ಷಗಳವರು ಚುನಾವಣಾ ಪ್ರಚಾರಕ್ಕೆ ಗುಂಪು ಕಟ್ಟಿಕೊಂಡು ಹೋದಾಗ ಅದೊಂದು ಕಟ್ಟಳೆಯೆಂಬಂತೆ ನಡೆಯುತ್ತದೆ. ಆದರೆ ಶಾಮಣ್ಣನವರು ಪ್ರಚಾರಕ್ಕೆ ಹೊರಟರೆಂದರೆ ಮನೆಮನೆಯಲ್ಲಿಯೂ ಜನರು ಅವರನ್ನು ಅತ್ಯಂತ ಗೌರವಾದರಗಳಿಂದ ಸ್ವಾಗತಿಸುತ್ತಿದ್ದರು. ಹೆಚ್ಚಿನೆಡೆಗಳಲ್ಲಿ 'ನಮಗೆ ಮತ ಹಾಕಿ' ಎಂದು ಶಾಮಣ್ಣನವರು ಹೇಳಬೇಕಾದ ಪ್ರಸಂಗವೇ ಬರುತ್ತಿರಲಿಲ್ಲ. ಅವರ ಕಾರ್ಯಕರ್ತ ತಂಡಕ್ಕಿಂತ ಬಹುಪಾಲು ಹೆಚ್ಚಿನ ಸಾರ್ವಜನಿಕರೇ ಅವರ ಪರವಾಗಿ ಪ್ರಚಾರ ಮಾಡುತ್ತಿದ್ದರು.

ಶಾಮಣ್ಣನವರಲ್ಲಿ ಯಾವುದೇ ಅಂತರ್ದ್ವಂದ್ವಗಳಾಗಲಿ ಗೊಂದಲಗಳಾಗಲಿ ಇರುತ್ತಿರಲಿಲ್ಲ. ಒಂದು ಅಸೆಂಬ್ಲಿ ಚುನಾವಣೆಯಲ್ಲಿ ಬೇರೊಂದು ಪಕ್ಷದಿಂದ ಅಭ್ಯರ್ಥಿಯಾಗಿದ್ದ ಎನ್. ಲಕ್ಷ್ಮಣರಾಯರು ಶಾಮಣ್ಣನವರಿಗೆ ತುಂಬಾ ಗೌರವಕ್ಕೆ ಪಾತ್ರರಾಗಿದ್ದವರು. ಆದರೂ ಶಾಮಣ್ಣನವರು ತಮ್ಮ ಪಕ್ಷದ ಉಮೇದುವಾರರಾಗಿದ್ದ ಎಚ್. ಎಲ್. ತಿಮ್ಮೇಗೌಡರ ಪರವಾಗಿ ಓಡಾಡಿ ಪ್ರಚಾರ ಮಾಡಿ ಅವರ ಗೆಲವಿಗೆ ಕಾರಣರಾದರು.

1977ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಉಮೇದುವಾರರೂ ನಿಶ್ಚಿತವಾಗಿ ಗೆಲ್ಲುವ ಭರವಸೆಯಿದ್ದ ಪ್ರತಿಷ್ಠಿತರೂ ಆಗಿದ್ದ ಮತ್ತು ಹಿಂದೆ ರಾಜ್ಯದ ಮುಖ್ಯಮಂತ್ರಿಯಾಗಿಯೂ ಕೀರ್ತಿವಂತರಾಗಿದ್ದ ಕೆಂಗಲ್ ಹನುಮಂತಯ್ಯನವರು ಕಣದಲ್ಲಿ ಇದ್ದರು. ಆ ಹಿನ್ನೆಲೆ ಇದ್ದೂ ಶಾಮಣ್ಣನವರು ಜನತಾಪಕ್ಷದ ಅಭ್ಯರ್ಥಿ ನ್ಯಾಯಮೂರ್ತಿ ಕೆ. ಸದಾನಂದ ಹೆಗ್ಡೆ ಅವರ ಪರವಾಗಿ ಪ್ರಭಾವೀ ಪ್ರಚಾರ ನಡೆಸಿ ಅವರ ಗೆಲವಿಗೆ ಮುಖ್ಯ ಕಾರಣರಾದದ್ದು ಎಲ್ಲೆಡೆ ಅತ್ಯಾಶ್ಚರ್ಯದ ವಿಷಯವೆನಿಸಿತು.

* * *

ಅಧ್ಯಯನ; ದೃಢಿಷ್ಠ ಮಂಡನೆ

ಶಾಮಣ್ಣನವರು ಸದಸ್ಯರಾಗಿದ್ದ ಅವಧಿಯಲ್ಲಿ ನಗರಸಭೆಯಲ್ಲಿಯೂ ವಿಧಾನಸಭೆಯಲ್ಲಿಯೂ ಅತ್ಯಂತ ಸಕ್ರಿಯ ಸದಸ್ಯರೆನಿಸಿದ್ದರು. ಯಾವುದೇ ಮುಖ್ಯ ವಿಷಯ ಚರ್ಚೆಗೆ ಬಂದಾಗ 'ಶಾಮಣ್ಣನವರು ಏನು ಹೇಳುತ್ತಾರೋ ಕೇಳೋಣ' ಎಂದು ಸದಸ್ಯರೆಲ್ಲ ಎದುರುನೋಡುತ್ತಿದ್ದರು. ಯಾವುದೇ ವಿಷಯವನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿ ತಮ್ಮ ಅಭಿಪ್ರಾಯವನ್ನು ದೃಢವಾದ ಸ್ವರದಲ್ಲಿ

ಪ್ರತಿಪಾದಿಸುತ್ತಿದ್ದವರು ಶಾಮಣ್ಣ. ಶಿಕ್ಷಣದಿಂದ ಸಾರಿಗೆಯವರೆಗೆ, ತೆರಿಗೆ ನೀತಿಯಿಂದ ನಾಗರಿಕ ಸೇವೆಗಳವರೆಗೆ ಅವರು ಸ್ಪರ್ಶ ಮಾಡದ ವಿಷಯ ಯವುದೂ ಇರಲಿಲ್ಲ. ತಮ್ಮ ನಿಲವು ಸಪ್ರಮಾಣವಾಗಿದೆ ಎನಿಸಿದ ಮೇಲೆ ಎಂತಹ ಪ್ರಬಲ ವಿರೋಧವನ್ನೂ ಲೆಕ್ಕಿಸದೆ ಮುನ್ನಡೆಯುತ್ತಿದ್ದರು. ಅಧಿಕಾರಿಗಳ ಮೇಲೆ ಒಮ್ಮೊಮ್ಮೆ ಟೀಕಾಸ್ತ್ರಗಳನ್ನು ಪ್ರಯೋಗಿಸಿದರೂ, ಅವರಿಂದ ಒಳ್ಳೆಯ ಕೆಲಸ ಆಗುತ್ತಿರುವುದು ಕಂಡಾಗ ಪ್ರಶಂಸೆ ಮಾಡಲೂ ಮುಂದಾಗುತ್ತಿದ್ದುದು ಅವರ ಔದಾರ್ಯ. ಹಲವು ಭಾಗಗಳಲ್ಲಿ ನೀರ ಹರಿವಿನ ಸಾಗಣೆಗೆ ಸಂಬಂಧಿಸಿದ ಕಾಮಗಾರಿಗಳನ್ನು ದಕ್ಷವಾಗಿ ಮಾಡುತ್ತಿದೆಯೆಂದು ಲೋಕೋಪಯೋಗಿ ಇಲಾಖೆಯನ್ನು ಪ್ರಶಂಸೆ ಮಾಡಿದರು.

ಅಲಕ್ಷ್ಯಕ್ಕೆ ಗುರಿಯಾಗಿದ್ದ ಬೆಂಗಳೂರು–ಮಾಗಡಿ ರಸ್ತೆಯ ಭಿಕ್ಷುಕರ ಕಾಲೊನಿಯ ಉಜ್ಜೀವನವು ಸಮರ್ಥರೂ ಅನುಕಂಪಸ್ವಭಾವದವರೂ ಆದವರಿಂದ ಮಾತ್ರ ಸಾಧ್ಯವೆನಿಸಿ ಮುಖ್ಯಮಂತ್ರಿ ದೇವರಾಜ ಅರಸು ಅವರು ಆ ಕೆಲಸಕ್ಕೆ ಶಾಮಣ್ಣನವರನ್ನು ನಿಯುಕ್ತಿ ಮಾಡಿದರು. ತಮ್ಮಲ್ಲಿ ಮುಖ್ಯಮಂತ್ರಿಗಳು ಇರಿಸಿದ್ದ ಭರವಸೆಯನ್ನು ಶಾಮಣ್ಣ ಸುಳ್ಳುಮಾಡಲಿಲ್ಲ.

ಕೊಳಚೆಪ್ರದೇಶಗಳ ವಾಸ್ತವ ಸ್ಥಿತಿ, ವಿದ್ಯುಚ್ಛಕ್ತಿಯ ಸೋರಿಕೆ, ರೇಷನಿಂಗ್ ವಹಿವಾಟಿನ ಯಥಾರ್ಥಸ್ಥಿತಿ, ರಾಜ್ಯಸರ್ಕಾರದ ಆಯವ್ಯಯ ವಿನ್ಯಾಸ ಮೊದಲಾದ ಹಲವಾರು ವಿಷಯಗಳ ಬಗೆಗೆ ಶಾಮಣ್ಣನವರು ಅಧಿಕಾರಯುತವಾಗಿ ಮಾತನಾಡುತ್ತಿದ್ದರು. ಬೇರೆಯವರು ಬಹಿರಂಗವಾಗಿ ಪ್ರಸ್ತಾವಿಸಲು ಸಂಕೋಚಪಡುತ್ತಿದ್ದ ಲಂಚಗುಳಿತನ, ಅಕ್ರಮ ಪ್ರೊಮೋಷನ್ ಮತ್ತು ವರ್ಗಾವಣೆಗಳು, ಅನಾವಶ್ಯಕ 'ಸೆಲೆಕ್‌ಶನ್ ಪೋಸ್ಟ್'ಗಳ ಸೃಷ್ಟಿ – ಇಂತಹ ಅಪವ್ಯವಹಾರಗಳ ಬಗೆಗೆ ಶಾಮಣ್ಣನವರು ನಿರ್ಭಿಡೆಯಾಗಿ ಮಾತನಾಡುತ್ತಿದ್ದರು. ಅವರಲ್ಲಿ ನಿಃಸ್ಪೃಹತೆ ಇದ್ದುದರಿಂದ ಎಂತಹ ಪ್ರತಿಷ್ಠಿತರನ್ನೂ ಟೀಕಿಸಲು ಹೆದರುತ್ತಿರಲಿಲ್ಲ. ನಿದರ್ಶನಕ್ಕೆ : ವಿಧಾನಸಭೆಯಲ್ಲಿ ಮಹಾಜನ್ ವರದಿ ಕುರಿತು ಚರ್ಚೆ ನಡೆದಿದ್ದಾಗ ಎಸ್. ನಿಜಲಿಂಗಪ್ಪನವರ ಮೇಲೆಯೆ ಶಾಮಣ್ಣ ವಾಗ್ಬಾಣ ಹರಿಸಿದ್ದರು, ಹೀಗೆ :

"ಅನೇಕ ಮಿತ್ರರು ಕೇಂದ್ರದಲ್ಲಿ ಎಲ್ಲಿಯವರೆಗೆ ಚವ್ಹಾಣ್ ಅವರು ಗೃಹಮಂತ್ರಿಗಳಾಗಿರುತ್ತಾರೆಯೋ ಅಲ್ಲಿಯವರೆಗೆ ನ್ಯಾಯ ಸಿಕ್ಕುವುದಿಲ್ಲ ಎಂದು ಹೇಳುತ್ತಾರೆ. ಅದರ ಬಗ್ಗೆ ಸಾಕಾದಷ್ಟು ಮಾತನಾಡಿದ್ದಾರೆ. ನಾನು ಈ ಸಂದರ್ಭದಲ್ಲಿ ಹೇಳಬೇಕಾದರೆ – ನಮ್ಮ ಮುಖ್ಯಮಂತ್ರಿಗಳಾದ ಮಾನ್ಯ ನಿಜಲಿಂಗಪ್ಪನವರು ಕೂಡ ಇದರಲ್ಲಿ ಕೈಹಾಕದೆಹೋದರೆ, ಇದಕ್ಕೂ ನನಗೂ ಸಂಬಂಧವಿಲ್ಲ ಎಂದು ಬೇರೆ ಯಾರಿಗಾದರೂ ಇದನ್ನು ವಹಿಸಿದರೆ ಆಗ ಕೆಲಸ ಸುಸೂತ್ರವಾಗಿ ನಡೆಯುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಶ್ರೀ ನಿಜಲಿಂಗಪ್ಪನವರು ಒಳ್ಳೆಯವರು; ಅವರನ್ನು ನಾಡಿನ

ನಾಯಕರು ಎಂದು ಹೇಳುವುದಕ್ಕಾಗುವುದಿಲ್ಲ. ಗೋವಾ ಸಮಸ್ಯೆ ಬಂದಾಗ ಒಂದು ನಿಲವು ಹೇಳಿದರು; ಅದನ್ನು ಕೈಬಿಟ್ಟರು. ಮಹಾಜನ್ ಕಮಿಷನ್ ನೇಮಕದ ವಿಷಯ ಬಂದಾಗ ಅದನ್ನು ಒಪ್ಪಿಕೊಳ್ಳುವುದಿಲ್ಲ ಎಂದು ಹೇಳಿದರು; ಆಮೇಲೆ ಅದನ್ನು ಒಪ್ಪಿಕೊಂಡರು. ಕಾಂಗ್ರೆಸ್ ಅಧ್ಯಕ್ಷಗಿರಿ ಬೇಡ ಎಂದು ಹೇಳುತ್ತಿದ್ದವರು ಅದನ್ನೂ ಒಪ್ಪಿಕೊಂಡರು. ಇವರು ಬಹಳ ಸುಲಭವಾಗಿ ಒಪ್ಪಿಕೊಳ್ಳುತ್ತಾರೆ. ಇವರು ಕಾಂಗ್ರೆಸ್ ಅಧ್ಯಕ್ಷರಾಗಿ ಹೋದ ಮೇಲೆ ಯಾವುದಾದರೂ ಒಂದು ಸಂದರ್ಭದಲ್ಲಿ ಮೈಸೂರಿನ ಹಿತವನ್ನು ಕೈಬಿಡಬಹುದು...... ಶ್ರೀ ಚವ್ಹಾಣ್ ಅವರನ್ನು ಹೇಗೆ ಗಡಿಸಮಸ್ಯೆಯಿಂದ ದೂರ ಇಡಬೇಕು ಎಂದು ಹೇಳುತ್ತಾರೆಯೋ ಅದೇ ಪ್ರಕಾರವಾಗಿ ಶ್ರೀ ನಿಜಲಿಂಗಪ್ಪನವರನ್ನೂ ದೂರ ಇಟ್ಟರೆ ಸಮಸ್ಯೆ ಬಗೆಹರಿಯುವುದಕ್ಕೆ ಅನುಕೂಲವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ."

ಹೀಗೆ ಹೇಳುವ ದಾರ್ಢ್ಯ ಇದ್ದದ್ದು ಶಾಮಣ್ಣನವರಲ್ಲಿ ಮಾತ್ರ.

ನಿರ್ಭೀತಿ

ನಾಜೂಕುತನಕ್ಕೆ ಪಕ್ಕಾಗದೆ ಕಡ್ಡಿಮುರಿದಂತೆ ಮಾತನಾಡುವುದೇ ಶಾಮಣ್ಣನವರ ರೀತಿಯಾಗಿತ್ತು. ಬೆಳಗಾವಿಯ ಬಗೆಗೆ ಸದನದಲ್ಲಿ ಅವರು ಮಾತನಾಡಿದುದು ಈ ಧಾಟಿಯಲ್ಲಿ :

"ಮಹಾರಾಷ್ಟ್ರದವರಿಗೆ ಈಗ ಬೇಕಾಗಿದ್ದುದೆಲ್ಲ ಸಿಕ್ಕಿದೆ. ಇನ್ನು ಬೇಕಾದದ್ದು ಬೆಳಗಾಂ. ಬೆಳಗಾಂ ಸಿಕ್ಕಿದ ಮೇಲೆ ಕಾರವಾರ ಕೇಳುತ್ತಾರೆ. ಅದಾದ ಮೇಲೆ 'ಒಂದಾನೊಂದು ಕಾಲದಲ್ಲಿ ಶಾಹಜಿ ಬೆಂಗಳೂರಿನಲ್ಲಿ ಆಳುತ್ತಿದ್ದ. ಅದನ್ನು ಕೂಡ ನಮಗೇ ಕೊಡಿ' ಎಂದು ಕೇಳುವ ಜನ ಅವರು! ಅವರು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಅವಕಾಶ ಕೊಡುವುದಿಲ್ಲ. ಅಂಥವರ ಜೊತೆಯಲ್ಲಿ ಇದು ಆಖೈರು ತೀರ್ಮಾನ ಎಂದು ಹೇಳಿದರೂ ಏನೂ ಆಗುವುದಿಲ್ಲ ಎಂದು ನನ್ನ ನಂಬಿಕೆ. ಅವರ ವಾದ ತಿರುಳಿಲ್ಲದ ವಾದ. ಅವರ ವಾದದಂತೆ ಹೋದರೆ ಬೆಂಗಳೂರನ್ನು ಮದ್ರಾಸಿಗೆ ಸೇರಿಸಿ ಎಂದು ತಮಿಳರು ಕೇಳಬಹುದು. ಬೆಂಗಳೂರಿನಲ್ಲಿ ಕಂಟೋನ್ಮೆಂಟ್ ಇದ್ದ ಹಾಗೆ ಬೆಳಗಾಂನಲ್ಲಿಯೂ ಇತ್ತು. ಬೆಂಗಳೂರು ಕಂಟೋನ್ಮೆಂಟಿನಲ್ಲಿ 80 ಪಾಲು ತಮಿಳರಿದ್ದಾರೆ. ಮಹಾರಾಷ್ಟ್ರದವರು ಬೆಳಗಾಂ ಬಗ್ಗೆ ಏನೇನು ವಾದ ಹೇಳುತ್ತಾರೆಯೋ ಅದರಂತೆ ಹೇಳುವುದಾದರೆ ನಮ್ಮ ಡಿ.ಎಂ.ಕೆ. ಮಿತ್ರರು ಬೆಂಗಳೂರು ಮದ್ರಾಸಿಗೆ ಸೇರಬೇಕು ಎಂದು ಹೇಳಬಹುದಲ್ಲವೆ? ಮಹಾರಾಷ್ಟ್ರದವರು ಹೇಳುವುದನ್ನೆಲ್ಲ ಒಪ್ಪಿಕೊಳ್ಳುತ್ತಬಂದರೆ ಏನಾಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕಾಗಿದೆ."

ದೃಢಮನಸ್ಕರಾಗಿದ್ದರೂ ಶಾಮಣ್ಣ ಸಂದರ್ಭವು ಅಪೇಕ್ಷಿಸಿದಾಗ ನಮ್ಯತೆ ತೋರಲೂ ಹಿಂದೆಗೆಯುತ್ತಿರಲಿಲ್ಲ. ಒಂದು ಕಾಲದಲ್ಲಿ ರಾಜ್ಯಕ್ಕೆ 'ಕರ್ನಾಟಕ' ಎಂಬ ಪುನರ್ನಾಮಕರಣಕ್ಕೆ ಒಪ್ಪದಿದ್ದರೂ ಆಮೇಲಿನ ಕಾಲದಲ್ಲಿ ಬದಲಾದ ಪರಿಸ್ಥಿತಿಯಲ್ಲಿ ಅದಕ್ಕೆ ಆಕ್ಷೇಪಿಸಬೇಕಾದದ್ದಿಲ್ಲ ಎಂಬ ನಿಲವನ್ನು ತಳೆದರು.

1975ರ ಆಗಸ್ಟ್ ತಿಂಗಳಲ್ಲಿ ಇಂದಿರಾ ಸರ್ಕಾರದ ತುರ್ತುಪರಿಸ್ಥಿತಿ ಘೋಷಣೆಗೆ ಅನುಮೋದನೆಯನ್ನು ಸೂಚಿಸುವ ಮಸೂದೆ ರಾಜ್ಯ ವಿಧಾನಸಭೆಯಲ್ಲಿ ಬಂದಾಗ ಶಾಮಣ್ಣನವರು ಮಾಡಿದ ಭಾಷಣ ಮಾರ್ಮಿಕವಾಗಿತ್ತು :

"ಒಂದು ಅಂಶವನ್ನು ಈ ಸಮಯದಲ್ಲಿ ಗಮನದಲ್ಲಿಟ್ಟುಕೊಳ್ಳಬೇಕು. ಈ ಹಿಂದೆ ಅನೇಕ ಡಿಕ್ಟೇಟರುಗಳು ಇದ್ದರು. ಸ್ಟ್ಯಾಲಿನ್, ಅಯೂಬ್‌ಖಾನ್, ಯಾಹ್ಯಾಖಾನ್ ಇವರೆಲ್ಲರೂ ಇದ್ದರು. ಇವತ್ತಿನ ಅಧಿಕಾರ ಮತ್ತು ಸ್ಥಾನಮಾನ ಶಾಶ್ವತವಾದುದಲ್ಲ. ಮನುಷ್ಯನೇ ಶಾಶ್ವತವಲ್ಲ. ಮನುಷ್ಯ ಏನಾಗುತ್ತಾನೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನಾವು ಇಂತಹ ಒಂದು ಮಸೂದೆಯನ್ನು ತೆಗೆದುಕೊಂಡು ಇದಕ್ಕೆ ಮುದ್ರೆ ಒತ್ತಿ ಕಳಿಸುವುದರಲ್ಲಿ ಏನಾದರೂ ಔಚಿತ್ಯ ಇದೆಯೆ? ಅದರಲ್ಲೂ ಕೂಡ ಬ್ರಿಟಿಷರು ನಮ್ಮ ಭಾರತ ಬಿಟ್ಟು ತೊಲಗಬೇಕು, ನಮಗೆ ಸ್ವಾತಂತ್ರ್ಯ ಬರಬೇಕು ಎಂದು ಹೋರಾಡಿದವರ ಪೈಕಿ, ಈ ರೀತಿ ಯಾವ ಕಾಲದಲ್ಲೂ ಕೂಡ ಇಂತಹ ಒಂದು ಪರಿಸ್ಥಿತಿಯನ್ನು ಕಾಣದೇ ಇರುವಾಗ ನಾನು ನಿಜವಾಗಿಯೂ ಕೂಡ ವ್ಯಥೆ ಪಡಬೇಕಾದ ಪರಿಸ್ಥಿತಿ ಈ ಸಂದರ್ಭದಲ್ಲಿ ಕಾಣುತ್ತಿದೆ.

"ಈ ರಾಷ್ಟ್ರದ ಆಡಳಿತವನ್ನು ಕಳೆದ 27 ವರ್ಷಗಳಿಂದ, 2 ವರ್ಷ ಶ್ರೀಮಾನ್ ಲಾಲ್‌ಬಹಾದುರ್ ಶಾಸ್ತ್ರಿಗಳು ಆಳಿದ್ದನ್ನು ಬಿಟ್ಟರೆ ಉಳಿದ 25 ವರ್ಷಗಳಲ್ಲೂ ಕೂಡ ನೆಹರು ಮನೆತನದವರೇ ನಡೆಸಿಕೊಂಡು ಬಂದಿದ್ದಾರೆ. 26 ವರ್ಷಗಳು ಹಾಗೆ ಬಿಟ್ಟು ಈಗ ಏಕ್‌ದಮ್ ಎಲ್ಲವನ್ನೂ ಸರಿಪಡಿಸುತ್ತೇವೆಂದು ಹೊರಟಿರತಕ್ಕದ್ದು ಎಷ್ಟು ಶೋಚನೀಯವಾಗಿ ಕಾಣಿಸುವುದಿಲ್ಲ? ನಾನು ಮಂತ್ರಿಪದವಿಗೆ ಆಸೆ ಪಡುವುದಿಲ್ಲ. ಪ್ರಧಾನಿ ಆಗುವುದಕ್ಕೆ ಮೊದಲೇ ಯೋಗ್ಯನಲ್ಲ. ಆದರೆ ಇಷ್ಟು ಮಾತ್ರ ಹೇಳಬಲ್ಲೆ. ಇಂಥ ಪರಿಸ್ಥಿತಿಯಲ್ಲಿ ಪ್ರೈಮ್‌ಮಿನಿಸ್ಟರ್ ಅಧಿಕಾರವನ್ನು ತಮ್ಮ ಕೈಯಲ್ಲೆ ಇಟ್ಟುಕೊಂಡಿರುವಾಗ, ಏತಕ್ಕೆ ದೇಶದ ಪರಿಸ್ಥಿತಿ ಹದಗೆಟ್ಟಿದೆ? ಆದಕಾರಣ ಅವರು ಆತ್ಮಶೋಧನೆ ಮಾಡಿಕೊಳ್ಳಬೇಕಾದುದು ಬಹಳ ಮುಖ್ಯವಾದುದು ಎಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಏಕೆಂದರೆ ಅವರು 1969ರಲ್ಲಿ ಅಧಿಕಾರಕ್ಕೆ ಬಂದಮೇಲೆ ರಾಷ್ಟ್ರದ ಬಗ್ಗೆ ಹೆಚ್ಚಾಗಿ ತಮ್ಮ ಸಂಗಡಿಗರನ್ನು ಸರಿಪಡಿಸದೆ, ಬಹುಕಾಲ ವಿಳಂಬ ಮಾಡಿ ಈಗ ಕಾರ್ಯಕ್ಕೆ ಇಳಿದಂತಿದೆ. ಮುಂದೆಯಾದರೂ ದೇಶಕ್ಕೆ ಕ್ಷೇಮವಾದರೆ ಸಂತೋಷಪಡುವವರ ಪೈಕಿ ನಾನು ಒಬ್ಬನೆಂದು ತಿಳಿದುಕೊಂಡಿದ್ದೇನೆ.....

"ಹಳೇ ಕಾಲದಿಂದ ಬಂದಿರುವಂತೆ ಎಕ್ಸಿಕ್ಯೂಟಿವ್ ಮತ್ತು ಜ್ಯುಡಿಷಿಯರಿ ಕೂಡಿ ಒಬ್ಬರೇ ಆಗಬಾರದು, ಜುಡಿಷಿಯರಿಯ ಮೇಲೆ ಎಕ್ಸಿಕ್ಯೂಟಿವ್‌ಗೆ ಅಧಿಕಾರ ಇರಬಾರದು ಎನ್ನುವುದನ್ನು ರಾಜಕಾರಣಿಗಳೂ ಅನೇಕ ಹಿರಿಯ ನಾಯಕರೂ ಒಂದೇ ಸಮನಾಗಿ ಹೇಳುತ್ತಿದ್ದರು. ಈಗ ಜುಡಿಷಿಯರಿಗೆ ಇರತಕ್ಕ ಎಲ್ಲ ಅಧಿಕಾರವನ್ನೂ ಮೊಟಕುಮಾಡಿ ಪ್ರತಿಯೊಂದು ಅಧಿಕಾರವನ್ನೂ ಎಕ್ಸಿಕ್ಯೂಟಿವ್ ತೆಗೆದುಕೊಂಡಿರತಕ್ಕದ್ದು ಬಹಳ ಶೋಚನೀಯವಾದುದು......."

ಈ ಧಾಟಿಯಲ್ಲಿ ದೀರ್ಘವಾಗಿ ಮಾತನಾಡಿದರು.

ಹೀಗೆ ತಮ್ಮ ಸಾರ್ವಜನಿಕ ಜೀವನದುದ್ದಕ್ಕೂ ನೇರ ಮಾತಿಗೂ ನೇರ ನಡೆಗೂ ಬದ್ಧರಾಗಿದ್ದ ಶಾಮಣ್ಣನವರು ಎಲ್ಲೆಡೆ ಅವನತಿ ತುಂಬಿರುವ ಇಂದಿನ ಸನ್ನಿವೇಶದಲ್ಲಿ ಓರ್ವ ಆದರ್ಶ ಅನುಕರಣೀಯ ನಾಯಕರಾಗಿ ಸ್ಮರಣೀಯರಾಗಿದ್ದಾರೆ.

1980ರ ಪ್ರತಿಕೂಲ ಸನ್ನಿವೇಶದ ಸಂಸತ್ ಚುನಾವಣೆಯಲ್ಲಿ ಜನತಾಪಕ್ಷದಿಂದ ಗೆದ್ದ ಏಕೈಕ ಅಭ್ಯರ್ಥಿಯಾಗಿ ಶಾಮಣ್ಣನವರು ಹೊಮ್ಮಿದುದು ಯಾರಿಗೂ ಅಚ್ಚರಿ ತರಲಿಲ್ಲ. ಆ ದಿನಗಳಲ್ಲಿ ಶಾಮಣ್ಣನವರಷ್ಟು ಅಸ್ಖಲಿತ ಪ್ರತಿಮೆ ಇದ್ದವರು ವಿರಳ.

* * *

ಗುಣೌನ್ನತ್ಯ

ಶಾಮಣ್ಣನವರ ಸಾರ್ವಜನಿಕ ಜೀವನದಂತೆ ಅವರ ವೈಯಕ್ತಿಕ ಗುಣೌನ್ನತ್ಯವೂ ಸ್ಮರಣೀಯವೇ ಆಗಿತ್ತು. ಅವರು ಯಾವುದೇ ಸಂದರ್ಭದಲ್ಲಿಯೂ ಅಪ್ರಾಮಾಣಿಕತೆ ಯನ್ನೂ ಅದಕ್ಷತೆಯನ್ನೂ ಸಹಿಸಿದವರಲ್ಲ. ಜನತೆಗೆ ನಾನು ಉತ್ತರಬಾಧ್ಯ ಎಂಬ ಪ್ರಜ್ಞೆಯಿಂದ ಎಂದೂ ದೂರಸರಿದವರಲ್ಲ. ಹೊರತೋರಿಕೆಗೆ ಗಡುಸೆನಿಸಿದರೂ ಅವರನ್ನು ಹತ್ತಿರದಿಂದ ಕಂಡವರಿಗೆ ಅವರ ಉದಾರ ಚಿಂತನೆಯ ಪರಿಚಯವಾಗುತ್ತಿತ್ತು.

ಮಿತವ್ಯಯ ಮೊದಲಾದ ಗುಣಗಳು ಅವರಲ್ಲಿ ರಕ್ತಗತವಾಗಿಬಿಟ್ಟಿದ್ದವು. ಪರಿಚಿತರಾರಾದರೂ ಅನಾವಶ್ಯಕ ಟೆಲಿಫೋನ್ ಮಾಡಿದರೆ "ಹೇಗೂ ಸಂಜೆ ಭೇಟಿಯಾಗುತ್ತಿದ್ದೆವಲ್ಲ? ಫೋನ್ ಮಾಡುವ ಆವಶ್ಯಕತೆ ಎಲ್ಲಿತ್ತು?" ಎಂದು ತರಾಟೆಗೆ ತೆಗೆದುಕೊಳ್ಳುತ್ತಿದ್ದರು. ಹೀಗೆ ಒಂದೊಂದು ಸಣ್ಣ ನಡವಳಿಯಲ್ಲಿಯೂ ಅವರ ಸ್ಫಟಿಕೋಪಮ ಚಾರಿತ್ರ ವ್ಯಕ್ತವಾಗುತ್ತಿತ್ತು. ಶಿಸ್ತು ಎಂದರೆ ಶಾಮಣ್ಣನವರು ಎಂಬ ಮನೋಮುದ್ರಿಕೆ ಅವರ ಪರಿಚಯಸ್ಥರಲ್ಲಿ ಮನೆಮಾಡಿತ್ತು.

ಸಾರ್ವಜನಿಕರಿಂದ ಪಡೆದ ಹಣ ಬೆಂಕಿಯಿದ್ದಂತೆ ಎಂದು ಭಾವಿಸುತ್ತಿದ್ದವರು ಶಾಮಣ್ಣ. ಅವರ ಅರ್ಧ ಶತಮಾನದಷ್ಟು ದೀರ್ಘಕಾಲದ ಸಾರ್ವಜನಿಕ ಸೇವೆಗಾಗಿ ಸಂಮಾನ ಮಾಡಿ ಅವರಿಗೆ ಸಾರ್ವಜನಿಕರು ಪ್ರೀತಿಯಿಂದ ನೀಡಿದ ರೂ. 2 ಲಕ್ಷ

ಉಡುಗೊರೆ ಹಣವನ್ನು ಶಾಮಣ್ಣನವರು ಆ ಸಮಾರಂಭದಲ್ಲಿಯೆ ಬಡ ವಿದ್ಯಾರ್ಥಿಗಳ ಸಹಾಯಕ್ಕಾಗಿ ದಾನ ಮಾಡಿ ಧನ್ಯರೆನಿಸಿದರು.

ತುರ್ತಿನ ಸಂದರ್ಭಗಳಲ್ಲಿ ಯಾರಿಗಾದರೂ ಸಾಲ ಕೊಡಿಸಿದಲ್ಲಿ ಅದರ ಮರುಪಾವತಿಯ ನಿಯಮಿತತೆಯನ್ನು ಅವರು ತಪ್ಪದೆ ಗಮನಿಸುತ್ತಿದ್ದರು.

ಅವರು ಆಡಳಿತ ಮಂಡಳಿಯ ಸದಸ್ಯರಾಗಿದ್ದ ಸಂಸ್ಥೆಗಳಲ್ಲಿ ಸಿಟ್ಟಿಂಗ್ ಫೀಸ್ ಮೊದಲಾದ ಸವಲತ್ತುಗಳಿಗೆ ಅವರು ಅರ್ಹರಾಗಿದ್ದರೂ ಅವನ್ನು ಯಾವ ಸಂಸ್ಥೆಯಿಂದಲೂ ಅವರು ತೆಗೆದುಕೊಂಡಂತೆ ನೆನಪಿಲ್ಲ.

ಶಾಮಣ್ಣನವರ ನಿಃಸ್ಪೃಹತೆ ಎಷ್ಟು ಜನಜನಿತವಾಗಿದ್ದಿತೆಂದರೆ ಯಾವುದೇ ಸಾರ್ವಜನಿಕ ಪ್ರಯಾಸದಲ್ಲಿ ಅವರು ಮುಂಚೂಣಿಯಲ್ಲಿ ಇದ್ದರೆ ಒಳ್ಳೆಯ ಕೆಲಸ ನಿಶ್ಚಿತವಾಗಿ ಆಗುತ್ತದೆ ಎಂಬ ಖಾತರಿ ಜನರ ಮನಸ್ಸುಗಳಲ್ಲಿ ಏರ್ಪಡುತ್ತಿತ್ತು. ಹೀಗೆ ಅವರಿಂದ ಪ್ರೇರಣೆಯನ್ನೂ ಪ್ರೋತ್ಸಾಹವನ್ನೂ ಪಡೆದು ಆರಂಭಗೊಂಡ ನ್ಯಾಷನಲ್ ಕೋ-ಆಪರೇಟಿವ್ ಬ್ಯಾಂಕ್ ಅಲ್ಪಕಾಲದಲ್ಲಿ ಜನಾನುರಾಗಕ್ಕೆ ಪಾತ್ರವಾಗಿ ವೈ. ವಿ. ಕೇಶವಮೂರ್ತಿ, ವಿ. ಎಸ್. ಕೃಷ್ಣ ಅಯ್ಯರ್ ಮೊದಲಾದವರ ನೇತೃತ್ವದಲ್ಲಿ ಪ್ರತಿಷ್ಠಿತ ಸಂಸ್ಥೆಯಾಗಿ ಬೆಳೆಯುತ್ತಹೋದದ್ದು ಸ್ವಾಭಾವಿಕ. (ಒಂದು ಹೃದ್ಯ ವಿವರ : ಭಾರತದರ್ಶನ ಪ್ರಕಾಶನದ 'ಮಹಾಭಾರತ', 'ರಾಮಾಯಣ' ಇತ್ಯಾದಿ ಗ್ರಂಥಸರಣಿಗಳನ್ನು ಕೊಳ್ಳಬಯಸಿದ ಸಾರ್ವಜನಿಕರಿಗೆ ಕಂತಿನ ರೂಪದ ಸಾಲವನ್ನು ಲಭ್ಯವಾಗಿಸಿದುದು ಈ ಬ್ಯಾಂಕ್!)

ಸ್ವಲ್ಪ ಗಡುಸಿನದೆಂದೇ ಹೊರತೋರಿಕೆಗೆ ಅನಿಸುತ್ತಿದ್ದ ಶಾಮಣ್ಣನವರ ಬಾಹ್ಯ ಆಕೃತಿಯ ಹಿಂದೆ ಇದ್ದದ್ದು ಮನಃಪಕ್ವತೆ, ಸೌಮ್ಯತೆ.

ತಾವೇ ನಿಯುಕ್ತಿಗೊಳಿಸಿದ ಕಿರಿಯರನ್ನು ನೋಡಬೇಕಾದಾಗಲೂ "ಅವರಿಗೆ ಬಿಡುವು ಇದ್ದರೆ ದಯವಿಟ್ಟು ಬರಲು ಹೇಳಿ" ಎಂದು ಸೌಜನ್ಯಪೂರ್ಣವಾಗಿ ಹೇಳಿಕಳಿಸುತ್ತಿದ್ದರು. ಇಂತಹ ದೈನಂದಿನ ಸಣ್ಣ ಸಂಗತಿಗಳಲ್ಲಿಯೂ ಅವರ ಸ್ವಭಾವಗತ ಪ್ರಬುದ್ಧತೆ ಕಾಣುತ್ತಿತ್ತು.

ಹತ್ತಾರು ಸಂಸ್ಥೆಗಳ ನಂಟು ಶಾಮಣ್ಣನವರಿಗೆ ಇದ್ದರೂ ಅವರು ಆ ಎಲ್ಲ ಸಂಸ್ಥೆಗಳ ವಿಶೇಷ ಕಾರ್ಯಕ್ರಮಗಳಿಗೆ ತಪ್ಪದೆ ಹೋಗಿ ಭಾಗವಹಿಸುತ್ತಿದ್ದರು.

ಒಮ್ಮೆ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಸಮಾವೇಶದಲ್ಲಿ ಊಟದ ಏರ್ಪಾಟು ಸೇರಿದ್ದಿತು. ಶಾಮಣ್ಣನವರದು ಆ ಕಾರ್ಯಕ್ರಮದ ವ್ಯವಸ್ಥೆಯಲ್ಲಿ ಭಾಗವಿದ್ದಿತು. ಆಗ ಅವರು ನೀಡಿದ ಸೂಚನೆ : "ಸ್ವಲ್ಪ ಹೆಚ್ಚಿಗೇ ಅಡಿಗೆ ಮಾಡಿಸೋಣ. ಪಕ್ಕದ ಅನಾಥಶಿಶುನಿವಾಸದ ಮಕ್ಕಳಿಗೆ ಊಟ ಕೊಡೋಣ." ಶಾಮಣ್ಣನವರ ಅಂತರಂಗಸ್ವಭಾವವನ್ನು ಇದರಿಂದ ಊಹಿಸಬಹುದು.

ವಿದ್ಯಾರ್ಥಿದಶೆಯಲ್ಲಿ ತಮಗೆ ಮಾರ್ಗದರ್ಶನ ಮಾಡಿದ್ದ ಕೆ. ಎಸ್. ಕೃಷ್ಣಯ್ಯರ್, ಕೆ. ಸಂಪದ್ಗಿರಿರಾವ್ ಮೊದಲಾದವರನ್ನು ಆಜೀವವೂ ಗೌರವಪೂರ್ಣವಾಗಿ ಸ್ಮರಿಸುತ್ತಿದ್ದರು.

ಡಿ.ವಿ.ಜಿ.ಯವರನ್ನು ಕಾಣಲು ಬಂದಾಗ ಶಾಮಣ್ಣ ಕೈ ಜೋಡಿಸಿ ತಲೆತಗ್ಗಿಸಿ ಅತ್ಯಂತ ನಮ್ರವಾಗಿ ಮೆಲುದನಿಯಲ್ಲಿ ಮಾತನಾಡುತ್ತಿದ್ದರು. ಡಿ.ವಿ.ಜಿ.ಯವರಿಗೆ ಅವರು ಪ್ರೀತಿಪಾತ್ರರಾಗಿದ್ದರು.

ಈಗ ಸಮಾಜದಲ್ಲಿ ಎದುರಾಗಿರುವ ದೊಡ್ಡ ಸಮಸ್ಯೆಯೆಂದರೆ ಯುವಕರಿಗೂ ರಾಜಕೀಯ ಅಭ್ಯರ್ಥಿಗಳಿಗೂ ಅನುಕರಣೀಯ ವ್ಯಕ್ತಿಗಳೆಂದು ಬೆರಳುಚಾಚಿ ತೋರಿಸಬಹುದಾದ ವ್ಯಕ್ತಿಗಳ ಅಲಭ್ಯತೆ. ಈ ಸ್ಥಿತಿಯಲ್ಲಿ ಟಿ. ಆರ್. ಶಾಮಣ್ಣನವರಂತಹ ವ್ಯಕ್ತಿಗಳು ನಮ್ಮ ನಡುವೆ ಹೇಗೆ ಬಾಳಿದರೆಂಬುದನ್ನು ಜನರಿಗೆ ತಿಳಿಸಿಕೊಡುವುದು ಪ್ರಯೋಜನಕರವಾದೀತು.

(ಈ ಲೇಖನದ ಸಂಯೋಜನೆಯಲ್ಲಿ ನೆರವಿತ್ತ ಆತ್ಮೀಯ ಮಿತ್ರರಾದ ಶ್ರೀ ಡಿ.ಎಂ. ಶಿವಣ್ಣ ಅವರಿಗೆ ಕೃತಜ್ಞನಾಗಿರುವೆ. – ಎಸ್.ಆರ್.ಆರ್.)

7. ಎಸ್. ಆರ್. ರಂಗನಾಥನ್

ಎರಡು ಪ್ರಸಂಗಗಳು ನೆನಪಾಗುತ್ತವೆ.

ಬಿಜಾಪುರ ಮೂಲದವರಾದ ರಾಘವೇಂದ್ರ ಖಾಸನೀಸ್ ಅವರು ಸಣ್ಣಕತೆಗಳ ಲೇಖಕರಾಗಿ ಕನ್ನಡ ಸಾಹಿತ್ಯಲೋಕಕ್ಕೆ ಪರಿಚಿತರು. ಮುಂಬಯಿಯಲ್ಲಿ ಸ್ನಾತಕೋತ್ತರ ಪದವಿಯನ್ನೂ ಗ್ರಂಥಾಲಯವಿಜ್ಞಾನ ಪದವಿಯನ್ನೂ ಪಡೆದು ಪುಣೆಯ ಕಾಲೇಜೊಂದರಲ್ಲಿ ಗ್ರಂಥಪಾಲಕ ಹುದ್ದೆಯಲ್ಲಿದ್ದರು. ಆ ಕಾಲದಲ್ಲಿ ಗ್ರಂಥಪಾಲಕನ ಮುಖ್ಯ ಕೆಲಸವೆಂದರೆ ಗ್ರಂಥಭಂಡಾರದ ಸಂಗ್ರಹದಲ್ಲಿದ್ದ ಪುಸ್ತಕಗಳಿಗೆ ಸರ್ಪಗಾವಲಾಗಿದ್ದು ಅವನ್ನು ಜೋಪಾನವಾಗಿ ರಕ್ಷಿಸುವುದು. ಕಾರ್ಖಾನೆ ಮೊದಲಾದೆಡೆ ಇರುವಂತೆ ಗ್ರಂಥಭಂಡಾರದಲ್ಲಿಯೂ ಪ್ರತಿವರ್ಷ ಸ್ಟಾಕ್‌ಟೇಕಿಂಗ್ ನಡೆಯುತ್ತಿತ್ತು. ಆ ಕಟ್ಟಳೆ ಹತ್ತಿರ ಬರುತ್ತಿದೆಯೆಂದರೆ ಗ್ರಂಥಪಾಲಕರಿಗೆ ಪ್ರಾಣವೇ ಕೈಗೆ ಬರುತ್ತಿತ್ತು. ಪ್ರತಿದಿನ ಗ್ರಂಥಗಳ ಎರವಲೂ ವಾಪಸಾತಿಯೂ ನಡೆದಿರುವಾಗ – ಎಷ್ಟೇ ಬಿಗಿ ವ್ಯವಸ್ಥೆ ಇದ್ದರೂ – ಎಲ್ಲೋ ಬೆರಳೆಣಿಕೆಯಷ್ಟು ಪುಸ್ತಕಗಳಿಗೆ ಲೆಕ್ಕ ಸಿಗದಿರುವುದು ವಿಶೇಷವೇನಲ್ಲ. ಆದರೆ ನಿಯಮಾವಳಿಯಂತೆ ಒಂದೇ ಪುಸ್ತಕ ಕಾಣೆಯಾಗಿದ್ದರೂ ಅದರ ಬೆಲೆಯನ್ನು ಗ್ರಂಥಪಾಲಕನು ತನ್ನ ಜೇಬಿನಿಂದಲೇ ಭರಿಸಬೇಕೆಂಬುದು ಸುಗ್ರೀವಶಾಸನವಾಗಿತ್ತು. ಇಂತಹ ಅನುದಾರ ವ್ಯವಸ್ಥೆ ಇದ್ದರೂ, ನೌಕರಿಗಳ ಲಭ್ಯತೆ ಕಡಮೆಯಿದ್ದ ಆ ದಿನಗಳಲ್ಲಿ ಕಡಮೆ ವೇತನದ್ದಾದರೂ ಗ್ರಂಥಪಾಲಕ ಹುದ್ದೆಗೆ ಜನ ಬರುತ್ತಿದ್ದರು. ಜೀವನ ನಡೆಯಬೇಕಲ್ಲ!

ಒಮ್ಮೆ ಹೀಗಾಯಿತು. ಹೆಚ್ಚು ಮಳೆಯ ಕಾರಣದಿಂದಲೋ ಏನೋ ಖಾಸನೀಸರಿದ್ದ ಗ್ರಂಥಾಲಯದ ಒಂದು ಭಾಗಕ್ಕೆ ನೀರು ನುಗ್ಗಿ ಒಂದಷ್ಟು ಪುಸ್ತಕಗಳು ನಷ್ಟವಾದವು. ಖಾಸನೀಸರ ಪಾಲಿಗೆ ಏಕಾದಶಿಯ ನಡುವೆ ಶಿವರಾತ್ರಿ ಬಂದಹಾಗಾಯಿತು. ಆದರೆ ಸುಂಕದವನು ಸುಖದುಃಖ ಕೇಳಿಯಾನೆ? ನಡೆದಿದ್ದ ದುರಂತಕ್ಕೆ ಪ್ರಕೃತಿವಿಕೋಪವು ಕಾರಣವಾಗಿತ್ತೆಂಬುದೂ ಆಡಳಿತ ಮಂಡಳಿಯ ಮನಸ್ಸನ್ನು ಕರಗಿಸಲಿಲ್ಲ. ನಷ್ಟವಾಗಿದ್ದ ಅಷ್ಟೂ ಪುಸ್ತಕಗಳ ಬೆಲೆಯನ್ನು ಖಾಸನೀಸರು ತುಂಬಬೇಕೆಂದು ಫರ್ಮಾನು ಹೊರಟಿತು. ನಿರ್ವಾಹವಿಲ್ಲದೆ ಖಾಸನೀಸರು ತಮ್ಮ ಪ್ರಾವಿಡೆಂಟ್ ಫಂಡಿನಲ್ಲಿ ಸಂಚಯಗೊಂಡಿದ್ದ ಅಷ್ಟೂ ಹಣವನ್ನು ಕಾಲೇಜಿಗೆ ಒಪ್ಪಿಸಿ ಕೈಮುಗಿದರು.

ಇನ್ನೊಂದು ದೃಶ್ಯ. ನಮ್ಮದೇ ಆದ ವಿಶ್ವವಿದ್ಯಾಲಯದ ಗ್ರಂಥಭಂಡಾರದ ಮುಖ್ಯ ವಿಭಾಗಗಳು ಮೇಲಿನ ಮಹಡಿಯಲ್ಲಿ ಇದ್ದವು. ಸ್ವಯಂ ಶ್ರೇಷ್ಠ ವಿದ್ವಾಂಸರೂ

ಆಗಿದ್ದ ಆಗಿನ ಗ್ರಂಥಪಾಲಕರ ಉಸ್ತುವಾರಿ ಎಷ್ಟು ಬಿಗಿಯಾಗಿರುತ್ತಿತ್ತೆಂದರೆ ಅವರ ಕಣ್ಣು ತಪ್ಪಿಸಿ ಯಾವ ವಿದ್ಯಾರ್ಥಿಗಳೂ ನೇರವಾಗಿ ಭಂಡಾರಕ್ಕೆ ಹೋಗುವಂತಿರಲಿಲ್ಲ. ಪ್ರವೇಶದ್ವಾರದ ಬಳಿಯೇ ಭೇಟಿಗಾರನು ತಾನು ಯಾರೆಂಬುದನ್ನೂ ತನಗೆ ಯಾವ ಪುಸ್ತಕ ಏಕಾಗಿ ಬೇಕಾಗಿದೆ ಎಂಬುದನ್ನೂ ಗ್ರಂಥಪಾಲಕರಿಗೆ ತಿಳಿಸಬೇಕಾಗಿತ್ತು. ಅವರನ್ನು ಒಪ್ಪಿಸಿದ ಮೇಲೆಯೇ ಮುಂದಿನ ಬಾಬ್ತು. ಆದರೆ ಇದರೊಡಗೂಡಿ ಹೇಳಬೇಕಾದ ಇನ್ನೊಂದು ವಿವರವೂ ಉಂಟು.

ಆ ಗ್ರಂಥಪಾಲಕರು ಭೇಟಿಗಾರನನ್ನು ಕುಳಿತಿರುವಂತೆ ಹೇಳಿ ತಾವೇ ಮೇಲೆ ಹೋಗಿ ಬೀಗ ತೆಗೆದು ಒಳಹೊಕ್ಕು ಬೇಕಾದ ಸಾಮಗ್ರಿಯನ್ನು ಕೈಯಲ್ಲಿ ಹಿಡಿದು ಮತ್ತೆ ಬೀಗ ಹಾಕಿ ಕೆಳಗೆ ಬಂದು ಭೇಟಿಗಾರನಿಗೆ ನೀಡಿ ಹೇಳುತ್ತಿದ್ದರು: "ಇಗೋ, ನೀನು ಕೇಳಿದ ಪುಸ್ತಕ ಇಲ್ಲಿದೆ. ಜೊತೆಗೆ ಇನ್ನೂ ಎರಡು ಪುಸ್ತಕಗಳನ್ನೂ ಕೊಡುತ್ತಿದ್ದೇನೆ, ತೆಗೆದುಕೊಂಡು ಹೋಗು. ಈ ಎರಡು ಪುಸ್ತಕಗಳಲ್ಲಿ ನೀನು ಕೇಳಿದ ವಿಷಯದ ಬಗೆಗೆ ಹೆಚ್ಚಿನ ಮಾಹಿತಿ ಸಿಗುತ್ತದೆ." ಹೀಗೆ ಆ ಗ್ರಂಥಪಾಲಕ ಮಹಾಶಯರಿಂದ ಉಪಕೃತರಾಗುತ್ತಿದ್ದವರು ಅನೇಕ ಮಂದಿ. ಆದರೆ ಆ ಕಣ್ಗಾವಲಿನ ಕ್ರಮದಿಂದಾಗಿ ತಾವೇ ನೇರವಾಗಿ ಎಲ್ಲ ಕಪಾಟುಗಳ ಜ್ಞಾನರಾಶಿಯನ್ನು ಕಣ್ಣಾರ ಕಂಡು ಕೈಯಾಡಿಸಿ ಆನಂದಿಸುವ ಭಾಗ್ಯ ದೊರೆಯುತ್ತಿದ್ದುದು ಕೆಲವರು ಪುಣ್ಯವಂತ ವಿದ್ಯಾರ್ಥಿಗಳಿಗಷ್ಟೆ.

ಈಗ್ಗೆ ಕೆಲವು ದಶಕಗಳ ಹಿಂದೆ ಗ್ರಂಥಾಲಯಗಳ ಪರಿಸರ ಹೇಗೆ ಇರುತ್ತಿತ್ತು ಎಂಬುದನ್ನು ಪರಿಚಯಿಸಲು ನಿದರ್ಶನಾರ್ಥ ಮೇಲಣ ಪ್ರಸಂಗಗಳನ್ನು ಸ್ಮರಿಸಿದ್ದಾಯಿತು.

ಅಂತಹ ಆವರಣ ನೀಗಿ ಗ್ರಂಥಾಲಯಗಳು ಹೆಚ್ಚು ದಕ್ಷವೂ ಜನಾನುಕೂಲಿಯೂ ಆಗಲು ಕಾರಣರಾದವರು ಪದ್ಮಶ್ರೀ ಡಾ॥ ಎಸ್.ಆರ್. ರಂಗನಾಥನ್ (9.8.1892–27.9.1972). ಅವರು ಭಾರತದಲ್ಲಿ ಮಾತ್ರವಲ್ಲದೆ ವಿದೇಶಗಳಲ್ಲಿಯೂ 'ಗ್ರಂಥಾಲಯ ವಿಜ್ಞಾನ ಪಿತಾಮಹ' ಎಂಬ ಮನ್ನಣೆಗೆ ಪಾತ್ರರಾದುದರಲ್ಲಿ ಅಚ್ಚರಿಯೇನಿಲ್ಲ. ಡಾ॥ ರಂಗನಾಥನ್ ಜನ್ಮದಿನಕ್ಕೆ ಸಮೀಪದ ಆಗಸ್ಟ್ 12ರ ದಿನಾಂಕ 'ಲೈಬ್ರೇರಿಯನ್ಸ್ ಡೇ' ಎಂದು ಅಂಕಿತಗೊಂಡಿದೆ. ಅಮೆರಿಕದ ಗ್ರಂಥಪಾಲಕರು ಡಾ॥ ರಂಗನಾಥನ್ ಅವರನ್ನು 'ಲೈಬ್ರೇರಿಯನ್ ಟು ದಿ ವರ್ಲ್ಡ್' ಎಂದು ಕರೆದಿದ್ದರು. ಅವರ ಜೀವಿತಾವಧಿಯನ್ನು ಗ್ರಂಥಾಲಯಗಳ ದೃಷ್ಟಿಯಿಂದ 'ರಂಗನಾಥನ್ ಏಜ್' ಎಂದೇ ಇಂಗ್ಲೆಂಡಿನ ಗ್ರಂಥಪಾಲಕ ಸಮುದಾಯ ಕರೆದಿತ್ತು. ಡಾ॥ ರಂಗನಾಥನ್ ಅವರು ಸಂವಹನಕಲೆಯ ಮೂರ್ತರೂಪವೇ ಆಗಿದ್ದರು – ಎಂದು ಅವರನ್ನು ಭೇಟಿ ಮಾಡಿದ ವಿದೇಶೀ ವಿದ್ವಾಂಸರು ಹೇಳಿದ್ದಿದೆ.

ಗ್ರಂಥಾಲಯಗಳ ಅನಿವಾರ್ಯತೆ

ನಮ್ಮ ದೇಶದಲ್ಲಿ ವಿವಿಧ ಕಡೆಗಳಲ್ಲಿ ಗ್ರಂಥಾಲಯಗಳು ಬಹಳ ಹಿಂದಿನಿಂದಲೇ ಇವೆ. ಪ್ರಮುಖ ಸಾಂಪ್ರದಾಯಿಕ ಅಥವಾ ಆಧುನಿಕ ವಿದ್ಯಾಕೇಂದ್ರಗಳಲ್ಲಂತೂ ಸಣ್ಣ ಪ್ರಮಾಣದ್ದಾದರೂ ಗ್ರಂಥಾಲಯ ಇರುವುದು ಅನಿವಾರ್ಯವೇ ಆಗಿದೆ. ಇಪ್ಪತ್ತನೇ ಶತಮಾನಕ್ಕೆ ಹಿಂದೆಯಂತೂ ಮುದ್ರಿತ ಪುಸ್ತಕಗಳು ದುರ್ಲಭವಾಗಿದ್ದವು. ಮುದ್ರಣೋದ್ಯಮ ವ್ಯಾಪಕವಾಗಿ ಹರಡಿದುದೂ ಹತ್ತೊಂಬತ್ತನೇ ಶತಮಾನದ ನಡುಭಾಗದಿಂದೀಚೆಗೇ. ದೇಶಭಾಷೆಗಳ ಪುಸ್ತಕಗಳ ಮುದ್ರಣಕ್ಕೆ ಅವಶ್ಯವಾದ ಅಚ್ಚಿನ ಮೊಳೆಗಳೂ ಬೇರೆಬೇರೆ ಭಾಷೆಗಳಲ್ಲಿ ವಿಕಾಸಗೊಳ್ಳತೊಡಗಿದುದು ಹತ್ತೊಂಬತ್ತನೇ ಶತಮಾನದ ಮೊದಲ ದಶಕಗಳ ತರುವಾಯವೇ. ಈ ಹಿನ್ನೆಲೆಯಲ್ಲಿ ಅತ್ಯುಪಯುಕ್ತವೆನಿಸಿದ್ದ ಹಲವು ಗ್ರಂಥಗಳೂ ಕಲ್ಲಚ್ಚಿನಲ್ಲಿ ಮುದ್ರಣಗೊಳ್ಳಬೇಕಾದ ಸ್ಥಿತಿ ಇದ್ದಿತು.

ಅಚ್ಚಿನ ಮೊಳೆ ಬಳಸಿದ ಸುಧಾರಿತ ಮುದ್ರಣ ರೀತಿಯು ದೇಶಭಾಷೆಗಳಿಗೆ ಒದಗಿಬಂದದ್ದು ಹತ್ತೊಂಬತ್ತನೇ ಶತಮಾನದ ಆರಂಭದಲ್ಲಿಯಷ್ಟೆ. ಅನಂತರವೂ ಹಲವಾರು ವರ್ಷಗಳವರೆಗೆ ಇಡೀ ದೇಶದಲ್ಲಿ ಇದ್ದವು ಬೆರಳೆಣಿಕೆಯಷ್ಟು ಮುದ್ರಣಾಲಯಗಳು. ಆಗ ಮತ್ತು ಅಲ್ಲಿಂದಾಚೆಯ ಎಪ್ಪತ್ತೆಂಬತ್ತು ವರ್ಷಗಳ ಅವಧಿಯಲ್ಲಿ ಒಳ್ಳೆಯ ಮುದ್ರಣಕಾಗದಕ್ಕೂ ಕೊರತೆಯಿತ್ತು; ಆದುದರಿಂದ ಎಷ್ಟೇ ಬೇಡಿಕೆಯಿದ್ದರೂ ಸಾವಿರಾರು ಸಂಖ್ಯೆಯಲ್ಲಿ ಪುಸ್ತಕಗಳನ್ನು ಮುದ್ರಿಸಲಾಗುವ ಸಂಭವವಿರಲಿಲ್ಲ. ಪುಸ್ತಕದ ಒಂದು ಮುದ್ರಿತ ಪ್ರತಿ ದೊರೆತರೆ ಅದನ್ನು ಹತ್ತಾರು ಮಂದಿ ತಮ್ಮ ಕೈಬರಹದಲ್ಲಿ ಪ್ರತಿ ಮಾಡಿರಿಸಿಕೊಂಡು ಬಳಸುತ್ತಿದ್ದರು. ಈ ಸನ್ನಿವೇಶದಿಂದಾಗಿಯೂ ಗ್ರಂಥಾಲಯಗಳ ಏರ್ಪಾಡು ಅನಿವಾರ್ಯವಾಗಿತ್ತು.

ಇಪ್ಪತ್ತನೇ ಶತಮಾನದ ಮೊದಲ ಪಾದದಿಂದೀಚಿನ ಕಾಲವನ್ನು ನಮ್ಮ ದೇಶದ ಗ್ರಂಥಾಲಯಪ್ರಸಾರ ದೃಷ್ಟಿಯಿಂದ ಸುವರ್ಣಯುಗವೆನ್ನಬಹುದು. ಆ ಅವಧಿಯಲ್ಲಿ ಗ್ರಂಥಾಲಯಗಳ ಬಳಕೆ ಅತಿಶಯವಾಗಿ ಬೆಳೆಯಿತು; ದೇಶದೆಲ್ಲೆಡೆ ಗ್ರಂಥಾಲಯಗಳು ಸ್ಥಾಪನೆಗೊಂಡಿದ್ದವು. ಹಿಂದೆ ಬಹುಮಟ್ಟಿಗೆ ಅನೌಪಚಾರಿಕ ರೀತಿಯಲ್ಲಿ ಇರುತ್ತಿದ್ದ ಗ್ರಂಥಾಲಯನಿರ್ವಹಣೆ ಈಗ ಹೆಚ್ಚು ವ್ಯವಸ್ಥಿತಗೊಂಡಿತ್ತು. ಅದೇ ಕಾಲಾವಧಿಯಲ್ಲಿ ಹೆಚ್ಚಿದ್ದ ಮುದ್ರಣಸೌಲಭ್ಯದಿಂದಾಗಿ ಗ್ರಂಥಪ್ರಕಟಣೆಯು ದೊಡ್ಡ ಉದ್ಯಮವಾಗಿ ಬೆಳೆದು ಒಂದೊಂದು ಭಾಷೆಯಲ್ಲಿಯೂ ಪ್ರತಿವರ್ಷ ನೂರಾರು ಸಂಖ್ಯೆಯ ಪುಸ್ತಕಗಳು ಪ್ರಕಾಶನಗೊಳ್ಳತೊಡಗಿದವು. ಅದನ್ನು ಒಂದು ಸ್ಫೋಟವೆಂದೇ ಕರೆಯಬಹುದು. ಖಾಸಗಿ ವ್ಯಕ್ತಿಗಳು ತಮ್ಮ ಆಸಕ್ತಿಕ್ಷೇತ್ರದ ಅಷ್ಟೂ ಪ್ರಕಟಿತ ಗ್ರಂಥಗಳನ್ನು ಸಂಗ್ರಹಿಸಿಟ್ಟುಕೊಳ್ಳುವ ಸಾಧ್ಯತೆಯೂ ಇರಲಿಲ್ಲ, ಆವಶ್ಯಕತೆಯೂ

ಇರಲಿಲ್ಲ. ಅಗ್ರಪಂಕ್ತಿಯ ಲೇಖಕಸಮುದಾಯಕ್ಕೂ ಗ್ರಂಥಾಲಯಗಳು ನಿತ್ಯೋಪಯೋಗಿ ಸಂಪನ್ಮೂಲಗಳಾಗಿದ್ದವು.

ಹೀಗೆ ಸಹಜವಾಗಿಯೆ ದೇಶದೆಲ್ಲೆಡೆ ಸಣ್ಣವೂ ದೊಡ್ಡವೂ ಗ್ರಂಥಾಲಯಗಳು ಬೆಳೆಯುತ್ತಹೋದವು. ಗ್ರಂಥಾಲಯಗಳು ಪ್ರಮುಖ ಜನಾಕರ್ಷಣಕೇಂದ್ರಗಳಾಗಿದ್ದವು. ಪ್ರತಿ ಗ್ರಂಥಾಲಯವೂ ಜನರಿಂದ ಗಿಜಿಗುಡುತ್ತಿತ್ತು. ಅಲ್ಲಿಯೆ ಕುಳಿತು ಪುಸ್ತಕಗಳನ್ನು ಓದುತ್ತಿದ್ದವರು ಹಲವರಾದರೆ ಎರವಲು ಒಯ್ಯುತ್ತಿದ್ದವರು ಇನ್ನಷ್ಟು ಮಂದಿ. ಶಿಕ್ಷಿತರಿರುವ ಬಡಾವಣೆಗಳಲ್ಲಿ ಸಣ್ಣ ಪ್ರಮಾಣದ 'ಸರ್ಕುಲೇಟಿಂಗ್ ಲೈಬ್ರರಿ'ಗಳೂ ಇರುತ್ತಿದ್ದವು.

ಗ್ರಂಥಾಲಯಗಳ ಸುವ್ಯವಸ್ಥೆ

ಯಾವುದೇ ಚಟುವಟಿಕೆ ಬೆಳೆದಂತೆ ಅದಕ್ಕೆ ಆಧಾರವಾದ ವ್ಯವಸ್ಥೆಯೂ ಬೆಳೆಯಬೇಕಾಗುತ್ತದಷ್ಟೆ. ಸಣ್ಣ ಪ್ರಮಾಣದ ಗ್ರಂಥಾಲಯಗಳಲ್ಲಿ ಸಂಗ್ರಹದಲ್ಲಿರುವ ಗ್ರಂಥಗಳ ಪಟ್ಟಿ, ಎರವಲು ಕೊಡುವುದನ್ನೂ ಹಿಂದಕ್ಕೆ ಪಡೆಯುವುದನ್ನೂ ಬರೆದಿಡುವ ದಾಖಲೆ ಪುಸ್ತಕ – ಇಷ್ಟು ವ್ಯವಸ್ಥೆ ಪರ್ಯಾಪ್ತವಾಗುತ್ತಿತ್ತು. ಆದರೆ ದೊಡ್ಡ ಪ್ರಮಾಣದ ಮತ್ತು ವೃತ್ತಿಪರ ಗ್ರಂಥಾಲಯಗಳಲ್ಲಿ ಹೆಚ್ಚಿನ ವ್ಯವಸ್ಥೆಯ ಆವಶ್ಯಕತೆ ಬೀಳುತ್ತಿತ್ತು – ಗ್ರಂಥಗಳ ವೈಜ್ಞಾನಿಕ ವರ್ಗೀಕರಣ, ದೈನಂದಿನ ವ್ಯವಹಾರಗಳ ಸಮರ್ಪಕ ದಾಖಲಾತಿ, ಓದುಗರಿಗೆ ಬೇಕಾಗುವ ಹೊಸ ಪುಸ್ತಕಗಳ ಸೇರ್ಪಡೆ – ಇತ್ಯಾದಿ.

ಈ ಆವಶ್ಯಕತೆಯನ್ನು ಗುರುತಿಸಿ ಗ್ರಂಥಾಲಯನಿರ್ವಹಣೆಯ ಎಲ್ಲ ಅಂಶಗಳನ್ನೂ ಪರಾಮರ್ಶಿಸಿ ದಕ್ಷವೂ ವ್ಯವಹಾರ್ಯವೂ ಆದ ವಿಧಾನಗಳನ್ನು ರೂಪಿಸಿ ಗ್ರಂಥಾಲಯವಿಜ್ಞಾನ ಪಿತಾಮಹರೆಂದು ಖ್ಯಾತರಾದವರು ಡಾ॥ ಎಸ್.ಆರ್. ರಂಗನಾಥನ್. ಅವರು 1931ರಲ್ಲಿ ರಚಿಸಿ ಹೊರತಂದ 'Five Laws of Library Science' ಒಂದು ಪಥದರ್ಶಕ ಕೃತಿಯೆಂದು ಗಮನ ಸೆಳೆದುದಲ್ಲದೆ ಎಲ್ಲೆಡೆ ಗ್ರಂಥಾಲಯನಿರ್ವಹಣೆ ಕುರಿತ ಚಿಂತನೆಯಲ್ಲಿಯೆ ಗಣನಾರ್ಹ ಪರಿವರ್ತನೆಯನ್ನು ತಂದಿತು.

ರಂಗನಾಥನ್ ಆವಿಷ್ಕರಿಸಿದ ಗ್ರಂಥಾಲಯವಿಜ್ಞಾನ–ಸಂಬಂಧಿತ ಸೂತ್ರಪಂಚಕ ಅತ್ಯಂತ ಸರಳವಾದುದು, ಸ್ವಯಂಸಿದ್ಧವಾದುದು. ಈ ಆಧಾರನಿಯಮಗಳನ್ನು ಮೊತ್ತಮೊದಲಿಗೆ ಸೂತ್ರೀಕರಿಸಿದವರು ಅವರು.

ಈ ಸೂತ್ರಗಳು:

1. ಪುಸ್ತಕಗಳು ಇರುವುದು ಬಳಕೆಗಾಗಿ.
2. ವಾಚಕನ ಸಮಯವನ್ನು ಉಳಿತಾಯ ಮಾಡಬೇಕು.

3. ಪ್ರತಿ ಪುಸ್ತಕಕ್ಕೂ ಯಾರೋ ಒಬ್ಬ ಓದುಗ ಇರುತ್ತಾನೆ.

4. ಪ್ರತಿ ಓದುಗನಿಗೂ ಯಾವುದೋ ಪ್ರತ್ಯೇಕ ಪುಸ್ತಕ ಬೇಕಾಗಿರುತ್ತದೆ.

5. ಗ್ರಂಥಾಲಯ ಒಮ್ಮೆ ಏರ್ಪಡಿಸಿ ಮುಗಿದ ವ್ಯವಸ್ಥೆಯಲ್ಲ; ಅದು ಸದಾ ವಿಕಸನಶೀಲ.

ರಂಗನಾಥನ್-ಪ್ರಣೀತ ಸೂತ್ರಪಂಚಕವು ಸಮಗ್ರತೆ, ಸಂಕ್ಷಿಪ್ತತೆ – ಎರಡೂ ಕಾರಣಗಳಿಂದ ಮಹತ್ತ್ವದ್ದೆನಿಸಿದೆ.

ಹೊರನೋಟಕ್ಕೆ ಈ ಸೂತ್ರಗಳು ಸರಳವಾದವೇ. ಆದರೆ ಅವುಗಳ ಅನುಸರಣೆ ಹಿಂದಿನ ಯುಗದಲ್ಲಿ ಎಲ್ಲೆಡೆ ಆಗುತ್ತಿತ್ತೆನ್ನಲಾಗದು. ಮೇಲೆ ಹೇಳಿದಂತೆ ಬಳಕೆಗಿಂತ ರಕ್ಷಣೆಯ ಕಡೆಗೇ ಗ್ರಂಥಪಾಲಕರ ಹೆಚ್ಚಿನ ಲಕ್ಷ್ಯ ಇರುತ್ತಿತ್ತು. ಎಲ್ಲ ಗ್ರಂಥಭಂಡಾರಗಳಲ್ಲಿಯೂ ಗ್ರಂಥಗಳು ವ್ಯವಸ್ಥಿತವಾಗಿ ವರ್ಗೀಕೃತವಾಗಿ ಇರುತ್ತಿರಲಿಲ್ಲ. ಹೀಗೆ ಹಲವೊಮ್ಮೆ ಅವಶ್ಯವಿರುವ ಪುಸ್ತಕ ಕ್ಷಿಪ್ರವಾಗಿ ದೊರೆಯುತ್ತಿರಲಿಲ್ಲ. ವ್ಯವಸ್ಥಾಪಕರ ದೃಷ್ಟಿಯಲ್ಲಿ ಅನುಪಯುಕ್ತವೆನಿಸಿ ತಿರಸ್ಕೃತಗೊಂಡ ಅಥವಾ ದುಷ್ಪ್ರಾಪ್ಯವಾದ ಎಷ್ಟೋ ಪುಸ್ತಕಗಳು ಯಾರೋ ಓದುಗರಿಗೆ ಅವಶ್ಯ ಬೀಳುತ್ತಿದ್ದವು. ಕಡೆಯದಾಗಿ ಒಂದು ಗ್ರಂಥಾಲಯ ಎಷ್ಟೋ ವರ್ಷಗಳ ಹಿಂದೆ ಸಂಗ್ರಹಗೊಂಡಿದ್ದುದಕ್ಕೆ ಮಿತವಾಗಿದ್ದಲ್ಲಿ ಅದು ಓದುಗರ ಆವಶ್ಯಕತೆಗಳನ್ನು ಪೂರೈಸಲು ಸಮರ್ಥವಾಗಲಾರದು. ಆಗಿಂದಾಗ ಹೊಸ ಪುಸ್ತಕಗಳ ಸೇರ್ಪಡೆಯಾಗುತ್ತಿದ್ದರೆ ಮಾತ್ರ ಗ್ರಂಥಾಲಯದ ಗರಿಷ್ಠ ಪ್ರಯೋಜನ ಲಭಿಸಬಲ್ಲದು.

ಇದರಷ್ಟೆ ಮುಖ್ಯವಾದ ಸಂಗತಿಯೆಂದರೆ ಓದುಗರ ಅನುಕೂಲದ ದೃಷ್ಟಿಯಿಂದ ಆಗಬೇಕಾದ ವ್ಯವಸ್ಥೆಗಳು: ಎಲ್ಲ ಪುಸ್ತಕಗಳ ವರ್ಗೀಕರಣ, ಬೇಕಾದ ಪುಸ್ತಕವನ್ನು ಕೂಡಲೇ ತೆಗೆದುಕೊಡಬಹುದಾದ ಕಪಾಟು ಇತ್ಯಾದಿ ವಿನ್ಯಾಸ, ಪುಸ್ತಕಗಳನ್ನು ಎರವಲು ಪಡೆದಿರುವುದರ ಮತ್ತು ವಾಪಸಾತಿಯ ಪರಿಷ್ಕೃತ ದಾಖಲೆ, ಗ್ರಂಥಾಲಯಕ್ಕೆ ಬಂದ ಓದುಗರಿಗೆ ಸ್ಥಳದಲ್ಲಿಯೆ ಓದಲು ಅನುಕೂಲವಾದ ಸ್ಥಳವ್ಯವಸ್ಥೆ, ಇತ್ಯಾದಿ.

ಮೇಲಿನವೆಲ್ಲ ಬಾಹ್ಯರಚನೆಗೆ ಸಂಬಂಧಪಟ್ಟ ಸಂಗತಿಗಳು. ಆದರೆ ಗ್ರಂಥಾಲಯ ವೆಂಬ ಸಂಪನ್ಮೂಲದ ಗರಿಷ್ಠ ಬಳಕೆ ಆಗಬೇಕಾದರೆ ಇತರ ಹಲವು ಪೂರಕ ಸೌಕರ್ಯಗಳೂ ಇರಬೇಕಾಗುತ್ತದೆ. ಉದಾಹರಣೆಗೆ ಯಾರೋ ಒಬ್ಬ ಓದುಗ ಕೇಳಿದ ಪುಸ್ತಕ ಅಲ್ಲಿಯ ಸಂಗ್ರಹದಲ್ಲಿ ಲಭ್ಯವಿರದಿದ್ದರೆ ಆ ವಿಷಯಕ್ಕೆ ಸಂಬಂಧಿಸಿದ ಅನ್ಯ ಪುಸ್ತಕಗಳನ್ನು ಓದುಗನ ಗಮನಕ್ಕೆ ತರಲು ಗ್ರಂಥಪಾಲಕನು ಶಕ್ತನಾಗಿರಬೇಕು. ಮಾಹಿತಿ ತಂತ್ರಜ್ಞಾನ ಅಪಾರವಾಗಿ ಬೆಳೆದಿರುವ ಇಂದಿನ ಸ್ಥಿತಿಯಲ್ಲಿ ಸ್ಥಾನೀಯ ಸಂಗ್ರಹದಲ್ಲಿ ಇಲ್ಲದ ಯಾವುದೊ ಅಪೇಕ್ಷಿತ ಪುಸ್ತಕ ಬೇರೆಡೆ ಎಲ್ಲಿ ಲಭ್ಯವಿದೆ ಎಂಬ ಮಾಹಿತಿಯನ್ನು ಗ್ರಂಥಪಾಲಕನು ಸಂಗ್ರಹಿಸಿ ಓದುಗನಿಗೆ ನೀಡಬಹುದು.

ಇದಲ್ಲದೆ ಗ್ರಂಥಾಲಯಕ್ಕೆ ವಾಡಿಕೆಯಾಗಿ ಬರುವ ಪ್ರತ್ಯೇಕ ಓದುಗರ ಅಭಿರುಚಿಗಳನ್ನು ಗ್ರಂಥಪಾಲಕನು ಗಮನಿಸಿ ಆ ವಿಷಯಗಳಿಗೆ ಸಂಬಂಧಿಸಿದ ಹೊಸ ಪುಸ್ತಕಗಳ ಸೇರ್ಪಡೆಯಾದೊಡನೆ ಆ ಮಾಹಿತಿಯನ್ನು ಆಸಕ್ತ ಓದುಗರಿಗೆ ತಲಪಿಸಬಹುದು. ಲೇಖನವ್ಯವಸಾಯದಲ್ಲಿ ತೊಡಗಿರುವವರಿಗಂತೂ ಗ್ರಂಥಾಲಯದ ಈ ದಿಶೆಯ ನೆರವುಗಳು ತುಂಬಾ ಬೆಲೆಯುಳ್ಳವು.

ಸಮಗ್ರ ಚಿಂತನೆ

ಇಂತಹ ಸೂಕ್ಷ್ಮಾಂಶಗಳನ್ನು ಒಳಗೊಂಡ ಗ್ರಂಥಾಲಯವ್ಯವಸ್ಥೆಯನ್ನು ಮನಸ್ಸಿನಲ್ಲಿ ಚಿತ್ರಿಸಿಕೊಂಡು ಸಮಗ್ರ ಸ್ವರೂಪದ ಗ್ರಂಥಾಲಯನಿರ್ವಹಣ ಪದ್ಧತಿಯನ್ನು ಪ್ರಚುರಗೊಳಿಸಿದವರು ಡಾ॥ ಎಸ್.ಆರ್. ರಂಗನಾಥನ್.

ಈ ಕ್ಷೇತ್ರಕ್ಕೆ ಕಾಲಿರಿಸಿದ ಆರಂಭದ ದಿನಗಳಲ್ಲಿ ರಂಗನಾಥನ್ ಅವರಿಗೆ ಅನಿಸತೊಡಗಿದುದು ಗ್ರಂಥಾಲಯಸೇವೆ ಕೇವಲ ಸಂಗ್ರಹದಲ್ಲಿರುವ ಪುಸ್ತಕಗಳನ್ನು ಗ್ರಾಹಕರಿಗೆ ನೀಡುವುದಕ್ಕೆ ಸೀಮಿತವಾಗಬಾರದೆಂದು; ಅಂತಿಮಲಕ್ಷ್ಯವು ವಿವಿಧಸ್ತರಗಳ ಓದುಗರಿಗೆ ಅವಶ್ಯವಿರುವ ಜ್ಞಾನವನ್ನೂ ಮಾಹಿತಿಯನ್ನೂ ಲಭ್ಯವಾಗಿಸುವುದು ಆಗಿರಬೇಕು – ಎಂದು; ಈ ದೃಷ್ಟಿಯಿಂದ ವಿವಿಧ ಗ್ರಂಥಾಲಯಗಳ ನಡುವೆ ವ್ಯವಸ್ಥಿತ ಸಂಪರ್ಕಗಳು ಏರ್ಪಡುವುದು ಅಪೇಕ್ಷಣೀಯವೆಂದು. ಇಂತಹ ಯೋಚನೆಗಳು ಆ ಕಾಲಖಂಡದಲ್ಲಿ – ಎಂದರೆ ಈಗ್ಗೆ ತೊಂಬತ್ತು ವರ್ಷ ಹಿಂದೆ – ಕ್ರಾಂತಿಕಾರಕವೆಂದೇ ಅನೇಕರಿಗೆ ಅನ್ನಿಸಿತು. ಆದರೆ ಈ ನೂತನ ಕಲ್ಪನೆಗಳನ್ನು ಡಾ॥ ರಂಗನಾಥನ್ ಕ್ರಮೇಣ ಕಾರ್ಯಗತಗೊಳಿಸುವುದರಲ್ಲಿ ಸಫಲರಾದರು. ರಂಗನಾಥನ್‌ರವರ ಪ್ರಗತಿಪರ ಚಿಂತನೆಗಳನ್ನು ಮೊದಮೊದಲ ದಿನಗಳಲ್ಲೇ ಸಮರ್ಥಿಸಿದವರಲ್ಲಿ ಗಣ್ಯರು ರಾಜಾಜಿ.

ಈಗ ಸಾರ್ವತ್ರಿಕ ರೂಢಿ ಎಂದೇ ಎನಿಸಿರುವ ಎಷ್ಟೋ ಪದ್ಧತಿಗಳನ್ನು ಮೊತ್ತಮೊದಲಿಗೆ ಕಲ್ಪಿಸಿ ಅಮಲುಗೊಳಿಸಿದವರು ರಂಗನಾಥನ್ ಅವರೇ. ಉದಾಹರಣೆಗೆ: ಗ್ರಂಥಾಲಯದ ಬಳಕೆದಾರರು ತಾವೇ ನೇರವಾಗಿ ಅಲ್ಮಾರುಗಳಿಗೆ ಹೋಗಿ ಪುಸ್ತಕಗಳನ್ನು ನೋಡಿ ಆಯ್ಕೆಮಾಡಿಕೊಳ್ಳಬಹುದಾದ ಏರ್ಪಾಡು ಕೂಡಾ ಹಿಂದೆ ಎಲ್ಲೆಡೆ ಇದ್ದದ್ದಲ್ಲ; ಮತ್ತು ಗ್ರಾಹಕರು ಕೇಳಿದ ಪುಸ್ತಕಗಳು ಅಲ್ಲಿಯ ಸಂಗ್ರಹದಲ್ಲಿ ಇದ್ದಲ್ಲಿ ಅವನ್ನು ತೆಗೆದು ಕೊಡಬೇಕೆಂಬಷ್ಟಕ್ಕೆ ಹಿಂದೆ ಸೇವೆಯು ಪರಿಮಿತವಾಗಿರುತ್ತಿತ್ತೇ ಹೊರತು ವಾಚಕ–ಶೋಧಕನ ಪ್ರತ್ಯೇಕ ಆಸಕ್ತಿಯ ಅನುಸಂಧಾನಕ್ಕೆ ನೆರವೀಯಬೇಕೆಂಬ ಕಲ್ಪನೆಯೂ ಹಿಂದೆ ಸಾರ್ವತ್ರಿಕವಾಗಿರಲಿಲ್ಲ – ವಿರಳ ಅಪವಾದಗಳನ್ನು ಹೊರತುಪಡಿಸಿದರೆ. ಈ ವಿಸ್ತೃತ ಸೇವೆಗೆ ಅವಶ್ಯವಿದ್ದ ಹೊಸ ತಾಂತ್ರಿಕತೆಗಳನ್ನೇ ರಂಗನಾಥನ್ ಆವಿಷ್ಕರಿಸಿದರು.

ಗ್ರಂಥಾಲಯಪ್ರಜ್ಞೆಯನ್ನು ಪಸರಿಸುವ ಉದ್ದೇಶದಿಂದ ರಂಗನಾಥನ್ ಆಯೋಜಿಸಿದ ಮೊದಮೊದಲ ಸಮಾವೇಶಗಳಿಗೇ ರವೀಂದ್ರನಾಥ ಠಾಕೂರ್,

ಗ್ರಂಥಾಲಯವಿಜ್ಞಾನ ಪಿತಾಮಹ ಡಾ॥ ಎಸ್. ಆರ್. ರಂಗನಾಥನ್
(9.8.1892 – 27.9.1972)

(ಚಿತ್ರ : ಕೆ.ಜಿ.ಸೋಮಶೇಖರ್)

ಎಸ್. ಕುಪ್ಪುಸ್ವಾಮಿಶಾಸ್ತ್ರೀ, ಎಸ್. ಸತ್ಯಮೂರ್ತಿ, ಸಿ.ಪಿ. ರಾಮಸ್ವಾಮಿ ಅಯ್ಯರ್ ಮೊದಲಾದ ಸಮುನ್ನತರಿಂದ ತುಂಬಾ ಉತ್ಸಾಹದ ಪ್ರತಿಕ್ರಿಯೆ ಲಭಿಸಿತು. ಹೀಗಿದ್ದರೂ ಗ್ರಂಥಾಲಯಸೇವೆಯು ದೇಶವ್ಯಾಪಿಯಾಗಬೇಕಾದರೆ ಶಾಸನಬದ್ಧವಾಗಬೇಕೆಂಬ ರಂಗನಾಥನ್ ಅವರ ಸ್ವಪ್ನವು ಸಾಕಾರಗೊಂಡದ್ದು ಅಲ್ಲಿಂದಾಚೆಗೆ 20–25 ವರ್ಷಗಳ ತರುವಾಯ.

ರಂಗನಾಥನ್ ಅವರ ರಂಗಪ್ರವೇಶಕ್ಕೆ ಹಿಂದೆಯೂ ಕೆಲವು ಗ್ರಂಥವರ್ಗೀಕರಣ ಪದ್ಧತಿಗಳು ಇದ್ದವು : ಉದಾಹರಣೆಗೆ ಜಾನ್ ಡ್ಯೂಯೀ ಎಂಬಾತ ಆವಿಷ್ಕರಿಸಿದ್ದ ಗ್ರಂಥಜಾತಿ–ಉಪಜಾತಿ ನಿರ್ದೇಶನ ಕೈಪಿಡಿ. ಆದರೆ ಅದನ್ನು ಅಳವಡಿಸಿಕೊಂಡಿರುತ್ತಿದ್ದವು ತುಂಬಾ ದೊಡ್ಡ ಪ್ರಮಾಣದ ಮತ್ತು ಆಧಿಕಾರಿಕ ಗ್ರಂಥಾಲಯಗಳಷ್ಟೆ. ಸಣ್ಣ ಪ್ರಮಾಣದ ಗ್ರಂಥಾಲಯಗಳೂ ಸುವ್ಯವಸ್ಥಿತವಾಗಿರಬೇಕೆಂದೂ ತಾಲೂಕು ಗ್ರಾಮ ಮಟ್ಟಗಳಲ್ಲಿಯೂ ಗ್ರಂಥಾಲಯಗಳು ಇರಬೇಕೆಂದೂ ಒಂದು ದೇಶವ್ಯಾಪಿ ಆಂದೋಲನವನ್ನೇ ನಡೆಸಿದವರು ರಂಗನಾಥನ್. ಇದಕ್ಕೆ ಉಪಸ್ತಂಭಕವಾಗಿ ಇಡೀ ರಾಷ್ಟ್ರಕ್ಕೆ, ಎಂದರೆ ಎಲ್ಲ ಪ್ರಾಂತಗಳಿಗೂ ಅನ್ವಯವಾಗುವಂತಹ ಗ್ರಂಥಾಲಯ ಕಾಯದೆಯೊಂದನ್ನೂ ಅವರು ರೂಪಿಸಿ ಪ್ರಚಾರ ಮಾಡಿದರು. ಹೀಗೆ ಈಗ ಪ್ರಮುಖ ರಾಜ್ಯಗಳಲ್ಲಿ ರಾಜ್ಯವ್ಯಾಪಿ ಗ್ರಂಥಾಲಯವ್ಯವಸ್ಥೆಯು ಸರ್ಕಾರದ ಅಂಗವಾಗಿಯೆ ಅಸ್ತಿತ್ವದಲ್ಲಿದೆ.

1931ರಲ್ಲಿ 'ಫೈವ್ ಲಾಸ್ ಆಫ್ ಲೈಬ್ರರಿ ಸಯನ್ಸ್' ಪಥದರ್ಶಕ ಗ್ರಂಥ ಪ್ರಕಟವಾದಾಗ ರಂಗನಾಥನ್ ಒಬ್ಬ ಅಪರಿಚಿತರೇ ಆಗಿದ್ದರು. ಆದರೆ ಮೇಲ್ನೋಟಕ್ಕೆ ಸರಳವೆನಿಸುವ ಈ ಐದು ಸೂತ್ರಗಳಿಂದ ಎಲ್ಲ ಗ್ರಂಥಾಲಯನಿರ್ವಹಣ ವ್ಯವಸ್ಥೆಗಳನ್ನೂ ಗ್ರಾಹಕರಿಗೆ ಗ್ರಂಥಾಲಯದಿಂದ ದೊರೆಯಬಹುದಾದ ವಿವಿಧ ಸೇವೆಗಳ ಸ್ವರೂಪವನ್ನೂ ಗ್ರಂಥವರ್ಗೀಕರಣ ನಿಯಮಗಳನ್ನೂ ನಿಷ್ಪಾದಿಸುವುದು ಸಾಧ್ಯವೆಂದು ಗ್ರಂಥಪಾಲಕರಿಗೆ ಮನವರಿಕೆಯಾಗುತ್ತಿದ್ದಂತೆ ರಂಗನಾಥನ್ ಈ ಕ್ಷೇತ್ರದ ಒಬ್ಬ ಅಸಾಮಾನ್ಯ ಪ್ರತಿಭಾವಂತರೆಂದು ಗುರುತಿಸಲ್ಪಟ್ಟರು. ಅದಾದ ಮೂರು ವರ್ಷಗಳ ತರುವಾಯ (1934) ಡಾ॥ ರಂಗನಾಥನ್ ಅವರ 'ಕೋಲನ್ ಕ್ಲಾಸಿಫಿಕೇಷನ್' ಗ್ರಂಥ ಪ್ರಕಟಗೊಂಡ ಮೇಲಂತೂ ಅವರ ಹೆಸರು ಅಂತರರಾಷ್ಟ್ರೀಯ ಗ್ರಂಥಾಲಯ ವಲಯಗಳಲ್ಲಿಯೂ ಗಮನ ಸೆಳೆಯುವಂತೆ ಆಯಿತು.

(ಪ್ರೌಢ ಗಣಿತಶಾಸ್ತ್ರ ಹಿನ್ನೆಲೆಯು ಬೇರೊಂದು ಕ್ಷೇತ್ರದಲ್ಲಿನ ಚರಿತ್ರಾರ್ಹ ಸಾಧನೆಗೆ ದಾರಿ ಮಾಡಿದ ಇನ್ನೊಂದು ನಿದರ್ಶನ ಮಹಾಭಾರತದ ಪರಿಷ್ಕೃತ ಪಾಠದ ಶೋಧಕಾರ್ಯವನ್ನು ಸಂಘಟಿಸಿದ ಡಾ॥ ವಿ.ಎಸ್. ಸುಕ್ಥಂಕರ್ ಅವರದು. ಅವರೂ ಕೇಂಬ್ರಿಡ್ಜಿನಲ್ಲಿ ಗಣಿತಶಾಸ್ತ್ರದಲ್ಲಿ ಉನ್ನತ ಪದವಿ ಪಡೆದಿದ್ದವರು.)

ಹೊಸ ಆವಿಷ್ಕರಣಗಳು

1925ರಿಂದಾಚೆಯ ಎರಡು–ಮೂರು ದಶಕಗಳಲ್ಲಿ ರಂಗನಾಥನ್ ಮಾಡಿದ ಪ್ರಾಥಮಿಕ ರೀತಿಯ ಆವಿಷ್ಕರಣಗಳು ಕೂಡಾ ಆ ಕಾಲಖಂಡದಲ್ಲಿ ಕ್ರಾಂತಿಕಾರಕವೇ ಎನಿಸಿದವು. ಉದಾಹರಣೆಗೆ : ಹೆಚ್ಚು ಸಂಖ್ಯೆಯ ಓದುಗರು ಗ್ರಂಥಾಲಯಕ್ಕೆ ಬಂದಾಗ ಸಾಲುಗಟ್ಟಿ 'ಕ್ಯೂ'ನಲ್ಲಿ ಬರಬೇಕೆಂದು ಗ್ರಂಥಪಾಲಕ ಡಾ॥ ರಂಗನಾಥನ್ ವಿಧಿಸಿದಾಗ ತೀಕ್ಷ್ಣ ಪ್ರತಿಭಟನೆಯೇ ಹೊಮ್ಮಿತ್ತು. ಕೆಲವರು ಇದನ್ನು ಅವಮರ್ಯಾದೆಯೆಂದು ಭಾವಿಸಿದರೆ ಕೆಲವರು 'ಕ್ಯೂ' ಶಬ್ದದ ಸ್ಪೆಲ್ಲಿಂಗ್ ಕೇಳುತ್ತಿದ್ದರು! ಇಂತಹ ತಾಂತ್ರಿಕೇತರ ಪ್ರತಿರೋಧಗಳನ್ನೂ ಡಾ॥ ರಂಗನಾಥನ್ ಅವರ ಮೊದಲ ಪೀಳಿಗೆಯ ಸುಧಾರಕ ಪಡೆ ದಾಟಬೇಕಾಯಿತು. ಅದನ್ನೆಲ್ಲ ಈಗ ನೆನೆದರೆ ವಿನೋದಕರವೆಂದೇ ಅನಿಸಬಹುದು. ಗ್ರಂಥಾಲಯದಲ್ಲಿಯೂ ಬೇರೆಡೆಗಳಂತೆ ಕೆಲವು ಅನುಶಾಸನಗಳು ಅವಶ್ಯವಿವೆಯೆಂಬ ಕಲ್ಪನೆಯೇ ಆಗ ಹೊಸದಾಗಿತ್ತು. ಈ ಬಗೆಯ ಸಮಸ್ಯೆಗಳನ್ನು ರಂಗನಾಥನ್ ಮತ್ತು ಅವರ ಸಹಕಾರಿಗಳು ಎರಡು–ಮೂರು ದಶಕಗಳ ಅವಧಿಯಲ್ಲಿ ದಾಟಲು ಶಕ್ತರಾಗುವ ವೇಳೆಗೆ ದೇಶದ ಹತ್ತಾರು ವಿಶ್ವವಿದ್ಯಾಲಯಗಳಲ್ಲಿ ವಿಜ್ಞಾನಾಂಗಗಳಂತೆ ಗ್ರಂಥಾಲಯನಿರ್ವಹಣೆಯನ್ನೂ ಸ್ನಾತಕೋತ್ತರ ಹಾಗೂ ಡಾಕ್ಟೊರಲ್ ಸ್ತರದ ವರೆಗೆ ವೈಜ್ಞಾನಿಕವಾಗಿ ಬೋಧಿಸುವ ವ್ಯವಸ್ಥೆಗಳು ಏರ್ಪಟ್ಟಿದ್ದವು. ಅದಕ್ಕೆ ಬೇಕಾದ ಪಾಠ್ಯಸಾಹಿತ್ಯವನ್ನೂ ರಚಿಸಿದವರು ಡಾ॥ ರಂಗನಾಥನ್ ಅವರೇ.

ಒಂದು ದೃಷ್ಟಿಯಿಂದ ನೋಡಿದರೆ ಎಸ್.ಆರ್. ರಂಗನಾಥನ್ ಅವರು (ಜನನ: 9–8–1892, ತಮಿಳುನಾಡಿನ ಶಿಯಾಲಿ ಎಂಬ ಗ್ರಾಮದಲ್ಲಿ) ಮೂಲತಃ ಗ್ರಂಥಾಲಯವ್ಯವಸ್ಥೆಯ ಹಿನ್ನೆಲೆಯಿಂದ ಬಂದವರೇನಲ್ಲ. ಅವರು 1916ರಲ್ಲಿ ಮದರಾಸಿನ ಕ್ರಿಶ್ಚಿಯನ್ ಕಾಲೇಜಿನಿಂದ ಎಂ.ಎ. ಪದವಿ ಪಡೆದುದು ಗಣಿತಶಾಸ್ತ್ರದಲ್ಲಿ. ಅವರು ತಮ್ಮ ವೃತ್ತಿಜೀವನವನ್ನು ಆರಂಭಿಸಿದುದೂ ಮಂಗಳೂರು ಕೊಯಮತ್ತೂರುಗಳಲ್ಲಿ ಮತ್ತು ಮದರಾಸು ವಿಶ್ವವಿದ್ಯಾಲಯದಲ್ಲಿ ಗಣಿತಶಾಸ್ತ್ರ ಬೋಧಕರಾಗಿಯೇ. ಬಹುಶಃ ಅವರಿಗಿದ್ದ ಗಣಿತಶಾಸ್ತ್ರ ಹಿನ್ನೆಲೆಯೇ ಅವರಲ್ಲಿ ಗ್ರಂಥಾಲಯವಿನ್ಯಾಸವನ್ನೂ ಗ್ರಂಥವರ್ಗೀಕರಣಾದಿಗಳನ್ನೂ ಹೆಚ್ಚು ವ್ಯವಸ್ಥಗೊಳಿಸುವುದರ ಆವಶ್ಯಕತೆಯ ತೀವ್ರತೆಯನ್ನು ಮೂಡಿಸಿದ್ದಿರಬಹುದು. ಹೀಗಾಗಿ 1924ರಲ್ಲಿ ಮದರಾಸು ವಿಶ್ವವಿದ್ಯಾಲಯ ಹೊಸದಾಗಿ ನಿರ್ಮಿಸಿದ ಗ್ರಂಥಪಾಲಕ ಹುದ್ದೆಯನ್ನು ಅವರಿಗೆ ನೀಡಿದಾಗ ಅವರು ಅದನ್ನು ಸ್ವೀಕರಿಸಲು ಹಿಂದೆಗೆಯಲಿಲ್ಲ. ಅದಾದ ಒಂದು ವರ್ಷದ ತರುವಾಯ ಅವರು ಗ್ರಂಥಾಲಯನಿರ್ವಹಣೆಯ ಆಧುನಿಕ ಪದ್ಧತಿಗಳಲ್ಲಿ ತರಬೇತಿ ಪಡೆಯಲು ಲಂಡನ್ ವಿಶ್ವವಿದ್ಯಾಲಯಕ್ಕೆ ತೆರಳಿದರು. ತರಬೇತಿ ಪಡೆದು ಹಿಂದಿರುಗಿದ ಮೇಲೆ ಅವರು ಕಾಶಿ ವಿಶ್ವವಿದ್ಯಾಲಯದಲ್ಲಿಯೂ ((1945–47) ಅನಂತರ ದೆಹಲಿ ವಿಶ್ವವಿದ್ಯಾಲಯದಲ್ಲಿಯೂ (1947–55) ಗ್ರಂಥಾಲಯವಿಜ್ಞಾನ ಪ್ರಾಧ್ಯಾಪಕರಾಗಿ

ಕೆಲಸ ಮಾಡಿದರು. ಗ್ರಂಥಾಲಯಗಳನ್ನು ಹೆಚ್ಚು ಜನಾಭಿಮುಖಗೊಳಿಸುವ ದಿಶೆಯಲ್ಲಿ ಅವರು ಪ್ರವರ್ತಿಸಿದ ನೂತನ ವಿಧಾನಗಳು ಅಲ್ಪಕಾಲದಲ್ಲಿ ಅವರಿಗೆ ಈ ಕ್ಷೇತ್ರದ ಪಥದರ್ಶಕರೆಂಬ ಖ್ಯಾತಿಯನ್ನು ತಂದುಕೊಟ್ಟವು. ಹಿಂದಿನ ದಿನಗಳಲ್ಲಿ ಕೇವಲ ಒಂದು ಕಟ್ಟಳೆಯ ಮಟ್ಟದಲ್ಲಿ ಉಳಿದಿದ್ದ ಗ್ರಂಥಾಲಯವ್ಯವಸ್ಥೆಗೆ ತಾತ್ತ್ವಿಕ-ವೈಜ್ಞಾನಿಕ ತಳಹದಿಯನ್ನು ನಿರ್ಮಿಸಿದವರು ಡಾ॥ ರಂಗನಾಥನ್. ಅಮೆರಿಕದ ಖ್ಯಾತ ಗ್ರಂಥಾಲಯಶಾಸ್ತ್ರಜ್ಞ ಜಸ್ಸೆ ಷೇರಾ ಅವರು ಹೇಳಿದಂತೆ ರಂಗನಾಥನ್ ಒಂದು 'ಏಕವ್ಯಕ್ತಿ ಗ್ರಂಥಾಲಯ ಆಂದೋಲನ' ಎನಿಸಿದರು.

ಡಾ॥ ರಂಗನಾಥನ್ ಅವರ ತತ್ತ್ವಚಿಂತನೆಯನ್ನೂ ಅದರ ದೀರ್ಘಕಾಲಿಕ ಸಂಗತತೆಯನ್ನೂ ಕುರಿತು 1985ರಲ್ಲಿ ನವದೆಹಲಿಯಲ್ಲಿ ನಡೆದ ಅಂತರರಾಷ್ಟ್ರೀಯ ಸಮಾವೇಶವು ಏಕೈಕ ವ್ಯಕ್ತಿಯ ಸಾಧನೆಯ ಪರಿಶೀಲನೆಗೆ ಮೀಸಲಾದ ಮೊತ್ತಮೊದಲ ಅಂತರರಾಷ್ಟ್ರೀಯ ಗ್ರಂಥಾಲಯವಿಷಯಕ ಸಮ್ಮೇಳನವಾಗಿ ದಾಖಲೆಗೊಂಡಿತು.

ಸಮೂಲ ಪರಿವರ್ತನೆ

ಒಂದು ಸಾಮತಿ ಇದೆ – ಒಂದು ವಿಷಯದಲ್ಲಿ ಅತ್ಯಂತ ಮೇಲ್ಮಟ್ಟದ ಪ್ರೌಢಿಮೆ ಪಡೆದಿರುವವನು ಮಾತ್ರ ಆ ವಿಷಯವನ್ನು ಸರಳೀಕರಿಸಬಲ್ಲ – ಎಂದು. ಈ ಮಾತನ್ನು ರಂಗನಾಥನ್-ಪ್ರಣೀತ ಸೂತ್ರಪಂಚಕಕ್ಕೂ ಅನ್ವಯಿಸಬಹುದು. ಈ ಸೂತ್ರಗಳಲ್ಲಿ ಗಹನತೆಯೇನಿಲ್ಲ; ಈ ಮೂಲಭೂತ ಆಧಾರಸಂಗತಿಗಳನ್ನು ಹಿಂದೆ ಯಾರೂ ಹೀಗೆ ಸೂತ್ರೀಕರಿಸಿರಲಿಲ್ಲ, ಅಷ್ಟೆ. ಯಾವ ತಳಹದಿ ನಿಯಮಗಳಿಂದ ಗ್ರಂಥಾಲಯಸಂಬಂಧಿತ ವಿವರಾಂಶಗಳೆಲ್ಲ ನಿಷ್ಪನ್ನವಾಗಬಲ್ಲವೋ ಅವನ್ನು ರಂಗನಾಥನ್ ತಮ್ಮ ಅಂತರ್ಮಥನದಿಂದ ಗುರುತಿಸಿ ಅವಕ್ಕೆ ಸೂತ್ರರೂಪವನ್ನು ಕೊಟ್ಟರು.

ಅವರು ಈ ಕ್ಷೇತ್ರವನ್ನು ಪ್ರವೇಶಿಸಿದ ಹೊಸತರಲ್ಲಿಯೆ ಗ್ರಂಥವರ್ಗೀಕರಣ ವಿಧಾನವನ್ನು ಹೆಚ್ಚು ಶಾಸ್ತ್ರೀಯಗೊಳಿಸುವ ಆವಶ್ಯಕತೆ ಅವರಿಗೆ ಕಂಡುಬಂದಿತು. ಅದುವರೆಗೆ ರೂಢಿಯಲ್ಲಿದ್ದ ಡ್ಯೂಯೀ ವರ್ಗೀಕರಣವಿಧಾನವು ಉಪಯುಕ್ತವೇ (ಈಗಲೂ ಅದು ವ್ಯಾಪಕವಾಗಿ ಬಳಕೆಯಲ್ಲಿದೆ) ಆಗಿದ್ದರೂ ಅದರಲ್ಲಿ ಕೆಲವು ಪರಿಮಿತಿಗಳು ಇದ್ದವು. ಉದಾಹರಣೆಗೆ : ಇತ್ತೀಚಿನ ದಿನಗಳಲ್ಲಿ ಆವಿಷ್ಕರಣಗೊಂಡಿರುವ ಅನೇಕ ಹೊಸ ವಿಷಯಗಳನ್ನು ಹಿಂದಿದ್ದ ವರ್ಗೀಕರಣ ಪಟ್ಟಿಕೆಗಳಲ್ಲಿ ಸೇರ್ಪಡೆಗೊಳಿಸುವುದರಲ್ಲಿ ತೊಡಕುಗಳು ಇರುತ್ತಿದ್ದವು. ರಂಗನಾಥನ್ ಅವರು ವರ್ಗೀಕರಣದ ಅಸ್ತಿಭಾರದ ಬಗೆಗೆ ಮೌಲಿಕ ಮರುಚಿಂತನೆಗೆ ತೊಡಗಿಕೊಂಡರು. ಲಬ್ಧವಿರುವ ಹಲವು ನೂರು ವರ್ಷಗಳ ಗ್ರಂಥವೈವಿಧ್ಯದ ಸಮೀಕ್ಷೆ-ವಿಶ್ಲೇಷಣೆಗಳಿಗೆ ಬದಲಾಗಿ ಜಗತ್ತಿನ

ಜ್ಞಾನರಾಶಿಯಷ್ಟನ್ನೂ ಕಾಲ, ದೇಶ, ಶಕ್ತಿ, ವಸ್ತು, ವ್ಯಕ್ತಿತ್ವ – ಈ ಐದು ಪ್ರಮುಖ ವರ್ಗಗಳಾಗಿ ಗುರುತಿಸಿದ್ದ ಗ್ರೀಕ್ ತತ್ತ್ವಶಾಸ್ತ್ರಜ್ಞ ಅರಿಸ್ಟಾಟಲನ ತಾತ್ತ್ವಿಕತೆಯನ್ನು ಆಧಾರವಾಗಿರಿಸಿಕೊಂಡು ಗ್ರಂಥವರ್ಗೀಕರಣ ವಿವರಗಳನ್ನು ವಿಕಾಸಗೊಳಿಸುವುದು ಹೆಚ್ಚು ವೈಜ್ಞಾನಿಕವೂ ಸಮರ್ಪಕವೂ ಆಗುತ್ತದೆ – ಎಂದು ನಿರ್ಣಯಿಸಿದರು. ಈ ದಿಕ್ಕಿನ ಗಾಢ ಚಿಂತನೆಯ ಫಲವೇ ಡಾ॥ ರಂಗನಾಥನ್ ಹೊಸದಾಗಿ ಆವಿಷ್ಕರಿಸಿದ 'ಕೋಲನ್ ವರ್ಗೀಕರಣ' ಪದ್ಧತಿ.

ಗ್ರಂಥಾಲಯನಿರ್ವಹಣೆಯು ಹೆಚ್ಚು ಸುಧಾರಿತವೂ ವೈಜ್ಞಾನಿಕವೂ ಆಗಬೇಕಾದುದರ ಆವಶ್ಯಕತೆಯ ಬಗೆಗೆ ಅರಿವನ್ನು ಮೂಡಿಸಲು ಜೀವಮಾನವೆಲ್ಲ ಹಗಲುರಾತ್ರಿ ಶ್ರಮಿಸಿದವರು ಡಾ॥ ರಂಗನಾಥನ್.

ನಡೆದುಬಂದ ಹಾದಿ

ಗ್ರಂಥಾಲಯವಿಜ್ಞಾನವಿಕಾಸದ ಪಯಣದಲ್ಲಿ ಆರಂಭದಿಂದ ರಂಗನಾಥನ್ ಎದುರಿಸಿದ ಸವಾಲುಗಳ ಕಥೆ ಸ್ವಾರಸ್ಯಕರ. ಮದರಾಸು ವಿಶ್ವವಿದ್ಯಾಲಯದಲ್ಲಿ ಗ್ರಂಥಪಾಲಕ ಹುದ್ದೆಗಾಗಿ ನಡೆದ ಸಂದರ್ಶನದ ಸಂದರ್ಭದಲ್ಲಿ ರಂಗನಾಥನ್‌ರವರಿಗೆ ನೀಡಲಾಗಿದ್ದ ಸೂಚನೆ – "ವಿಶ್ವವಿದ್ಯಾಲಯದಲ್ಲಿರುವ ಪುಸ್ತಕಗಳನ್ನು ಗೆದ್ದಲುಗಳಿಂದಲೂ ಕೀಟಗಳಿಂದಲೂ ರಕ್ಷಿಸಿ ಜೋಪಾನ ಮಾಡಲು ಅಧಿಕಾರಿಯೊಬ್ಬರು ಬೇಕಾಗಿದ್ದಾರೆ" – ಎಂದು! ರಂಗನಾಥನ್ ಉತ್ತರಿಸಿದರು: "ನಾನು ಕ್ರಿಮಿಶಾಸ್ತ್ರಜ್ಞನಲ್ಲ. ನಾನು ಗಣಿತಶಾಸ್ತ್ರದ ಪ್ರಾಧ್ಯಾಪಕನಾಗಿರುವವನು. ಸಂರಕ್ಷಣೆಯಷ್ಟೆ ಉದ್ದೇಶವಾಗಿದ್ದಲ್ಲಿ ನೀವು ಯಾರಾದರೂ ಕೀಟಶಾಸ್ತ್ರಜ್ಞನನ್ನು ನೇಮಿಸಿಕೊಳ್ಳಬಹುದು. ನನ್ನ ಕಲ್ಪನೆಯಂತೆ ಗ್ರಂಥಪಾಲಕನದು ವಿದ್ವತ್ತಿನ ಕ್ಷೇತ್ರ. ಅದರ ವ್ಯವಸ್ಥೆಯಲ್ಲಿ ಗಣಿತಶಾಸ್ತ್ರಪರಿಜ್ಞಾನವು ಉಪಯುಕ್ತವಾಗಬಲ್ಲದೆಂದು ನಾನು ಭಾವಿಸಿದ್ದೇನೆ." ರಂಗನಾಥನ್‌ರವರ ಈ ನಿಲವು ಅದು ಹೇಗೊ ಅಧಿಕಾರಿಗಳಿಗೆ ಸಮ್ಮತವೆನಿಸಿತು. ಹೀಗೆ ಆ ಹಂತದಲ್ಲಿ ರಂಗನಾಥನ್‌ರವರಿಗೆ ಗ್ರಂಥಾಲಯಶಾಸ್ತ್ರದ ತುಂಬಾ ಹೆಚ್ಚಿನ ಪರಿಜ್ಞಾನ ಇಲ್ಲದಿದ್ದರೂ ಅವರು ಗ್ರಂಥಪಾಲಕ ಹುದ್ದೆಗೆ ಆಯ್ಕೆಗೊಂಡರು. ಅಲ್ಲಿಂದಾಚೆಯ ರಂಗನಾಥನ್ ಸಾಧನೆ ಚರಿತ್ರಾರ್ಹವೇ ಆಯಿತು.

ತಾವು ಗ್ರಂಥಪಾಲಕ ಹುದ್ದೆಗೆ ಆಯ್ಕೆಗೊಂಡ ವಿಷಯವನ್ನು ರಂಗನಾಥನ್ ತಮ್ಮ ತಾಯಿಯವರಿಗೆ ತಿಳಿಸಿದಾಗ ಆಕೆಯ ಆನಂದಕ್ಕೆ ಪಾರವೇ ಇರಲಿಲ್ಲ. ಆಕೆ ಹೇಳಿದರು: "ಶ್ರೀರಾಮಚಂದ್ರಪ್ರಭುವಿನ ಮತ್ತು ನಿನ್ನ ತಂದೆತಾತಂದಿರ ಆಶೀರ್ವಾದದ ಬಲದಿಂದಲೇ ನಿನಗೆ ದೇವಿ ಸರಸ್ವತಿಯ ಸೇವೆಯ ಈ ಅವಕಾಶ ಪ್ರಾಪ್ತವಾಗಿರಬೇಕು." ಹೀಗೆಂದವರೇ ಇನ್ನೂ ಒಂದು ಮಾತನ್ನು ಸೇರಿಸಿದರು: "ಈ ಕಾರುಬಾರುಗಳ ನಡುವೆ ನೀನು ರಾಮಾಯಣವನ್ನು ಕೈಬಿಡುವುದಿಲ್ಲ ತಾನೆ?" ರಂಗನಾಥನ್ ಹಾಗೆ

ಆಗದೆಂದು ಭರವಸೆ ನೀಡಿ ತಮಗೆ ಕಂಠಸ್ಥವಿದ್ದ ಒಂದು ಇಡೀ ಸರ್ಗವನ್ನು ತಾಯಿಗೆ ಒಪ್ಪಿಸಿದರು!

ರಂಗನಾಥನ್ ಅವರ ಅಂತರಂಗವು ಯಾವ ಮೌಲ್ಯಗಳಿಂದ ರೂಪಿತ ವಾಗಿದ್ದಿತೆಂಬುದನ್ನು ಇದರಿಂದ ಊಹಿಸಬಹುದು.

ರಂಗನಾಥನ್‌ರವರಲ್ಲಿ ಜೀವನಪರ್ಯಂತ ಅಸ್ಖಲಿತವಾಗಿ ಉಳಿದಿದ್ದುದು ಭಾರತೀಯ ಸಂಸ್ಕೃತಿಯ ಬಗೆಗೆ ಗಾಢ ಅಭಿಮಾನ. ಸದಾ ಭಾರತೀಯ ಸಾಂಪ್ರದಾಯಿಕ ಉಡುಪನ್ನೇ ಧರಿಸುತ್ತಿದ್ದರು. ಅವರು ಇಂಗ್ಲೆಂಡಿನಲ್ಲಿ ವ್ಯಾಸಂಗ ಮಾಡುವಾಗಲೂ ತಮ್ಮ ರುಮಾಲನ್ನು ಕಳಚಲಿಲ್ಲ.

ಗ್ರಂಥಾಲಯನಿರ್ವಹಣೆಯ ಬಗೆಗೆ ರಂಗನಾಥನ್ ಅವರ ದೃಷ್ಟಿಯೇ ಭಿನ್ನರೀತಿಯದಾಗಿತ್ತೆಂಬುದು ಜನರ ಗಮನಕ್ಕೆ ಬರಲು ತಡವಾಗಲಿಲ್ಲ.

1937ರಲ್ಲಿ ಆಗ ಮದರಾಸಿನ ಮುಖ್ಯಮಂತ್ರಿಗಳಾಗಿದ್ದ ಚಕ್ರವರ್ತಿ ರಾಜಗೋಪಾಲಾಚಾರಿ ಅವರು ಪಾಟ್ (Pott) ಎಂಬಾತ ಬರೆದಿದ್ದ ಆಲ್‌ಜಿಬ್ರಾ ಪಾಠ್ಯಗ್ರಂಥದ ಪ್ರತಿ ಬೇಕೆಂದು ಗ್ರಂಥಾಲಯಕ್ಕೆ ಹೇಳಿಕಳಿಸಿದರು. ತಾವು ವಿದ್ಯಾರ್ಥಿದಶೆಯಲ್ಲಿ ಬಳಸಿದ್ದ ಆ ಪುಸ್ತಕ ರಾಜಾಜಿಯವರಿಗೆ ಒಂದು ಉಪನ್ಯಾಸದ ಸಿದ್ಧತೆಗಾಗಿ ಬೇಕಾಗಿತ್ತು. ವಿಶ್ವವಿದ್ಯಾಲಯದ ಗ್ರಂಥಭಂಡಾರದಲ್ಲಿ ಆ ಪುಸ್ತಕ ಕಾಣಲಿಲ್ಲ. ಆದರೆ ರಂಗನಾಥನ್ ಆ ಗ್ರಂಥದ ವಿಶೇಷ ವಿಷಯಗಳನ್ನೇ ಒಳಗೊಂಡಿದ್ದ ಬೇರೆ ಎರಡು ಪುಸ್ತಕಗಳನ್ನು ರಾಜಾಜಿಯವರಿಗೆ ಕಳಿಸಿದರು. ರಾಜಾಜಿಯವರು ರಂಗನಾಥನ್‌ರವರ ಕಾರ್ಯಶ್ರದ್ಧೆಯನ್ನು ಮೆಚ್ಚಿ ಪ್ರಶಂಸೆ ತಿಳಿಸಿದರು.

ರಾಜಗೋಪಾಲಾಚಾರಿಯವರ ಸಲಹೆಯಂತೆ ಜನಸಾಮಾನ್ಯರಿಗೆ ಆಸಕ್ತಿಕರಗಳಾದ ಪುಸ್ತಕಸಂಗ್ರಹಗಳನ್ನು ವಾಹನಗಳಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ಒಯ್ದು ತಲಪಿಸುವ 'ಸಂಚಾರಿ ಗ್ರಂಥಾಲಯ' ವ್ಯವಸ್ಥೆಯನ್ನು ಕಾರ್ಯಗತಗೊಳಿಸಿದವರು ರಂಗನಾಥನ್. ಈ ಯೋಜನೆಗಾಗಿಯೆ ಅತ್ಯಂತ ಸರಳ ಭಾಷೆಯಲ್ಲಿ ಹೊಸ ಬಗೆಯ ಪುಸ್ತಕಗಳನ್ನು ಬರೆಯಿಸಲಾಯಿತು.

ಈ ಸತ್ಯಘಟನೆಯನ್ನು ಕಲ್ಪಿಸಿಕೊಳ್ಳಿ. ಇದು ನಡೆದದ್ದು 1938ರಲ್ಲಿ. ಆಗ ಮದರಾಸು ವಿಶ್ವವಿದ್ಯಾಲಯದ ಗ್ರಂಥಪಾಲಕರಾಗಿದ್ದ ರಂಗನಾಥನ್ ಅವರಲ್ಲಿಗೆ ಒಬ್ಬ ತರುಣನು ಬಂದು ನಿವೇದಿಸಿದ : "ನನ್ನ ತಂದೆ ಉತ್ಕ್ರಮಣಾವಸ್ಥೆಯಲ್ಲಿ ಇದ್ದಾರೆ. ಗುಣವಾಗುವ ಸಂಭವವಿಲ್ಲವೆಂದು ವೈದ್ಯರು ಹೇಳಿದ್ದಾರೆ. ಅವರು ತಮ್ಮ ಅಂತ್ಯದಶೆಯಲ್ಲಿ ತಮ್ಮ ಗ್ರಂಥಾಲಯಕ್ಕೆ ಏನಾದರೂ ಕೈಂಕರ್ಯ ಸಲ್ಲಿಸಬಯಸಿದ್ದಾರೆ." ರಂಗನಾಥನ್ ಆ ತರುಣನಿಗೆ ಸಾಂತ್ವನ ಹೇಳಿ ಕೂಡಲೇ ಅವನೊಡನೆ ಅವನ ತಂದೆಯ ಭೇಟಿಗಾಗಿ

ಅವರ ಮನೆಗೆ ಹೋದರು. ತೀವ್ರ ರುಗ್ಣಾವಸ್ಥೆಯಲ್ಲಿದ್ದ ಆ ವೃದ್ಧರು ಹೇಳಿದರು: "ಮಹಾಶಯರೆ, ನನ್ನ ಜೀವನದಲ್ಲಿ ನನಗೆ ಅತ್ಯಂತ ಉಲ್ಲಾಸವನ್ನು ಕೊಟ್ಟಿರುವುದು ನಿಮ್ಮ ಗ್ರಂಥಭಂಡಾರ. ನಾನು ಅತ್ಯಂತ ಬಡತನದಲ್ಲಿ ಜೀವನ ಮುಗಿಸಿರುವುದು ಹೌದು. ಆದರೆ ನಿಮ್ಮ ಗ್ರಂಥಾಲಯ ನನ್ನನ್ನು ಮಾನಸಿಕವಾಗಿ ಶ್ರೀಮಂತಗೊಳಿಸಿದೆ." ಕುಗ್ಗುತ್ತಿದ್ದ ಶ್ವಾಸವನ್ನು ದೃಢಗೊಳಿಸಿಕೊಂಡು ಆತ ಮುಂದುವರಿಸಿದರು : "ಇಲ್ಲಿ ಒಂದು ಅಲ್ಪ ಸಾಂಕೇತಿಕ ಕಾಣಿಕೆ ಇದೆ. ಇದರಿಂದ ಗ್ರಂಥಾಲಯಕ್ಕೆ ದಯವಿಟ್ಟು ಕೆಲವು ಪುಸ್ತಕಗಳನ್ನು ಕೊಂಡುಕೊಳ್ಳಿರಿ." ಹೀಗೆ ಹೇಳಿ ಆತ 100 ರೂ. ಇದ್ದ ಲಕೋಟೆಯನ್ನು ರಂಗನಾಥನ್ ಅವರ ಕೈಯಲ್ಲಿ ಇರಿಸಿದರು. ಆ ವೃದ್ಧರ ಮುಖದಲ್ಲಿ ಸಮಾಧಾನ ತುಂಬಿತ್ತು.

ಈ ಘಟನೆಯ ಬಗೆಗೆ ನಾನು ಕೇಳಿದುದು ರಂಗನಾಥನ್ ಅವರಿಂದಲೇ. ಇದನ್ನು ಹೇಳುವಾಗ ಅವರು ಗದ್ಗದಿತರಾಗಿದ್ದರು.

"ಸಮೃದ್ಧವಾಗಿ ಬೆಳೆದ ಗಿಡದ ಹೂಗಳಿಂದ ಸೂಸುವ ಸುಗಂಧವು ದೂರದೂರಕ್ಕೂ ಹರಡುವಂತೆ ಪುಣ್ಯಕಾರ್ಯದ ಪರಿಮಳವೂ ವ್ಯಾಪಕವಾಗಿ ಪಸರಿಸುತ್ತದೆ" ಎಂದಿದೆ ಒಂದು ಯಜುರ್ವೇದಮಂತ್ರ. ಸದುದ್ದೇಶದ ಪ್ರಯಾಸಗಳ ಪರಿಣಾಮಾತಿಶಯ ಇಂತಹದು.

1950ರಲ್ಲಿ ಅಮೆರಿಕದ ಕೊಲಂಬಿಯ ವಿಶ್ವವಿದ್ಯಾಲಯದಲ್ಲಿ ಒಂದು ವಿಶೇಷೋಪನ್ಯಾಸ ನೀಡಲು ರಂಗನಾಥನ್ ಹೋಗಿದ್ದರು. ಆ ಸಂದರ್ಭದಲ್ಲಿ ರಂಗನಾಥನ್ ಅವರನ್ನು ಭೇಟಿ ಮಾಡಿದ ಒಬ್ಬ ವ್ಯಕ್ತಿ ವಿನೀತನಾಗಿ ಹೇಳಿದ:

"ಇಪ್ಪತ್ನಾಲ್ಕು ವರ್ಷ ಹಿಂದೆ ನಾನು ಕೆಲಸಕ್ಕಾಗಿ ಪರದಾಡುತ್ತಿದ್ದೆ. ನಿಮ್ಮ ಗ್ರಂಥಾಲಯದಲ್ಲಿ ಮಾವಿನಹಣ್ಣನ್ನು ಕುರಿತ ಕೆಲವು ಪುಸ್ತಕಗಳು ನನಗೆ ದೊರೆತವು. ಅವು ನನ್ನನ್ನು ಪ್ರೇರಿಸಿದವು. ನಾನು ಮಾವಿನಹಣ್ಣಿನ ವ್ಯವಹಾರಕ್ಕೇ ಏಕೆ ತೊಡಗ ಬಾರದು – ಎಂದು ಯೋಚಿಸಿದೆ. ಸಣ್ಣ ಪ್ರಮಾಣದಲ್ಲಿ ಆರಂಭಿಸಿದ ಉದ್ಯಮ ದೈವಕೃಪೆಯಿಂದ ಬೆಳೆಯುತ್ತಹೋಯಿತು. ಈಗ ಲಾಭಕರವಾಗಿ ದೊಡ್ಡ ಪ್ರಮಾಣದಲ್ಲಿ ವ್ಯಾಪಾರ ನಡೆಯುತ್ತಿದೆ." ರಂಗನಾಥನ್ ಅವರು ಯಾವುದೇ ಉಡುಗೊರೆಗಳನ್ನು ಸ್ವೀಕರಿಸುವವರಲ್ಲವೆಂದು ಅರಿತಿದ್ದ ಆತ ತನ್ನ ತೋಟದಿಂದ ತಂದಿದ್ದ ದೊಡ್ಡ ಮಂಕರಿ ಮಾವಿನಹಣ್ಣುಗಳನ್ನು ಅರ್ಪಿಸಿದ.

ಒಬ್ಬ ವ್ಯಕ್ತಿಯ ಜೀವನದಲ್ಲಿ ಸಾರ್ಥಕತೆಯ, ಧನ್ಯತೆಯ ಭಾವನೆಯನ್ನು ಮೂಡಿಸುವವು ಇಂತಹ ಪ್ರಸಂಗಗಳೇ ಅಲ್ಲವೆ?

ಪಥಪ್ರದರ್ಶಕ

ಭಾರತದ ಕಳೆದ ತೊಂಬತ್ತು ವರ್ಷಗಳ ಗ್ರಂಥಾಲಯವಿಜ್ಞಾನ ವಿಕಾಸವು ಬಹುಮಟ್ಟಿಗೆ ಒಬ್ಬ ವ್ಯಕ್ತಿಯ ಸಾಧನೆ ಎಂದಲ್ಲಿ ಅತಿಶಯೋಕ್ತಿಯಾಗದು. ಆ ವ್ಯಕ್ತಿ ಎಸ್. ಆರ್. ರಂಗನಾಥನ್. ಹೀಗೆ ಜೀವಂತ ದಂತಕಥೆಯಾಗಿದ್ದವರು ಅವರು. ಗ್ರಂಥಾಲಯನಿರ್ವಹಣೆಯನ್ನು ಮಾಮೂಲಿ ಗುಮಾಸ್ತಗಿರಿಯ ಮಟ್ಟದಿಂದ ಒಂದು ಪೂರ್ಣಪ್ರಮಾಣದ ವಿಜ್ಞಾನದ ಮಟ್ಟಕ್ಕೆ ಏರಿಸಿದವರು ಅವರು. ಆಡಳಿತ ರೀತಿನೀತಿ, ತಾತ್ತ್ವಿಕ ಅಧಿಷ್ಠಾನ – ಎರಡೂ ಅಂಗಗಳಲ್ಲಿ ಉನ್ನತ ಕೊಡುಗೆ ಅವರಿಂದ ಸಂದಿತು. ಅವರ ಚಿಂತನೆ ಸುಮಾರು ಅರವತ್ತು ಗ್ರಂಥಗಳಲ್ಲಿಯೂ ಎರಡು ಸಾವಿರದಷ್ಟು ಶೋಧಪ್ರಬಂಧಗಳಲ್ಲಿಯೂ ಹರಡಿದೆ; ಅಲ್ಲದೆ ತಮ್ಮ ಚಿಂತನೆಯ ಪ್ರಸಾರ, ಅದು ಕಾರ್ಯಾನ್ವಯಗೊಳ್ಳುವಂತೆ ಸರ್ಕಾರಗಳೊಡನೆ ವ್ಯವಹಾರ, ಹೆಚ್ಚಿನ ಕೌಶಲದ ಗ್ರಂಥಪಾಲಕರ ನಿರ್ಮಿತಿಗಾಗಿ ತರಬೇತಿ ಯೋಜನೆಗಳು – ಈ ಎಲ್ಲ ದಿಶೆಗಳಲ್ಲಿ ದಶಕಗಳುದ್ದಕ್ಕೂ ರಂಗನಾಥನ್ ಮಾಡಿದ ಪರಿಶ್ರಮ ಎಣೆಯಿಲ್ಲದುದು.

ಒಮ್ಮೆ ನಾನು ರಂಗನಾಥನ್ ಅವರೊಡನೆ ಮಾತನಾಡುವಾಗ ವಿನೋದಕ್ಕಾಗಿ ಹೀಗೆಂದಿದ್ದೆ : "Sir, you have produced more writings on library science than any library can afford to keep." ರಂಗನಾಥನ್ ಹಾರ್ದಿಕವಾಗಿ ನಕ್ಕು ಹೇಳಿದರು: "ಏನು ಮಾಡುವುದು! ಗ್ರಂಥಾಲಯವಿಜ್ಞಾನವನ್ನು ಪ್ರಚುರಗೊಳಿಸುವುದಕ್ಕಾಗಿ ನಾನು ಜೀವಮಾನವೆಲ್ಲ ಹೆಣಗಬೇಕಾಯಿತು. ಸಂಸ್ಕೃತಾಭ್ಯಾಸಾದಿ ನನ್ನ ಬೇರೆ ವೈಯಕ್ತಿಕ ಆಸಕ್ತಿಗಳನ್ನೆಲ್ಲ ಪಕ್ಕಕ್ಕಿರಿಸಬೇಕಾಯಿತು."

ವೃತ್ತಿಯ ದೃಷ್ಟ್ಯಾ ರಂಗನಾಥನ್ ಅವರು ಗಣಿತಶಾಸ್ತ್ರ ಕ್ಷೇತ್ರದಿಂದ ಪಕ್ಕಕ್ಕೆ ಸರಿದಿದ್ದರೂ ಗಣಿತಶಾಸ್ತ್ರ ಕ್ಷೇತ್ರದಲ್ಲಿ ಅವರ ಆಸಕ್ತಿ ಮಸುಕಾಗಲಿಲ್ಲ. ಅವರು ರಚಿಸಿದ ಶ್ರೀನಿವಾಸ ರಾಮಾನುಜನ್ ಜೀವನಚರಿತ್ರೆ ಆ ಮೇರುವ್ಯಕ್ತಿಯನ್ನು ಕುರಿತ ಉತ್ತಮ ಗ್ರಂಥಗಳಲ್ಲಿ ಒಂದು.

ಗ್ರಂಥಾಲಯವ್ಯವಸ್ಥೆಯನ್ನು ಸರ್ಕಾರದ ಅಂಗವಾಗಿಸಲು ಬೇಕಾದ ಶಾಸನವೊಂದನ್ನು ಮೊತ್ತಮೊದಲಿಗೆ 1930ರಷ್ಟು ಹಿಂದೆಯೆ ರೂಪಿಸಿದವರು ರಂಗನಾಥನ್. ರಂಗನಾಥನ್ ಅವರ ಈ ದಿಕ್ಕಿನ ಪ್ರಯಾಸಕ್ಕೆ ಮೊದಲ ಸಫಲತೆ ದೊರೆತದ್ದು 1948ರಲ್ಲಿ – ಮದರಾಸು ಪಬ್ಲಿಕ್ ಲೈಬ್ರರೀಸ್ ಆ್ಯಕ್ಟ್ ಶಾಸನಬದ್ಧಗೊಂಡಾಗ. ಅದಾದ ಹತ್ತು ವರ್ಷಗಳ ತರುವಾಯ ಭಾರತ ಸರ್ಕಾರದ ಶಿಕ್ಷಣ ಖಾತೆಯ ಉಚ್ಚ ಸಲಹಾ ಸಮಿತಿಯೊಂದು (1958) ಹೀಗೆ ಹೇಳಿತ್ತು : "ಮದರಾಸು ಗ್ರಂಥಾಲಯ ಕಾಯದೆಯನ್ನು ಪ್ರವರ್ತಿಸಿದವರ ವಿವೇಕವಂತಿಕೆ ಈಗ ಅಸಂದಿಗ್ಧವಾಗಿ ಪ್ರಕಾಶಗೊಂಡಿದೆ. ಆ ಕಾಯದೆಯ ಕಾರಣದಿಂದಾಗಿ ಗ್ರಂಥಾಲಯಗಳ ವ್ಯವಸ್ಥೆಯು

ಭಾರತದ ಅನ್ಯ ಭಾಗಗಳಿಗಿಂತ ಮದರಾಸಿನಲ್ಲಿ ಹೆಚ್ಚು ಪರಿಣಾಮಕಾರಿಯಾಗಿರುವುದನ್ನು ಕಾಣುತ್ತಿದ್ದೇವೆ.”

ಆ ಕಾಯದೆಯನ್ನು ಅನಂತರ ರಂಗನಾಥನ್ ಇನ್ನಷ್ಟು ಪರಿಷ್ಕರಿಸಿದರು. ಈ ಸುಧಾರಿತ ರೂಪದ ಗ್ರಂಥಾಲಯ ಕಾಯದೆ ಮೈಸೂರಿನಲ್ಲಿ 1965ರಲ್ಲಿ ಸ್ವೀಕೃತವಾಗಿ ಅಮಲಿಗೆ ಬಂದಿತು. ಆ ಮಾದರಿ ಕಾಯದೆಯನ್ನು ಆಂಧ್ರಪ್ರದೇಶ, ಕೇರಳ, ಮಹಾರಾಷ್ಟ್ರ, ಪಶ್ಚಿಮಬಂಗಾಳ ಮೊದಲಾದ ರಾಜ್ಯಗಳೆಲ್ಲ ಶಾಸನಬದ್ಧಗೊಳಿಸಿದವು. ಹೀಗೆ ರಂಗನಾಥನ್ ಯಾವ ರಾಷ್ಟ್ರವ್ಯಾಪಿ ಗ್ರಂಥಾಲಯಾಂದೋಲನದ ಕನಸು ಕಂಡಿದ್ದರೋ ಅದರ ಹೆಚ್ಚಿನಂಶ ತಮ್ಮ ಜೀವಿತಕಾಲದಲ್ಲಿ ಈಡೇರಿದುದನ್ನು ಕಂಡ ಧನ್ಯರು ಅವರು.

ಕೇರಳದಲ್ಲಿ ಸಾಕ್ಷರತೆಯ ಪ್ರಮಾಣ ಇಡೀ ದೇಶದಲ್ಲಿಯೆ ಅಧಿಕ ಪ್ರಮಾಣದ್ದಾಗಿರುವುದಕ್ಕೆ ಒಂದು ಕಾರಣ ಅಲ್ಲಿಯ ಗ್ರಂಥಾಲಯಜಾಲದ ವ್ಯಾಪ್ತಿ – ಎಂದು ಖ್ಯಾತ ಚಿಂತಕ ಐವಾನ್ ಇಲ್ಲಿಚ್ ಅಭಿಪ್ರಾಯ ವ್ಯಕ್ತಪಡಿಸಿದ್ದ.

ಬಹು–ಆಯಾಮ ಆಂದೋಲನ

ನಾಲ್ಕಾರು ರಾಜ್ಯಗಳಲ್ಲಿ ರಂಗನಾಥನ್ ಅವರು ರೂಪಿಸಿದ್ದಂತಹ ಸಾರ್ವಜನಿಕ ಗ್ರಂಥಾಲಯ ಶಾಸನಗಳು ಅಮಲಿಗೆ ಬಂದಿವೆ. ಆದರೆ ಉಳಿದ ಹಲವು ಸರ್ಕಾರೀ ಕಾರ್ಯಾಂಗಗಳಂತೆ ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆಯೂ ಮಹತ್ತ್ವದ್ದೆಂಬ ಮನಃಪ್ರವೃತ್ತಿ ಸರ್ಕಾರೀ ಅಧಿಕಾರಿವರ್ಗದಲ್ಲಿ ಇನ್ನೂ ದೃಢಗೊಳ್ಳಬೇಕಾಗಿದೆ.

ರಂಗನಾಥನ್ ಪ್ರವರ್ತಿಸಿದ ಆಂದೋಲನದ ಆನುಷಂಗಿಕ ಫಲಗಳೂ ಹಲವಾರು ಇವೆ. ಉದಾಹರಣೆಗೆ : ಅವರು ಯೋಜಿಸಿದ ವ್ಯವಸ್ಥಿತ ತರಬೇತಿ ಕಾರ್ಯಕ್ರಮಗಳಿಂದಾಗಿ ಇಂದು ನಾಡಿಗೆ ನುರಿತ ಅಸಂಖ್ಯ ಗ್ರಂಥಾಲಯನಿರ್ವಾಹಕರು ಲಭ್ಯರಾಗಿದ್ದಾರೆ.

1962ರಲ್ಲಿ ಪ್ರೊ॥ ಪ್ರಶಾಂತ ಚಂದ್ರ ಮಹಾಲನೊಬಿಸ್ ಅವರೊಡನೆ ರಂಗನಾಥನ್ ಸ್ಥಾಪಿಸಿದ ಬೆಂಗಳೂರು ಕೇಂದ್ರಿತ ‘ಡಾಕ್ಯುಮೆಂಟೇಷನ್ ರಿಸರ್ಚ್ ಆ್ಯಂಡ್ ಟ್ರೈನಿಂಗ್ ಸೆಂಟರ್’ ಅಂತರರಾಷ್ಟ್ರೀಯ ಸ್ತರದ ತರಬೇತಿಕೇಂದ್ರವಾಗಿ ಮನ್ನಣೆ ಪಡೆಯಿತು.

ಗ್ರಂಥಾಲಯ ಆಂದೋಲನ ಈಗಿರುವುದಕ್ಕಿಂತ ಹೆಚ್ಚು ವ್ಯಾಪಕಗೊಳ್ಳಬೇಕಾಗಿರುವುದು ದಿಟವೇ. ಆದರೆ ಈಗ ಆಗಿರುವ ಸಾಧನೆ ಕಡಮೆಯದಲ್ಲ.

“ಗ್ರಂಥ ವರ್ಗೀಕರಣದ ತಾತ್ತ್ವಿಕತೆ–ತಾಂತ್ರಿಕತೆಗಳನ್ನು ಮೊತ್ತಮೊದಲಿಗೆ ಶಾಸ್ತ್ರೀಯವಾಗಿ ಗುರುತಿಸಿ ಬೋಧಿಸಿದವರು ರಂಗನಾಥನ್” – ಎಂದಿದ್ದರು ವಿಖ್ಯಾತ ಗ್ರಂಥಾಲಯಶಾಸ್ತ್ರಜ್ಞ ಸೈರಕ್ಯೂಸ್ ವಿಶ್ವವಿದ್ಯಾಲಯದ ಪಾಲ್ ಆ್ಯಥರ್ಟನ್.

ಹಿಂದೆ ಇದ್ದ ಗ್ರಂಥವರ್ಗೀಕರಣ ಪದ್ಧತಿಗಳು ಬಹುಮಟ್ಟಿಗೆ ಪ್ರಕಟಿತ ಗ್ರಂಥಗಳನ್ನು ಆಧರಿಸಿದ ವಿಷಯ ಕೋಷ್ಟಕಗಳಾಗಿದ್ದವು. ಆದರೆ ರಂಗನಾಥನ್ ವಿನ್ಯಾಸಗೊಳಿಸಿದ 'ಕೋಲನ್' ವರ್ಗೀಕರಣವು ಹಿಂದೆ ಹೇಳಿದಂತೆ ಮೂಲಭೂತಜ್ಞಾನಾಧಾರಿತವೂ ಬಹುಸ್ತರೀಯವೂ ಗತಿಶೀಲವೂ ಆಗಿತ್ತು. ಈ ನೂತನ ಪದ್ಧತಿಯು ಹೊಸಹೊಸ ವೈಜ್ಞಾನಿಕಾದಿ ಆವಿಷ್ಕರಣಗಳನ್ನೊಳಗೊಂಡ ಅತ್ಯಾಧುನಿಕ ಗ್ರಂಥಗಳ ಮಾಹಿತಿಯ ಸೇರ್ಪಡೆಯನ್ನು ಸುಗಮಗೊಳಿಸಿತ್ತು. ಈ ಪದ್ಧತಿಯನ್ನು ರೂಪಿಸಲು ರಂಗನಾಥನ್ ಸುಮಾರು 20–25 ವರ್ಷಕಾಲ ಶ್ರಮಿಸಿದ್ದರು.

ರಂಗನಾಥನ್ ಅವರ ಸಾಧನೆ ಕೇವಲ ಒಂದು ನವಾವಿಷ್ಕರಣವಷ್ಟೆ ಆಗಿರಲಿಲ್ಲ; ಎಲ್ಲ ಜ್ಞಾನದ ಪ್ರಸಾರಕ್ಕೂ ಸಾರ್ವಜನಿಕೀಕರಣಕ್ಕೂ ದಾರಿ ಮಾಡಿದುದು ಡಾ॥ ರಂಗನಾಥನ್ ಅವರ ಪರಿಶ್ರಮದ ಮಹತ್ತ್ವ. ಗ್ರಂಥಾಲಯವ್ಯವಸ್ಥೆಯನ್ನು ಕೇವಲ ಹಲವರ ಹವ್ಯಾಸದ ಮಟ್ಟದಿಂದ ಜ್ಞಾನಾರ್ಜನೆಯ ಒಂದು ಸಮರ್ಥ ಪ್ರಸ್ಥಾನದ ಮಟ್ಟಕ್ಕೆ ಅವರು ಏರಿಸಿದರು; ಸತತ ಪ್ರಯತ್ನದಿಂದ ಆ ಪ್ರಕ್ರಿಯೆಯನ್ನು ದೇಶವ್ಯಾಪಿಗೊಳಿಸಿದರು. ಗ್ರಂಥಾಲಯಸೌಲಭ್ಯವು ಪ್ರತಿ ಪ್ರಜೆಗೂ ನಿಃಶುಲ್ಕವಾಗಿ ದೊರೆಯಬೇಕೆಂಬುದು ಅವರ ಹೆಗ್ಗನಸಾಗಿತ್ತು.

ವಿವಿಧ ರಾಷ್ಟ್ರೀಯ–ಅಂತರರಾಷ್ಟ್ರೀಯ ಗೋಷ್ಠಿಗಳು, ಸರ್ಕಾರಗಳೊಡನೆ ಸತತ ಸಂಧಾನ – ಇದರ ಜೊತೆಜೊತೆಯಲ್ಲಿ ತಮ್ಮ ಸ್ವೋಪಜ್ಞ ಚಿಂತನೆಯನ್ನು ವಿಪುಲ ಗ್ರಂಥಗಳಲ್ಲಿಯೂ ಶೋಧಪ್ರಬಂಧಗಳಲ್ಲಿಯೂ ಅವರು ಶಬ್ದೀಕರಿಸಿದುದನ್ನು ಅನುಪಮವೆನ್ನಬೇಕು.

ಮೂಲ ಆಧಾರ ಮಟ್ಟದಲ್ಲಿ ಜ್ಞಾನದ ವರ್ಗೀಕರಣಕ್ಕೂ ತತ್ಸಂಬಂಧಿತ ಸಾಂಸ್ಥಿಕ ಪ್ರಾಕಾರಕ್ಕೂ ಅವರು ಗಮನ ಹರಿಸಿದುದರಿಂದಾಗಿ ಅವರ ಆವಿಷ್ಕರಣಗಳಿಂದ ಎಲ್ಲ ಮಾಹಿತಿಕ್ಷೇತ್ರಗಳೂ ಉಪಕೃತವಾಗಿವೆ. ವಿಶ್ವಸಂಸ್ಥೆ ಹಾಗೂ ಅದರ ಯುನೆಸ್ಕೋ ಮೊದಲಾದ ಅಂಗಸಂಸ್ಥೆಗಳೂ ರಂಗನಾಥನ್ ಅವರಿಂದ ಮಾರ್ಗದರ್ಶನ ಪಡೆದವು. ಯುನೆಸ್ಕೋ ಆಶ್ರಯದಲ್ಲಿ ಮಾಹಿತಿ ವ್ಯವಸ್ಥೆಗೆ ಮೀಸಲಾದ ಇನ್ಸ್‌ಡಾಕ್ (INSDOC) ಸ್ಥಾಪನೆಯಾದದ್ದು ರಂಗನಾಥನ್ ಅವರ ಸಲಹೆ–ಮಾರ್ಗದರ್ಶನದಂತೆ.

'ಪದ್ಮಶ್ರೀ' (1957) ಮೊದಲಾದ ಪ್ರಶಸ್ತಿಗಳು; ದೆಹಲಿ (1948), ಅಮೆರಿಕದ ಪಿಟ್ಸ್‌ಬರ್ಗ್ (1964) ಮೊದಲಾದ ವಿಶ್ವವಿದ್ಯಾಲಯಗಳ ಗೌರವ ಡಾಕ್ಟೊರೇಟುಗಳು ರಂಗನಾಥನ್ ಅವರಿಗೆ ಸಂದಿದ್ದವು. ಗ್ರಂಥಾಲಯವಿಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದ ಜಾಗತಿಕ ಮಟ್ಟದ 'ಮಾರ್ಗರೆಟ್ ಮ್ಯಾನ್' ಪ್ರಶಸ್ತಿ ಕೂಡಾ ಅವರಿಗೆ ಲಭಿಸಿತ್ತು (1970). ಈ ಪ್ರಶಸ್ತಿ ಏಷ್ಯ ಖಂಡದಲ್ಲಿಯೆ ಬೇರಾರಿಗೂ ಸಂದಿರಲಿಲ್ಲ.

ಡಾ॥ ಎಸ್. ಆರ್. ರಂಗನಾಥನ್ ಅವರೊಡನೆ
ಎಸ್. ಆರ್. ರಾಮಸ್ವಾಮಿ (3.9.1972).

ಗ್ರಂಥಾಲಯವಿಜ್ಞಾನ ಕ್ಷೇತ್ರದ 'ನ್ಯಾಷನಲ್ ಪ್ರೊಫೆಸರ್' ಪದವಿಗೆ ರಂಗನಾಥನ್ ನೇಮಕಗೊಂಡ ಕಾಲದಲ್ಲಿ (1965) ಅನ್ಯ ಕ್ಷೇತ್ರಗಳ ನ್ಯಾಷನಲ್ ಪ್ರೊಫೆಸರುಗಳಾಗಿದ್ದವರು ಸಿ.ವಿ. ರಾಮನ್ (ಭೌತಶಾಸ್ತ್ರ), ಪಿ. ಮಾಹೇಶ್ವರಿ (ಸಸ್ಯವಿಜ್ಞಾನ), ಪಿ.ವಿ. ಕಾಣೆ (ಧರ್ಮಶಾಸ್ತ್ರಾಧ್ಯಯನ) ಮತ್ತು ಸುನೀತಿ ಕುಮಾರ ಚಟರ್ಜಿ (ಸಂಸ್ಕೃತ ಭಾಷೆ–ಸಾಹಿತ್ಯ) – ಎಂಬುದರಿಂದ ರಂಗನಾಥನ್ ಗಳಿಸಿದ್ದ ಸಂಮಾನ್ಯತೆಯನ್ನು ಊಹಿಸಬಹುದು.

ಕರ್ಮಯೋಗಿ

ಆರ್ಥಿಕವಾಗಿಯೂ ಔದ್ಯಮಿಕವಾಗಿಯೂ ಹಿಂದುಳಿದಿರುವ ದೇಶದವರೊಬ್ಬರಿಂದ ಗ್ರಂಥಾಲಯವಿಜ್ಞಾನಕ್ಕೆ ಇಂತಹ ಉನ್ನತವಾದ ಕೊಡುಗೆ ಲಭಿಸಿದುದು ಹೇಗೆ? – ಎಂದು ವಿದೇಶದ ಕುತೂಹಲಿಗಳೊಬ್ಬರು ಪ್ರಶ್ನಿಸಿದಾಗ ರಂಗನಾಥನ್ ಮುಗುಳ್ನಕ್ಕು ಉತ್ತರಿಸಿದ್ದರು: "ಜಗತ್ತಿನ ಮೊತ್ತಮೊದಲ ಕಾಮಶಾಸ್ತ್ರ ಗ್ರಂಥವನ್ನು ಬರೆದವರಾರು? ವಾತ್ಸ್ಯಾಯನನೆಂಬ ಒಬ್ಬ ಭಾರತೀಯ; ಮತ್ತು ಆತನೊಬ್ಬ ಬ್ರಹ್ಮಚಾರಿ."

ವೃತ್ತಿಜೀವನದುದ್ದಕ್ಕೂ ಸಮಸ್ಯೆಗಳನ್ನೂ ಕೆಲವೊಮ್ಮೆ ಸಂಕುಚಿತಮನಸ್ಕರ ಕಿರಿಕಿರಿಗಳನ್ನೂ ರಂಗನಾಥನ್ ಎದುರಿಸಬೇಕಾಗಿಬಂದರೂ ಅವರು ಎಂದೂ ಸ್ತಿಮಿತತೆಯನ್ನು ಕಳೆದುಕೊಳ್ಳದೆ ಸ್ವನಿಶ್ಚಿತ ಮಾರ್ಗದಲ್ಲಿ ದೃಢವಾಗಿ ಏಕಾಗ್ರತೆಯಿಂದ ಮುನ್ನಡೆಯುತ್ತಿದ್ದುದು ಅಸಾಮಾನ್ಯವಾಗಿತ್ತು. ಅನ್ಯರು ತತ್ತ್ವನಿಷ್ಠೆ ಎಂದು ಕರೆಯಬಹುದಾದ ಈ ಗುಣವನ್ನು ರಂಗನಾಥನ್ 'ವರ್ಕ್ ಆಸ್ಟೆರಿಟಿ' ಎಂದು ವರ್ಣಿಸುತ್ತಿದ್ದರು.

ಡಾ॥ ರಂಗನಾಥನ್ ಅವರ ಸಂಪರ್ಕಕ್ಕೆ ಬಂದ ಎಲ್ಲರ ಮೇಲೆ ಅವರ ತಪಃಸದೃಶ ನಿಷ್ಠೆ ಪರಿಣಾಮ ಬೀರದಿರುತ್ತಿರಲಿಲ್ಲ. ಅವರು ತಾವು ಆಯ್ದುಕೊಂಡ ಸೇವಾಕ್ಷೇತ್ರದಿಂದ ಎಂದೂ ಬದಿಗೆ ಸರಿಯಲಿಲ್ಲ. ಜಟಿಲತೆಯಿಂದಾಗಿ ಹಲವು ಸಮಸ್ಯೆಗಳ ನಿರ್ವಹಣೆ ಕ್ಲೇಶಕರವೆನಿಸಿದಾಗ ಅವರು ಸ್ತಿಮಿತತೆ ಕಳೆದುಕೊಳ್ಳದೆ "ನಾವು ನಿನ್ನೆ ಇದ್ದುದಕ್ಕಿಂತ ಒಂದು ಹೆಜ್ಜೆ ಮುಂದೆ ಇರಿಸಿದ್ದೇವೆ ತಾನೆ?" ಎಂದು ಸಹಕಾರಿಗಳನ್ನು ಹುರಿದುಂಬಿಸುತ್ತಿದ್ದರು. ನಿಜಾರ್ಥದಲ್ಲಿ ಅವರೊಬ್ಬ ಕರ್ಮಯೋಗಿ.

1930ರ ದಶಕದಲ್ಲಿ ರಂಗನಾಥನ್ ಅವರಿಗೆ ಅಧಿಕಾರಿಗಳು ವಿಶ್ವವಿದ್ಯಾಲಯದ ಇಡೀ ಸಂಗ್ರಹದ ಪಟ್ಟಿಕೆಯನ್ನು (ಕ್ಯಾಟಲಾಗ್) ಮುದ್ರಿಸಲು ಆದೇಶ ನೀಡಿದರು. ಆ ಅಧಿಕಾರಿಗಳ ಉದ್ದೇಶವಿದ್ದದ್ದು ಕಾಣೆಯಾದ ಪುಸ್ತಕಗಳಿಗೆ ರಂಗನಾಥನ್‌ರವರನ್ನು ಹೊಣೆಗಾರರಾಗಿಸಿ ಅಪರಾಧಿಯ ಪಟ್ಟ ಕಟ್ಟುವುದು ಆಗಿತ್ತು. ಆದರೆ ರಂಗನಾಥನ್ ಆ ಸವಾಲನ್ನೇ ಅವಕಾಶವಾಗಿ ಪರಿವರ್ತಿಸಿಕೊಂಡು ಗ್ರಂಥವರ್ಗೀಕರಣ ಸುಧಾರಣೆಯ ಸಂಶೋಧನೆಗೆ ತೊಡಗಿ ಸಫಲರಾದರು!

ಆಧ್ಯಾತ್ಮಿಕ ಮನಃಪ್ರವೃತ್ತಿ

ರಂಗನಾಥನ್ ಅವರ ಅಂತರಂಗದಲ್ಲಿ ಅಧ್ಯಾತ್ಮನಿಷ್ಠೆ ದೃಢವಾಗಿ ಇದ್ದುದರಿಂದಲೇ ಅವರ ಕಾರ್ಯರೀತಿಯಲ್ಲಿ ಅನುದ್ವೇಗ-ಸ್ತಿಮಿತತೆಗಳು ಸ್ಥಾಯಿಯಾಗಿ ಇದ್ದವೆಂದು ಭಾವಿಸಿದರೆ ತಪ್ಪಾಗದು. ಸಾತ್ತ್ವಿಕತೆ, ರಾಮಾಯಣಶ್ರದ್ಧೆ ಮೊದಲಾದವಂತೂ ಅವರಿಗೆ ಪಿತ್ರಾರ್ಜಿತವಾಗಿಯೆ ಲಬ್ಧವಾಗಿದ್ದವು. ನಡುವಯಸ್ಸಿಗೇ ಅವರಿಗೆ ವಿಶಾಲ ಮಾನ್ಯತೆಯೂ ಪ್ರತಿಷ್ಠೆಯೂ ಪ್ರಾಪ್ತವಾದವು. ಹೀಗಾಗಿ ಅವರು ಬಯಸಿದ್ದಲ್ಲಿ ಹೇರಳ ಧನಸಂಚಯವೂ ಶ್ರೀಮಂತಜೀವನವೂ ಅವರಿಗೆ ದುಃಸಾಧ್ಯವಾಗಿರಲಿಲ್ಲ. ಆದರೆ ತೀರಾ ಸರಳವಾದ ಬದುಕನ್ನೇ ಅವರು ವ್ರತವಾಗಿ ಸ್ವೀಕರಿಸಿದ್ದರು; ಎಂದೂ ಯಾವ ಆಮಿಷಗಳಿಗೂ ಒಳಗಾಗಲಿಲ್ಲ. ಪ್ರತಿಯಾಗಿ ಅವರ ಶ್ರಮದ ಫಲಿತವಾದ ಗಳಿಕೆಯನ್ನೂ ಸೇವೆಗಾಗಿ, ಸಮಾಜಹಿತಕ್ಕಾಗಿ ವಿನಿಯೋಗಿಸಿದರು.

ಅವರು ನಿವೃತ್ತರಾದಾಗ ಅವರಿಗೆ ಸಂದಾಯವಾದ ಸುಮಾರು ಒಂದು ಲಕ್ಷ ರೂಪಾಯಿಗಳಷ್ಟು ಉಳಿತಾಯದ ಹಣವನ್ನು ಮದರಾಸು ವಿಶ್ವವಿದ್ಯಾಲಯದಲ್ಲಿ ಗ್ರಂಥಾಲಯವಿಜ್ಞಾನ ಅಧ್ಯಯನದ ಸಲುವಾಗಿ ಪೀಠವನ್ನು ಏರ್ಪಡಿಸಲು ದಾನ ಮಾಡಿದರು. ಅವರ ಮತ್ತು ಅವರ ಪುತ್ರನ ಗಳಿಕೆಯ ಗಣನೀಯ ಭಾಗವು ವರ್ಷಗಳುದ್ದಕ್ಕೂ ಬಡವಿದ್ಯಾರ್ಥಿಗಳ ಪೋಷಣೆಗಾಗಿ ವಿನಿಯೋಗವಾಗುತ್ತಿತ್ತು.

ಅತ್ಯಂತ ಸರಳ ಜೀವನಕ್ರಮವೂ ದಾನಶೀಲತೆಯೂ ಡಾ॥ ರಂಗನಾಥನ್ ಅವರಲ್ಲಿ ಎಷ್ಟು ಸ್ವಭಾವಗತವಾಗಿದ್ದಿತೆಂದರೆ ಅವರು ತಮ್ಮ ಗಳಿಕೆಯ ಉಳಿತಾಯವು ಗಣನೀಯ ಹಂತ ತಲಪಿದೊಡನೆ ಅದನ್ನು ತಮ್ಮ ಆಸಕ್ತಿಕ್ಷೇತ್ರದ ಯಾವುದೋ ಕಾರ್ಯಕ್ಕೆ ದಾನವಾಗಿ ನೀಡುವ ಪದ್ಧತಿಯನ್ನು ಬೆಳೆಸಿಕೊಂಡಿದ್ದರು. ಹೀಗೆ ಅವರು ಸ್ಥಾಪಿಸಿದ ಹಲವಾರು ದತ್ತಿಗಳು ಮದರಾಸು (ಈಗ ಚೆನ್ನೈ), ಮಂಗಳೂರು, ಶ್ರೀಪೆರುಂಬುದೂರು, ಉಜ್ಜಯನಿ ಮೊದಲಾದೆಡೆಗಳಲ್ಲಿ ಮುಂದುವರಿದಿವೆ.

ಅವರ ಹತ್ತಾರು ಗ್ರಂಥಗಳಿಂದ ಬಂದ ರಾಯಧನವಷ್ಟನ್ನೂ ಗ್ರಂಥಾಲಯವಿಜ್ಞಾನ ಪ್ರವರ್ತನೆಗಾಗಿ ಸ್ಥಾಪಿತವಾದ 'ಶಾರದಾ ರಂಗನಾಥನ್ ಎಂಡೋಮೆಂಟ್' ಎಂಬ ದತ್ತಿಗಾಗಿ ದಾನ ಮಾಡಿದರು.

1950ರ ಸುಮಾರಿನಲ್ಲಿ ಡಾ॥ ರಂಗನಾಥನ್ ಅವರ ಸಲಹೆಯ ಅನುಸರಣೆ ಯಿಂದಾಗಿ ಅಮೆರಿಕದ ಒಂದು ದೊಡ್ಡ ಲೋಹೋದ್ಯಮ ಕಂಪೆನಿಗೆ (ಸಂಶೋಧನೆಯಲ್ಲಿ ವ್ಯಗ್ರತೆಯನ್ನು ನಿವಾರಿಸಿದುದರಿಂದಾಗಿ) ಹೇರಳ ಲಾಭ ಸಿದ್ಧಿಸಿತು. ಈ ನೆರವಿಗಾಗಿ ಕೃತಜ್ಞತೆಯನ್ನು ಸೂಚಿಸಲು ಆ ಕಂಪೆನಿಯವರು ರಂಗನಾಥನ್ ಅವರಿಗೆ – ಅವರು ನಿರಾಕರಿಸಿದರೂ ಬಲವಂತವಾಗಿ – ಒಂದು ಬೃಹದ್ ಗಾತ್ರದ ಟೈಟಾನಿಯಂ ವಜ್ರವನ್ನು ಕಾಣಿಕೆಯಾಗಿ ಇತ್ತರು. ಕೆಲಕಾಲಾನಂತರ ಮಿತ್ರರೊಬ್ಬರು ಆ ವಜ್ರದಿಂದ

ಆಕರ್ಷಕ ಉಂಗುರವನ್ನು ಮಾಡಿಸಿ ಶ್ರೀಮತಿ ಶಾರದಾ ರಂಗನಾಥನ್ ಅವರಿಗೆ ಕೊಟ್ಟರು. 'ಇಷ್ಟು ದೊಡ್ಡ ವಜ್ರದುಂಗುರವನ್ನು ನಾನು ಹೇಗೆ ಧರಿಸಲಿ?' ಎಂದು ಪೇಚಾಡಿದರು ಆಕೆ. ಅನಂತರ ಆಕೆಯ ಅಪೇಕ್ಷೆಯಂತೆ ಆ ಆಭರಣವನ್ನು ಮದರಾಸು ತಿರುವಳ್ಳಿಕ್ಕೇಣಿಯ ಪಾರ್ಥಸಾರಥಿ ದೇವಾಲಯಕ್ಕೆ ದಾನ ಮಾಡಲಾಯಿತು.

ರಂಗನಾಥನ್ ದಂಪತಿಗಳನ್ನು ನೋಡಿದಾಗ ಒಬ್ಬ ಋಷಿಯನ್ನೂ ಋಷಿಪತ್ನಿಯನ್ನೂ ನೋಡಿದಂತೆ ಭಾಸವಾಗುತ್ತಿತ್ತು.

ಡಾ॥ ರಂಗನಾಥನ್‌ರವರ ಪ್ರಥಮ ಪತ್ನಿ ಶ್ರೀಮತಿ ರುಕ್ಮಿಣೀ (1896–1928) ನಿಧನರಾದ ಒಂದು ವರ್ಷ ಕಳೆದ ಮೇಲೆ ಅವರು ಶ್ರೀಮತಿ ಶಾರದಾ ಅವರನ್ನು ವಿವಾಹವಾದರು (1929). ಡಾ॥ ರಂಗನಾಥನ್ ಅವರ ಏಕೈಕ ಪುತ್ರ ಯೋಗೇಶ್ವರ್ (ಜನನ: 12–4–1932).

ಧನ್ಯಜೀವಿ

ಡಾ॥ ರಂಗನಾಥನ್ ಅವರ ದೀರ್ಘಕಾಲದ ಸೇವೆಯನ್ನು ಲಕ್ಷಿಸಿ ಅವರು 71ನೇ ವರ್ಷದಲ್ಲಿ ಪದಾರ್ಪಣ ಮಾಡಿದ ಸಂದರ್ಭವನ್ನು ನಿಮಿತ್ತವಾಗಿಸಿಕೊಂಡು ಅಭಿನಂದನೋತ್ಸವ 1964ರಲ್ಲಿ (ಉತ್ತರೋತ್ತರ ರಾಷ್ಟ್ರಪತಿಗಳಾದ) ವಿ.ವಿ. ಗಿರಿ ಅವರ ಉಪಸ್ಥಿತಿಯಲ್ಲಿ ನೆರವೇರಿತು. ಆ ಸಂದರ್ಭದಲ್ಲಿ ಮಾತನಾಡುವಾಗ ಡಾ॥ ರಂಗನಾಥನ್ ಹೀಗೆಂದರು: "ನೇರವಾಗಿ ಪುಸ್ತಕಗಳ ಮಾಧ್ಯಮದಿಂದಲೇ ಶಿಕ್ಷಣ ನೀಡಬಲ್ಲ ವ್ಯವಸ್ಥೆ ಗ್ರಂಥಾಲಯವಿಜ್ಞಾನ –, ಎಂಬ ತಾತ್ತ್ವಿಕತೆಗೆ ಸ್ವೀಕಾರ್ಯತೆಯನ್ನು ತಂದುಕೊಟ್ಟದ್ದು ನನ್ನ ಜೀವನದ ಒಂದು ಮುಖ್ಯ ಸಾಧನೆ ಎಂದು ನಾನು ಭಾವಿಸಿದ್ದೇನೆ."

ಹಲವು ಮೂಲಭೂತ ಭಂಗ್ಯಂತರಗಳ ಪ್ರಸಾರಕ್ಕೂ ರಂಗನಾಥನ್ ಕಾರಣರಾದರು. ಉದಾಹರಣೆಗೆ: ಈಗ್ಗೆ ಎಪ್ಪತ್ತೆಂಬತ್ತು ವರ್ಷ ಹಿಂದೆ ಗ್ರಂಥಾಲಯವೆಂದರೆ ಸಾಹಿತ್ಯರೀತಿಯ ಮುದ್ರಿತ ಪುಸ್ತಕಗಳ ಸಂಗ್ರಹ ಮಾತ್ರವೆಂಬ ಭಾವನೆ ಇತ್ತು. ಡಾ॥ ರಂಗನಾಥನ್ ಈ ಕಲ್ಪನೆಯನ್ನೂ ವಿಸ್ತರಿಸಿ ಪುಸ್ತಕರೂಪದ್ದಲ್ಲದ ಅನ್ಯ ಉಪಯುಕ್ತ ವಾಚನಸಾಮಗ್ರಿಗಳೂ ಗ್ರಂಥಾಲಯಗಳಲ್ಲಿ ಆಸಕ್ತರಿಗೆ ಲಭ್ಯವಿರಬೇಕೆಂಬ ತತ್ತ್ವವನ್ನು ಪ್ರಚುರಗೊಳಿಸಿದರು.

ಮಕ್ಕಳಿಗೇ ಮೀಸಲಾದ ವಿಶಿಷ್ಟ ಸ್ವರೂಪದ ಗ್ರಂಥಾಲಯಗಳ ದೇಶವ್ಯಾಪಿ ಜಾಲ ಏರ್ಪಡಬೇಕೆಂಬುದು ರಂಗನಾಥನ್ ಅವರ ಕಲ್ಪನೆಯಾಗಿದ್ದಿತು. ಈ ದಿಕ್ಕಿನಲ್ಲಿ ಗ್ರಂಥಾಲಯ ಕ್ಷೇತ್ರ ಇನ್ನೂ ಬಹಳ ದೂರ ಸಾಗಬೇಕಾಗಿದೆ.

ಡಾ॥ ರಂಗನಾಥನ್ ಅಧ್ಯಕ್ಷರಾಗಿಯೋ ಸದಸ್ಯರಾಗಿಯೋ ತಜ್ಞರಾಗಿಯೋ ಪಾಲ್ಗೊಂಡ ಮಂಡಳಿಗಳೂ ಸಮಿತಿಗಳೂ ಹತ್ತಾರು. ದೇಶದಾದ್ಯಂತ ವಿಶ್ವವಿದ್ಯಾಲಯಗಳು

ಅವರ ತಜ್ಞತೆಯ ಲಾಭ ಪಡೆದವು. ಗ್ರಂಥಾಲಯವಿಜ್ಞಾನಕ್ಕೆ ಸಂಬಂಧಿಸಿದ ಯೂರೋಪ್-ಅಮೆರಿಕಗಳ ಹತ್ತಾರು ಅಂತರರಾಷ್ಟ್ರೀಯ ಸಮಾವೇಶಗಳಲ್ಲಿ ಭಾರತದ ಪ್ರತಿನಿಧಿಯಾಗಿ ಮತ್ತು ಗ್ರಂಥಾಲಯಕ್ಷೇತ್ರದ ಸಮುನ್ನತರಾಗಿ ಅವರು ಭಾಗವಹಿಸಿದರು. ಗ್ರಂಥಪಾಲಕರ ಶಿಕ್ಷಣ ಪಾಠ್ಯಕ್ರಮಾದಿಗಳನ್ನು ರೂಪಿಸಿದರು.

ವರ್ಗೀಕರಣ, ಮಾಹಿತಿ ಕ್ರೋಡೀಕರಣ, ಮಾಹಿತಿ ಸಂಕ್ಷೇಪಣ ವಿಧಾನ, ಗ್ರಂಥವಿನ್ಯಾಸ, ಸ್ಥಿರರೂಪ ವಿದ್ಯುನ್ಮಾನಾಧಾರಿತ ಶೇಖರಣೆ, ಗ್ರಂಥಾಲಯಗಳ ವಾಸ್ತುವಿನ್ಯಾಸ; ಈ ಹಲವಾರು ಸಂಗತಿಗಳಿಗೆ ಸಂಬಂಧಿಸಿದಂತೆ ಇಂಡಿಯನ್ ಸ್ಟ್ಯಾಂಡರ್ಡ್ಸ್ ಇನ್‌ಸ್ಟಿಟ್ಯೂಷನ್ (ಈಗ ಬ್ಯೂರೋ ಆಫ್ ಇಂಡಿಯನ್ ಸ್ಟ್ಯಾಂಡರ್ಡ್ಸ್) ಮೂಲಕ ರೂಪಗೊಂಡು ಈಗ ಪ್ರಚಲಿತವಾಗಿರುವ ಮಾನದಂಡಗಳು ಬಹುತೇಕ ಡಾ॥ ರಂಗನಾಥನ್ ಅವರ ಮಾರ್ಗದರ್ಶನದಂತೆ ಸಿದ್ಧಗೊಂಡಿರುವವು.

ರಂಗನಾಥನ್ ಅವರ ಸಾಧನೆಯ ಪರಿಣಾಮವ್ಯಾಪ್ತಿಯು ಗ್ರಂಥಾಲಯಸೇವೆಯ ಕಕ್ಷೆಯ ಆಚೆಗೂ ವಿಸ್ತರಿಸಿತು – ಎಂಬುದನ್ನು ಗ್ರಹಿಸಬೇಕಾಗಿದೆ. ನಿದರ್ಶನಕ್ಕೆ : 'ಹಸಿರು ಕ್ರಾಂತಿ' ವರ್ಷಗಳಲ್ಲಿ ವಿವಿಧ ತಾಂತ್ರಿಕ ಸಂಸ್ಥೆಗಳ ನಡುವೆ ಮಾಹಿತಿ ವಿನಿಮಯಕ್ಕೆ ಬೇಕಾದ ಸಾಧನಗಳನ್ನು ಡಾ॥ ರಂಗನಾಥನ್ ಸಂಯೋಜಿಸಿದ್ದರು.

ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಈಚಿನ ವರ್ಷಗಳಲ್ಲಿ ಕ್ರಾಂತಿಕಾರಕ ಬೆಳವಣಿಗೆಗಳು ಆಗಿದ್ದರೂ, ಡಾ॥ ರಂಗನಾಥನ್ ಅವರು ಸ್ಫುಟೀಕರಿಸಿದ ಆಧಾರತತ್ತ್ವಗಳು ಮುಂದೆಯೂ ಪಥದರ್ಶಕಗಳಾಗಿ ಉಳಿಯುವುದು ನಿಶ್ಚಿತ. ಇದೀಗ ಮುದ್ರಿತರೂಪದ ಪುಸ್ತಕಗಳು ಹಿಂದಿದ್ದ ಪ್ರಾಥಮ್ಯವನ್ನು ಸ್ವಲ್ಪಮಟ್ಟಿಗೆ ಕಳೆದುಕೊಂಡಿವೆ ಎನಿಸಿದರೂ, ಗಣಕತಾಂತ್ರಿಕತೆಯ ಸಹಜ ಮಿತಿ, ಮುದ್ರಿತ ಪುಸ್ತಕರೂಪದಲ್ಲಿ ಲಭ್ಯವಿರುವ ಸೌಕರ್ಯ ಮೊದಲಾದ ಕಾರಣಗಳಿಂದಾಗಿ ನಿಕಟಭವಿಷ್ಯದಲ್ಲಂತೂ ಮುದ್ರಿತ ಪುಸ್ತಕಗಳು ಗತಾರ್ಥವೆನಿಸುವ ಸಂಭವವಿಲ್ಲ. ಹಲವು ಅಂಶಗಳಲ್ಲಿ ನೂತನಲಬ್ಧ ತಾಂತ್ರಿಕಾಂಶಗಳು ಗ್ರಂಥಾಲಯನಿರ್ವಹಣೆಗೆ ಅನುಕೂಲಕರವೂ ಆಗಿವೆಯೆಂಬುದನ್ನು ಅಲ್ಲಗಳೆಯುವಂತಿಲ್ಲ.

1972ರ ಸೆಪ್ಟೆಂಬರ್ ಆರಂಭದಲ್ಲಿ ಡಾ॥ ರಂಗನಾಥನ್ ಅವರಿಗೆ ನಮನ ಸಲ್ಲಿಸಲು ನಾನು ನನ್ನ ಗೆಳೆಯ ಫೊಟಾಗ್ರಫರ್ ಕೆ.ಜಿ. ಸೋಮಶೇಖರ್ ಅವರೊಡನೆ ಮಲ್ಲೇಶ್ವರದ ಅವರ ನಿವಾಸಕ್ಕೆ ಹೋದೆ. ಏಳುವುದು ಕೂರುವುದೂ ಕಷ್ಟವಾಗಿದ್ದ ಸ್ಥಿತಿಯಲ್ಲಿದ್ದರು ಅವರು. ಆ ಅಶಕ್ತ ಸ್ಥಿತಿಯಲ್ಲಿಯೂ ಅವರು ಗ್ರಂಥಾಲಯಗಳನ್ನು ಕುರಿತೇ ಅತ್ಯುತ್ಸಾಹದಿಂದ ಮಾತನಾಡಿದರು. ಗ್ರಂಥಾಲಯದ ವಿಷಯ ಬಂದರೆ ಅವರಿಗೆ ತಮ್ಮ ವೃದ್ಧಾಪ್ಯ, ಕಾಯಿಲೆ ಎಲ್ಲವೂ ಮರೆತುಹೋಗುತ್ತಿತ್ತು. ಅವರಿಗೆ ಹೆಚ್ಚು ಶ್ರಮವಾದೀತೆಂದು ನಾನೇ "ತಾವು ದಯವಿಟ್ಟು ಈಗ ವಿಶ್ರಮಿಸಿ. ನಾನು ಮತ್ತೊಮ್ಮೆ

ಬರುತ್ತೇನೆ" ಎಂದು ಹೇಳಿ ಅಲ್ಲಿಂದ ನಿಷ್ಕ್ರಮಿಸಿದೆ. ದುರ್ದೈವದಿಂದ ಅದೇ ನಮ್ಮ ಕೊನೆಯ ಭೇಟಿಯಾಯಿತು. ಅದಾದ ಕೆಲವೇ ದಿನಗಳಲ್ಲಿ ಡಾ॥ ರಂಗನಾಥನ್ ಸ್ವರ್ಗವಾಸಿಗಳಾದರು (27–9–1972).

ದೀಪ್ತಶೃಂಗಗಳು

ಎಸ್. ಆರ್. ರಾಮಸ್ವಾಮಿ

ಬೇರೆಯವರಿಂದ ಮನ್ನಣೆಯನ್ನಾಗಲಿ ಪದವಿಗೌರವವನ್ನಾಗಲಿ ಎದುರುನೋಡದೆ ಸದಾ ಲೋಕಹಿತಕ್ಕಾಗಿ ಶ್ರಮಿಸುವ ಪ್ರವೃತ್ತಿಯನ್ನು ಬೆಳೆಸಿಕೊಂಡ ಹಲವರು ಇರುತ್ತಾರೆ. ಇತರರಿಗೆ ಶೀತಲತೆಯನ್ನು ನೀಡುವುದಕ್ಕಾಗಿಯೆ ಬಾಳುವ ಚಂದನತರುವಿನಂತಹ ಮನೋವೃತ್ತಿಯ ಇಂತಹ ಸಜ್ಜನರನ್ನು 'ರತ್ನದೀಪ'ಗಳೆಂದು ಕವಿಗಳು ವರ್ಣಿಸಿದ್ದಾರೆ. ನಮ್ಮ ನಡುವೆಯೇ ಇದ್ದು ತಮ್ಮ ಕಾರ್ಯಕ್ಷೇತ್ರಗಳಲ್ಲಿ ಸಮುನ್ನತರೆನಿಸಿ ಸುತ್ತಲೂ ಕಾಂತಿಯನ್ನು ಪಸರಿಸಿ ಧನ್ಯತೆ ಪಡೆದ ಹಲವರ ವ್ಯಕ್ತಿಚಿತ್ರಣಗಳು ಈ ಸಂಕಲನದಲ್ಲಿವೆ. ವಿದ್ವತ್ತಿನ ಕ್ಷೇತ್ರದಲ್ಲಿ ಮೇರುಸದೃಶರಾದ ಎನ್. ರಂಗನಾಥಶರ್ಮಾ ಮತ್ತು ಎಸ್. ಕೆ. ರಾಮಚಂದ್ರರಾವ್, ಅಧ್ಯಾತ್ಮವಿದ್ಯಾಪ್ರಸಾರಕ ವೇದಾಂತ ಸುಬ್ಬಯ್ಯ, ಜೋಳಿಗೆಮಾತ್ರದ ಆಸರೆಯಿಂದ ಸೇವಾಸಾಮ್ರಾಜ್ಯ ನಿರ್ಮಿಸಿದ ಬೆಳಗೆರೆ ಕೃಷ್ಣಶಾಸ್ತ್ರೀ, ಸಂಗೀತಕಲಾಪ್ರವರ್ತನೆಯ ಮೂಲಕ ನಾಡಿನ ಸಾಂಸ್ಕೃತಿಕ ಬದುಕನ್ನು ಶ್ರೀಮಂತಗೊಳಿಸಿದ ಎಸ್. ವಿ. ನಾರಾಯಣಸ್ವಾಮಿರಾವ್, ಜನಸೇವಕಾಗ್ರಣಿ ಟಿ. ಆರ್. ಶಾಮಣ್ಣ, ಗ್ರಂಥಾಲಯವಿಜ್ಞಾನಪಿತಾಮಹ ಎಸ್. ಆರ್. ರಂಗನಾಥನ್ – ಈ ಏಳು ಮಂದಿ ಅಸಾಮಾನ್ಯ ಸಾಧಕರ ವ್ಯಕ್ತಿತ್ವಸ್ಮರಣಮಾಲಿಕೆ '**ದೀಪ್ತಶೃಂಗಗಳು**'.

ಸಾಹಿತ್ಯ ಸಿಂಧು ಪ್ರಕಾಶನ
ಬೆಂಗಳೂರು-560001

SSP 116

₹ 135